ಮಂಗಳೂರು
ಶುಕ್ರವಾರ, 6 ಮಾರ್ಚ್ 2026
ಸಂಪುಟ 47, ಸಂಚಿಕೆ 337 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ನಾಲ್ಕನೇ ಬಾರಿ (2007, 2014, 2024, 2026) ಭಾರತ ಫೈನಲ್ ಪ್ರವೇಶ | ಮೂರನೇ ಬಾರಿ ಟ್ರೋಫಿ ಗೆಲ್ಲಲು ಭಾರತ ಪಣ

ಭಾರತ **253-7**
ಇಂಗ್ಲೆಂಡ್ **246-7**

ಟಿ 20 ವಿಶ್ವಕಪ್ ಫೈನಲ್‌ಗೆ ಭಾರತ

ಇಂಗ್ಲೆಂಡ್ ವಿರುದ್ಧ 7 ರನ್ ರೋಚಕ ಜಯ | ಫೈನಲ್‌ನಲ್ಲಿ ಕಿವೀಸ್ ಎದುರಾಳಿ

89 ರನ್

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಹಸ್ತ

ದಿನದ ಮಾತು

ಶರೀರವೇ ಉತ್ಕೃಷ್ಟ ಕಾರ್ಯಗಳನ್ನೂ ಶಕ್ತಿಯುತವಾದ ಸಾಧನೆಗಳನ್ನೂ ಮಾಡುವುದು.
▲ಸ್ವಾಮಿ ಶಿವಾನಂದ

ಖಮೇನಿಗೆ ಆಯಸ್ಸು ತುಂಬಿದ್ದೇ ಜಗತ್ತಿನ ಒಳ್ಳೆತನ!

ಉಘೇ ವೀರ ಭೂಮಿಗೆ
• ಸಂತೋಷ್ ತಮ್ಮಯ್ಯ

• ಪುಟ ೬

ಕಿರುಸುದ್ದಿ

ಪಿಯು ಇತಿಹಾಸ ಪರೀಕ್ಷೆಗೆ 12 ಸಾವಿರ ವಿದ್ಯಾರ್ಥಿಗಳು ಗೈರು

• **ಬೆಂಗಳೂರು:** ಗುರುವಾರ ದ್ವಿತೀಯ ಪಿಯುಸಿ ಪರೀಕ್ಷೆ-1ರ ಇತಿಹಾಸ ಪರೀಕ್ಷೆ ಸುಸೂತ್ರವಾಗಿ ನಡೆದಿದ್ದು, ಒಟ್ಟು 12,670 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ. ಪರೀಕ್ಷೆಗೆ ಒಟ್ಟು 2,25,361 ಮಂದಿ ಈ ವಿಷಯಗಳಿಗೆ ನೋಂದಣಿ ಮಾಡಿಕೊಂಡಿದ್ದು 2,12,691 ಮಂದಿ ಪರೀಕ್ಷೆಗೆ ಹಾಜರಾಗಿದ್ದಾರೆ. ಈ ಮೂಲಕ ಶೇ.94.38 ರಷ್ಟು ಹಾಜರಾತಿ ದಾಖಲಾಗಿದೆ. ವಿಜಯಪುರ 1,142, ಬೀದರ್ 1,052, ರಾಯಚೂರು 1,111, ಕಲಬುರಗಿ 981, ಬಳ್ಳಾರಿ 763, ಚಿಕ್ಕೋಡಿ 715 ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಗರಿಷ್ಠ ಗೈರು ಹಾಜರಾಗಿದ್ದಾರೆ. ಉಡುಪಿ ಜಿಲ್ಲೆಯಲ್ಲಿ 41 ವಿದ್ಯಾರ್ಥಿಗಳು ಕನಿಷ್ಠ ಗೈರಾಗಿದ್ದಾರೆ. ಕಳೆದ ಫೆ.28ರಿಂದ ಪ್ರಾರಂಭವಾದ ಪಿಯು ಪರೀಕ್ಷೆ, ಈವರೆಗೂ 4 ಪರೀಕ್ಷೆ ನಡೆದಿವೆ. ಇಂದು ಭೌತಶಾಸ್ತ್ರ ಪರೀಕ್ಷೆ ನಡೆಯಲಿದೆ.

ಸಾಮಾನ್ಯ ಜನರ ಅಭಿವೃದ್ಧಿಗೆ ಏಕಾಗ್ರಚಿತ್ತ ಮೋದಿ: ಕಾರ್ನಿ

• ಪುಟ ೨

ಪ.ಬಂಗಾಳ ರಾಜ್ಯಪಾಲ ದಿಢೀರ್ ರಾಜೀನಾಮೆ

• ಪುಟ ೨

ನೇಪಾಳದಲ್ಲಿ ಮತದಾನ ಶಾಂತಿಯುತವಾಗಿ ಪೂರ್ಣ

• ಪುಟ ೨

ಲೋಕಾ ದಾಳಿ: ಕೋಟ್ಯಂತರ ಮೌಲ್ಯದ ಸ್ಥಿರ-ಚರಾಸ್ತಿ ಪತ್ತೆ

• ಪುಟ ೪

ಇಂದು ಗುತ್ತಿಗೆದಾರರ ಸಂಘದಿಂದ ಪ್ರತಿಭಟನೆ

• ಪುಟ ೫

ಜಾಗತಿಕ ಪೂರೈಕೆಯಲ್ಲಿ ವ್ಯತ್ಯಯ | ಆಪತ್ಕಾಲದಲ್ಲಿ ರಷ್ಯಾ ನೆರವು

ಭಾರತಕ್ಕೆ ತೈಲ ಭರವಸೆ



• **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಜಾಗತಿಕ ತೈಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ರುವ ಸಂಕಷ್ಟದ ಸಮಯದಲ್ಲಿ ರಷ್ಯಾ, ಭಾರತಕ್ಕೆ ನೆರವಿನ ಹಸ್ತ ಚಾಚಿದ್ದು, ರಷ್ಯಾದಿಂದ ತೈಲ ಹೊತ್ತ ಮೂರು ಬೃಹತ್ ಟ್ಯಾಂಕರ್‌ಗಳು ಭಾರತದತ್ತ ಮುಖಮಾಡಿವೆ ಎಂದು ವರದಿಯಾಗಿದೆ.

ಅಂತಾರಾಷ್ಟ್ರೀಯ ಮಾಧ್ಯಮಗಳ ವರದಿ ಪ್ರಕಾರ, ರಷ್ಯಾದಿಂದ ಹೊರಟ ಈ ಮೂರು ಹಡಗುಗಳಲ್ಲಿ ಒಟ್ಟು 21 ಲಕ್ಷಕ್ಕೂ ಹೆಚ್ಚು ಬ್ಯಾರಲ್ ಕಚ್ಚಾ ತೈಲವಿದೆ. ಒಡುನೆ, ಮಟಾರಿ ಮತ್ತು ಇಂದ್ರಿ ಎಂಬ ಮೂರು ಟ್ಯಾಂಕರ್‌ಗಳ ಮೂಲಕ ಈ ತೈಲ ಭಾರತಕ್ಕೆ ಸಾಗುತ್ತಿದೆ. ಇವುಗಳಲ್ಲಿ ಒಡುನೆ ಮತ್ತು



ಇಂದ್ರಿ ಸ್ಯೂಜ್ಮ್ಯಾಕ್ಸ್ ದರ್ಜೆಯ ಹಡಗುಗಳಾಗಿದ್ದು, ಪ್ರತಿಯೊಂದು ಸುಮಾರು 7.3 ಲಕ್ಷ ಬ್ಯಾರಲ್ ತೈಲ ಸಾಗಿಸುವ ಸಾಮರ್ಥ್ಯ ಹೊಂದಿವೆ. ಮಟಾರಿ ಟ್ಯಾಂಕರ್ ಅಫ್ರಾಮ್ಯಾಕ್ಸ್ ದರ್ಜೆಗೆ ಸೇರಿದ್ದು, ಇದು ಸುಮಾರು 7 ಲಕ್ಷ ಬ್ಯಾರಲ್ ಕಚ್ಚಾ ತೈಲವನ್ನು ಹೊತ್ತು ಸಾಗುತ್ತಿದೆ.

7.3 ಲಕ್ಷ ಬ್ಯಾರಲ್ ತೈಲವನ್ನು ಹೊತ್ತ ಒಡುನೆ ಟ್ಯಾಂಕರ್ ಈಗಾಗಲೇ ಭಾರತದ ಪಾರದೀಪ್ ಬಂದರನ್ನು ತಲುಪಿದೆ ಎಂದು ತಿಳಿದುಬಂದಿದೆ. ಮತ್ತೊಂದು ಹಡಗು ಮಟಾರಿ ಗುಜರಾತಿನ ವಾಡಿನರ್ ಬಂದರಿನತ್ತ ಸಾಗುತ್ತಿದೆ. ಇದೇ ವೇಳೆ, ಮೂಲತಃ ಸಿಂಗಾಪುರದತ್ತ ಪ್ರಯಾಣಿಸುತ್ತಿದ್ದ ಇಂದ್ರಿ ಟ್ಯಾಂಕರ್ ತನ್ನ ದಿಕ್ಕನ್ನು ಬದಲಿಸಿ ಭಾರತದತ್ತ ಬರುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಪಶ್ಚಿಮ ಏಷ್ಯಾದ ಅಶಾಂತಿ ಮತ್ತು ಗಲ್ಫ್ ದೇಶಗಳಿಂದ ತೈಲ ಪೂರೈಕೆ ಕುಂಠಿತಗೊಂಡಿರುವ ಹಿನ್ನೆಲೆ ಭಾರತದಲ್ಲಿ ತೈಲ ಸರಬರಾಜು ಕುರಿತು ಚಿಂತನೆ ಹೆಚ್ಚಾಗಿದೆ. ➡ಪುಟ ೪

ಖಮೇನಿ ಸಾವಿಗೆ ಭಾರತ ಸಂತಾಪ

• **ಹೊಸದಿಲ್ಲಿ:** ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ನಿಧನಕ್ಕೆ ಭಾರತ ಗುರುವಾರ ಅಧಿಕೃತವಾಗಿ ಸಂತಾಪ ವ್ಯಕ್ತಪಡಿಸಿದೆ. ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ಇರಾನ್ ರಾಯಭಾರ ಕಚೇರಿಗೆ ಭೇಟಿ ನೀಡಿ, ಸರ್ಕಾರದ ಪರವಾಗಿ ಶೋಕ ಪುಸ್ತಕಕ್ಕೆ ಸಹಿ ಹಾಕಿದರು.

ಹಾರ್ಮುಜ್ ಜಲಸಂಧಿ ಆಯ್ದ ರಾಷ್ಟ್ರಗಳಷ್ಟೇ ಮುಕ್ತ: ಇರಾನ್

• **ಹೊಸದಿಲ್ಲಿ:** ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲಾಗಿದೆ ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಘೋಷಿಸಿದೆ. ಆದರೆ ಹಡಗುಗಳ ಸಂಚಾರಕ್ಕೆ ಕಟ್ಟುನಿಟ್ಟಾದ ನಿರ್ಬಂಧಗಳನ್ನು ಹೇರಲಾಗಿದೆ. ಗುರುವಾರ ಹೊರಡಿಸಲಾದ ಹೇಳಿಕೆಯ ಪ್ರಕಾರ, ಈ ಪ್ರಮುಖ ಜಲಮಾರ್ಗವನ್ನು ಅಮೆರಿಕ, ಇಸ್ರೇಲ್, ಯುರೋಪ್ ಮತ್ತು ಅವರ ಪಾಶ್ಚಿಮಾತ್ಯ ಮಿತ್ರರಾಷ್ಟ್ರಗಳ ಹಡಗುಗಳಿಗೆ ಸಂಪೂರ್ಣವಾಗಿ ಮುಚ್ಚಲಾಗಿದೆ. ಯುದ್ಧದ ಸಮಯದಲ್ಲಿ ಜಲಸಂಧಿಯ ಸಂಚಾರವನ್ನು ನಿಯಂತ್ರಿಸುವ ಹಕ್ಕನ್ನು ಅಂತಾರಾಷ್ಟ್ರೀಯ ಕಾನೂನಿನಲ್ಲಿ ಇರಾನ್ ಕಾಯ್ದಿರಿಸಿಕೊಂಡಿದೆ ಎಂದು ಐಆರ್‌ಜಿಸಿ ಸ್ಪಷ್ಟಪಡಿಸಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಸೇರಿದ ಹಡಗುಗಳು ಕಂಡುಬಂದಲ್ಲಿ ದಾಳಿ ನಡೆಸಲಾಗುವುದು ಎಂದು ಎಚ್ಚರಿಸಲಾಗಿದೆಯಾದರೂ, ಚೀನಾ ಧ್ವಜ ಹೊಂದಿರುವ ಹಡಗುಗಳಿಗೆ ರಾಜತಾಂತ್ರಿಕ ಸೌಜನ್ಯದ ಭಾಗವಾಗಿ ಪ್ರವೇಶ ನೀಡಲಾಗಿದೆ.

ಸಂಘರ್ಷ ಕೂಡಲೇ ಅಂತ್ಯಗೊಳಿಸಲು ಪ್ರಧಾನಿ ಮೋದಿ ಕರೆ

• **ಹೊಸದಿಲ್ಲಿ:** ಯಾವುದೇ ಸಮಸ್ಯೆಯನ್ನು ಸೇನಾ ಸಂಘರ್ಷದಿಂದ ಮಾತ್ರವೇ ಬಗೆಹರಿಸಲಾಗದು ಎಂದು ಅಭಿಪ್ರಾಯಪಟ್ಟಿರುವ ಪ್ರಧಾನಿ ನರೇಂದ್ರ ಮೋದಿ, ಮಧ್ಯಪ್ರಾಚ್ಯ



ಸಂಘರ್ಷವನ್ನು ಆದಷ್ಟು ಬೇಗ ಅಂತ್ಯಗೊಳಿಸುವಂತೆ ಕರೆ ನೀಡಿದ್ದಾರೆ. ಫಿನ್‌ಲ್ಯಾಂಡ್ ಅಧ್ಯಕ್ಷ ಅಲೆಕ್ಸಾಂಡರ್ ಸ್ಟಬ್ ಜತೆ ಹಲವು ಸುತ್ತಿನ ಮಾತುಕತೆ ಬೆನ್ನಲ್ಲೇ, ಪ್ರಧಾನಿ ಮೋದಿ ಈ ರೀತಿ ಕರೆ ನೀಡಿದ್ದಾರೆ. ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್‌ಗಳ ಸಮರ ಆರನೇ ದಿನಕ್ಕೆ ಕಾಲಿರಿಸಿದ್ದು, ಇತ್ತಂಡಗಳು ಹೊಸ ದಾಳಿ ಮುಖೇನ ವಲಯಾದ್ಯಂತ ಉದ್ವಿಗ್ನತೆಯನ್ನು ತಾರಕಕ್ಕೇರಿಸಿರುವ ಹಿನ್ನೆಲೆಯಲ್ಲಿ, ಪ್ರಧಾನಿ ಮೋದಿ ಸಂಘರ್ಷ ನಿಲ್ಲಿಸಲು ಮನವಿ ಮಾಡಿದ್ದಾರೆ. ➡ಪುಟ ೪

ರಾಜ್ಯ ಆಯವ್ಯಯ

ಸಿದ್ದರಾಮಯ್ಯರ 17ನೇ ಬಜೆಟ್ ಇಂದು



• **ಬೆಂಗಳೂರು:** ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಬೆಳಗ್ಗೆ 10.15ಕ್ಕೆ 2026-27ನೇ ಸಾಲಿನ ರಾಜ್ಯದ ಆಯ-ವ್ಯಯ ಮಂಡಿಸಲಿದ್ದು, ಈ ಬಜೆಟ್ ವಿಶೇಷತೆ ಏನು, ಈ ಬಜೆಟ್ ಯಾವ ವಲಯಕ್ಕೆ ಆದ್ಯತೆ ಸಿಗಬಹುದು ಎಂಬ ಕುತೂಹಲ ಜನಸಾಮಾನ್ಯರಲ್ಲಿದೆ.

ಆಯ-ವ್ಯಯ ಮಂಡಿಸುವಲ್ಲಿ ಪ್ರವೀಣರಾಗಿರುವ ಸಿದ್ದರಾಮಯ್ಯ ಅವರ ಪ್ರತಿ ಬಜೆಟ್ ವಿಶೇಷತೆಯಿಂದ ಕೂಡಿರುತ್ತದೆ ಎಂಬ ನಿರೀಕ್ಷೆ ಜನರಲ್ಲಿದೆ. ಇದು ಅವರ 17ನೇ ಬಜೆಟ್ ಆಗಿರುವುದರಿಂದ ಆರ್ಥಿಕ ಸೋರಿಕೆಗೆ ಕಡಿವಾಣ ಹಾಕಿ ಜನಪರ ಬಜೆಟ್ ಮಂಡಿಸಲಿದ್ದಾರೆ ಎಂದು ಅವರ ಸಂಪುಟ ಸಹೋದ್ಯೋಗಿಗಳು ತಿಳಿಸಿದ್ದಾರೆ.



ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಈ ಬಾರಿಯ ಬಜೆಟ್‌ನಲ್ಲಿ ಹಲವು ಸೆಸ್‌ಗಳನ್ನು ಜಾರಿ ಮಾಡುವ ಸಾಧ್ಯತೆ ಇದೆ. ಆದರೆ, ಈ ಸೆಸ್ ಜನಸಾಮಾನ್ಯರ ವರ್ಗಕ್ಕೆ ಹೊರೆಯಾಗದಂತೆ ನೋಡಿಕೊಳ್ಳುವ ಅನಿವಾರ್ಯತೆ ಸರ್ಕಾರಕ್ಕೆ ಇರುವುದರಿಂದ ಯಾವ ರೀತಿಯ ಸೆಸ್ ಇರಲಿದೆ ಎಂಬುವುದು ಬಜೆಟ್‌ನಲ್ಲಿ ತಿಳಿಯಲಿದೆ. ಉದ್ಯಮಿಗಳು, ಕೈಗಾರಿಕೋದ್ಯಮಿಗಳು ಹಣಕಾಸು ತಜ್ಞರು, ಚಿಲ್ಲರೆ ವ್ಯಾಪಾರಿಗಳು, ಕೃಷಿಕರು ಸೇರಿದಂತೆ ಉದ್ಯೋಗಿಗಳು ಬಹು ನಿರೀಕ್ಷೆಯಿಂದ ಇದ್ದಾರೆ. ಈ ಬಜೆಟ್ ಜನಪರ ಆಗುತ್ತಾ? ಅಥವಾ ಜನಪ್ರಿಯ ಬಜೆಟ್ ಆಗುತ್ತಾ? ಎಂಬುದು ಗೊತ್ತಾಗಲಿದೆ.

ಭರಪೂರ ಅನುದಾನ?: ರಾಜ್ಯದ ಮಹತ್ವದ ಯೋಜನೆಗಳಾದ ಕೃಷ್ಣಾ ಮೇಲ್ದಂಡೆ ಯೋಜನೆ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ, ಬೆಂಗಳೂರು ಮೂಲಸೌಕರ್ಯ, ಕರಾವಳಿ, ಮಲೆನಾಡು ಭಾಗದ ಪ್ರಮುಖ ಯೋಜನೆಗಳಿಗೆ ಈ ಆಯ-ವ್ಯಯದಲ್ಲಿ ದೊಡ್ಡ ಮೊತ್ತದ ಅನುದಾನದ ನಿರೀಕ್ಷೆ ಇದೆ.

> **ಸಿಎಂ ಸಿದ್ದರಾಮಯ್ಯ ಅವರು 17ನೇ ಬಾರಿ ಬಜೆಟ್ ಮಂಡಿಸುವ ಮೂಲಕ ಹೊಸ ದಾಖಲೆ ಸೃಷ್ಟಿಸುತ್ತಿದ್ದಾರೆ. ಈ ಮಹತ್ವದ ಬಜೆಟ್ ಮಂಡನೆ ನೇರ ಪ್ರಸಾರವನ್ನು ಜನತೆಗೆ ತಲುಪಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ.**
> ■ **ಹೇಮಂತ್ ಎಂ. ನಿಂಬಾಳ್ಕರ್,** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ

ಬಸ್ ನಿಲ್ದಾಣಗಳಲ್ಲಿ ಬಜೆಟ್ ನೇರ ಪ್ರಸಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಲಿರುವ 2026-27ನೇ ಸಾಲಿನ ರಾಜ್ಯದ ಆಯ-ವ್ಯಯದ ಭಾಷಣವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ರಾಜ್ಯದ ಆಯ್ದ ಬಸ್ ನಿಲ್ದಾಣಗಳಲ್ಲಿರುವ ಎಲ್‌ಇಡಿ ಮತ್ತು ಟಿವಿ ಪರದೆಗಳ ಮೂಲಕ ಮೊಟ್ಟ ಮೊದಲ ಬಾರಿಗೆ ನೇರ ಪ್ರಸಾರ ಮಾಡುತ್ತಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಬೆಂಗಳೂರು ಮೂಲದ ವೃತ್ತಿ ಮೀಡಿಯಾ ಸಲ್ಯೂಷನ್ಸ್ ಸಂಸ್ಥೆಯ ಸಹಭಾಗಿತ್ವದಲ್ಲಿ ರಾಜ್ಯಾದ್ಯಂತ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಅಳವಡಿಸಿರುವ ಡಿಜಿಟಲ್ ಡಿಸ್ಪ್ಲೇ (ಎಲ್‌ಇಡಿ) ಮತ್ತು ಟಿವಿ ಪರದೆಗಳ ಮೂಲಕ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ಬೆಳಗ್ಗೆ 10.15 ಗಂಟೆಯಿಂದ ನೇರಪ್ರಸಾರ ಮಾಡಲಿದೆ ಎಂದು ವಾರ್ತಾ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ. ➡ಪುಟ ೪

ರಾಜ್ಯಸಭೆ ಚುನಾವಣೆಗೆ ಸಿಎಂ ನಿತೀಶ್ ಕುಮಾರ್ ಸ್ಪರ್ಧೆ

ಬಿಹಾರದಲ್ಲಿ ಬಿಜೆಪಿ ಮುಖ್ಯಮಂತ್ರಿ?

• **ಹೊಸದಿಲ್ಲಿ/ಪಾಟ್ನಾ:** ಮುಖ್ಯಮಂತ್ರಿ ನಿತೀಶ್ ಕುಮಾರ್ ರಾಜ್ಯಸಭೆ ಚುನಾವಣೆ ಸ್ಪರ್ಧೆ ಹಿನ್ನೆಲೆ, ಬಿಹಾರ ಮುಂದಿನ ಸಿಎಂ ಬಿಜೆಪಿಯಿಂದ ಆಯ್ಕೆಯಾಗುವ ಸಾಧ್ಯತೆ ಇದೆ. ನಿತೀಶ್ ಅವರ ಪುತ್ರ ನಿಶಾಂತ್ ಕುಮಾರ್ ಅವರನ್ನು ಉಪಮುಖ್ಯಮಂತ್ರಿಯಾಗಿ ನೇಮಕ ಮಾಡಬಹುದು ಎಂದು ರಾಜಕೀಯ ಮೂಲಗಳು ತಿಳಿಸಿವೆ.

ಹಲವಾರು ಬಿಜೆಪಿ ನಾಯಕರ ಹೆಸರುಗಳು ಸಿಎಂ ಸ್ಥಾನಕ್ಕೆ ಕೇಳಿಬರುತ್ತಿವೆ. ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಮತ್ತು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಮುಂಚೂಣಿಯಲ್ಲಿದ್ದಾರೆ. ಶಾಸಕ ಸಂಜೀವ್ ಚೌರಾಸಿಯಾ ಅವರ ಹೆಸರೂ ರಾಜಕೀಯ ಚರ್ಚೆಗಳಲ್ಲಿ ಮುನ್ನಲೆಗೆ ಬಂದಿದೆ ಎನ್ನಲಾಗಿದೆ. ರಾಜ್ಯದ ಚುನಾವಣಾ ಸಮೀಕರಣಗಳನ್ನು ಗಮನದಲ್ಲಿಟ್ಟುಕೊಂಡು, ಮುಖ್ಯಮಂತ್ರಿ ಹುದ್ದೆಯನ್ನು ಹಿಂದುಳಿದ ವರ್ಗದ ನಾಯಕರೊಬ್ಬರಿಗೆ ನೀಡಬಹುದು ಎಂದು ಪಕ್ಷದ ಆಂತರಿಕ ಮೂಲಗಳು ಸುಳಿವು ನೀಡಿವೆ. ➡ಪುಟ ೪



ಬಿಹಾರದ ಸುದೀರ್ಘ ಸಿಎಂ ಖ್ಯಾತಿ

75 ವರ್ಷದ ನಿತೀಶ್ ಕುಮಾರ್ ಬಿಹಾರದ ಸುದೀರ್ಘ ಅವಧಿಯ ಸಿಎಂ ಆಗಿದ್ದು, ದಾಖಲೆಯ 10 ಬಾರಿ ಪ್ರಮಾಣ ಸ್ವೀಕರಿಸಿದ್ದಾರೆ. ಜಿತನ್ ರಾಮ್ ಮಾಂಜಿ ಸಿಎಂ ಆಗಿದ್ದ ಅಲ್ಪ ಅವಧಿಯನ್ನು ಹೊರತುಪಡಿಸಿ, 2015 ರಿಂದ ಅವರು ಸತತವಾಗಿ ಅಧಿಕಾರದಲ್ಲಿದ್ದಾರೆ. ➡ಪುಟ ೪

ಸಿಎಂರಿಂದ ಶೀಘ್ರ ಅಂತಿಮ ತೀರ್ಮಾನ: ಎಚ್.ಕೆ. ಪಾಟೀಲ್

ಒಳ ಮೀಸಲು ಕಲ್ಪಿಸಲು ಸರ್ಕಾರ ಬದ್ಧ

• **ಬೆಂಗಳೂರು:** ನೇರ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ ಕಲ್ಪಿಸುವ ವಿಚಾರವಾಗಿ ಗುರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ



ಸಭೆಯಲ್ಲಿ ಚರ್ಚಿಸಲಾಗಿದೆ. ಆದರೆ, ಸುದೀರ್ಘವಾಗಿ ಚರ್ಚೆ ನಡೆದರೂ ಅಂತಿಮ ತೀರ್ಮಾನಕ್ಕೆ ಬರಲಾಗಿಲ್ಲ.

ಒಳ ಮೀಸಲಾತಿ ಕಲ್ಪಿಸಲು ಸರ್ಕಾರ ಬದ್ಧವಾಗಿದೆ. ಈ ವಿಚಾರವಾಗಿ ಸರ್ಕಾರದ ನಿಲುವಿನಲ್ಲಿ ಯಾವುದೇ ಬದಲಾವಣೆಯಿಲ್ಲ. ಈ ಕುರಿತ ಚರ್ಚೆ ಅಪೂರ್ಣವಾಗಿದೆ, ಚರ್ಚೆ ಮುಂದುವರಿದಿದೆ. ತೀವ್ರವಾಗಿ ಚರ್ಚೆ ನಡೆಸುವುದಕ್ಕೆ ಯಾವಾಗ ಸಭೆ ಸೇರುವುದು ಎಂಬುದನ್ನು ಮುಖ್ಯಮಂತ್ರಿ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ. ಈ ಹಿಂದೆ ಮೀಸಲಾತಿ ಶೇ.56 ಎಂದು ನಿರ್ಣಯ ಮಾಡಲಾಗಿತ್ತು. ➡ಪುಟ ೪

ಆರೋಗ್ಯ ಇಲಾಖೆ ಎಲ್ಲಾ ನೌಕರರು ಎಸ್ಮಾ ವ್ಯಾಪ್ತಿಗೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಕಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಅಥವಾ ತಾತ್ಕಾಲಿಕ ಆಧಾರದ ಮೇಲೆ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಅಧಿಕಾರಿಗಳು, ವೈದ್ಯರು ಮತ್ತು ಇತರೆ ಸಿಬ್ಬಂದಿಯ ಸೇವೆಯನ್ನು ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ(ಎಸ್ಮಾ)-2013ರಡಿ ಅಧಿಸೂಚಿಸುವ ಬಗ್ಗೆ ಚರ್ಚೆ ನಡೆಸಲಾಗಿದೆ. ಈ ವೇಳೆ ಇಲಾಖಾ ಸಚಿವರು ನೌಕರರೊಂದಿಗೆ ಮಾತುಕತೆ ನಡೆಸಿ ಮನವೊಲಿಸಲು ತೀರ್ಮಾನಿಸಲಾಗಿದೆ ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ರಾಜಗೋಪುರಗಳ ಲೋಕಾರ್ಪಣೆ ಮಾಡಿ ಉಪರಾಷ್ಟ್ರಪತಿ ಅಭಿಪ್ರಾಯ

ಹಿಂದು ಪ್ರಜ್ಞೆ ವಿಧಾನ ಮಾತ್ರವಲ್ಲ, ಜೀವನ

• **ಚಿಕ್ಕೋಡಿ:** ಹಿಂದು ಪ್ರಜ್ಞೆ ಕೇವಲ ಧಾರ್ಮಿಕ ವಿಧಿ ವಿಧಾನ ಮಾತ್ರವಲ್ಲ. ಜೀವನದಲ್ಲಿ ಅನುಸರಿಸಿಕೊಂಡು ಹೋಗಬೇಕಾಗಿರುವ ಪದ್ಧತಿಯಾಗಿದೆ. ನದಿ, ಪರ್ವತ, ಪ್ರಾಣಿ ಸೇರಿದಂತೆ ಪ್ರತಿಯೊಂದರಲ್ಲಿಯೂ ಮನುಷ್ಯ ದೈವತ್ವವನ್ನು ನೋಡುವುದಾಗಿದೆ ಎಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹೇಳಿದರು. ತಾಲೂಕಿನ ಯಡೂರ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ದೇವಸ್ಥಾನ ಹಾಗೂ ಕಾಡಸಿದ್ದೇಶ್ವರ ಮಠದಿಂದ ಗುರುವಾರ ಹಮ್ಮಿಕೊಂಡಿದ್ದ ರಾಜಗೋಪುರಗಳ ಲೋಕಾರ್ಪಣೆಗೊಳಿಸಿ, ವೀರಶೈವ ಲಿಂಗಾಯತ ಧರ್ಮೋತ್ಥಾನ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ➡ಪುಟ ೪



ಟ್ರಂಪ್‌ಗೆ ಮತ್ತೆ ದೊಡ್ಡ ಹಿನ್ನಡೆ

ಪ್ರತಿಸುಂಕದ ಹಣ ವಾಪಸ್‌ಗೆ ಆದೇಶ



• **ನ್ಯೂಯಾರ್ಕ್:** ಸುಪ್ರೀಂ ಕೋರ್ಟ್ ಕಾನೂನುಬಾಹಿರವೆಂದು ಘೋಷಿಸಿದ್ದ ಪ್ರತಿಸುಂಕದ ಹಣ ತಮ್ಮಲ್ಲೇ ಉಳಿಸಿಕೊಳ್ಳಲು ಟ್ರಂಪ್ ಆಡಳಿತಕ್ಕೆ ಯಾವುದೇ ಹಕ್ಕುಗಳಿಲ್ಲ, ಸುಂಕ ಪಾವತಿಸಿದ್ದ ಕಂಪನಿಗಳಿಗೆ ಹಣ ಹಿಂದಿರುಗಿಸಬೇಕು ಎಂದು ನ್ಯೂಯಾರ್ಕ್ ಫೆಡರಲ್ ಕೋರ್ಟ್ ಆದೇಶಿಸಿದೆ. ಇದು ಟ್ರಂಪ್ ಆಡಳಿತಕ್ಕೆ ದೊಡ್ಡ ಹಿನ್ನಡೆಯಾಗಿದೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,74,100(2,78,000)	ಅಪರಂಜಿ ಚಿನ್ನ 16,100(16,200)	ಆಭರಣ ಚಿನ್ನ: 14,990(15,080)	ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ	ಬಿಎಸ್‌ಇ 80,015(899↑)	ಎನ್‌ಎಸ್‌ಇ 24,765(285↑)	$1 = ₹92.15

ಯುದ್ಧನೌಕೆ ಧ್ವಂಸ: ಟ್ರಂಪ್ ಹತ್ಯೆಗೆ ಕರೆ

ಹೊಸ ದಾಳಿ, ಸೇಡು ತೀರಿಸುವುದಾಗಿ ಇರಾನ್ ಎಚ್ಚರಿಕೆ



• **ದುಬೈ:** ಪಶ್ಚಿಮ ಏಷ್ಯಾದ ಯುದ್ಧ ತೀವ್ರಗೊಂಡ ಬೆನ್ನಲ್ಲೇ, ಇರಾನ್ ಗುರುವಾರ ಮುಂಜಾನೆ ಇಸ್ರೇಲ್ ಮತ್ತು ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್‌ಗಳಿಂದ ಹೊಸ ದಾಳಿಯನ್ನು ನಡೆಸಿದೆ. ಹಿಂದು ಮಹಾಸಾಗರದಲ್ಲಿ ಇರಾನ್‌ನ ಯುದ್ಧನೌಕೆ ಮುಳುಗಿಸಿದ್ದಕ್ಕಾಗಿ ಅಮೆರಿಕವು ತೀವ್ರವಾಗಿ ಪಶ್ಚಾತ್ತಾಪ ಪಡಲಿದೆ ಎಂದು ಟೆಹ್ರಾನ್ ಎಚ್ಚರಿಸಿದೆ. ಇದೇ ವೇಳೆ ಇರಾನ್‌ನ ಉನ್ನತ ಧರ್ಮಗುರುಗಳು ಟ್ರಂಪ್ ಹತ್ಯೆ ನಡೆಸಬೇಕೆಂದು ಬಹಿರಂಗ ಕರೆ ನೀಡಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಉದ್ವಿಗ್ನಗೊಳಿಸಿದೆ.

ಪ್ರತಿದಾಳಿ ಮತ್ತು ಮಿಲಿಟರಿ ಸಂಘರ್ಷ

ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ನಡೆದಿರುವುದನ್ನು ಇರಾನ್ ಸರ್ಕಾರಿ ದೂರದರ್ಶನ ಖಚಿತಪಡಿಸಿದ್ದು, ಟೆಲ್ ಅವಿವ್ ಮತ್ತು ಜೆರುಸಲೆಮ್‌ಗಳಲ್ಲಿ ಕ್ಷಿಪಣಿ ದಾಳಿಯ ಮುನ್ನೆಚ್ಚರಿಕೆ ಸೈರನ್‌ಗಳು ಮೊಳಗಿವೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಇಸ್ರೇಲ್ ಪಡೆಗಳು ಟೆಹ್ರಾನ್ ಮತ್ತು ಅಲ್ಲಿನ ಖಂಡಾಂತರ ಕ್ಷಿಪಣಿ ಉಡಾವಣಾ ಕೇಂದ್ರಗಳ ಮೇಲೆ ಬೃಹತ್ ಪ್ರಮಾಣದ ದಾಳಿ ಆರಂಭಿಸಿವೆ. ಕಳೆದ 24 ಗಂಟೆಗಳಲ್ಲಿ ಲೆಬನಾನ್‌ನಲ್ಲಿರುವ ಹಿಜ್ಬುಲ್ಲಾ ಸಂಘಟನೆಯ 80 ಅಡಗುದಾಣಗಳನ್ನು ಇಸ್ರೇಲ್ ಧ್ವಂಸಗೊಳಿಸಿದೆ.

ಶ್ರೀಲಂಕಾ ಜಲಪ್ರದೇಶದತ್ತ ಮತ್ತೊಂದು ಯುದ್ಧ ನೌಕೆ!

ಅಮೆರಿಕದ ಜಲಾಂತರ್ಗಾಮಿಯು ಇರಾನಿನ ಯುದ್ಧನೌಕೆಯಾದ ಐರಿಸ್ ದೇನಾವನ್ನು ಧ್ವಂಸಗೊಳಿಸಿ 87 ನಾವಿಕರ ಸಾವಿಗೆ ಕಾರಣವಾದ ಬೆನ್ನಲ್ಲೇ, ಇರಾನಿನ ಎರಡನೇ ಯುದ್ಧನೌಕೆಯು ಗುರುವಾರ ಶ್ರೀಲಂಕಾದತ್ತ ಸಾಗುತ್ತಿತ್ತು. ಹಡಗು ಶ್ರೀಲಂಕಾದ ಪ್ರಾದೇಶಿಕ ಜಲಾನಯನ ಪ್ರದೇಶದ ಸ್ವಲ್ಪ ಹೊರಗಿದೆ ಎಂದು ಶ್ರೀಲಂಕಾದ ಸಚಿವ ನಳಿಂಡಾ ಜಯತಿಸ್ಸಾ ದೃಢಪಡಿಸಿದ್ದಾರೆ. ಈ ಹಡಗು 100ಕ್ಕೂ ಹೆಚ್ಚು ಸಿಬ್ಬಂದಿಯನ್ನು ಹೊತ್ತೊಯ್ಯುತ್ತಿದೆ ಎಂದು ವರದಿಯಾಗಿದೆ. ಬುಧವಾರ ಶ್ರೀಲಂಕಾದ ದಕ್ಷಿಣ ಕರಾವಳಿಯಲ್ಲಿ ಮುಳುಗಿದ ಹಡಗಿನಂತೆಯೇ ಹಡಗನ್ನು ಗುರಿಯಾಗಿಸಬಹುದೆಂಬ ಆತಂಕವಿದೆ ಎಂದು ಮೂಲಗಳು ತಿಳಿಸಿವೆ.

1000ಕ್ಕೂ ಹೆಚ್ಚು ಸಾವು, ಭವಿಷ್ಯದ ಆತಂಕ



ಯುದ್ಧಪೀಡಿತ ಇರಾನ್‌ನಲ್ಲಿ 1,000ಕ್ಕೂ ಹೆಚ್ಚು ಜನರು ಮತ್ತು ಇಸ್ರೇಲ್ ಹಾಗೂ ಲೆಬನಾನ್‌ನಲ್ಲಿ ನೂರಾರು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆಯ ನಂತರ, ಇರಾನ್‌ನಲ್ಲಿ ಆಡಳಿತ ಬದಲಾವಣೆಯೇ ಯುದ್ಧದ ಗುರಿಯೇ ಎಂಬ ಪ್ರಶ್ನೆಗಳು ಎದ್ದಿವೆ. ಸದ್ಯಕ್ಕೆ ಈ ಸಂಘರ್ಷ ಕೊನೆಗೊಳ್ಳುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ.

ಇಸ್ರೇಲಿಗೆ ವಾರಕ್ಕೆ 3 ಶತಕೋಟಿ ಡಾಲರ್ ಖರ್ಚು!

ಇರಾನ್‌ನೊಂದಿಗೆ ನಡೆಯುತ್ತಿರುವ ಯುದ್ಧವು ಆರ್ಥಿಕ ಚಟುವಟಿಕೆಗಳ ಮೇಲಿನ ಪ್ರಸ್ತುತ ನಿರ್ಬಂಧಗಳಲ್ಲಿ ಇಸ್ರೇಲ್‌ಗೆ ವಾರಕ್ಕೆ ಅಂದಾಜು ಎನ್‌ಐಎಸ್ ಅಂದಾಜು 3 ಶತಕೋಟಿ ಡಾಲರ್ ವೆಚ್ಚವಾಗಬಹುದು ಎಂದು ಇಸ್ರೇಲಿ ಹಣಕಾಸು ಸಚಿವಾಲಯ ಎಚ್ಚರಿಸಿದೆ. ಹೋಮ್ ಫ್ರಂಟ್ ಕಮಾಂಡ್ ಮುಖ್ಯಸ್ಥ ಮೇಜರ್ ಜನರಲ್ ಶಾಯ್ ಕ್ಲಾವರ್ ಅವರಿಗೆ ಕಳುಹಿಸಿದ ಪತ್ರದಲ್ಲಿ, ಹಣಕಾಸು ಸಚಿವಾಲಯದ ಮಹಾನಿರ್ದೇಶಕ ಇಲಾನ್ ರೋಮ್ ಅವರು ಗುರುವಾರದೊಳಗೆ ವ್ಯವಹಾರಗಳು ಮತ್ತು ಕೆಲಸಗಳನ್ನು ಪುನರಾರಂಭಿಸಲು ಅವಕಾಶ ನೀಡಲು ನಿರ್ಬಂಧಗಳನ್ನು ಸರಾಗಗೊಳಿಸುವಂತೆ ಮನವಿ ಮಾಡಿದ್ದಾರೆ. ಭದ್ರತಾ ಪರಿಸ್ಥಿತಿಗೆ ಹೊಂದಿಕೊಳ್ಳುವ ರಕ್ಷಣಾ ನೀತಿಯನ್ನು ಕಾಪಾಡಿಕೊಳ್ಳುವ ಅಗತ್ಯತೆಯ ಬಗ್ಗೆ ಯಾವುದೇ ವಿವಾದವಿಲ್ಲ, ಆದರೆ ಅದೇ ಸಮಯದಲ್ಲಿ, ಆರ್ಥಿಕತೆಯನ್ನು ವಿಶಾಲ ಪ್ರಮಾಣದಲ್ಲಿ ಸ್ಥಗಿತಗೊಳಿಸುವುದು ಭಾರೀ ಆರ್ಥಿಕ ವೆಚ್ಚವನ್ನು ಉಂಟುಮಾಡುತ್ತದೆ ಎಂದು ರೋಮ್ ಎಚ್ಚರಿಸಿದ್ದಾರೆ.

ಕಡಿಮೆ ವೆಚ್ಚದ ಶಾಹೆದ್ ಡ್ರೋನ್ ದುಬಾರಿ ಕ್ಷಿಪಣಿಗಳಿಗೆ ಸವಾಲು

ಇರಾನ್‌ನ ಶಾಹೆದ್ ಸರಣಿಯ ಕಾಮಿಕಾಜೆ ಡ್ರೋನ್‌ಗಳು ಲಕ್ಷಾಂತರ ಡಾಲರ್ ಮೌಲ್ಯದ ವಾಯು ರಕ್ಷಣಾ ವ್ಯವಸ್ಥೆಗಳ ಕಣ್ತಪ್ಪಿಸುವ ಮೂಲಕ ಪಶ್ಚಿಮ ಏಷ್ಯಾದ ಯುದ್ಧತಂತ್ರವನ್ನೇ ಬದಲಿಸುತ್ತಿವೆ. ಕೇವಲ 20,000 ಅಮೆರಿಕ ಡಾಲರ್ (ಸುಮಾರು 17 ಲಕ್ಷ ರೂ.) ವೆಚ್ಚದ ಈ ಡ್ರೋನ್‌ಗಳನ್ನು ಎದುರಿಸಲು ಅಮೆರಿಕದ ಪೇಟ್ರಿಯಾಟ್ ವ್ಯವಸ್ಥೆಯ 4 ಮಿಲಿಯನ್ ಯುಎಸ್‌ಡಿ ಮೌಲ್ಯದ ಕ್ಷಿಪಣಿಗಳನ್ನು ಬಳಸಲಾಗುತ್ತಿದೆ. ಇದು ಆರ್ಥಿಕ ಹೊರೆಯಾಗಿ ಪರಿಣಮಿಸಿದೆ.

ಡ್ರೋನ್ ಯುದ್ಧದ ತಲೆನೋವು

ಈ ಕಡಿಮೆ ವೆಚ್ಚದ ಬೆದರಿಕೆಗೆ ಪ್ರತಿಯಾಗಿ, ವಾಷಿಂಗ್ಟನ್ ಕೂಡ ಈಗ ಸ್ವಾಯತ್ತ ಯುದ್ಧ ವ್ಯವಸ್ಥೆಗಳತ್ತ ಮುಖ ಮಾಡಿದೆ. ಶಾಹೆದ್ ಡ್ರೋನ್‌ಗಳ ಮಾದರಿಯಲ್ಲೇ ಕಡಿಮೆ ವೆಚ್ಚದ ಡ್ರೋನ್‌ಗಳನ್ನು ಅಮೆರಿಕ ಅಭಿವೃದ್ಧಿಪಡಿಸುತ್ತಿದೆ. ಇದು ಭವಿಷ್ಯದ ಯುದ್ಧಗಳು ಕೇವಲ ಮಾನವರ ನಡುವೆ ನಡೆಯದೆ, ಬಳಕೆದಾರರು ನಿಯಂತ್ರಿಸುವ ಯುಎವಿಗಳ ಮೂಲಕ ನಡೆಯಲಿವೆ, ಎಂಬುದರ ಸಂಕೇತವಾಗಿದೆ.



ತಾಂತ್ರಿಕ ಸಾಮರ್ಥ್ಯ ಮತ್ತು ಪತ್ತೆ ಹಚ್ಚುವಿಕೆ

ಈ ಡ್ರೋನ್‌ಗಳು ಸುಮಾರು 60 ಕೆಜಿ ಸ್ಫೋಟಕಗಳನ್ನು ಹೊತ್ತು 2,000 ಕಿಲೋಮೀಟರ್‌ಗಿಂತಲೂ ಹೆಚ್ಚು ದೂರ ಕ್ರಮಿಸಬಲ್ಲವು. ಇವುಗಳ ಸಣ್ಣ ಗಾತ್ರದ ಕಾರಣ ರೇಡಾರ್‌ಗಳಿಗೆ ಇವುಗಳನ್ನು ಪತ್ತೆ ಹಚ್ಚುವುದು ಕಷ್ಟ. ಆದರೆ ಇವುಗಳ ಪಿಸ್ಟನ್ ಇಂಜಿನ್‌ಗಳು ಮಾಡುವ ವಿಶಿಷ್ಟ 'ಬಝಿಂಗ್' ಶಬ್ದ ಇವುಗಳ ಇರುವಿಕೆಯನ್ನು ತಿಳಿಸುತ್ತದೆ. ಯುಎಇ ಮತ್ತು ಇತರ ಮಿತ್ರರಾಷ್ಟ್ರಗಳು ಶೇ.90 ಕ್ಕಿಂತ ಹೆಚ್ಚು ಡ್ರೋನ್‌ಗಳನ್ನು ಹೊಡೆದುರುಳಿಸುವಲ್ಲಿ ಯಶಸ್ವಿಯಾಗಿದ್ದರೂ, ವೆಚ್ಚದ ನಡುವಿನ ಭಾರಿ ವ್ಯತ್ಯಾಸ ಪಾಶ್ಚಿಮಾತ್ಯ ಪಡೆಗಳಿಗೆ ತಲೆನೋವಾಗಿ ಪರಿಣಮಿಸಿದೆ.



ಶಾಹೆದ್ ವಿನ್ಯಾಸ ಮತ್ತು ಯುದ್ಧತಂತ್ರ

ಡೆಲ್ಟಾ-ವಿಂಗ್ ವಿನ್ಯಾಸ ಮತ್ತು ಪ್ರೊಪೆಲ್ಲರ್ ಇಂಜಿನ್‌ಗಳನ್ನು ಹೊಂದಿರುವ ಈ ಶಾಹೆದ್-131 ಮತ್ತು 136 ಡ್ರೋನ್‌ಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಬೃಹತ್ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತಿದೆ.ಇವು ಗಂಟೆಗೆ ಕೇವಲ 185 ಕಿ.ಮೀ ವೇಗದಲ್ಲಿ ಚಲಿಸಿದರೂ, ಶತ್ರುಗಳ ರಾಡಾರ್‌ಗಳನ್ನು ಗೊಂದಲಕ್ಕೀಡುಮಾಡಲು ಇವುಗಳನ್ನು ಏಕಕಾಲಕ್ಕೆ ನೂರಾರು ಸಂಖ್ಯೆಯಲ್ಲಿ ಹಾರಿಸಲಾಗುತ್ತದೆ. ಈ ತಂತ್ರ ದುಬಾರಿ ಪ್ರತಿಬಂಧಕ ಕ್ಷಿಪಣಿಗಳನ್ನು ಖಾಲಿ ಮಾಡಿಸಿ, ನಂತರ ದೊಡ್ಡ ಬ್ಯಾಲಿಸ್ಟಿಕ್ ಕ್ಷಿಪಣಿಗಳು ಸುಲಭವಾಗಿ ಗುರಿ ತಲುಪಲು ದಾರಿ ಮಾಡಿಕೊಡುತ್ತದೆ.

ಪ್ರಾದೇಶಿಕ ಅಸ್ಥಿರತೆ ಮತ್ತು ತೈಲ ಬೆಲೆ ಏರಿಕೆ

ಈ ಯುದ್ಧ ಈಗ ಅಜರ್ಬೈಜಾನ್, ಕತಾರ್ ಮತ್ತು ಸೌದಿ ಅರೇಬಿಯಾದಂತಹ ನೆರೆಯ ರಾಷ್ಟ್ರಗಳಿಗೂ ಹರಡಿದೆ. ಕುವೈತ್ ಕರಾವಳಿಯ ಬಳಿ ಟ್ಯಾಂಕರ್ ಸ್ಫೋಟ ಸಂಭವಿಸಿದ್ದು, ಜಾಗತಿಕ ತೈಲ ಹಡಗುಗಳ ಸಂಚಾರಕ್ಕೆ ಭೀತಿ ಎದುರಾಗಿದೆ. ಇದರ ನೇರ ಪರಿಣಾಮವಾಗಿ ಅಂತಾರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಸುಮಾರು ಶೇ.15ರಷ್ಟು ಏರಿಕೆಯಾಗಿದೆ.

ತೈಲ ಉಳಿಸಲು ಪಾಕ್‌ನಲ್ಲಿ ವರ್ಕ್ ಫ್ರಂ ಹೋಮ್?

ಜಾಗತಿಕ ತೈಲ ಪೂರೈಕೆಯಲ್ಲಿ ತುರ್ತು ಪರಿಸ್ಥಿತಿ ಎದುರಾದ ಹಿನ್ನೆಲೆ ಪಾಕಿಸ್ತಾನವು ತೈಲ ಉಳಿಸುವುದಕ್ಕಾಗಿ ದೇಶದೆಲ್ಲೆಡೆ ನೌಕರರಿಗೆ ಕಡ್ಡಾಯ ವರ್ಕ್ ಫ್ರಂ ಹೋಮ್ ಘೋಷಿಸಿದೆ. ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ಹಿನ್ನೆಲೆ ಹೋರ್ಮುಜ್ ಜಲಸಂಧಿಯನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ. ಇದರಿಂದ ಜಾಗತಿಕ ತೈಲ ಪೂರೈಕೆ ತಲ್ಲಣವಾಗಿದೆ. ಇದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ತೈಲ ಉಳಿತಾಯ ಮಾಡಲು ಪಾಕಿಸ್ತಾನ ಹೊರಟಿದೆ. ಈಗಾಗಲೇ ತೈಲ ಆಮದು ವೆಚ್ಚ ಹೆಚ್ಚಾಗುತ್ತಿರುವ ಹಿನ್ನೆಲೆ ಆರ್ಥಿಕ ಸಮಸ್ಯೆ ಎದುರಿಸುತ್ತಿರುವ ಪಾಕಿಸ್ತಾನ ಈ ನಿರ್ಧಾರ ತೆಗೆದುಕೊಂಡಿದೆ.

ಹಿಂದು ಮಹಾಸಾಗರದಲ್ಲಿನ ಸುರಕ್ಷತಾ ಸ್ಥಿತಿಗತಿ

ಪಶ್ಚಿಮ ಏಷ್ಯಾದಲ್ಲಿ ಇರಾನ್ ಮತ್ತು ಅಮೆರಿಕ-ಇಸ್ರೇಲ್ ನಡುವಿನ ಯುದ್ಧದಿಂದ ಹೋರ್ಮುಜ್ ಜಲಸಂಧಿಯಲ್ಲಿ ಯುದ್ಧದ ಸನ್ನಿವೇಶ ನಿರ್ಮಾಣವಾಗಿದೆ. ಇರಾನ್ ಈ ಮಾರ್ಗವನ್ನು ಪಾಶ್ಚಿಮಾತ್ಯ ಹಡಗುಗಳಿಗೆ ಮುಚ್ಚಿರುವುದು ಮತ್ತು ಯುದ್ಧನೌಕೆಗಳ ಮೇಲೆ ದಾಳಿ ನಡೆಸುತ್ತಿರುವುದು ಆತಂಕ ತಂದೊಡ್ಡಿದೆ. ಭಾರತೀಯ ನೌಕಾಪಡೆ ಈ ಭಾಗದಲ್ಲಿ ತನ್ನ ಕಣ್ಗಾವಲನ್ನು ಹೆಚ್ಚಿಸಿದೆ.

ಭಾರತದ ಮೇಲಿನ ಆರ್ಥಿಕ ಪರಿಣಾಮ

ಈ ಬಿಕ್ಕಟ್ಟಿನಿಂದಾಗಿ ಭಾರತಕ್ಕೆ ಇಂಧನ ವಲಯದಲ್ಲಿ ಅತಿ ದೊಡ್ಡ ಹೊಡೆತ ಬಿದ್ದಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾಗಿದ್ದು, ಭಾರತದ ಆಮದು ವೆಚ್ಚ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಹಡಗುಗಳು ಸುರಕ್ಷಿತ ಮಾರ್ಗಕ್ಕಾಗಿ ಆಫ್ರಿಕಾದ ಕೇಪ್ ಆಫ್ ಗುಡ್ ಹೋಪ್ ಮೂಲಕ ದೀರ್ಘ ಸಂಚಾರ ಮಾಡಬೇಕಾಗಿರುವುದರಿಂದ ಸಾರಿಗೆ ವೆಚ್ಚ ಮತ್ತು ವಿಮಾ ಪ್ರೀಮಿಯಂ ದರಗಳು ಗಗನಕ್ಕೇರಿವೆ. ಇದು ದೇಶದಲ್ಲಿ ಹಣದುಬ್ಬರಕ್ಕೆ ಕಾರಣವಾಗುವ ಆತಂಕವಿದ್ದು, ವಿಶೇಷವಾಗಿ ರಸಗೊಬ್ಬರ ಮತ್ತು ಅಡುಗೆ ಅನಿಲದ ಪೂರೈಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ.

ಖಮೇನಿ ಸಾವಿಗೆ ಭಾರತ ಸಂತಾಪ

• **ಹೊಸದಿಲ್ಲಿ:** ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ನಿಧನಕ್ಕೆ ಭಾರತ ಗುರುವಾರ ಅಧಿಕೃತವಾಗಿ ಸಂತಾಪ ವ್ಯಕ್ತಪಡಿಸಿದೆ. ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ಇರಾನ್ ರಾಯಭಾರ ಕಚೇರಿಗೆ ಭೇಟಿ ನೀಡಿ, ಸರ್ಕಾರದ ಪರವಾಗಿ ಶೋಕ ಪುಸ್ತಕಕ್ಕೆ ಸಹಿ ಹಾಕಿದರು.



ಈ ಸಂದರ್ಭದಲ್ಲಿ ಅವರು ರಾಯಭಾರಿ ಮೊಹಮ್ಮದ್ ಫತಲಿ ಅವರಿಗೆ ಭಾರತ ಸಹಾನುಭೂತಿಯ ಸಂದೇಶ ತಿಳಿಸಿದ್ದಾರೆ. ಇದೇ ವೇಳೆ, ವಿದೇಶಾಂಗ ಸಚಿವ ಎಸ್. ಜೈಶಂಕರ್, ಇರಾನ್ ಸಚಿವ ಸೈಯದ್ ಅಬ್ಬಾಸ್ ಅರಾಘಿ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ.

ಕಿರುಸುದ್ದಿ

ಮಾ.11ಕ್ಕೆ ಕೇರಳಕ್ಕೆ ಮೋದಿ

• **ಕೊಚ್ಚಿ:** ಮುಂಬರುವ ಕೇರಳ ವಿಧಾನಸಭೆ ಚುನಾವಣೆಯ ಎನ್‌ಡಿಎ ಸಮಾವೇಶವನ್ನು ಉದ್ಘಾಟಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 11ರಂದು ಕೇರಳಕ್ಕೆ ಭೇಟಿ ನೀಡಲಿದ್ದಾರೆ. ಈ ವೇಳೆ ಮೋದಿ ಕೊಚ್ಚಿಗೆ ಭೇಟಿ ನೀಡಲಿದ್ದು, ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಕಲೂರಿನ ಜವಾಹರಲಾಲ್ ನೆಹರೂ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಘೋಷಿಸುವ ಸರ್ಕಾರಿ ಕಾರ್ಯಕ್ರಮದಲ್ಲಿ ಮೋದಿ ಮೊದಲು ಭಾಗವಹಿಸಲಿದ್ದಾರೆ ಎಂದು ಬಿಜೆಪಿ ನಾಯಕರು ತಿಳಿಸಿದ್ದಾರೆ.

ಕೆನಡಾ: ಭಾರತೀಯ ಮೂಲದ ಮಹಿಳೆ ಕೊಲೆ

• **ಒಟ್ಟಾವಾ:** ಕೆನಡಾದಲ್ಲಿ ಭಾರತೀಯರ ದಬ್ಬಾಳಿಕೆ ಹೆಚ್ಚುತ್ತಿದ್ದು, ಈ ಬೆನ್ನಲ್ಲೇ ಭಾರತ ಪರ ಹೇಳಿಕೆ ನೀಡುತ್ತಿದ್ದ ಕೆನಡಾದಲ್ಲಿ ನೆಲೆಸಿರುವ ಪಂಜಾಬಿ ಮೂಲದ ಯೂಟ್ಯೂಬರ್ ನ್ಯಾನ್ಸಿ ಗ್ರೆವಾಲ್ ಅವರನ್ನು ಒಂಟಾರಿಯೊದ ಲಾಸಲ್ಲೆ ಪಟ್ಟಣದಲ್ಲಿ ಮಾರಣಾಂತಿಕವಾಗಿ ಇರಿದು ಕೊಲ್ಲಲಾಗಿದೆ. ಇದು ಸ್ಥಳೀಯ ಸಮುದಾಯದಲ್ಲಿ ಮತ್ತು ಸಾಮಾಜಿಕ ಮಾಧ್ಯಮ ವಲಯಗಳಲ್ಲಿ ಭಾರೀ ಸಂಚಲನ ಮೂಡಿಸಿದೆ.

ಜನರ ಅಭಿವೃದ್ಧಿಗೆ ಏಕಾಗ್ರ ಚಿತ್ತ ಮೋದಿ: ಕಾರ್ನಿ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ತಮ್ಮ ಸಾಮಾನ್ಯ ಪ್ರಜೆಗಳಿಗೆ ಹಲವು ಅಭಿವೃದ್ಧಿ ಯೋಜನೆಗಳನ್ನು ತಲುಪಿಸುವುದರಲ್ಲಿ ಏಕಾಗ್ರಚಿತ್ತರಾಗಿದ್ದಾರೆ ಮತ್ತು ಹಲವು ಆರ್ಥಿಕ ಪರಿಷ್ಕರಣೆಗಳ ಮೂಲಕ ಕೋಟಿಗಟ್ಟಲೆ ಸಾಮಾನ್ಯ ಜನರನ್ನು ಆರ್ಥಿಕವಾಗಿ ಸದೃಢಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆಂದು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆಸ್ಟ್ರೇಲಿಯಾದ ಪ್ರಮುಖ ಚಿಂತನಾ ಚಾವಡಿ ಲೋವಿ ಸಂಸ್ಥೆಯೊಂದಿಗಿನ ಸಂವಾದ ವೇಳೆ ತಮ್ಮ ಭಾರತ ಪ್ರವಾಸ, ಪ್ರಧಾನಿ ಮೋದಿಯವರ ಜತೆಗಿನ ಭೇಟಿ, ಮಾತುಕತೆ ಮತ್ತು ತಮ್ಮ ಮೋದಿಯವರ ವ್ಯಕ್ತಿತ್ವದ ಬಗೆಗಿನ ಅವಲೋಕನವನ್ನು ಕೆನಡಾ ಪ್ರಧಾನಿ ಕಾರ್ನಿ ಹಂಚಿಕೊಂಡಿದ್ದಾರೆ. ಫೆ.27ರಿಂದ ಮಾ.2ರವರೆಗೆ ನಾಲ್ಕು ದಿನಗಳ ಭೇಟಿ ನೀಡಿದ್ದ ಕಾರ್ನಿ, ಗ್ರಾಮೀಣ ಕುಟುಂಬಗಳಿಗೆ ಯೋಜನೆಗಳನ್ನು ತಲುಪಿಸುವುದರಲ್ಲಿ ಅವರು ಏಕಾಗ್ರಚಿತ್ತರಾಗಿ ಕೆಲಸ ಮಾಡುತ್ತಿರುವುದು ನನಗೆ ಅವರನ್ನು ವೈಯಕ್ತಿಕ ಭೇಟಿಯಾದ ಬಳಿಕ ತಿಳಿದಿದೆ. ಯುಪಿಐ ಪಾವತಿ ವ್ಯವಸ್ಥೆ ಸೇರಿದಂತೆ ಹಲವು ಆರ್ಥಿಕ ಪರಿಷ್ಕರಣೆಗಳನ್ನು ಜಾರಿಗೆ ತಂದ ಮೋದಿ ಪ್ರೇರಣಾದಾಯಿ ವ್ಯಕ್ತಿ ಎಂದು ಕಾರ್ನಿ ಹೊಗಳಿದ್ದಾರೆ.

ಮಧ್ಯಪ್ರಾಚ್ಯದ ಬಗ್ಗೆ ಮೋದಿ-ಮ್ಯಾಕ್ರಾನ್ ಚರ್ಚೆ: ಮಧ್ಯಪ್ರಾಚ್ಯ ಯುದ್ಧದ ಕುರಿತು ಪ್ರಧಾನಿ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್ ಗುರುವಾರ ದೂರವಾಣಿ ಕರೆಯಲ್ಲಿ ಚರ್ಚಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಶಾಂತಿ, ಪ್ರಾದೇಶಿಕ ಸ್ಥಿರತೆ ಪುನಃಸ್ಥಾಪಿಸಬೇಕಿದೆ ಎಂದು ಫ್ರಾನ್ಸ್ ಅಧ್ಯಕ್ಷರಿಗೆ ಮೋದಿ ಮನದಟ್ಟು ಮಾಡಿದ್ದಾರೆ.

ಪ.ಬಂಗಾಳ ರಾಜ್ಯಪಾಲ ದಿಢೀರ್ ರಾಜೀನಾಮೆ

• **ಹೊಸದಿಲ್ಲಿ/ಕೋಲ್ಕತ್ತಾ:** ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ. ವಿ. ಆನಂದ ಬೋಸ್ ಅವರು ರಾಜ್ಯ ವಿಧಾನಸಭಾ ಚುನಾವಣೆಗೆ ಮುನ್ನ ಗುರುವಾರ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಬೋಸ್ ದಿಲ್ಲಿಯಲ್ಲಿ ತಮ್ಮ ರಾಜೀನಾಮೆಯನ್ನು ಸಲ್ಲಿಸಿದರು. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಕೆಲವೇ ತಿಂಗಳು ಬಾಕಿ ಇರುವಾಗಲೇ ರಾಜ್ಯಪಾಲರ ರಾಜೀನಾಮೆ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.



ರಾಜೀನಾಮೆ ಸಲ್ಲಿಸಿದ ಬಳಿಕ ಮಾಧ್ಯಮದ ಜತೆ ಮಾತನಾಡಿದ ಬೋಸ್, ನಾನು ರಾಜ್ಯಪಾಲರ ಕಚೇರಿಯಲ್ಲಿ ಸಾಕಷ್ಟು ಸಮಯವನ್ನು ಕಳೆದಿದ್ದೇನೆ ಎಂದು ಹೇಳಿದ್ದಾರೆ. ಕೇಂದ್ರದಿಂದ ನೇಮಕಗೊಂಡ ನಂತರ ಬೋಸ್ ಅವರು 2022ರ ನವೆಂಬರ್‌ನಿಂದ ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ಸೇವೆ ಸಲ್ಲಿಸುತ್ತಿದ್ದರು. ಏತನ್ಮಧ್ಯೆ, ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ಆರ್.ಎನ್.ರವಿ ಅವರಿಗೆ ಪಶ್ಚಿಮ ಬಂಗಾಳದ ಹೆಚ್ಚುಜವಾಬ್ದಾರಿ ನೀಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾಹಿತಿ ನೀಡಿದ್ದಾರೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಪಶ್ಚಿಮ ಬಂಗಾಳದ ರಾಜ್ಯಪಾಲರಾದ ಸಿ. ವಿ. ಆನಂದ ಬೋಸ್ ಅವರ ದಿಢೀರ್ ರಾಜೀನಾಮೆಯ ಸುದ್ದಿಯಿಂದ ನಾನು ಆಘಾತಕ್ಕೊಳಗಾಗಿದ್ದೇನೆ ಮತ್ತು ತೀವ್ರ ಕಳವಳಗೊಂಡಿದ್ದೇನೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ನೇಪಾಳದಲ್ಲಿ ಮತದಾನ ಶಾಂತಿಯುತವಾಗಿ ಪೂರ್ಣ

• **ಕಾಠ್ಮಂಡು:** ನೇಪಾಳದಲ್ಲಿ ' ಸಂಸದೀಯ ಚುನಾವಣೆಗಳು ಶಾಂತಿಯುತವಾಗಿ ಮುಕ್ತಾಯಗೊಂಡವು. ಕೆ.ಪಿ. ಶರ್ಮಾ ಓಲಿ ನೇತೃತ್ವದ ಸರ್ಕಾರ, 'ಜೆನ್ ಜಿ' ಪ್ರತಿಭಟನೆಗಳಿಂದ ಪತನಗೊಂಡ ಆರು ತಿಂಗಳ ನಂತರ, ದೇಶದಲ್ಲಿ ಸ್ಥಿರತೆ ತರುವ ನಿಟ್ಟಿನಲ್ಲಿ ಈ ಚುನಾವಣೆ ಅತ್ಯಂತ ನಿರ್ಣಾಯಕ ಎನಿಸಿದೆ. ಬೆಳಗ್ಗೆ 7 ಗಂಟೆಗೆ ಆರಂಭವಾದ ಮತದಾನ ಸಂಜೆ 5 ಗಂಟೆಗೆ ಮುಕ್ತಾಯವಾಯಿತು. ದೇಶದೆಲ್ಲೆಡೆ ಮತದಾನ ಪ್ರಕ್ರಿಯೆ ಯಾವುದೇ ಅಹಿತಕರ ಘಟನೆಗಳಿಲ್ಲದೆ ಶಿಸ್ತುಬದ್ಧವಾಗಿ ನಡೆಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಒಟ್ಟು 65 ರಾಜಕೀಯ ಪಕ್ಷಗಳು ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದು, ಸುಮಾರು 1.89 ಕೋಟಿ ಮತದಾರರು 275 ಸಂಸದರನ್ನು ಆಯ್ಕೆ ಮಾಡಲು ಅರ್ಹರಾಗಿದ್ದರು. ನೇಪಾಳಿ ಕಾಂಗ್ರೆಸ್ ಮತ್ತು ಸಿಪಿಎನ್-ಯುಎಂಎಲ್‌ನಂತಹ ಪಕ್ಷಗಳಿಗೆ ಕಾಠ್ಮಂಡುವಿನ ಮಾಜಿ ಮೇಯರ್ ಬಲೇಂದ್ರ ಶಾ ನೇತೃತ್ವದ ಹೊಸ 'ರಾಷ್ಟ್ರೀಯ ಸ್ವತಂತ್ರ ಪಾರ್ಟಿ' (ಆರ್‌ಎಸ್‌ಪಿ) ಪ್ರಬಲ ಸವಾಲೊಡ್ಡಿದೆ. ಗಗನ್ ಥಾಪಾ ಮತ್ತು ಕೆ.ಪಿ. ಶರ್ಮಾ ಓಲಿ, ತಮ್ಮ ಪಕ್ಷಗಳ ಪ್ರಧಾನಮಂತ್ರಿ ಅಭ್ಯರ್ಥಿಗಳಾಗಿದ್ದರೆ, ಬಲೇಂದ್ರ ಶಾ ಹೊಸ ಪೀಳಿಗೆಯ ನಾಯಕನಾಗಿದ್ದಾರೆ.

ಮತ ಎಣಿಕೆ ಶೀಘ್ರ: ಚುನಾವಣಾ ಆಯೋಗ ಮತದಾನದ ಮೇಲ್ವಿಚಾರಣೆ ನಡೆಸಿದ್ದು, ಮಧ್ಯಂತರ ಪ್ರಧಾನಿ ಸುಶೀಲಾ ಕಾರ್ಕಿ ಸೇರಿದಂತೆ ಹಲವು ಗಣ್ಯರು ಮತ ಚಲಾಯಿಸಿದ್ದಾರೆ. 23,000ಕ್ಕೂ ಹೆಚ್ಚು ಮತದಾನ ಕೇಂದ್ರಗಳಿಂದ ಮತ ಪೆಟ್ಟಿಗೆಗಳನ್ನು ಸಂಗ್ರಹಿಸಿದ ತಕ್ಷಣವೇ ಮತ ಎಣಿಕೆ ಕಾರ್ಯ ಆರಂಭವಾಗುವ ನಿರೀಕ್ಷೆಯಿದೆ.

ಭದ್ರತಾ ಮಂಡಳಿ: ಫಿನ್‌ಲ್ಯಾಂಡ್‌ನಿಂದ ಭಾರತಕ್ಕೆ ಬೆಂಬಲ

• **ಹೊಸದಿಲ್ಲಿ:** ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಶಾಶ್ವತ ಸದಸ್ಯತ್ವ ಹೊಂದುವಲ್ಲಿ ಭಾರತದ ಪ್ರಯತ್ನಗಳಿಗೆ ಮಾತುಕತೆ ವೇಳೆ ಬೆಂಬಲ ವ್ಯಕ್ತಪಡಿಸಿರುವ ಫಿನ್‌ಲ್ಯಾಂಡ್ ಅಧ್ಯಕ್ಷ ಅಲೆಕ್ಸಾಂಡರ್ ಸ್ಟಬ್, ಇದು ತೀರಾ ಮಹತ್ವದ ವಿಚಾರ. ಜತೆಗೆ ಪ್ರಸಕ್ತ ಭೌಗೋಳಿಕ-ರಾಜಕೀಯ ವಾಸ್ತವಗಳ ಪ್ರತಿಫಲಿಸಲು ಪೂರಕವಾಗಿ, ಜಾಗತಿಕ ಬಹುಆಯಾಮಗಳ ವ್ಯವಸ್ಥೆಯಾದ ವಿಶ್ವಸಂಸ್ಥೆಯನ್ನು ವಿಸ್ತೃತ ನೆಲೆಯಲ್ಲಿ ಪುನಾರಚಿಸುವುದು ಕೂಡ ಅಗತ್ಯವೆಂದು ಹೇಳಿದ್ದಾರೆ. ಡಿಜಿಟಲೀಕರಣ ಮತ್ತು ಸುಸ್ಥಿರತೆ ರಂಗಗಳಲ್ಲಿ ಭಾರತ-ಫಿನ್‌ಲ್ಯಾಂಡ್ ಬಾಂಧವ್ಯಕ್ಕೆ ವ್ಯೂಹಾತ್ಮಕ ಪಾಲುದಾರಿಕೆ ಸ್ವರೂಪ ನೀಡಲಾಗಿದೆ. ಇದು ಎಐ, 6ಜಿ ಟೆಲಿಕಾಂ, ಪರಿಶುದ್ಧ ಇಂಧನ, ಕ್ವಾಂಟಮ್ ಕಂಪ್ಯೂಟಿಂಗ್ ಸಹಿತ ಹಲವು ಉನ್ನತ ತಂತ್ರಜ್ಞಾನ ರಂಗಗಳಲ್ಲಿ ಸಹಕಾರ ಕೊಂಡಿಯ ಬಲವರ್ಧನೆಗೆ ಹೇತುವಾಗಲಿದೆ ಎಂದು ಪ್ರಧಾನಿ ಮೋದಿ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ರಕ್ಷಣಾ ರಂಗ, ಬಾಹ್ಯಾಕಾಶ, ಸೆಮಿಕಂಡಕ್ಟರ್‌ಗಳು, ಅಪೂರ್ವ ಖನಿಜ ಇತ್ಯಾದಿ ಪ್ರಮುಖ ರಂಗಗಳಲ್ಲಿ ಸಹಕಾರವನ್ನು ಮತ್ತಷ್ಟು ಗಾಢಗೊಳಿಸಲು ಇತ್ತಂಡಗಳು ಸಮ್ಮತಿಸಿವೆ.

2027ರ ಜನಗಣತಿಗೆ ಪ್ರಗತಿ (ಮಹಿಳೆ) ವಿಕಾಸ್ (ಪುರುಷ) ಪ್ರತಿಕೃತಿ ಬಿಡುಗಡೆ

ಡಿಜಿಟಲ್ ಸಾಧನಗಳಿಗೆ ಅಮಿತ್ ಶಾ ಚಾಲನೆ

• **ಹೊಸದಿಲ್ಲಿ:** 2027ರ ಜನಗಣತಿಗೆ ಅನ್ವಯಿಸುವ ನಾಲ್ಕು ಡಿಜಿಟಲ್ ಸಾಧನಗಳನ್ನು ಗುರುವಾರ ಬಿಡುಗಡೆ ಮಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಪ್ರಗತಿಯಾ (ಮಹಿಳೆ), ವಿಕಾಸ(ಪುರುಷರು) ಎಂಬೆರಡು ಗಣತಿ ಚಿಹ್ನೆಗಳನ್ನೂ ಅನಾವರಣಗೊಳಿಸಿದ್ದಾರೆ.

ಸ್ತ್ರೀ ಪುರುಷರ ಸಮಾನ ಪಾಲ್ಗೊಳ್ಳುವಿಕೆ ಆಶಯ: ಅನಾವರಣಗೊಂಡ ಪ್ರಗತಿಯಾ,ವಿಕಾಸ ಚಿಹ್ನೆಗಳು, 2047ರ ವೇಳೆ ಭಾರತವು ಸಂಪನ್ನ ರಾಷ್ಟ್ರವಾಗುವ ಯಾನದಲ್ಲಿ ಸ್ತ್ರೀ ಪುರುಷರು ಸಮಾನವಾಗಿ ಪಾಲ್ಗೊಳ್ಳಬೇಕೆಂಬುದನ್ನು ಸಾಂಕೇತಿಸಿದೆ. ಜಗತ್ತಿನಲ್ಲೇ ಬೃಹದಾದ ಭಾರತದ ಜನಗಣತಿ ಪ್ರಕ್ರಿಯೆಯಲ್ಲಿ ಗಣತಿಗೆ ಪೂರಕವಾಗಿ ಹೊಸ ಡಿಜಿಟಲ್ ಪರಿಕರಗಳನ್ನು ಅಭಿವೃದ್ಧಿಪಡಿಸಲಾಗಿದೆ.ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (ಸಿ-ಡಿಎಸಿ) ಈ ಡಿಜಿಟಲ್ ಸಾಧನಗಳನ್ನು ಅಭಿವೃದ್ಧಿಪಡಿಸಿದೆ.

33 ಪ್ರಶ್ನೆಗಳಿಗೆ ಜನರು ಉತ್ತರಿಸಬೇಕು : 2026ರ ಏ.1ರಿಂದ ಶುರುವಾಗುವ 2027ರ ಜನಗಣತಿ ಪ್ರಕ್ರಿಯೆ ಎರಡು ಹಂತಗಳಲ್ಲಾಗಿ ನಡೆಯುವುದು. ಮೊದಲ ಹಂತದಲ್ಲಿ ಮನೆಗಳ ಯಾದಿ ತಯಾರಿ ಮತ್ತು



ವಸತಿಗಳ ಗಣತಿ 2026ರ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ನಡೆಯುವುದು.ಜನರಿಗೆ 33 ಪ್ರಶ್ನೆಗಳನ್ನು ಕೇಳಲಾಗುವುದು.ನಂತರ 2027ರ ಫೆಬ್ರವರಿಯಲ್ಲಿ ಜನಸಂಖ್ಯೆ ಎಣಿಕೆ ಹಂತವಿರುವುದು.

ಜನರಿಗೆ ಪ್ರಥಮ ಬಾರಿ ಸ್ವಯಂ ಗಣತಿಗೆ ಅವಕಾಶ: ಪ್ರಥಮ ಬಾರಿ ಡಿಜಿಟಲ್ ಮಾಧ್ಯಮಗಳ ಮುಖೇನ ಸಮಗ್ರನೆಲೆಯಲ್ಲಿ ರಾಷ್ಟ್ರೀಯ ಗಣತಿ ಪ್ರಕ್ರಿಯೆ ನಡೆಯಲಿದೆ. ಮನೆ-ಮನೆ ಸರ್ವೇ ಮುಖೇನ ಗಣತಿ ಪ್ರಕ್ರಿಯೆ ಶುರುವಾಗುವ ಮುನ್ನ ಜನರು ಕೂಡ ಆನ್‌ಲೈನ್‌ನಲ್ಲಿ, 16ಭಾಷೆಗಳಲ್ಲಿ ಸ್ವಯಂ ಗಣತಿ ಮಾಡಿಸಿಕೊಳ್ಳಲು ಅವಕಾಶವಿದೆ.

ಸಿಎಂಎಂಎಸ್ ಪ್ರಧಾನ ಪಾತ್ರ: ಜಗತ್ತಿನಲ್ಲೇ ಅತ್ಯಂತ ಬೃಹದಾದ ಆಡಳಿತಾತ್ಮಕ ಪ್ರಕ್ರಿಯೆಯಾದ ಜನಗಣತಿಗೆ ಪೂರಕವಾಗಿ ವಿನ್ಯಾಸಗೊಳಿಸಲಾಗಿರುವ , ಸೆನ್ಸಸ್ ಮೆನೇಜ್‌ಮೆಂಟ್ ಆ್ಯಂಡ್ ಮಾನಿಟರಿಂಗ್ ಸಿಸ್ಟಮ್ (ಸಿಎಂಎಂಎಸ್)ಡಿಜಿಟಲ್ ಪೋರ್ಟಲ್ ಜನಗಣತಿ ಪ್ರಕ್ರಿಯೆಯಲ್ಲಿ ಪ್ರಧಾನ ಪಾತ್ರ ವಹಿಸಲಿದೆ. ಗಣತಿ ಪ್ರಕ್ರಿಯೆಯು ಪೇಪರ್ ಆಧಾರಿತ ಸಾಂಪ್ರದಾಯಿಕ ವಿಧಾನದಿಂದ ಅತ್ಯಾಧುನಿಕ ಮಾದರಿಗೆ ಸ್ಥಿತ್ಯಂತರಗೊಂಡದ್ದನ್ನು ಸಿಎಂಎಂಎಸ್ ಸಾಕ್ಷೀಕರಿಸಿದೆ.

3.2ಮಿಲಿಯನ್ ಮೀರಿ ಗಣತಿದಾರರು : ದೇಶಾದ್ಯಂತ 3.2ಮಿಲಿಯನ್ ಮೀರಿ ಗಣತಿದಾರರು, ಮೇಲ್ವಿಚಾರಕರು ಮತ್ತಿತರ ಅಧಿಕಾರಿಗಳು ಜನಗಣತಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಗಣತಿ ಅಧಿಕಾರಿಗಳು, ಕ್ಲಿಪ್‌ಬೋರ್ಡ್‌ಗಳು ಮತ್ತು ಕಾಗದಪತ್ರಗಳ ಬದಲು ಕೈಯಿಂದಲೇ ನಿರ್ವಹಿಸಬಹುದಾದ ಡಿಜಿಟಲ್ ಪರಿಕರಗಳು, ಜಿಯೋಟ್ಯಾಗ್ಡ್ ಮ್ಯಾಪಿಂಗ್ ಟೂಲ್‌ಗಳು ಮತ್ತು ಕೇಂದ್ರೀಕೃತ ವೆಬ್ ಆಧಾರಿತ ನಿಗಾ ವ್ಯವಸ್ಥೆ ಬಳಸಲಿದ್ದಾರೆ.

ಭಗವಂತನ ಪ್ರತೀ ಸೃಷ್ಟಿ ಹಿಂದೆ ಒಂದು ಉದಾತ್ತ ಆಶಯವಿದೆ: ಭಾಗ್ವತ್

ಜಾತಿ ತಾರತಮ್ಯ ಧರ್ಮ, ಸಮಾಜಕ್ಕೆ ಹಾನಿ

• **ಅಹ್ಮದಾಬಾದ್:** ಸನಾತನ ಧರ್ಮವು ಸಾಮಾಜಿಕ ಸೌಹಾರ್ದತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುತ್ತದೆ. ಜಾತಿ ಹೆಸರಲ್ಲಿ ಮಾಡುವ ತಾರತಮ್ಯಗಳಿಂದ ಧರ್ಮ ಮತ್ತು ಸಮಾಜ ಎರಡಕ್ಕೂ ಹಾನಿಯಾಗುತ್ತದೆ ಎಂದು ಆರೆಸ್ಸೆಸ್ ಸರಸಂಘಚಾಲಕ್ ಮೋಹನ್ ಭಾಗ್ವತ್ ಹೇಳಿದ್ದಾರೆ.



ಭಗವಂತನ ಪ್ರತೀ ಸೃಷ್ಟಿ ಹಿಂದೆ ಒಂದು ಉದಾತ್ತ ಆಶಯವಿದ್ದೇ ಇದೆ. ಎಲ್ಲರೂ ನಮ್ಮವರೆಂಬ ಆತ್ಮೀಯ ಭಾವನೆ ಸಾಮಾಜಿಕ ಸೌಹಾರ್ದದ ತಿರುಳೆಂದು ಅವರು ಬಣ್ಣಿಸಿದರು. ಇಲ್ಲಿಗೆ ಸಮೀಪದ ಜೇತಲ್‌ಪುರ ಗ್ರಾಮದಲ್ಲಿನ ಸ್ವಾಮಿನಾರಾಯಣ ಕ್ಷೇತ್ರದಲ್ಲಿ ಕಾರ್ಯಕ್ರಮವೊಂದರಲ್ಲಿ ಮೋಹನ್ ಭಾಗ್ವತ್ ಅವರು ಪಾಲ್ಗೊಂಡರು.

ದೇವರ ಸೃಷ್ಟಿಯಲ್ಲಿ ಹುಲ್ಲಿನ ಒಂದು ಒಣ ಎಲೆಯ ಹಿಂದೆಯೂ ನಿರ್ದಿಷ್ಟ ಕಾರಣವಿದೆ. ಈ ಸತ್ಯವನ್ನು ಒಪ್ಪಿಕೊಂಡು ಎಲ್ಲರನ್ನೂ ನಮ್ಮವರೆಂದು ಹೃದಯಪೂರ್ವಕ ಸ್ವೀಕರಿಸುವ ಮನೋಭಾವವೇ ಸಾಮಾಜಿಕ ಸೌಹಾರ್ದತೆ. ಪ್ರತಿಯೋರ್ವರೂ ದೇವರ ಸೃಷ್ಟಿ ಎಂದು ಅವರು ವಿವರಿಸಿದರು. ಮೇಲು ಮತ್ತು ಕೀಳೆಂಬ ಭೇದ ಬಂದದ್ದಾದರು ಎಲ್ಲಿಂದ ಎಂದು ಪ್ರಶ್ನಿಸಿದ ಭಾಗ್ವತ್, ಜಾತಿ-ವರ್ಗಗಳ ವ್ಯವಸ್ಥೆ ಅಸ್ತಿತ್ವದಲ್ಲಿದೆ ಖಂಡಿತ. ಆದರೂ ತಾರತಮ್ಯ ಮೆರೆಯೋದು ಈ ವ್ಯವಸ್ಥೆಯ ಅಸ್ತಿತ್ವದ ಹಿಂದಿನ ಉದ್ದೇಶವಲ್ಲ. ಇಂತಹ ವ್ಯವಸ್ಥೆಯೊಳಗೆ ತಾರತಮ್ಯ ನುಸುಳುವುದರಿಂದ ಧರ್ಮ, ಸಮಾಜಕ್ಕೆ ಗ್ಲಾನಿಯಾಗುತ್ತದೆ ಎಂದು ಭಾಗ್ವತ್ ಎಚ್ಚರಿಸಿದರು.

ನಾವು ಸನಾತನ ಧರ್ಮವನ್ನು ಅನುಸರಿಸುವಾಗ ಧರ್ಮದ ರಕ್ಷಣೆ ಕೂಡ ತನ್ನಿಂತಾನೇ ಆಗುತ್ತದೆ. ಧರ್ಮ-ಸಂಸ್ಕೃತಿಯ ರಕ್ಷಣೆಗೆ ಜನರಲ್ಲಿ ಏಕತೆ ಅತ್ಯವಶ್ಯಕ.

ಸಮಸ್ಯೆಗಳ ನಿವಾರಕ

ಜನರನ್ನು ಸಂಘಟಿಸಬೇಕಾದರೆ, ಎಲ್ಲರೂ ನಮ್ಮವರೆಂಬ ಭಾವನೆ ಮತ್ತು ಪರಿಪೂರ್ಣತೆಯ ಭಾವ ಮುಖ್ಯ. ಪ್ರಸಕ್ತದ ಸವಾಲುಗಳಿಗೆ ಇಂತಹ ನಿಲುವೇ ಪರಿಹಾರ. ಜಗತ್ತಿನ ಸಮಸ್ಯೆಗಳ ಬಗೆಹರಿಸುವ ವಿಚಾರದಲ್ಲಿ ಕಟ್ಟಕಡೆಗೆ ಭಾರತವೇ ಮಾರ್ಗದರ್ಶನ ಮಾಡಬೇಕಾಗುವುದು. ಇಡೀ ಜಗತ್ತಿಗೆ ಸನ್ಮಾರ್ಗವನ್ನು ತೋರುವ ಹೊಣೆಗಾರಿಕೆ ಕೂಡ ಮುಂದೊಂದು ದಿನ ಭಾರತದ್ದಾಗಲಿದೆ. ಈ ಜವಾಬ್ದಾರಿಯಿಂದ ನಾವು ತಪ್ಪಿಸುವ ಹಾಗಿಲ್ಲ. ಈಗ ಅಥವಾ ನಂತರವಾದರೂ ನಾವೇ ಹೊಣೆಯನ್ನು ಹೊರಲೇಬೇಕು.

ಕಿರುಸುದ್ದಿ

ಬಿ.ಎಡ್ ವಾರ್ಷಿಕ ಪರೀಕ್ಷೆಯಲ್ಲಿ ಅನುಪಮಾಗೆ ಶೇ. 92.79 ಅಂಕ



• **ಕುಂದಾಪುರ:** ಕೋಡಿ ಬ್ಯಾರೀಸ್ ಶಿಕ್ಷಣ ಮಹಾ ವಿದ್ಯಾಲಯ ಇದರ 2022–24ನೇ ಶೈಕ್ಷಣಿಕ ಸಾಲಿನ ಪ್ರಶಿಕ್ಷಣಾರ್ಥಿ ಅನುಪಮಾ ಸಿ. ಶೆಟ್ಟಿ ಅವರು ಮಂಗಳೂರು ವಿಶ್ವವಿದ್ಯಾನಿಲಯದ ವತಿಯಿಂದ ನಡೆಸಲ್ಪಟ್ಟ ಫೆಬ್ರವರಿ 2025ರ ಬಿ.ಎಡ್ ವಾರ್ಷಿಕ ಪರೀಕ್ಷೆಯಲ್ಲಿ ಶೇ. 92.79 ಫಲಿತಾಂಶ ಪಡೆಯುವ ಮೂಲಕ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ದ್ವಿತೀಯ ರ್‍ಯಾಂಕ್ ಗಳಿಸಿದ್ದಾರೆ.

ಸಿಎ ಅಂತಿಮ ಪರೀಕ್ಷೆ: ಶಿವರಾಮ ಭಟ್ ತೇರ್ಗಡೆ



• **ಮಂಗಳೂರು:** ಜನವರಿಯಲ್ಲಿ ನಡೆದ ಸಿ.ಎ. ಅಂತಿಮ ಪರೀಕ್ಷೆಯಲ್ಲಿ ಮೆದು ಶಿವರಾಮ ಭಟ್ ಅವರು ತೇರ್ಗಡೆಯಾಗಿದ್ದಾರೆ. ಇವರು KNDC & Associates LLP ಇವರಲ್ಲಿ ಪ್ರಾಯೋಗಿಕ ತರಬೇತಿಯನ್ನು ಪಡೆದಿರುತ್ತಾರೆ. ಇವರು ಬಂಟ್ವಾಳ ತಾಲೂಕಿನ ಮೆದು ಗ್ರಾಮದ ಪುರುಷೋತ್ತಮ ಭಟ್ ಮತ್ತು ಪುಷ್ಪಲೀಲಾ ಅವರ ಪುತ್ರ.

ಬಸ್ ನಿಲ್ದಾಣಗಳಲ್ಲಿ ಇಂದು ಬಜೆಟ್ ನೇರ ಪ್ರಸಾರ

• **ಮಂಗಳೂರು:** ಕರ್ನಾಟಕ ಸರ್ಕಾರದ 2026–27 ನೇ ಸಾಲಿನ ಆಯವ್ಯಯವನ್ನು ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಮಂಡಿಸಲಿದ್ದಾರೆ. 17ನೇ ಬಾರಿ ಬಜೆಟ್ ಮಂಡಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆ ಸೃಷ್ಟಿಸಿದ್ದು, ಈ ಬಜೆಟ್ ಮಂಡನೆಯ ನೇರಪ್ರಸಾರವನ್ನು ರಾಜ್ಯದ ಆಯ್ದ ಬಸ್ ನಿಲ್ದಾಣದ ಟಿವಿಗಳಲ್ಲಿ ಹಮ್ಮಿಕೊಳ್ಳಲಾಗಿದೆ. ರಾಜ್ಯದ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಪ್ರಸಾರ ಮಾಡಲು ಉದ್ದೇಶಿಸಿದೆ.

ಕರ್ನಾಟಕ ರಾಜ್ಯದ ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಆಗಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಇಂದು ವಿಧಾನಸೌಧದಲ್ಲಿ ರಾಜ್ಯದ ಬಜೆಟ್ ಮಂಡಿಸಲಿದ್ದಾರೆ. ಈ ಮಹತ್ವದ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ರಾಜ್ಯದ ಜನತೆಗೆ ತಲುಪಿಸುವ ಉದ್ದೇಶದಿಂದ ವೃತ್ತಿ ಸೊಲ್ಯೂಷನ್ಸ್ ಲಿಮಿಟೆಡ್ ಸಂಸ್ಥೆಯು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದೊಂದಿಗೆ ರಾಜ್ಯಾದ್ಯಂತ ಇರುವ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಇರುವ ತನ್ನ ಡಿಜಿಟಲ್ ಡಿಸ್ಪ್ಲೇ (ICB) ಪರದೆಗಳ ಮೂಲಕ ನೇರ ಪ್ರಸಾರ ಮಾಡಲು ಮುಂದಾಗಿದೆ. ವಿಧಾನಸೌಧದಲ್ಲಿ ನಡೆಯುವ ಬಜೆಟ್ ಮಂಡನೆ ಹಾಗೂ ಬಳಿಕ ನಡೆಯಲಿರುವ ಮುಖ್ಯಮಂತ್ರಿಗಳ ಪತ್ರಿಕಾಗೋಷ್ಠಿಯ ನೇರ ಪ್ರಸಾರವನ್ನು ರಾಜ್ಯದ ವಿವಿಧ ಬಸ್ ನಿಲ್ದಾಣಗಳಲ್ಲಿ ಜನರು ವೀಕ್ಷಿಸುವ ಅವಕಾಶ ಕಲ್ಪಿಸಲಾಗುತ್ತದೆ. ಈ ಮೂಲಕ ರಾಜ್ಯದ ಜನತೆಗೆ ಸರ್ಕಾರದ ಬಜೆಟ್ ಕುರಿತು ನೇರವಾಗಿ ಮಾಹಿತಿ ಪಡೆಯುವ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ.7ರಂದು ಮಂಗಳೂರು ವಿವಿಯಲ್ಲಿ ಯಕ್ಷಮಂಗಳ ಪ್ರಶಸ್ತಿ ಪ್ರದಾನ ಸಮಾರಂಭ

• **ಮಂಗಳೂರು:** ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ 2025–26ನೇ ಸಾಲಿನ ಯಕ್ಷಮಂಗಳ ಪ್ರಶಸ್ತಿ ಪ್ರದಾನ ಸಮಾರಂಭವು ನಾಳೆ (ಮಾ.7) ಬೆಳಗ್ಗೆ 11 ಗಂಟೆಗೆ ಮಂಗಳೂರು ವಿ.ವಿ ಯ ಯು.ಆರ್. ರಾವ್ ಸಭಾಂಗಣ (ಹೆಳೆಸೆಟ್ ಹಾಲ್‌ನಲ್ಲಿ) ನಡೆಯಲಿದೆ. ಯಕ್ಷಗಾನ ರಂಗದ ಹಿರಿಯ ಕಲಾವಿದ ಕಪ್ಪೆಕೆರೆ ಸುಬ್ರಾಯ ಭಾಗವತ, ಯಕ್ಷಗಾನ ಗುರು ಮಾಂಬಾಡಿ ಸುಬ್ರಹ್ಮಣ್ಯ ಭಟ್, ಹಿರಿಯ ಯಕ್ಷಗಾನ ಅರ್ಥಧಾರಿ ಜಬ್ಬಾರ್ ಸಮೋ ಅವರಿಗೆ ಯಕ್ಷಮಂಗಳ ಪ್ರಶಸ್ತಿ ಹಾಗೂ ಅಗರಿ ಮಾರ್ಗ ಬಲಿಪಮಾರ್ಗ ಕೃತಿಯ ಲೇಖಕ ಕೃಷ್ಣಪ್ರಕಾಶ್ ಉಳಿತ್ತಾಯ ಅವರಿಗೆ ಯಕ್ಷಮಂಗಳ ಕೃತಿ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಪಿ.ಎಲ್.ಧರ್ಮ ಅಧ್ಯಕ್ಷತೆ ವಹಿಸಲಿದ್ದಾರೆ. ಹಾವೇರಿ ಜಾನಪದ ವಿ.ವಿ ವಿಶ್ರಾಂತ ಕುಲಪತಿ ಪ್ರೊ.ಚಿನ್ನಪ್ಪ ಗೌಡ ಅವರು ಪ್ರಶಸ್ತಿ ಪುರಸ್ಕೃತರ ಬಗ್ಗೆ ಅಭಿನಂದನಾ ಭಾಷಣ ಮಾಡಲಿದ್ದಾರೆ. ಕುಲಸಚಿವ ಪ್ರೊ.ಗಣೇಶ್ ಸಂಜೀವ್ ಉಪಸ್ಥಿತರಿರಲಿದ್ದಾರೆ. ಈ ಸಂದರ್ಭ ಮಂಗಳೂರು ವಿ.ವಿ.ಯ ಡಾ.ದಯಾನಂದ ಪೈ ಮತ್ತು ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರಕ್ಕೆ ಹೆಚ್ಚುವರಿಯಾಗಿ ರೂ.1 ಕೋಟಿ ಅನುದಾನ ನೀಡುತ್ತಿರುವ ಡಾ. ದಯಾನಂದ ಪೈ ಅವರಿಗೆ ಗೌರವಾರ್ಪಣೆಯನ್ನು ಸಲ್ಲಿಸಲಾಗುವುದು ಎಂದು ಕೇಂದ್ರದ ನಿರ್ದೇಶಕ ಡಾ.ಧನಂಜಯ ಕುಂಬ್ಳೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಲಿಪಾಷಾಣ ಸೇವಿಸಿ ನರ್ಸಿಂಗ್ ವಿದ್ಯಾರ್ಥಿನಿ ಆತ್ಮಹತ್ಯೆಗೆ ಶರಣು

• **ಉಡುಪಿ:** ನರ್ಸಿಂಗ್ ವಿದ್ಯಾರ್ಥಿನಿ ನಿಗೂಢ ಕಾರಣಕ್ಕೆ ಇಲಿ ಪಾಷಾಣ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಉಡುಪಿಯಲ್ಲಿ ನಡೆದಿದೆ. ಕಡಬ ಮೂಲದ ಸ್ವೀಟ (18) ಮೃತ ಯುವತಿ. ಆಸ್ಪತ್ರೆಯ ವಸತಿ ನಿಲಯದಲ್ಲಿ ತರಬೇತಿ ಮುಗಿದ ಅನಂತರ ಉಳಿದುಕೊಳ್ಳುತ್ತಿದ್ದರು. ಫೆಬ್ರವರಿ 25ರಂದು ರಾತ್ರಿ 9.15ರ ಸುಮಾರಿಗೆ ವಸತಿ ನಿಲಯದಲ್ಲಿರುವಾಗ ಇಲಿ ಪಾಷಾಣ ಸೇವನೆ ಮಾಡಿದ್ದರು. ಬಳಿಕ ಅವರನ್ನು ಉಡುಪಿಯ ಖಾಸಗಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಫೆಬ್ರವರಿ 28ರಂದು ಮಣಿಪಾಲದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮಾರ್ಚ್ 3ರಂದು ನಿಧನ ಹೊಂದಿದ್ದಾರೆ. ಉಡುಪಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಸ್ಥಿತಿ ಚಿಂತಾಜನಕ : ವಾರಿಸುದಾರರಿಗೆ ಸೂಚನೆ

• **ಉಡುಪಿ:** ಉಡುಪಿ ಜಿಲ್ಲಾಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ರಾಮು (67) ಎಂಬ ವ್ಯಕ್ತಿಯ ಸ್ಥಿತಿ ಚಿಂತಾಜನಕವಾಗಿದ್ದು ವಾರಿಸುದಾರರು ಯಾರಾದರೂ ಇದ್ದಲ್ಲಿ ಜಿಲ್ಲಾಸ್ಪತ್ರೆಯ ನಾಗರಿಕ ಸಹಾಯ ಕೇಂದ್ರ ದೂ.ಸಂ: 0820–2520555/9449827833 ಅನ್ನು ಸಂಪರ್ಕಿಸುವಂತೆ ಜಿಲ್ಲಾಸ್ಪತ್ರೆ ಪ್ರಕಟಣೆ ತಿಳಿಸಿದೆ.

ಆರೋಗ್ಯ ವ್ಯವಸ್ಥೆ ಬೇಡಿಕೆ ಈಡೇರಿಕೆ ಆಗ್ರಹಿಸಿ ಅನಿರ್ದಿಷ್ಟಾವಧಿ ಮುಷ್ಕರ

ಹೋರಾಟಕ್ಕೆ ಉಡುಪಿ ಬೆಂಬಲ: ಡಾ. ಶೆಟ್ಟಿ

• **ಉಡುಪಿ:** ರಾಜ್ಯದ ಸರ್ಕಾರಿ ಆರೋಗ್ಯ ವ್ಯವಸ್ಥೆಯಲ್ಲಿನ ದಶಕಗಳ ಬೇಡಿಕೆಗಳ ಈಡೇರಿಕೆಗಾಗಿ ಮಾ. 11ರಿಂದ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಉಡುಪಿ ಜಿಲ್ಲೆಯಲ್ಲೂ ಈ ಹೋರಾಟಕ್ಕೆ ಪೂರ್ಣ ಬೆಂಬಲ ವ್ಯಕ್ತವಾಗಿದ್ದು, ಮಾ. 11 ರಿಂದ 15ರವರೆಗೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹೊರರೋಗಿ ವಿಭಾಗ (ಒಪಿಡಿ) ಸೇವೆಗಳನ್ನು ಸಂಪೂರ್ಣ ಸ್ಥಗಿತಗೊಳಿಸಿ ಕೇವಲ ತುರ್ತು ಸೇವೆಗಳನ್ನು ಮಾತ್ರ ನೀಡಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಲಾಯಿತು.

ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಡಾ. ನಿಕಿನ್ ಶೆಟ್ಟಿ ಮಾತನಾಡಿ, ಆರೋಗ್ಯ ಇಲಾಖೆಯ ಸಚಿವರು ಹಾಗೂ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಹಲವಾರು ಬಾರಿ ಸಭೆ ನಡೆಸಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದಾಗಿ ನಮಗೆ ಮುಷ್ಕರ ಅನಿವಾರ್ಯವಾಗಿದೆ. ಒಂದು ವೇಳೆ ಮಾ. 15 ರೊಳಗೆ ನಮ್ಮ 12 ಪ್ರಮುಖ ಬೇಡಿಕೆಗಳನ್ನು ಈಡೇರಿಸದಿದ್ದರೆ, ಮಾ. 16ರ ನಂತರ ವೈದ್ಯರು ಸೇರಿದಂತೆ ಇಲಾಖೆಯ ಎಲ್ಲಾ ಅಧಿಕಾರಿ ಮತ್ತು ನೌಕರರು ಕರ್ತವ್ಯಕ್ಕೆ ಅನಿರ್ದಿಷ್ಟಾವಧಿ ವರೆಗೆ ಗೈರು ಹಾಜರಾಗುವ ಮೂಲಕ ತೀವ್ರ ಸ್ವರೂಪದ ಹೋರಾಟ ನಡೆಸಲಿದ್ದಾರೆ ಎಂದು ಎಚ್ಚರಿಸಿದರು.

ಪ್ರಾತಿನಿಧಿಕ ಚಿತ್ರ



ಆರೋಗ್ಯ ಇಲಾಖೆ ಕೇಂದ್ರ ಸಂಘದ ಜಿಲ್ಲಾಧ್ಯಕ್ಷ ಆನಂದ್ ಜತ್ತನ್ ಯು. ಮಾತನಾಡಿ, ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಕಾಲಕಾಲಕ್ಕೆ ಸಮರ್ಪಕವಾಗಿ ಔಷಧಗಳನ್ನು ಪೂರೈಸಬೇಕು ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಶೀಘ್ರದಲ್ಲಿ ತಿದ್ದುಪಡಿ ಮಾಡಬೇಕು ಎಂದು ಆಗ್ರಹಿಸಿದರು. ಇಲಾಖೆಯ ನೌಕರರ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವುದು, ಅರ್ಹರಿಗೆ ಕೂಡಲೇ ಮುಂಬಡ್ತಿ ನೀಡುವುದು ಹಾಗೂ ಸೇವಾನಿರತ ವೈದ್ಯರಿಗೆ ಉನ್ನತ ವ್ಯಾಸಂಗಕ್ಕೆ (ಪಿಜಿ) ಅವಕಾಶ ಕಲ್ಪಿಸುವುದು ನಮ್ಮ ಪ್ರಮುಖ ಬೇಡಿಕೆಗಳಾಗಿವೆ. ವಿಶೇಷವಾಗಿ ಕೇಂದ್ರ ಪುರಸ್ಕೃತ ಯೋಜನೆಯಡಿ ದುಡಿಯುತ್ತಿರುವ ಸುಮಾರು 6,000 ನೌಕರರಿಗೆ ಪ್ರತಿ ತಿಂಗಳ ಮೊದಲ ವಾರದಲ್ಲೇ ವೇತನ ಪಾವತಿಸಬೇಕೆಂದು ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಡಾ. ಸಂದೀಪ್ ಎ.ಎಸ್., ಕಾರ್ಯದರ್ಶಿ ಡಾ. ರಾಜೇಶ್ ಸಿ.ಎಸ್., ಮತ್ತು ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಅಂಪಾರು ದಿನಕರ ಶೆಟ್ಟಿ ಉಪಸ್ಥಿತರಿದ್ದರು.

ಬೇಡಿಕೆಗಳು ಏನೇನು?

- ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಕಾಲಕಾಲಕ್ಕೆ ಸಮರ್ಪಕವಾಗಿ ಔಷಧಗಳನ್ನು ಪೂರೈಸಬೇಕು
- ವೃಂದ ಮತ್ತು ನೇಮಕಾತಿ ನಿಯಮಗಳನ್ನು ಶೀಘ್ರದಲ್ಲಿ ತಿದ್ದುಪಡಿ ಮಾಡಬೇಕು
- ಇಲಾಖೆಯ ನೌಕರರ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವುದು
- ಅರ್ಹರಿಗೆ ಕೂಡಲೇ ಮುಂಬಡ್ತಿ ನೀಡುವುದು
- ಸೇವಾನಿರತ ವೈದ್ಯರಿಗೆ ಉನ್ನತ ವ್ಯಾಸಂಗಕ್ಕೆ (ಪಿಜಿ) ಅವಕಾಶ ಕಲ್ಪಿಸುವುದು

ಮಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂಬರ್ ವನ್– ಸುರತ್ಕಲ್ ಪಶ್ಚಿಮ ವಾರ್ಡ್

ಕಣ್ಣೆದುರೇ ಕಡಲಿದ್ದರೂ ನೀರಿಗೆ ತತ್ವಾರ

ದಿಗಂತ ವಾಟರ್ ಚೆಕ್

ವಾರ್ಡ್ ನಂಬರ್ 1 ಸುರತ್ಕಲ್ (ಪಶ್ಚಿಮ)

• **ಮಂಗಳೂರು:** ವಾರ್ಡ್ ನಂಬರ್ ವನ್– ಸುರತ್ಕಲ್ ಪಶ್ಚಿಮ ವಾರ್ಡ್ ಎಂದರೆ ಸದಾ ನೀರಿನ ಬವಣೆ ಎದುರಿಸುವ ವಾರ್ಡ್ ಎಂದೇ ಗುರುತಿಸಿಕೊಂಡಿದೆ. ಕಡಲು ಹತ್ತಿರವಿದ್ದರೂ ಇಲ್ಲಿ ಕುಡಿಯುವ ನೀರಿನ ತತ್ವಾರ ಇದ್ದೇ ಇದೆ. ಫೆಬ್ರವರಿ ಕೊನೆಯಾಗುತ್ತಿದ್ದಂತೆ ಇಲ್ಲಿ ನೀರಿನ ಸಮಸ್ಯೆ ಅತಿಯಾಗಿ ಕಾಡುತ್ತದೆ. ನೀರು ಬರುವುದೇ ಕಡಿಮೆ, ಇದ್ದುದರಲ್ಲಿಯೇ ಹೆಚ್ಚುತ್ತಿದೆ ನಳ್ಳಿ ನೀರಿನ ಸಂಪರ್ಕ, 980 ಸಂಪರ್ಕ ಇದ್ದಲ್ಲಿ ಇಂದು 1,800ಕ್ಕೆ ಏರಿಕೆಯಾಗಿದೆ!. ಇದು, ಮಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 1ರ ಸ್ಥಿತಿ.

ಹೌದು, ಜಲಸಿರಿ ಯೋಜನೆ ಅನುಷ್ಠಾನ ಆದ ಬಳಿಕ ನಳ್ಳಿ ಸಂಪರ್ಕ ಹೆಚ್ಚುತ್ತಿದೆಯೇ ಹೊರತು ಜಲಮೂಲಗಳು ಹೆಚ್ಚುತ್ತಿಲ್ಲ. ನಳ್ಳಿ ನೀರಿಗಾಗಿ ಕಾಯುವ ಸ್ಥಿತಿ ಇಲ್ಲಿನ ವಾಸಿಗಳದ್ದು.

ಹಲವೆಡೆ ಪ್ರೆಶರ್ ಕೊರತೆ

ಈ ಹಿಂದೆ ಮುಕ್ಕ ಮತ್ತಿತರ ಪ್ರದೇಶದಲ್ಲಿ ಕನಿಷ್ಠ ಮೂರರಿಂದ ನಾಲ್ಕು ಗಂಟೆಗಳ ಕಾಲ ನೀರು ಬರುತ್ತಿತ್ತು. ಇದೀಗ ಸಂಪರ್ಕ ಒತ್ತಡದ ಹೆಚ್ಚಳದಿಂದಾಗಿ ಮುಕ್ಕಾಲು ಗಂಟೆಗೆ ಸೀಮಿತಗೊಂಡಿದೆ. ಹಲವಾರು ಕಡೆ ಪ್ರೆಶರ್ ಕೊರತೆಯಿಂದ ನೀರು ಮನೆಯ ಮೇಲೆ ಇರುವ ಟ್ಯಾಂಕ್ ಇರುವುದೇ ಇಲ್ಲ. ಫೆಬ್ರವರಿಯಿಂದಲೇ ಇಂತಹ ಸಮಸ್ಯೆ ಎದುರಾಗಿದೆ. ಮುಂಬರುವ ಏಪ್ರಿಲ್, ಮೇ ತಿಂಗಳಲ್ಲಿ ನೀರಿನ ರೇಶನಿಂಗ್ ಶುರುವಾಗದಲ್ಲಿ ಮತ್ತಷ್ಟು ಕಂಟಕ ಎದುರಾಗಲಿದೆ ಎಂಬ ಆತಂಕ ಸಾರ್ವಜನಿಕರದ್ದಾಗಿದೆ.

ಗುಡ್ಡಕೊಪ್ಲ ಪ್ರದೇಶದ ಬಡಾವಣೆಗಳಿಗೆ ಈ ಹಿಂದೆ ಸುರತ್ಕಲ್ ಬಳಿಯ ಟ್ಯಾಂಕ್‌ನಿಂದ ಸಂಪರ್ಕ ನೀಡಲಾಗಿತ್ತು. ಜಲಸಿರಿ ಯೋಜನೆಯ ಬಳಿಕ ದೂರದ ಎನ್‌ಐಟಿಕೆ ಬಳಿಯಿಂದ ಈ ಪ್ರದೇಶಕ್ಕೆ 1000 ಸಂಪರ್ಕಕ್ಕೆ ಒಂದೇ ಟ್ಯಾಂಕಿನ ನೀರು ಹರಿದು ಹೋಗುತ್ತಿದೆ. ಹೀಗಾಗಿ ಮುಕ್ಕ ಮಿತ್ರಪಟ್ಣ ಪ್ರದೇಶದ ಜನರಿಗೆ ನೀರಿನ ಲಭ್ಯತೆ ಕಡಿಮೆಯಾಗಿದೆ.

ಎಪ್ರಿಲ್ ಮೇ ಅವಧಿಯಲ್ಲಿ ಬಾವಿ ನೀರು ಉಪ್ಪಿನ ಅಂಶದಿಂದ ಕೂಡಿರುವುದರಿಂದ ಜನತೆ ಮತ್ತಷ್ಟು ಸಂಕಷ್ಟಕ್ಕೊಳಗಾಗಲಿದ್ದಾರೆ. ಈ ಭಾಗದ ಜನತೆ ನಳ್ಳಿ ನೀರಿನ ಸಂಪರ್ಕವನ್ನೇ ಅವಲಂಬಿಸಿರುವುದರಿಂದ ಯಾವಾಗ ನೀರು ಬರುವುದೋ ಎಂದು ಕಾಯುತ್ತಾರೆ ಜನತೆ.





ಮೊದಲೆಲ್ಲಾ ನಮ್ಮಲ್ಲಿ ನೀರಿನ ಸಮಸ್ಯೆಯೇ ಇರಲಿಲ್ಲ. ಇದೀಗ ಜಲಸಿರಿ ಯೋಜನೆಯಲ್ಲಿ ವಿವಿಧೆಡೆ ಹೆಚ್ಚುವರಿ ನೀರಿನ ಸಂಪರ್ಕ ಕಲ್ಪಿಸಿರುವುದರಿಂದ ಸಮಸ್ಯೆ ತಲೆದೋರಿದೆ. ಮಳೆಗಾಲ ಆರಂಭವಾಗುವ ವರೆಗೂ ಸಮಸ್ಯೆ ಕಾಡುತ್ತಲೇ ಇರುತ್ತದೆ. ಪಾಲಿಕೆ ಅಧಿಕಾರಿಗಳು ಗಮನಹರಿಸಬೇಕಿದೆ.

■ ಕೃಷ್ಣ ಪೂಜಾರಿ, ಮಾರಿಗುಡಿ



ಸಣ್ಣ ವ್ಯಾಪ್ತಿ ಹೊಂದಿರುವ ವಾರ್ಡ್ 1ರಲ್ಲೂ ನೀರಿನ ಸಮಸ್ಯೆ ಇದೆ. ನೇತ್ರಾವತಿಯಲ್ಲಿ ಸಾಕಷ್ಟು ನೀರು ಇದೆ ಎನ್ನುತ್ತಾರೆ. ಆದರೆ ನಮಗೆ ಮಾತ್ರ ಸರಿಯಾಗಿ ನೀರು ಬರುವುದಿಲ್ಲ. ಕೆಲವೆಡೆ ಪೈಪ್‌ಲೈನ್ ಅವ್ಯವಸ್ಥೆ ಇದ್ದು, ಇದನ್ನು ಮೊದಲು ಸರಿಪಡಿಸುವ ಕೆಲಸವಾಗಲಿ.

■ ಭೋಜ ಪೂಜಾರಿ, ಮುಕ್ಕ

ಮಳೆಗಾಲದಲ್ಲಿ ಕಡಲ್ಕೊರೆತ ಭಯ

ಮಳೆಗಾಲ ಬಂತೆಂದರೆ ಈ ಭಾಗದ ಜನತೆಗೆ ಕಡಲ್ಕೊರೆತದ ಭೀತಿ ಎದುರಾಗುತ್ತದೆ. ಇಲ್ಲಿನ ಇತರ ಸಮಸ್ಯೆಗಳೆಂದರೆ ಒಳಚರಂಡಿ ಸಮಸ್ಯೆ ಇತ್ಯಾದಿ. ದಿನದಿಂದ ದಿನಕ್ಕೆ ವಸತಿ ಸಮುಚ್ಚಯಗಳ ಸಂಖ್ಯೆ ಹೆಚ್ಚುತ್ತಿದ್ದು, ಒಳಚರಂಡಿ ವ್ಯವಸ್ಥೆ ಮಾತ್ರ ಇಲ್ಲಿಲ್ಲ. ಸುಮಾರು ಮನೆಗಳಿಗೆ ವಸತಿ ಸಮುಚ್ಚಯಗಳಿಗೆ ಸಂಪರ್ಕ ಇಲ್ಲದಿರುವುದರಿಂದ ಮಳೆ ನೀರು ಹರಿಯುವ ತೋಡಿನಲ್ಲಿ ಬಿಡಲಾಗುತ್ತಿದೆ. ಇದನ್ನು ತಪ್ಪಿಸಲು ಒಳಚರಂಡಿ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಬೇಕು ಎಂಬುದು ಸ್ಥಳೀಯ ನಿಕಟಪೂರ್ವ ಕಾರ್ಪೊರೇಟರ್ ಶೋಭಾ ರಾಜೇಶ್ ಆಗ್ರಹಿಸಿದ್ದಾರೆ.

ನೀರಿನ ಕೊರತೆ ಆಗದಿರಲಿ

ಮುಕ್ಕ ವ್ಯಾಪ್ತಿಯಲ್ಲಿ ಇಷ್ಟರವರೆಗೆ ನೀರಿನ ಕೊರತೆ ಕಂಡುಬಂದಿಲ್ಲ. ಮುಂದಿನ ಎಪ್ರಿಲ್ ಮೇ ತಿಂಗಳಲ್ಲಿ ರೇಶನಿಂಗ್ ಸಂದರ್ಭ ನೀರಿನ ಪೂರೈಕೆ ಸರಿಯಾಗಿದ್ದರೆ ಸಾಕು ಎನ್ನುವಂತಾಗಿದೆ. ಜಲಸಿರಿ ಕಾಮಗಾರಿ ಗೊಂದಲ, ಈ ಹಿಂದಿನ ನಳ್ಳಿ ನೀರಿನ ಸಂಪರ್ಕದಲ್ಲಿ ನೀರು ಬರುವುದೇ? ಎಂಬುದರ ಬಗ್ಗೆ ಅಧಿಕಾರಿಗಳು ಸ್ಪಷ್ಟಪಡಿಸಬೇಕು.

■ ಸುನೀತಾ, ಮಿತ್ರಪಟ್ಣ

ಕೆಲಸ ಬಿಟ್ಟು ನೀರು ತುಂಬಿಸುವ ಸ್ಥಿತಿ

ಸದ್ಯ ನಿಧಾನಗತಿಯಲ್ಲಿ ನೀರು ಬರುತ್ತಿದೆ. ಬರುವ ಮುಕ್ಕಾಲು ಗಂಟೆ ನೀರು ತುಂಬಿಸಲು ಸಂಪು ಇಲ್ಲದ ಮನೆ ಮಂದಿ ತಮ್ಮ ಕೆಲಸ ಕಾರ್ಯ ಬಿಟ್ಟು ನೀರು ಹಿಡಿದಿಡಲು ರಜೆ ಹಾಕಿ ಕುಳಿತುಕೊಳ್ಳುವಂತಾಗಿದೆ.

ನಾಳೆ ವಾರ್ಡ್ 2–ಸುರತ್ಕಲ್ ಪೂರ್ವದ ಸ್ಥಿತಿಗತಿ

ಈಡೇರಿಲ್ಲ ಕುಮಾರಧಾರೆಗೆ ಕಿಂಡಿ ಅಣೆಕಟ್ಟು ನಿರ್ಮಾಣ ಬೇಡಿಕೆ

ಪಿಜಕಳಕ್ಕೆ ನಿರೀಕೆಯ ಪರೀಕ್ಷೆ!

▸ ತುಳಸಿ ಕಡಬ

ದಿಗಂತ ವಿಶೇಷ



• **ಕಡಬ:** ಬೇಸಗೆಯಲ್ಲಿ ಪರಿಸರದ ಕೃಷಿ ತೋಟಗಳಿಗೆ ನೀರುಣಿಸಲು ಮತ್ತು ಕಡಬ ಪರಿಸರಕ್ಕೆ ಕುಡಿಯುವ ನೀರು ಪೂರೈಸಲು ಅನುಕೂಲವಾಗುವಂತೆ ಕುಮಾರಧಾರಾ ನದಿಗೆ ಕಡಬದ ಮೂರಾಜೆ ಅಥವಾ ಪಿಜಕಳ ಭಾಗದಲ್ಲಿ ಕಿಂಡಿ ಅಣೆಕಟ್ಟು ನಿರ್ಮಿಸಬೇಕೆನ್ನುವ ಬೇಡಿಕೆ ಇನ್ನೂ ಈಡೇರಿಲ್ಲ. ಕಳೆದ ಹಲವು ವರ್ಷಗಳಿಂದ ಪರಿಸರದ ಜನರು ಈ ಬಗ್ಗೆ ಅಧಿಕಾರಿಗಳಿಗೆ ಹಾಗೂ ಜನಪ್ರತಿನಿಧಿಗಳಿಗೆ ಮನವಿ ನೀಡುತ್ತಲೇ ಇದ್ದಾರೆ. ಬೇಸಗೆಯಲ್ಲಿ ಎಲ್ಲೆಡೆ ನೀರಿನ ಅಭಾವ ತಲೆದೋರುತ್ತದೆ. ಕೃಷಿಗೆ ನೀರುಣಿಸುವುದಕ್ಕೂ ನೀರಿನ ಕೊರತೆ ಬಾಧಿಸುತ್ತದೆ. ನದಿಗೆ ಕಿಂಡಿ ಅಣೆಕಟ್ಟು ನಿರ್ಮಿಸಿದರೆ ಕೃಷಿಗೆ ನೀರು ದೊರೆಯುವುದರೊಂದಿಗೆ ಕುಡಿಯುವ ಉದ್ದೇಶಕ್ಕೂ ನೀರನ್ನು ಬಳಸಬಹುದು ಎನ್ನುವ ಸ್ಥಳೀಯರ ಅಭಿಪ್ರಾಯ. ಬಿರು ಬಿಸಿಲಿನಲ್ಲಿಯೂ ಕೂಡ ಜಲ ಸಮೃದ್ಧಿಯೊಂದಿಗೆ ಜಿಲ್ಲೆಯ ಜನರಿಗೆ ನೀರುಣಿಸುವ ಕುಮಾರಧಾರೆಗೆ ಕಡಬದ ಮೂರಾಜೆ ಅಥವಾ ಪಿಜಕಳ ಭಾಗದಲ್ಲಿ ಅಣೆಕಟ್ಟು ನಿರ್ಮಿಸಿದರೆ ಕಡಬ ಮತ್ತು ಎಡಮಂಗಲ ಗ್ರಾಮಗಳ ಹಲವು ಪ್ರದೇಶಗಳಿಗೆ ಅನುಕೂಲವಾಗಲಿದೆ. ಹಾಗೆಯೇ ಕಡಬ ಪಟ್ಟಣ ಪಂಚಾಯತ್ ವ್ಯಾಪ್ತಿಯ ಜನರಿಗೆ ಕುಡಿಯುವ ನೀರು ಪೂರೈಸಲು ಅಣೆಕಟ್ಟಿನಲ್ಲಿ ಸಂಗ್ರಹವಾದ ನೀರನ್ನು ಬಳಸಬಹುದು.

ವ್ಯರ್ಥವಾಗುವ ಜಲ ಸಂಪತ್ತು

ಎಲ್ಲೆಡೆ ಕುಡಿಯುವ ನೀರಿಗಾಗಿ ಕೊರೆಸಿದ ಕೊಳವೆಬಾವಿಗಳಲ್ಲಿ ನೀರು ಬತ್ತಿಹೋಗುತ್ತಿರುವುದು ಮತ್ತು ಹೊಸದಾಗಿ ಕೊರೆಯುವ ಕೊಳವೆಬಾವಿಗಳಲ್ಲಿ ನೀರು ಸಿಗದೇ ಇರುವುದರಿಂದ ಕುಡಿಯುವ ನೀರಿಗಾಗಿ ನದಿ ನೀರನ್ನು ಬಳಸುವ ಅನಿವಾರ್ಯತೆ ಎದುರಾಗಿದೆ. ಸರಕಾರವೂ ಕೂಡ ಬಹುಕೋಟಿ ವೆಚ್ಚದ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಜಾರಿಗೊಳಿಸಲು ಮುಂದಾಗಿದ್ದು, ಹಲವು ಕಡೆ ಕಾಮಗಾರಿಗಳು ನಡೆಯುತ್ತಿವೆ. ಅದರ ಜೊತೆಗೆ ನದಿಗಳಿಗೆ ಅಲ್ಲಲ್ಲಿ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸಿದರೆ ಸಮುದ್ರಕ್ಕೆ ಹರಿದು ಹೋಗಿ ವ್ಯರ್ಥವಾಗುವ ಜಲ ಸಂಪತ್ತನ್ನು ಹಿಡಿದಿಟ್ಟುಕೊಂಡು ಕೃಷಿಗೆ ಹಾಗೂ ಕುಡಿಯುವ ಉದ್ದೇಶಕ್ಕೆ ಬಳಸಬಹುದು. ಅದರ ಜೊತೆಗೆ ಕಿಂಡಿ ಅಣೆಕಟ್ಟುಗಳಲ್ಲಿ ನೀರು ಸಂಗ್ರಹವಾದಾಗ ಪರಿಸರದ ಕೆರೆ, ಬಾವಿ ಹಾಗೂ ಇತರ ಜಲಮೂಲಗಳಲ್ಲಿ ನೀರಿನ ಮಟ್ಟ ಏರಿಕೆಯಾಗುವುದರಿಂದ ಅಂತರ್ಜಲ ಮಟ್ಟ ಹೆಚ್ಚಲು ಸಹಕಾರಿಯಾಗುತ್ತದೆ. ಇತ್ತೀಚೆಗೆ ನಿಧನರಾದ ಪಾಲೋಳಿ ಸೇತುವೆ ನಿರ್ಮಾಣ ಹೋರಾಟಕ್ಕೆ ನೇತೃತ್ವ ನೀಡಿದ್ದ ಸ್ಥಳೀಯ ಮುಂದಾಳು, ನಿವೃತ್ತ ಶಿಕ್ಷಕ ಸಾಂತಪ್ಪ ಗೌಡ ಪಿಜಕಳ ಅವರು ಈ ಬಗ್ಗೆ ಹಲವು ಬಾರಿ ಗ್ರಾಮ ಸಭೆಗಳಲ್ಲಿ ಬೇಡಿಕೆ ಮಂಡಿಸಿದ್ದರು. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಗಮನ ಸೆಳೆದಿದ್ದರು.

ಬೇಡಿಕೆ ಈಡೇರಿಸಿ

ಕಡಬದ ಪಿಜಕಳ ಅಥವಾ ಮೂರಾಜೆ ಭಾಗದಲ್ಲಿ ಕಿಂಡಿಅಣೆಕಟ್ಟು ನಿರ್ಮಿಸಬೇಕೆಂದು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಮನವಿ ಸ್ವೀಕರಿಸಿದ ಅವರು ಸಂಬಂಧಪಟ್ಟ ಇಲಾಖೆಯೊಂದಿಗೆ ವ್ಯವಹರಿಸಿ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು. ಆದರೆ, ಬಳಿಕ ಆ ವಿಚಾರದಲ್ಲಿ ಯಾವುದೇ ಪ್ರಗತಿ ಕಂಡು ಬಂದಿಲ್ಲ. ಸಂಬಂಧಪಟ್ಟವರು ಜನರ ಬೇಡಿಕೆಯನ್ನು ಪರಿಶೀಲಿಸಿ ಈಡೇರಿಸಲು ಮುಂದಾದರೆ ಕೃಷಿಗೆ ಹಾಗೂ ಕುಡಿಯುವ ನೀರಿಗೆ ಅನುಕೂಲವಾಗಲಿದೆ.

■ ದಯಾನಂದ ಗೌಡ ಪೊಯ್ಯೆತ್ತಡ್ಡ, ಪಟ್ಟಣ ಪಂಚಾಯತ್ ಸದಸ್ಯರು, ಕಡಬ

ಕೆಪಿಎಸ್‌ಸಿ ವಿರುದ್ಧ ಅಭ್ಯರ್ಥಿಗಳ ಆಕ್ರೋಶ

• ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ ಕಛೇರಿದ ವಿರುದ್ಧ ಈಗ ಅಭ್ಯರ್ಥಿಗಳು ಆಕ್ರೋಶಗೊಂಡಿದ್ದು, ಕೆಇಎ ಮಾದರಿಯಲ್ಲಿ ಫಲಿತಾಂಶ ಪ್ರಕಟಿಸುವಂತೆ ಅಭ್ಯರ್ಥಿಗಳು ಒತ್ತಾಯಿಸಿದ್ದಾರೆ.

ಕೆಇಎ ಸ್ಪರ್ಧಾತ್ಮಕ ಪರೀಕ್ಷೆ ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿಯನ್ನು ಎಲ್ಲರಿಗೂ ದೊರೆಯುವಂತೆ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡುತ್ತಿದೆ. ಇದೇ ರೀತಿ ಕೆಪಿಎಸ್‌ಸಿ ಕೂಡ ಉತ್ತರ ಪತ್ರಿಕೆಗಳನ್ನು ಅಪ್ಲೋಡ್ ಮಾಡಿದರೆ ವಿದ್ಯಾರ್ಥಿಗಳ ಸಂದೇಹ ಬಗೆಹರಿಯಲಿದೆ. ಆಯೋಗದಲ್ಲಿ ಹಗರಣ ನಡೆದಿಲ್ಲ ಎನ್ನುವುದೇ ಆದರೆ, ಆರೋಪಿತ ಅಭ್ಯರ್ಥಿಗಳ ಉತ್ತರ ಪತ್ರಿಕೆಯನ್ನು ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡುವ ಧೈರ್ಯ ಪ್ರದರ್ಶಿಸಲಿ ಎಂದು ಅಭ್ಯರ್ಥಿಗಳು ಆಕ್ರೋಶ ಹೊರಹಾಕಿದ್ದಾರೆ. ಕೆಪಿಎಸ್‌ಸಿ ಕಚೇರಿಯನ್ನು ಬಂದ್ ಮಾಡುವ ಒತ್ತಾಯ ಕೂಡ ಹೆಚ್ಚಾಗುತ್ತಿದ್ದು, ಕೆಪಿಎಸ್‌ಸಿಯ ಗೆಜೆಟೆಡ್ ಪ್ರೊಬೆಷನರ್ಸ್ 384 ಹುದ್ದೆಗಳನ್ನು ಯಾರಿಗೆ ಕೊಡಬೇಕೆಂಬುದು ಈಗಾಗಲೇ ನಿರ್ಧಾರವಾಗಿದೆ. ನಾವು ಕಷ್ಟಪಟ್ಟು ಓದಿದವರಿಗೆ ಮೋಸವಾಗುತ್ತಿದೆ ಎಂದು ನೊಂದ ಅಭ್ಯರ್ಥಿಗಳು ಒತ್ತಾಯಿಸಿದ್ದಾರೆ.

ಆಧಾರ ರಹಿತ ಆರೋಪ ಸರಿಯಲ್ಲ: ಇತ್ತೀಚಿಗೆ ಕೆಪಿಎಸ್‌ಸಿ ವಿರುದ್ಧ ಹಲವು ಆರೋಪಗಳನ್ನು ಮಾಡಲಾಗಿತ್ತು. ಆದರಲ್ಲಿ ಯಾವುದು ಕೂಡ ಸಾಬೀತಾಗಿಲ್ಲ. ಒಂದು ಕೊಠಡಿಯಲ್ಲಿ 12, ಮತ್ತೊಂದು ಕೊಠಡಿಯಲ್ಲಿ 11, ಎರಡು ಕೊಠಡಿಗಳಲ್ಲಿ ತಲಾ 10 ಮಂದಿ ಉತ್ತೀರ್ಣರಾಗಿದ್ದಾರೆ. ಕೆಲವು ಕೊಠಡಿಗಳಲ್ಲಿ ಯಾವೊಬ್ಬ ಅಭ್ಯರ್ಥಿಯು ಆಯ್ಕೆಯಾಗಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೀಗೆ ಆಯ್ಕೆಯಾಗುತ್ತಾರೆಂದು ನಿರೀಕ್ಷೆಯೂ ಮಾಡಲು ಸಾಧ್ಯವಿಲ್ಲ. ಯುಪಿಎಸ್‌ಸಿ ಉತ್ತೀರ್ಣರಾದವರಲ್ಲಿ ಕೆಲವರು ಕೆಎಎಸ್ ಪಾಸ್ ಆಗಿರದಿರುವ ಉದಾಹರಣೆಗಳಿವೆ. ಆದ್ದರಿಂದ ಬೇರೊಂದು ನೇಮಕಾತಿ ಮಂಡಳಿಯಲ್ಲಿ ಉತ್ತೀರ್ಣ ರಾಗದವರು ಇಲ್ಲಿ ಹೇಗೆ ಪಾಸ್ ಆದರು ಎಂದು ಪ್ರಶ್ನಿಸುವುದು ಮತ್ತು ಸುಖಾಸುಮ್ಮನೆ ಆರೋಪ ಮಾಡುವುದು ಸರಿಯಲ್ಲ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜ್ಯೋತಿ ಕೆ. ತಿಳಿಸಿದ್ದಾರೆ.

ವಿವಿಧ ಜಿಲ್ಲೆಗಳ ಅಭ್ಯರ್ಥಿಗಳಾಗಿದ್ದಾರೆ

ಕೆಲವು ಅಭ್ಯರ್ಥಿಗಳ ಮನೆತನದ ಹೆಸರಿನಿಂದ ನಾಲ್ವರು ಅಭ್ಯರ್ಥಿಗಳು ಆಯ್ಕೆಯಾಗಿರುವುದನ್ನು ನೋಡಿ ಆರೋಪಗಳನ್ನು ಕೂಡ ಮಾಡಲಾಗಿದೆ. ಆದರೆ, ಅವರೆಲ್ಲರೂ ಒಂದೇ ಕುಟುಂಬದವರಲ್ಲ ಎಂದು ಖಚಿತಪಡಿಸಿಕೊಳ್ಳಲಾಗಿದೆ. ವಿವಿಧ ಊರುಗಳಲ್ಲಿದ್ದು, ಒಂದೇ ಮನೆತನದ ಹೆಸರುಗಳಿರುತ್ತವೆ. ಇದನ್ನೂ ಕೂಲಂಕಷವಾಗಿ ಪರಿಶೀಲನೆ ನಡೆಸಲಾಗಿದೆ. ಇವರೆಲ್ಲರೂ ವಿಜಯಪುರ, ಧಾರವಾಡ, ಹಾವೇರಿ, ಬಾಗಲಕೋಟೆ ಸೇರಿ ವಿವಿಧ ಜಿಲ್ಲೆಗಳ ಅಭ್ಯರ್ಥಿಗಳಾಗಿದ್ದಾರೆ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜ್ಯೋತಿ ಸ್ಪಷ್ಟಪಡಿಸಿದರು.

ಆರೋಗ್ಯ ಇಲಾಖೆ ನೌಕರರ ಬಗ್ಗೆ ಚರ್ಚೆಗೆ ತೀರ್ಮಾನ

• ಬೆಂಗಳೂರು: ವೇತನ ಹೆಚ್ಚಳ, ಮುಂಬಡ್ತಿ, ಖಾಲಿ ಹುದ್ದೆ ಭರ್ತಿ ಸೇರಿ 14 ಬೇಡಿಕೆಗಳನ್ನು ಮುಂದಿಟ್ಟು ಮಾ.11ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾಗಿರುವ ಆರೋಗ್ಯ ಇಲಾಖೆ ನೌಕರರೊಂದಿಗೆ ಇಲಾಖೆ ಸಚಿವರು ಮಾತುಕತೆ ನಡೆಸುವುದಕ್ಕೆ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಸಭೆಯ ನಿರ್ಣಯಗಳನ್ನು ಮಾಧ್ಯಮಗಳಿಗೆ ವಿವರಿಸಿದರು. ವೃಂದ ಮತ್ತು ನೇಮಕಾತಿ ನಿಯಮ ಪ್ರತಿ ಮೂರು ವರ್ಷಕ್ಕೊಮ್ಮೆ ತಿದ್ದುಪಡಿಯಾಗಬೇಕೆಂದಿದ್ದರೂ 1997ರಿಂದ ಈವರೆಗೆ ನಿಯಮ ತಿದ್ದುಪಡಿಯಾಗಿಲ್ಲ. ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ 67 ಸಾವಿರದಷ್ಟಿದೆ. ಆದರೆ 37,620 ಹುದ್ದೆಗಳು ಖಾಲಿಯಿವೆ. ಸೇವಾನಿರತ ವೈದ್ಯರು, ಅಧಿಕಾರಿಗಳು, ನೌಕರರು ಉನ್ನತ ವ್ಯಾಸಂಗ ಕೈಗೊಳ್ಳಲು ಅವಕಾಶ ದೊರೆತಿಲ್ಲ. ವರ್ಗಾವಣೆ ಕಾಯ್ದೆ ಸರಿಪಡಿಸುವ ಬದಲು ಅವೈಜ್ಞಾನಿಕ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡಲಾಗುತ್ತಿದೆ. ಆರೋಗ್ಯ ಇಲಾಖೆಯ ಎನ್ ಕೇಡರ್ ಹುದ್ದೆಗಳಿಗೆ ಆರೋಗ್ಯ ಇಲಾಖೆಯ ವೈದ್ಯರು, ಸಿಬ್ಬಂದಿ ನೇಮಿಸಬೇಕು ಇತ್ಯಾದಿ ಬೇಡಿಕೆಗಳನ್ನು ಮುಂದಿರಿಸಿ ಮಾ. 11ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ನೌಕರರು ಪ್ರಕಟಿಸಿದ್ದಾರೆ. ಮುಷ್ಕರ ನಡೆಸಿದರೆ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ಇಲಾಖೆ ಎಚ್ಚರಿಕೆ ನೀಡಿದೆ.

ಸಂಪುಟದ ಇತರೆ ನಿರ್ಣಯಗಳು

- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 144 ಬಿಎಸ್-6 ನಗರ ಸಾರಿಗೆ ಡೀಸೆಲ್ ಬಸ್ಸುಗಳನ್ನು 62 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಖರೀದಿಗೆ ಆಡಳಿತಾತ್ಮಕ ಅನುಮೋದನೆ
- ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕು ವ್ಯಾಪ್ತಿಯ ವಿರಿಜಾ, ದೇವರಾಯ, ಆರ್‌ಬಿಎಲ್‌ಎಲ್ ಮತ್ತು ಬಂಗಾರದೊಡ್ಡಿ ನಾಲೆಗಳ ವಿತರಣಾ ನಾಲೆಗಳ ಅಭಿವೃದ್ಧಿ ಕಾಮಗಾರಿಗಳನ್ನು 60 ಕೋಟಿ ರೂ.ಗಳ ಅಂದಾಜಿನಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಒಪ್ಪಿಗೆ
- ಬೀದರ್ ಜಿಲ್ಲೆಯ ಮಾಂಜ್ರಾ ನದಿಗೆ ಅಡ್ಡಲಾಗಿ ಭಾಲ್ಕಿ ತಾಲೂಕಿನಲ್ಲಿ ನಿರ್ಮಿಸಿರುವ ಜೀರಗಿಯಾಲ್ ಮಾಣಿಕೇಶ್ವರ ಮತ್ತು ಚಂದಾಪುರ ಹಾಗೂ ಔರಾದ್ ತಾಲೂಕಿನಲ್ಲಿ ನಿರ್ಮಿಸಿರುವ ಹಾಲ್‌ಹಳ್ಳಿ ಒಟ್ಟು ಬ್ರಿಡ್ಜ್ ಕಂ ಬ್ಯಾರೇಜ್‌ಗಳ ಪುನಶ್ಚೇತನ ಕಾಮಗಾರಿಗಳನ್ನು 151.70 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ನಡೆಸಲು ಆಡಳಿತಾತ್ಮಕ ಸಮ್ಮತಿ
- ಕರ್ನಾಟಕ ಪುರಸಭೆಗಳ ಕಾಯ್ದೆ 1964 ಹಾಗೂ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976ರ ಕೆಲ ಪ್ರಕರಣಗಳಿಗೆ ತಿದ್ದುಪಡಿ ಮಾಡಲು ಅಸ್ತು
- ದಿವಂಗತ ಶಾಸಕ ಶಿವಾನಂದ ರುದ್ರಪ್ಪ ಅಂಬಡಗಟ್ಟಿ ಅವರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಜಿ ಪ್ರವರ್ಗದಲ್ಲಿ ಬನಶಂಕರಿ 6ನೇ ಹಂತ 10ನೇ ಬ್ಲಾಕ್ ಬಡಾವಣೆಯಲ್ಲಿ ಹಂಚಿಕೆಯಾಗಿರುವ ನಿವೇಶನವನ್ನು ಅವರ ಪತ್ನಿ ಶೈಲಜಾ ಶಿವಾನಂದ ಅವರಿಗೆ ಶುದ್ಧ ಕ್ರಯಪತ್ರ ನೋಂದಾಯಿಸಲು ಸಮ್ಮತಿ
- ರಾಜ್ಯದಲ್ಲಿ ಐ.ಸಿ.ಜೆ.ಎಸ್ (ಇಂಟರ್-ಒಪರೆಬಲ್ ಕ್ರಿಮಿನಲ್ ಜಸ್ಟಿಸ್ ಸಿಸ್ಟಮ್) ಸೇವೆಗಳ ಅನುಷ್ಠಾನಕ್ಕೆ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳನ್ನು ಒಟ್ಟು 227.58 ಕೋಟಿ ರೂ.ಗಳ ಅಂದಾಜಿನಲ್ಲಿ ಪೊಲೀಸ್ ಆಧುನೀಕರಣ ಯೋಜನೆಯಡಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಮಣ್ಣು, ನೀರು, ಗಾಳಿ, ಆಹಾರ ಸಹಿತ ಎಲ್ಲವನ್ನೂ ಕೊಟ್ಟ ದೇವರನ್ನು ನಾವು ಮರೆಯಬಾರದು – **ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ**

- ಅದು ಉಚಿತ ಕೊಡುಗೆ, ಹಾಗಾಗಿ ಮನುಷ್ಯನಿಗೆ ಮರೆತು ಹೋಗುತ್ತೆ!

ದಿನ ಭವಿಷ್ಯ

ಮೇಷ
ಆಪ್ತರ ಜತೆಗೆ ಭಿನ್ನಮತ. ವಾಹನ ಚಾಲನೆಯಲ್ಲಿ ಎಚ್ಚರ ಇರಲಿ. ವಿದ್ಯಾರ್ಥಿಗಳ ಪ್ರಯತ್ನಕ್ಕೆ ಉತ್ತಮ ಫಲ. ಆರ್ಥಿಕ ಕೊರತೆ ನಿವಾರಣೆ.

ವೃಷಭ
ಕಂಡದ್ದನ್ನು ಖರೀದಿಸಬೇಕೆಂಬ ಅಭ್ಯಾಸ ಭಾರೀ ವೆಚ್ಚಕ್ಕೆ ಕಾರಣವಾದೀತು. ಕೌಟುಂಬಿಕ ಸಹಕಾರ. ವಿದ್ಯಾರ್ಥಿಗಳಿಗೆ ಯಶ.

ಮಿಥುನ
ವೃತ್ತಿಯಲ್ಲಿ ಒತ್ತಡ ಹೆಚ್ಚು. ದಿನದಂತ್ಯಕ್ಕೆ ತೃಪ್ತಿಕರ ಫಲಿತಾಂಶ. ನಡೆನುಡಿಯಲ್ಲಿ ವಿನಯ ಇರಲಿ. ವಿದ್ಯಾರ್ಥಿಗಳಿಗೆ ತುಸು ಕಠಿಣ ಪರಿಸ್ಥಿತಿ.

ಕಟಕ
ಆಶಾವಾದ ಬಿಡದಿರಿ. ಆರಂಭದಲ್ಲಿ ಪ್ರತಿಕೂಲ ಸ್ಥಿತಿಯಿದ್ದರೂ ಬಳಿಕ ಎಲ್ಲ ಪೂರಕವಾಗಲಿದೆ. ವಿದ್ಯಾರ್ಥಿಗಳಿಗೂ ಇದು ಅನ್ವಯ.ಆರ್ಥಿಕ ಉನ್ನತಿ.

ಸಿಂಹ
ಕಠಿಣ ಕೆಲಸವನ್ನೂ ಸುಲಭದಲ್ಲಿ ಮುಗಿಸುವಿರಿ. ಆರೋಗ್ಯಕ್ಕೆ ಹೆಚ್ಚು ಗಮನ ಕೊಡಿ. ಅಪರಾಹ್ನ ಮನಸ್ಸು ಕೆಡಿಸುವ ಬೆಳವಣಿಗೆ ಉಂಟಾದೀತು.

ಕನ್ಯಾ
ಜಾಗ ಖರೀದಿಯ ಯೋಚನೆಯಿದ್ದರೆ ಕಾಲ ಸೂಕ್ತವಾಗಿದೆ. ಮಕ್ಕಳ ಹಠಮಾರಿತನ ಕೋಪ ಬರಿಸಬಹುದು. ಅವರೆಡೆ ಹೆಚ್ಚು ಕಾಳಜಿ ತೋರಿ.

ತುಲಾ
ಮನೆಯಲ್ಲಿ ನೆಮ್ಮದಿ, ಸಹಕಾರ. ವಿರಸ ಶಮನ. ಹೊರಗಿನ ಕೆಲಸದಲ್ಲಿ ಹೆಚ್ಚು ಶ್ರಮ ವಹಿಸುವಿರಿ. ಅಪೇಕ್ಷಿತ ಸಹಕಾರ ದೊರಕಲಾರದು.

ವೃಶ್ಚಿಕ
ದೈಹಿಕ ನೋವು ಕಾಡಬಹುದು. ಹೊಸ ವ್ಯಕ್ತಿಗಳ ಪರಿಚಯ. ಕೆಲವರಿಗೆ ಪಿತ್ರಾರ್ಜಿತ ಆಸ್ತಿ ಲಭ್ಯತೆ. ವಿದ್ಯಾರ್ಥಿಗಳ ಪರಿಶ್ರಮ ಸಾರ್ಥಕ.

ಧನು
ಕುಟುಂಬಸ್ಥರ ಮಾತಿಗೆ ಹೆಚ್ಚು ಗಮನ ಕೊಡಿ. ಅವರನ್ನು ನಿರ್ಲಕ್ಷಿಸಬೇಡಿ. ಆರೋಗ್ಯ ಏರುಪೇರು. ಅಜೀರ್ಣ ಸಮಸ್ಯೆ ಕಾಡಬಹುದು.

ಮಕರ
ಕೆಲ ವಿಷಯಗಳಲ್ಲಿ ಅತಿರೇಕದ ವರ್ತನೆ ತೋರುವಿರಿ. ಇದು ಎಲ್ಲರಿಗೆ ಸಮ್ಮತವೆನಿಸದು. ಮನೆಯ ಸದಸ್ಯರ ಜತೆ ಉದ್ವಿಗ್ನ ಸ್ಥಿತಿ ಸಂಭವ.

ಕುಂಭ
ಆತ್ಮೀಯರ ಸಂಗಡ ಸಂಘರ್ಷ ನಡೆದೀತು. ಎದುರುತ್ತರ ಕೊಡದೆ ಮೌನದಿಂದಿರಿ. ವೃತ್ತಿಯ ಮೇಲೆ ಪರಿಣಾಮ ಬೀರದಂತೆ ಎಚ್ಚರವಿಡಿ.

ಮೀನ
ವೃತ್ತಿಯಲ್ಲಿ ಸಹೋದ್ಯೋಗಿ ಜತೆ ವಾಗ್ಯುದ್ಧ. ಬಸುರಿಯರು ಮಾನಸಿಕ ಒತ್ತಡಕ್ಕೆ ಒಳಗಾಗುವರು. ವಿದ್ಯಾರ್ಥಿಗಳಿಗೆ ಉನ್ನತಿ.

ರಾಹುಕಾಲ: 10.30–12.00
ಗುಳಿಕಕಾಲ: 7.30–9.00

ಅದೃಷ್ಟ ಸಂಖ್ಯೆ : 5,1,4,7

ಏಕಕಾಲಕ್ಕೆ 42 ಸ್ಥಳಗಳಲ್ಲಿ ಲೋಕಾಯುಕ್ತ ಅಧಿಕಾರಿಗಳ ದಾಳಿ

ಕೋಟ್ಯಂತರ ಸ್ಥಿರಾಸ್ತಿ ಪತ್ತೆ



• ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದ ಆರೋಪದ ಮೇಲೆ ಎಂಟು ಸರ್ಕಾರಿ ಅಧಿಕಾರಿಗಳ ಮನೆ-ಕಚೇರಿಗಳ ಮೇಲೆ ಲೋಕಾಯುಕ್ತ ಪೊಲೀಸರು ಗುರುವಾರ ದಾಳಿ ನಡೆಸಿದ್ದಾರೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬೆಳ್ಳಂಬೆಳಿಗ್ಗೆ ಏಕಕಾಲಕ್ಕೆ 42 ಸ್ಥಳಗಳಲ್ಲಿ ದಾಳಿ ನಡೆಸಿ, ಕೋಟ್ಯಂತರ ರೂಪಾಯಿ ಮೌಲ್ಯದ ಸ್ಥಿರ ಮತ್ತು ಚರ ಆಸ್ತಿಗಳನ್ನು ಪತ್ತೆಹಚ್ಚಿದ್ದಾರೆ.

ಆರೋಪಿತ ಅಧಿಕಾರಿಗಳ ಸಂಬಂಧಿಕರ ಮನೆ ಹಾಗೂ ಕಚೇರಿ ಸೇರಿದಂತೆ ಒಟ್ಟು 42 ಕಡೆ ಲೋಕಾಯುಕ್ತ ಅಧಿಕಾರಿಗಳು ತಪಾಸಣೆ ನಡೆಸಿದ್ದಾರೆ. ಈ ವೇಳೆ ಅಪಾರ ಪ್ರಮಾಣದ ನಗದು, ಚಿನ್ನಾಭರಣಗಳು, ಬೆಲೆಬಾಳುವ ವಾಹನಗಳು ಹಾಗೂ ಕೃಷಿ ಭೂಮಿಯ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಒಟ್ಟು 35.65 ಕೋಟಿ ರೂ. ಮೌಲ್ಯದ ಅಕ್ರಮ ಆಸ್ತಿ ಪತ್ತೆಹಚ್ಚಿದ್ದು, ಬೆಂಗಳೂರು ನಗರ, ಮಂಡ್ಯ, ಗದಗ, ಮೈಸೂರು, ವಿಜಯಪುರ ಮತ್ತು ಯಾದಗಿರಿ ಲೋಕಾಯುಕ್ತ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಡಾ. ಎಚ್.ಸಿ.ಇಂದ್ರೇಶ್, ಸಹ ಪ್ರಾಧ್ಯಾಪಕ (ಪಶುವೈದ್ಯಕೀಯ ಕಾಲೇಜು,ಹೆಬ್ಬಾಳ)
ಇವರಿಗೆ ಸಂಬಂಧಿಸಿದ 6 ಸ್ಥಳಗಳಲ್ಲಿ ದಾಳಿ ಹಾಗೂ ತಪಾಸಣೆ ವೇಳೆ 10 ನಿವೇಶನಗಳು, 2 ಮನೆಗಳು ಪತ್ತೆಯಾಗಿದೆ. ಸುಮಾರು 2.53 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ವಸಂತ್ ವಾಲಪ್ಪ ನಾಯಿಕ್ ಮುಖ್ಯ ಅಭಿಯಂತರ, ಪಿಡಬ್ಲ್ಯೂಡಿ(ಕೆ.ಶಿಪ್)
ಇವರಿಗೆ ಸೇರಿದ ಒಟ್ಟು 10 ಸ್ಥಳಗಳಲ್ಲಿ ದಾಳಿ, ಕಾರ್ಯಾಚರಣೆ ವೇಳೆ 64.04 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

5.15 ಕೋಟಿ ರೂ. ಅಕ್ರಮ ಆಸ್ತಿ ಪತ್ತೆ

ಶಂಕರ್ ಆರ್. ಸಿಇಒ. (ಕೃಷಿ ಸೇವಾ ಸಹಕಾರ ಸಂಘ ಬೆಂಗಳೂರು), ಇವರಿಗೆ ಸೇರಿದ 5 ಸ್ಥಳಗಳ ಮೇಲೆ ದಾಳಿ ನಡೆಸಿ, ಇವರಿಗೆ ಸೇರಿದ 4 ನಿವೇಶನಗಳು, 2 ಮನೆಗಳು, 2 ಎಕರೆ ಕೃಷಿ ಭೂಮಿ ಪತ್ತೆ ಹಚ್ಚಲಾಗಿದೆ. ಇವರ ಒಟ್ಟು ಆಸ್ತಿ 5.15 ಕೋಟಿ ರೂ. ಎಂದು ಅಂದಾಜಿಸಲಾಗಿದೆ.

ಸತೀಶ್ ಎಸ್., ಎಇಇ, (ಪಿಡಬ್ಲ್ಯೂಡಿ ಮಂಡ್ಯ)
ಇವರಿಗೆ ಸೇರಿದ ಒಟ್ಟು 4 ಸ್ಥಳಗಳಲ್ಲಿ ದಾಳಿ ನಡೆಸಿದ್ದಾರೆ. ಈ ವೇಳೆ 3 ನಿವೇಶನ, 2 ಮನೆಗಳು, 6 ಎಕರೆ ಕೃಷಿ ಭೂಮಿ ಪತ್ತೆಯಾಗಿದೆ. ಇವರ ಒಟ್ಟು ಆಸ್ತಿ 44.65 ಕೋಟಿ ರೂ. ಎಂದು ತಿಳಿದು ಬಂದಿದೆ.

ಎಂ.ಕೆ. ಸುರಕೋಡ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ (ಗದಗ),
ಇವರಿಗೆ ಸೇರಿದ ಒಟ್ಟು 6 ಸ್ಥಳಗಳಲ್ಲಿ ದಾಳಿ, 6 ನಿವೇಶನ, 1 ಮನೆ, 29 ಎಕರೆ ಕೃಷಿ ಭೂಮಿ ಪತ್ತೆಯಾಗಿದೆ. ಇವರ ಒಟ್ಟು ಆಸ್ತಿ ಮೌಲ್ಯ 21.23 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಆಸಿಫ್ ಇಕ್ಬಾಲ್ ಎಲೀಲ್, ಎಇಇ (ಮೈಸೂರು ನಗರ ನೀರು ಸರಬರಾಜು, ಒಳಚರಂಡಿ ಮಂಡಳಿ)
ಇವರಿಗೆ ಸೇರಿದ 4 ಸ್ಥಳಗಳಲ್ಲಿ ದಾಳಿ, ದಾಳಿ ವೇಳೆ 5 ನಿವೇಶನ, 7 ಮನೆ ಪತ್ತೆಯಾಗಿದೆ. ಇವರ ಒಟ್ಟು ಆಸ್ತಿ ಮೌಲ್ಯ 88.13 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಪ್ರಕಾಶ್ ಈರಪ್ಪ ಗೋಡ್ನೊಳೆ, ಜೆಇ, (ಕೆಬಿಜೆಎನ್ ಎಲ್ ವಿಜಯಪುರ)
ಇವರಿಗೆ ಸೇರಿದ ಒಟ್ಟು 4 ಕಡೆ ದಾಳಿ, 2 ಮನೆ, 1 ಶಾಲಾ ಕಟ್ಟಡ ಪತ್ತೆಯಾಗಿದೆ. ಇವರ ಒಟ್ಟು ಆಸ್ತಿ ಮೌಲ್ಯ 46.09 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ವೀರೇಶ್ ರುದ್ರಯ್ಯ ಹಿರೇಮಠ್, ಎಲೆಕ್ಟ್ರಿಕ್ ಇನ್ಸ್‌ಪೆಕ್ಟರ್ (ಇಂಧನ ಇಲಾಖೆ,ಯಾದಗಿರಿ)
ಇವರಿಗೆ ಸೇರಿದ ಒಟ್ಟು ಮೂರು ಸ್ಥಳಗಳಲ್ಲಿ ದಾಳಿ, 5 ನಿವೇಶನಗಳು, 2 ಮನೆ, 8 ಎಕರೆ 34 ಗುಂಟೆ ಕೃಷಿ ಭೂಮಿ ಪತ್ತೆಯಾಗಿದೆ. ಇವರ ಒಟ್ಟು ಆಸ್ತಿ 15.45 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

49 ಜನರ ವಿರುದ್ಧ ಪ್ರಕರಣ ದಾಖಲು

• ಬೀದರ್: ಜಿಲ್ಲೆಯ ಬಸವಕಲ್ಯಾಣ ನಗರದ ಯಾತ್ರಿ ನಿವಾಸದ ಬಳಿ ಸಂಜೆ ವಾಕಿಂಗ್‌ಗೆ ತೆರಳಿದ್ದ ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿರುವ ಇಬ್ಬರು ಮುಸ್ಲಿಂರ ಮೇಲೆ ಅಪರಿಚಿತ ವ್ಯಕ್ತಿಗಳು ಹಲ್ಲೆ ನಡೆಸಿದ್ದಾರೆ ಎಂಬ ಆರೋಪದಡಿ ಬಸವಕಲ್ಯಾಣ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾ.3ರಂದು ಮಂಗಳವಾರ 6–7 ಜನರು ಸೇರಿಕೊಂಡು ಏಕಾಏಕಿ ಹಲ್ಲೆ ನಡೆಸಿ ಇಬ್ಬರು ಶಿಕ್ಷಕರಿಗೆ ಜೀವ ಬೆದರಿಕೆ ಹಾಕಿದ್ದರು ಎಂದು ಆರೋಪಿಸಿ ಹಲ್ಲೆಗೊಳಗಾದ ಮುಹಮ್ಮದ್ ಆರೀಫ್ ಹಾಗೂ ಸೈಯದ್ ಇಮ್ರಾನ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿದೆ. ಈ ಪ್ರಕರಣ ಸಂಬಂಧ ಮುಸ್ಲಿಂ ಸಮುದಾಯದವರು ಅದೇ ದಿನ ರಾತ್ರಿ ಪೊಲೀಸ್ ಠಾಣೆ ಎದುರು ಜಮಾಯಿಸಿ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದ ಕಾರಣ ಉದ್ರಿಕ್ತ ವಾತಾವರಣ ನಿರ್ಮಾಣ ಆಗಿತ್ತು.

ಠಾಣೆ ಎದುರು ಜಮಾಯಿಸದಂತೆ ಪೊಲೀಸರು ಹೇಳಿದರೂ ಕೇಳದ ಜನರು ಪೊಲೀಸರ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರು. ಈ ವೇಳೆ ಎಎಸ್ಐ ಮುಕ್ತಾರ್ ಪಟೇಲ್ ಅವರಿಗೆ ಗಾಯಗಳಾಗಿದ್ದ ಕಾರಣ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಅಕ್ರಮ ಗುಂಪು ಕಟ್ಟಿಕೊಂಡು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿ, ಕರ್ತವ್ಯಕ್ಕೆ ಅಡ್ಡಿಪಡಿಸಿದ ಸಂಬಂಧ ಠಾಣೆಯ



ಸಿಬ್ಬಂದಿ ನೀಡಿದ ದೂರಿನಂತೆ 49 ಜನ ಮುಸ್ಲಿಂ ಸಮುದಾಯದವರ ಮೇಲೆ ಪ್ರಕರಣ ದಾಖಲಿಸಲಾಗಿದೆ.

ನಿನ್ನೆ ತಡರಾತ್ರಿಯಿಂದ ಬಸವಕಲ್ಯಾಣ ನಗರದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು, ಡಿಐಜಿಪಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೊಲೀಸ್ ಠಾಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

ಜಿಲ್ಲೆಯಲ್ಲಿ ಕೆಲ ಕಿಡಿಗೇಡಿಗಳು ಕೋಮು ಗಲಭೆಗೆ ಪ್ರಚೋದಿಸಲು ಪ್ರಚೋದನಕಾರಿ ದ್ವೇಷ ಭಾಷಣ, ವಿವಾದಾತ್ಮಕ ಹೇಳಿಕೆ,ಅಂಶಗಳ ಪೋಸ್ಟ್, ವಿಡಿಯೋ ಮಾಡಿ ಸಮಾಜದ ಸ್ವಾಸ್ಥ್ಯ ಕೆಡಿಸಲು ಪ್ರಯತ್ನಿಸುತ್ತಿರುವುದು ಕಂಡು ಬಂದಲ್ಲಿ ಅಂತವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟೆ ಎಚ್ಚರಿಸಿದ್ದಾರೆ.

ಬಸ್ ನಿಲ್ದಾಣಗಳಲ್ಲಿ ಬಜೆಟ್ ನೇರ ಪ್ರಸಾರ


ಪುಟ 1 ➡ ವಿಧಾನಸೌಧದಲ್ಲಿ ನಡೆಯುವ ಬಜೆಟ್ ಮಂಡನೆ ಹಾಗೂ ನಂತರ ನಡೆಯಲಿರುವ ಮುಖ್ಯಮಂತ್ರಿಗಳ ಪತ್ರಿಕಾಗೋಷ್ಠಿಯನ್ನೂ ಇದೇ ಪರದೆಗಳ ಮೂಲಕ ರಾಜ್ಯದ ವಿವಿಧ ಬಸ್ ನಿಲ್ದಾಣಗಳಲ್ಲಿ ನೇರವಾಗಿ ಪ್ರಸಾರ ಮಾಡಲಾಗುತ್ತದೆ. ಇದರ ಮೂಲಕ ಸಾರ್ವಜನಿಕರು ಬಸ್ ನಿಲ್ದಾಣಗಳಲ್ಲಿಯೇ ಈ ಮಹತ್ವದ ಕಾರ್ಯಕ್ರಮವನ್ನು ವೀಕ್ಷಿಸುವ ಅವಕಾಶವನ್ನು ಪಡೆಯಲಿದ್ದಾರೆ. ರಾಜ್ಯದಲ್ಲಿಯೇ ಮೊದಲ ಬಾರಿಗೆ ಬಸ್ ನಿಲ್ದಾಣಗಳ ಮೂಲಕ ಜನಸಾಮಾನ್ಯರಿಗೆ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ತಲುಪಿಸುವ ಪ್ರಯತ್ನವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೈಗೊಂಡಿದೆ. ಸಾರ್ವಜನಿಕರು ಈ ನೇರ ಪ್ರಸಾರದ ಸದುಪಯೋಗವನ್ನು ಪಡೆದುಕೊಳ್ಳುವಂತೆ ಆಯುಕ್ತರು ಮನವಿ ಮಾಡಿದ್ದಾರೆ.

ಒಳ ಮೀಸಲು ಕಲ್ಪಿಸಲು ಸರ್ಕಾರ ಬದ್ಧ

ಪುಟ 1 ➡ ಆದಕ್ಕೆ ನ್ಯಾಯಾಲಯದಲ್ಲಿ ಹಿನ್ನಡೆಯಾದ್ದರಿಂದ ಶೇ.50 ಮೀಸಲಾತಿಗೆ ಬರಬೇಕೆಂದು ಹೇಳಲಾಗಿದೆ. ಈಗ ಮೀಸಲಾತಿ ಎಷ್ಟು ಎಂಬುದು ನಿರ್ಣಯವಾಗದಿರುವುದರಿಂದ ಸಮಸ್ಯೆಯಾಗಿದೆ. ಆದರೆ, ಈಗಾಗಲೇ 56,432 ಹುದ್ದೆಗಳ ನೇಮಕಾತಿಗೆ ಹೊರಡಿಸಿರುವ ಆದೇಶಕ್ಕೆ ಯಾವುದೇ ರೀತಿ ಪರಿಣಾಮ ಬೀರುವಂತಹ ನಿರ್ಣಯ ಸಂಪುಟ ಸಭೆಯಲ್ಲಿ ಕೈಗೊಂಡಿಲ್ಲ. ಒಳ ಮೀಸಲಾತಿ ಸಂಬಂಧಿಸಿ ಸರ್ಕಾರದ ನಿಲುವು ಬದಲಾಗುವುದಿಲ್ಲ ಎಂದವರು ಹೇಳಿದ್ದಾರೆ. ಕಳೆದ ಸಚಿವ ಸಂಪುಟದಲ್ಲಿ ನ್ಯಾಯಾಲಯದ ತೀರ್ಮಾನದಂತೆ ಸಚಿವ ಸಂಪುಟವು 56,432 ಹುದ್ದೆಗಳಿಗೆ ನೇರ ನೇಮಕಕ್ಕೆ ಒಂದು ತಿಂಗಳೊಳಗೆ ಪ್ರಕ್ರಿಯೆ ಪ್ರಾರಂಭಿಸಲು ತೀರ್ಮಾನ ಕೈಗೊಳ್ಳಲಾಗಿತ್ತು.

ಟ್ರಂಪ್‌ಗೆ ಮತ್ತೆ ದೊಡ್ಡ ಹಿನ್ನಡೆ

ಪುಟ 1 ➡ ಟ್ರಂಪ್ ಆಡಳಿತ ಹಲವು ರಾಷ್ಟ್ರಗಳ ಆಮದುದಾರರ ಮೇಲೆ ಅಂತಾರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆ (ಐಇಇಪಿಎ) ಅನ್ವಯ ಹೇರಲಾದ ಪ್ರತಿಸುಂಕ ಅಸಂವಿಧಾನಿಕ, ವಸೂಲಿ ಮಾಡಿದ ಪ್ರತಿಸುಂಕದಲ್ಲಿ



ಹೆಚ್ಚುವರಿ ಹಣ ಆಮದುದಾರ ಕಂಪನಿಗಳಿಗೆ ವಾಪಸ್ ಕೊಡಬೇಕೆಂದು ನ್ಯೂಯಾರ್ಕ್ ಫೆಡರಲ್ ನ್ಯಾಯಾಲಯವು ಆದೇಶ ಹೊರಡಿಸಿದೆ. ಆದಾಗ್ಯೂ, ಮೇಲ್ಮನವಿ ಸಲ್ಲಿಸಲು ಅಥವಾ ಹೆಚ್ಚಿನ ಕಾಲಾವಕಾಶ ಪಡೆಯಲು ಸರ್ಕಾರಕ್ಕೆ ಅವಕಾಶವಿದೆ. ಸುಂಕವನ್ನು ಕಾನೂನುಬಾಹಿರವೆಂದು ಸುಪ್ರೀಂ ಘೋಷಿಸಿದ್ದರೂ, ಹಣ ಹಿಂದಿರುಗಿಸುವ ವಿಷಯದ ಕುರಿತು ತನ್ನ ಆದೇಶದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರಲಿಲ್ಲ. ಆದರೆ ಫೆಬ್ರವರಿ ತೀರ್ಪಿನ ನಂತರ ದೊಡ್ಡ ಮತ್ತು ಸಣ್ಣ ಅನೇಕ ಕಂಪನಿಗಳು ಕಳೆದ ಹಲವು ತಿಂಗಳಿನಲ್ಲಿ ಪಾವತಿಸಿದ ಸುಂಕದ ಹಣ ಹಿಂತಿರುಗಿಸಲು ನ್ಯಾಯಾಲಯದ ನಿರ್ದೇಶನ ಕೋರಿ ಅರ್ಜಿ ಸಲ್ಲಿಸಿದ್ದವು.

175 ಶತಕೋಟಿ ವಾಪಸ್?

ಟ್ರಂಪ್ ಸರ್ಕಾರವು ಡಿಸೆಂಬರ್ ಮಧ್ಯಭಾಗದವರೆಗೆ ಐಇಇಪಿಎ ಸುಂಕಗಳ ಮೂಲಕ 130 ಶತಕೋಟಿ ಡಾಲರ್‌ಗಿಂತ ಹೆಚ್ಚು ಹಣ ಸಂಗ್ರಹಿಸಿದೆ ಎಂದು ವರದಿಯಾಗಿದೆ. ಅಂದಾಜು 175 ಶತಕೋಟಿ ಡಾಲರ್ ಹಣವನ್ನು ಸರ್ಕಾರ ಹಿಂದಿರುಗಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಫೆ.20ರಂದು ಸುಪ್ರೀಂ ಕೋರ್ಟ್ ತೀರ್ಪು ಹೊರಬಂದಿದ್ದು, ಅದಾದ ಬಳಿಕ ಅಮೆರಿಕ ಅಧ್ಯಕ್ಷ ಟ್ರಂಪ್ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಮೇಲೆ ತೀವ್ರ ಟೀಕೆ ನಡೆಸಿದ್ದರು.

ಭಾರತಕ್ಕೆ ಲಾಭ ಹೇಗೆ?

- **ಅಮೆರಿಕದಲ್ಲಿ ಭಾರತೀಯ ಉತ್ಪನ್ನಗಳು ಆಗಲಿವೆ ಅಗ್ಗ**
- **ಅಮೆರಿಕ ಕಂಪನಿಗಳಿಂದ ಹೆಚ್ಚಲಿದೆ ಆಮದು ಬೇಡಿಕೆ**
- **ಭಾರತೀಯ ಉತ್ಪನ್ನಗಳಿಗೆ ಹೆಚ್ಚಲಿವೆ ಬೇಡಿಕೆ**
- **ಅಮೆರಿಕದೊಂದಿಗೆ ಹೆಚ್ಚಿನ ವ್ಯಾಪಾರ**

ಹಿಂದು ಪ್ರಜ್ಞೆ ವಿಧಾನ ಮಾತ್ರವಲ್ಲ, ಜೀವನ

ಪುಟ 1 ➡ ವೀರಶೈವ ಮಠ ಮಂದಿರ ಕರ್ನಾಟಕ ರಾಜ್ಯದಲ್ಲಿ ಸಮಾಜಕ್ಕೆ ಅಪಾರವಾದ ಕೊಡುಗೆ ನೀಡಿವೆ. ಕೃಷ್ಣಾ ನದಿ ತಟದಲ್ಲಿರುವ ಯಡೂರ ಕ್ಷೇತ್ರ ದಕ್ಷಬ್ರಹ್ಮನ ಕತೆಯಲ್ಲಿ ಪ್ರಸ್ತಾಪ ಇದೆ.

ಶಿವಯೋಗಿ ಕಾಡಸಿದ್ದೇಶ್ವರಿಂದ ಯಡೂರ ಕ್ಷೇತ್ರದ ಮಹಿಮೆ ಜಗತ್ತಿಗೆ ತಿಳಿಯುವಂತಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಪ್ರಯತ್ನದಿಂದ ಇದೀಗ ಭಾರತ ಜಗತ್ತಿನಲ್ಲಿಯೇ ಪ್ರಭಾವಶಾಲಿಯಾಗಿದೆ. ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ದೇಶ ಸಾಕಷ್ಟು ಬೆಳೆದಿದೆ. ವಿಕಾಸದ ಕಡೆಗೆ ಭಾರತ ಹೆಜ್ಜೆ ಇಡುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ವಸುಧೈವ ಕುಟುಂಬಕಂ ಎಂಬ ಸಂದೇಶ ಭಾರತ ಜಗತ್ತಿಗೆ ನೀಡಿದೆ. ಅಹಿಂಸೆ, ಕರುಣೆ, ಸತ್ಯ ನಮ್ಮ ತತ್ವಗಳಾಗಿವೆ. ವಿಶ್ವ ಕಲ್ಯಾಣಕ್ಕಾಗಿ ಜಗತ್ತಿನ ಹಲವು ದೇಶಗಳು ಭಾರತದತ್ತ ನೋಡುತ್ತಿವೆ. ಸರ್ವೇ ಜನ ಸುಖಿನೋಭವಂತು ಎಂಬಂತೆ ಎಲ್ಲರೂ ಸುಖ ಶಾಂತಿ ಸಮೃದ್ಧಿ ನೆಮ್ಮದಿಯಿಂದ ಇರಬೇಕೆಂಬುವುದು ಭಾರತದ ಆಶಯವಾಗಿದೆ ಎಂದರು.

ಭಾರತ ಯುದ್ಧ ನಿಲ್ಲಿಸಬೇಕು: ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ ಮಾತನಾಡಿ, ಇರಾನ್ ಇರಾಕ್, ಇಸ್ರೇಲ್, ಅಮೆರಿಕ ಮುಂತಾದ ಕಡೆ ನಡೆಯುತ್ತಿರುವ ಯುದ್ಧ ನಿಲ್ಲಬೇಕು.

ಭಾರತ ಈ ಯುದ್ಧ ನಿಲ್ಲಿಸಲು ಪ್ರಯತ್ನಿಸಬೇಕು. ಭಾರತದಲ್ಲಿ ಏಕರೂಪ ನಾಗರಿಕ ಸಂಹಿತೆ ಕಾನೂನು ಜಾರಿಗೊಳಿಸಬೇಕಿರುವುದು ಅವಶ್ಯಕವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಉಜ್ಜಯಿನಿ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಕರ್ನಾಟಕ ಸರ್ಕಾರದ ದಿಲ್ಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ, ಚಿಕ್ಕೋಡಿ ಸದಲಗಾ ಶಾಸಕ ಗಣೇಶ ಹುಕ್ಕೇರಿ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಇತರರು ಇದ್ದರು.

'ವಿಕಾಸವೀರ ಪ್ರಶಸ್ತಿ' ಪ್ರದಾನ

ಇದೇ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ದಿಲ್ಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಅವರಿಗೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹಾಗೂ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಶ್ರೀ ಮಠದಿಂದ ಕೊಡ ಮಾಡುವ 'ವಿಕಾಸವೀರ ಪ್ರಶಸ್ತಿ' ಪ್ರದಾನ ಮಾಡಿದರು.

ಮುತ್ಯಾ ಪ್ರಕರಣ: ತನಿಖೆ ಚುರುಕು

• ಯಾದಗಿರಿ: ಜಿಲ್ಲೆಯ ಶಹಾಪುರದ ಮಹಲ್ ರೋಜಾದ (ಚಾಂಗ್ ದೇವ್) ಯಮನೂರಪ್ಪ ದೇವಸ್ಥಾನದ ಪೀಠಾಧಿಪತಿ ಮಲ್ಲಿಕಾರ್ಜುನ ಮುತ್ಯಾ ಅವರ ಮೇಲೆ ದಾಖಲಾಗಿರುವ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗ ತನಿಖೆ ಚುರುಕುಗೊಂಡಿದೆ.

ಪೋಕ್ಸೋ ಪ್ರಕರಣ ಎದುರಿಸುತ್ತಿರುವ ಮಲ್ಲಿಕಾರ್ಜುನ ಮುತ್ಯಾ ಅವರು ಬುಧವಾರ ರಾತ್ರಿ, ಗುರುವಾರ ಶಹಾಪುರ ಸಿಪಿಐ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗಿದ್ದಾರೆ. ವಿಚಾರಣೆಯ ನಂತರ ಪೊಲೀಸರು ಮುತ್ಯಾ ಅವರನ್ನು ಶಹಾಪುರದಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿದ್ದಾರೆ. ತನಿಖೆಗೆ ಸಹಕರಿಸದಿದ್ದರೆ ಬಂಧನವಾಗುವ ಸಾಧ್ಯತೆ ಇದ್ದಿದ್ದರಿಂದ ಅವರು ಸ್ವತಃ ವಿಚಾರಣೆಗೆ ಬಂದಿದ್ದಾರೆ ಎಂದು ವರದಿಯಾಗಿದೆ. ಶಹಾಪುರ ಗ್ರಾಮೀಣ ಸಿಪಿಐ ಶರಣಗೌಡ ನ್ಯಾಮಣ್ಣನವರ ನೇತೃತ್ವದಲ್ಲಿ ಪ್ರಕರಣದ ಸಮಗ್ರ ತನಿಖೆ ನಡೆಯುತ್ತಿದೆ.

ಪ್ರಕರಣದ ಹಿನ್ನೆಲೆ: ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ಇವರ ವಿರುದ್ಧ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಾಗಿತ್ತು. ಮಲ್ಲಿಕಾರ್ಜುನ ಮುತ್ಯಾ ಅವರು ಕರ್ನಾಟಕ, ತೆಲಂಗಾಣ ಮತ್ತು ಮಹಾರಾಷ್ಟ್ರದಲ್ಲಿ ಅಪಾರ ಭಕ್ತ ಸಮೂಹವನ್ನು ಹೊಂದಿದ್ದಾರೆ.

ಕಾನೂನಿಗೆ ತಲೆ ಬಾಗುವೆ ಎಂದ ಮುತ್ಯಾ: ಪೋಕ್ಸೋ ಪ್ರಕರಣದಡಿ ಶಹಾಪುರ ಪಟ್ಟಣದ ಸಿಪಿಐ ಕಚೇರಿಯಲ್ಲಿ ಸುದೀರ್ಘ ವಿಚಾರಣೆ ನಂತರ ಮಾಧ್ಯಮಗಳಿಗೆ ಮಲ್ಲಿಕಾರ್ಜುನ ಮುತ್ಯಾ ಸ್ಪಷ್ಟನೆ ನೀಡಿದ್ದು, ನಾನು ಕಾನೂನಿಗೆ ತಲೆ ಬಾಗುವೆ ಎಂದಿದ್ದಾರೆ.

ಸೋಶಿಯಲ್ ಮಿಡಿಯಾದಲ್ಲಿ ಹರಿದಾಡಿದ ವಿಡಿಯೋಗಳ ಬಗ್ಗೆ ಪೊಲೀಸರು ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ಮಠದ ಜಾತ್ರೆ ನಿಮಿತ್ತ ನಾನು ಹೊರಗಡೆ ತೆರಳಿದ್ದೆ. ನಂತರ ನನಗೆ ಆರೋಗ್ಯದಲ್ಲಿ ಏರುಪೇರಾಗಿತ್ತು. ಹೀಗಾಗಿ ವಿಚಾರಣೆಗೆ ಹಾಜರಾಗಲು ತಡವಾಗಿದೆ. ಕಾನೂನಿಗೆ ತಲೆ ಬಾಗುವೆ ಎಂದು ಹೇಳಿದರು.

ಬಿಹಾರದಲ್ಲಿ ಬಿಜೆಪಿ ಮುಖ್ಯಮಂತ್ರಿ?

ಪುಟ 1 ➡ **ನಿತೀಶ್, ನಿತಿನ್ ರಾಜ್ಯಸಭೆ ಸ್ಪರ್ಧೆ:** ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಸೇರಿ ಎನ್‌ಡಿಎಯ ಐವರು ರಾಜ್ಯಸಭೆಗೆ ಆಯ್ಕೆ ಬಯಸಿ ಗುರುವಾರ ತಮ್ಮ ನಾಮಪತ್ರಗಳನ್ನು ಸಲ್ಲಿಸಿದರು. ಈ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಉಪಸ್ಥಿತರಿದ್ದರು.

ಇದು ನನ್ನ ಆಕಾಂಕ್ಷೆ: ಬಿಹಾರ ವಿಧಾನಸಭೆಯ ಉಭಯ ಸದನಗಳ ಮತ್ತು ಸಂಸತ್ತಿನ ಉಭಯ ಸದನಗಳ ಸದಸ್ಯನಾಗಬೇಕೆಂಬುದು, ತಾನು ಮೊದಲ ಬಾರಿ ಸಂಸದನಾದಾಗಲೆ ತನ್ನ ಆಕಾಂಕ್ಷೆಯಾಗಿತ್ತು. ಈ ಆಕಾಂಕ್ಷೆಯ ಸಾಕಾರಕ್ಕಾಗಿ ಇದೀಗ ರಾಜ್ಯಸಭಾ ಸದಸ್ಯತ್ವಕ್ಕೆ ನಾಮಪತ್ರ ಸಲ್ಲಿಸಿರುವೆ. ಕಳೆದೆರಡು ದಶಕಗಳ ಮೀರಿದವಧಿಗೆ ನೀವೆಲ್ಲರು ನನ್ನ ಮೇಲೆ ಸಂಪೂರ್ಣ ವಿಶ್ವಾಸ ಇರಿಸಿದ್ದೀರಿ ಮತ್ತು ನನ್ನನ್ನು ಬೆಂಬಲಿಸಿದ್ದೀರಿ. ನಿಮ್ಮ ವಿಶ್ವಾಸದ ಬಲದಲ್ಲೇ ನಾವು ಬಿಹಾರದ ಹಾಗೂ ನಿಮ್ಮೆಲ್ಲರ ಸೇವೆಯನ್ನು ಸಮರ್ಪಣಾ ಭಾವದಿಂದ ಮಾಡಿದ್ದೇವೆ ಎಂದು ನಿತೀಶ್‌ಕುಮಾರ್ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ನಿಶಾಂತ್ ಕುಮಾರ್ ಮುಂದಿನ ನಾಯಕ: ನಿತೀಶ್ ಕುಮಾರ್ ರಾಜ್ಯಸಭೆಗೆ ತೆರಳಲಿರುವ ಹಿನ್ನೆಲೆಯಲ್ಲಿ, ಅವರ ಪುತ್ರ ನಿಶಾಂತ್ ಕುಮಾರ್ ಶೀಘ್ರ ಸಕ್ರಿಯ ರಾಜಕಾರಣ ಪ್ರವೇಶಿಸಲಿದ್ದಾರೆ ಎನ್ನಲಾಗಿದೆ. ನಿಶಾಂತ್ ಡಿಸಿಎಂ ಆಗಲಿದ್ದಾರೆ ಎಂಬ ಮಾತು ಮಿತ್ರಕೂಟದಲ್ಲಿ ಕೇಳಿಬಂದಿದೆಯಾದರೂ, ನಿಶಾಂತ್ ನಿಖರವಾಗಿ ಯಾವ ಹುದ್ದೆ ಅಲಂಕರಿಸುವರು ಅಥವಾ ಜವಾಬ್ದಾರಿ ವಹಿಸುವರೆಂಬ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ.



“ ನಿತೀಶ್ ಕುಮಾರ್ 2005ರಿಂದ ಇಲ್ಲಿಯವರೆಗೆ ಬಿಹಾರದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಅಧಿಕಾರಾವಧಿ ಅದ್ಭುತವಾಗಿತ್ತು. ಈ ಅವಧಿಯು ಬಿಹಾರದ ಇತಿಹಾಸದಲ್ಲಿ ಸುವರ್ಣ ಅಧ್ಯಾಯವಾಗಿ ಬರೆಯಲ್ಪಡುತ್ತದೆ. ಶಾಸಕ, ಸಂಸದ, ಸಿಎಂ ಮತ್ತು ಕೇಂದ್ರ ಸಚಿವರಾಗಿ ಅವರ ಸುದೀರ್ಘ ವೃತ್ತಿಜೀವನ ಎಂದಿಗೂ ಕಳಂಕಿತವಾಗಿಲ್ಲ. ಅವರ ಇಡೀ ಜೀವನ ಭ್ರಷ್ಟಾಚಾರ ಆರೋಪಗಳಿಂದ ಮುಕ್ತವಾಗಿತ್ತು.

■ **ಅಮಿತ್ ಶಾ, ಕೇಂದ್ರ ಗೃಹ ಸಚಿವ**

ಭಾರತಕ್ಕೆ ತೈಲ ಭರವಸೆ

ಪುಟ 1 ➡ ಈ ಹಿನ್ನಲೆಯಲ್ಲಿ ಭಾರತದ ಪೆಟ್ರೋಲಿಯಂ ರಿಫೈನರಿ ಕಂಪನಿಗಳು ರಷ್ಯಾದಿಂದ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುವ ಕುರಿತು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚನೆ ನಡೆಸುತ್ತಿರುವುದು ತಿಳಿದುಬಂದಿದೆ. ಉಕ್ರೇನ್ ಯುದ್ಧ ಆರಂಭವಾದ ನಂತರ ರಷ್ಯಾ ಮೇಲೆ ಪಾಶ್ಚಿಮಾತ್ಯ ದೇಶಗಳು ವಿಧಿಸಿದ ನಿರ್ಬಂಧಗಳ ಪರಿಣಾಮವಾಗಿ ರಷ್ಯಾ ಕಡಿಮೆ ಬೆಲೆಗೆ ತೈಲ ಮಾರಾಟ ಮಾಡುತ್ತಿತ್ತು. ಈ ಅವಕಾಶವನ್ನು ಬಳಸಿಕೊಂಡು ಭಾರತ ಮತ್ತು ಚೀನಾ ರಷ್ಯಾದಿಂದ ಹೆಚ್ಚಿನ ಪ್ರಮಾಣದಲ್ಲಿ ತೈಲ ಖರೀದಿಸುತ್ತಿದ್ದವು. ಆದರೆ, ಅಮೆರಿಕದ ಒತ್ತಡದ ಹಿನ್ನಲೆಯಲ್ಲಿ ಭಾರತ ಕೆಲವು ಕಾಲ ರಷ್ಯಾದಿಂದ ತೈಲ ಖರೀದಿಯನ್ನು ಕಡಿಮೆ ಮಾಡಿತ್ತು. ಇದೀಗ ಗಲ್ಫ್ ಪ್ರದೇಶದಲ್ಲಿ ತೈಲ ಪೂರೈಕೆ ಸ್ಥಗಿತಗೊಳ್ಳುತ್ತಿರುವ ಕಾರಣ ಮತ್ತೆ ರಷ್ಯಾ ತೈಲಕ್ಕೆ ಬೇಡಿಕೆ ಹೆಚ್ಚುತ್ತಿರುವುದು ಗಮನಾರ್ಹವಾಗಿದೆ.

ಯುರೋಪ್‌ಗೆ ಅನಿಲ ಪೂರೈಕೆ ನಿಲ್ಲಿಸಲು ಪುಟಿನ್ ಚಿಂತನೆ: ಇರಾನ್ ಯುದ್ಧದಿಂದ ಜಾಗತಿಕ ತೈಲ ಬೆಲೆ ಏರಿಕೆಯಾಗುತ್ತಿದ್ದು, ರಷ್ಯಾ ಅನಿಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲ ಖರೀದಿ ಮೇಲೆ ಐರೋಪ್ಯ ಒಕ್ಕೂಟ(ಇಯು) ನಿಷೇಧ ಹೇರಲು ಮುಂದಾಗಿರುವ ಹಿನ್ನೆಲೆ ಯುರೋಪ್‌ಗೆ ಅನಿಲ ಪೂರೈಕೆ ನಿಲ್ಲಿಸಲು ಯೋಚಿಸಿದ್ದೇವೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಎಚ್ಚರಿಕೆ ನೀಡಿದ್ದಾರೆ.

ಅಮೆರಿಕಕ್ಕಿಂತ ಶ್ರೇಷ್ಠ ಬದಲಿ ಆಯ್ಕೆ ಬೇರಿಲ್ಲ

ಭಾರತ ಪುನಃ ರಷ್ಯಾ ತೈಲ ಖರೀದಿಸುವುದರ ಕುರಿತು ಗುರುವಾರ ಪ್ರತಿಕ್ರಿಯಿಸಿದ ಅಮೆರಿಕದ ಉಪ ಕಾರ್ಯದರ್ಶಿ ಕ್ರಿಸ್ಟೋಫರ್ ಲ್ಯಾಂಡೌ, ಭಾರತ ಬದಲಿ ಆಯ್ಕೆ ಹುಡುಕುತ್ತಿದೆ ಎಂದು ಭಾವಿಸುತ್ತೇನೆ. ಅಮೆರಿಕಕ್ಕಿಂತ ಶ್ರೇಷ್ಠ ಬದಲಿ ಆಯ್ಕೆಯು ಬೇರೊಂದಿಲ್ಲ ಎಂದಿದ್ದಾರೆ. ದಿಲ್ಲಿಯಲ್ಲಿ ನಡೆದ ರೈಸಿನಾ ಸಂವಾದದಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಂಘರ್ಷ ಅಂತ್ಯಗೊಳಿಸಲು ಪ್ರಧಾನಿ ಮೋದಿ ಕರೆ

ಪುಟ 1 ➡ **ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಬಗ್ಗೆ ಉಭಯ ನಾಯಕರು ಮಹತ್ವದ ನೆಲೆಯಲ್ಲಿ ಚರ್ಚಿಸಿದರು. ಕಾನೂನು ಸುವ್ಯವಸ್ಥೆ, ಮಾತುಕತೆ, ರಾಜತಾಂತ್ರಿಕತೆಯಲ್ಲಿ ಭಾರತ-ಫಿನ್ಲೆಂಡ್‌ಗಳಿಗೆ ಬಲವಾದ ನಂಬಿಕೆ. ಮಿಲಿಟರಿ ಸಂಘರ್ಷ ಮಾತ್ರದಿಂದಲೆ ಯಾವುದೇ ಸಮಸ್ಯೆ ಬಗೆಹರಿಸಲಾಗದು ಎಂಬುದು ನಮ್ಮ ಅಭಿಮತ. ಅದು ಉಕ್ರೇನ್ ಇರಲಿ ಅಥವಾ ಪ.ಏಷ್ಯಾವೇ ಆಗಿರಲಿ, ಸಂಘರ್ಷಗಳು ತ್ವರಿತ ಕೊನೆಗಾಣಬೇಕು, ಶಾಂತಿ ಸ್ಥಾಪನೆ ನಿಟ್ಟಿನಲ್ಲಿ ನಡೆವ ಪ್ರಯತ್ನಗಳನ್ನು ನಾವು ನಿರಂತರ ಬೆಂಬಲಿಸುತ್ತೇವೆ ಎಂದು ಪ್ರಧಾನಿ ಮೋದಿ ಪುನರುಚ್ಚರಿಸಿದ್ದಾರೆ. ಭಾರತ- ಯುರೋಪ್ ಬಾಂಧವ್ಯಗಳು ಉಚ್ಛ್ರಾಯ ಘಟ್ಟದಲ್ಲಿರುವ ವಾಸ್ತವವನ್ನು ಕೂಡ ಪ್ರಧಾನಿ ಮೋದಿ ಮಾತುಕತೆ ಸಂದರ್ಭ ಉಲ್ಲೇಖಿಸಿದ್ದಾರೆ. ಏಕಕಾಲಕ್ಕೆ ಜಗತ್ತಿನ ಎರಡು ಪ್ರಮುಖ ರಾಜತಾಂತ್ರಿಕ ಶಕ್ತಿಗಳಾಗಿರುವ ಭಾರತ ಮತ್ತು ಯುರೋಪ್ ತಮ್ಮ ಬಾಂಧವ್ಯಗಳ ಸ್ವರ್ಣಕಾಲವನ್ನು ಪ್ರವೇಶಿಸುತ್ತಿವೆ ಎಂದು ಬಣ್ಣಿಸಿದ್ದಾರೆ.**

ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ಟರಿಗೆ ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿ

• **ಕುಮಟಾ:** ಕಳೆದ 30 ವರ್ಷಗಳಿಂದ ಅಸ್ತಿತ್ವದಲ್ಲಿರುವ ಕುಮಟಾದ ಹಿರಿಯ ಸಾಂಸ್ಕೃತಿಕ ಸಂಘಟನೆ- ಸೌರಭ (ಸದಭಿರುಚಿಯ ಸಾಂಸ್ಕೃತಿಕ ಸಂಗಮ) ನೀಡುವ ಮಹತ್ವದ 'ರಾಷ್ಟ್ರೀಯ ಸೌರಭ ಸಮ್ಮಾನ್'ಪ್ರಶಸ್ತಿಯನ್ನು ಪ್ರಕಟ ಮಾಡಿದೆ.



» ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಸಾಧನೆ

ಜಿಲ್ಲೆಯಲ್ಲಿ ಹುಟ್ಟಿ ಬೆಳೆದು ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ವಿಶೇಷ ಸಾಧನೆಯಿಂದ ಮಾನ್ಯರಾದ ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರದ ಸಾಧಕರಿಗೆ ನೀಡುವ ಘನತೆಯ ಪ್ರಶಸ್ತಿ ಇದು. ಈ ವರ್ಷ ಈ ಪ್ರಶಸ್ತಿಗೆ ಭಾರತದ ಪತ್ರಿಕಾ ರಂಗಕ್ಕೆ ಹಾಗೂ ಸಾರಸ್ವತ ಲೋಕಕ್ಕೆ ಮಹತ್ವದ ಕೊಡುಗೆಗಳನ್ನು ಕೊಟ್ಟಿರುವ, ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ಟ ಇವರಿಗೆ ನೀಡುವುದೆಂದು ಸೌರಭದ ವಿಶ್ವಸ್ಥರು ತಿಳಿಸಿದ್ದಾರೆ.

ಕಳೆದ ಬಾರಿ ಈ ಪುರಸ್ಕಾರವನ್ನು ಖ್ಯಾತನಾಮರಾದ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕ ಪಂ.ಹಾಸಣಗಿ ಗಣಪತಿ ಭಟ್ಟ ಅವರಿಗೆ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು. ವಿಶ್ವೇಶ್ವರ ಭಟ್ಟರು ಕುಮಟಾ ತಾಲೂಕಿನ ಮೂರೂರಿನಲ್ಲಿ ಹುಟ್ಟಿ ಬೆಳೆದು, ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದು ಹಲವಾರು ಪತ್ರಿಕೆಗಳಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸಿ, ವಿಶ್ವವಾಣಿ ಪತ್ರಿಕಾ ಬಳಗ ಸೃಷ್ಟಿಸಿ, ಹಳ್ಳಿ ಹಳ್ಳಿಗಳಲ್ಲಿ ನೂರಾರು ಪತ್ರಕರ್ತರನ್ನು ಸೃಷ್ಟಿಸಿದ, ಸಾವಿರಾರು ಬರಹಗಳಿಂದ ಜನಪ್ರಿಯರಾದ ಹಾಗೂ ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದ, ವಿಶ್ವಾದ್ಯಂತ ಅಧ್ಯಯನಕ್ಕಾಗಿಯೇ ಸುತ್ತಿ, ಅನುಭವಗಳ ಮಹತ್ವಪೂರ್ಣ ಕೊಡುಗೆಗಳನ್ನು ಕೊಡುತ್ತಿರುವವರು.

ಈ ವರ್ಷ ವಿಶ್ವೇಶ್ವರ ಭಟ್ಟರಿಗೆ ಈ ಪ್ರಶಸ್ತಿಯನ್ನು ಕೊಡಲು ಸೌರಭ ತೀರ್ಮಾನಿಸಿದೆ. ಏ.26ರಂದು ಕುಮಟಾದಲ್ಲಿ ನಡೆಯುವ ಸೌರಭದ ವಾರ್ಷಿಕೋತ್ಸವ ಸಮಾರಂಭದಲ್ಲಿ ದೇಶದ ಖ್ಯಾತನಾಮರಾದ ಅಭ್ಯಾಗತ ಸಮ್ಮುಖದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು ಎಂದು ಸೌರಭದ ಅಧ್ಯಕ್ಷ ಶ್ರೀಕಾಂತ ಕೆ.ಭಟ್ ಮತ್ತು ಕಾರ್ಯದರ್ಶಿ ಅರುಣ ಹೆಗಡೆಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೆರಿಗೆ ಹೊರೆ ಕಡಿಮೆ ಮಾಡಲಿ: ಅಶೋಕ

• **ಬೆಂಗಳೂರು:** ಸಿಎಂ ಸಿದ್ದರಾಮಯ್ಯ ಆಯವ್ಯಯದಲ್ಲಿ ಇಲ್ಲದ ಆದಾಯವನ್ನು ಸೃಷ್ಟಿಸಿ ಜಿಎಸ್‌ಡಿಪಿಗೆ ಹೋಲಿಕೆ ಮಾಡುವ ಶೇಕಡಾ ಪ್ರಮಾಣವನ್ನು ಕಡಿಮೆ ಇರುವಂತೆ ತೋರಿಸುತ್ತಾರೆ. ಈ ಮೂಲಕ ಆರ್ಥಿಕ ಶಿಸ್ತು ಪಾಲಿಸಿದ್ದೇವೆ ಎಂದು ಸುಳ್ಳಾಗಿ ತೋರಿಸುತ್ತಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.



ವಿಧಾನಸೌಧದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಆಯವ್ಯಯ ಎಂದರೆ ಆದಾಯ ಹೆಚ್ಚಿಸಿ, ಜನರಿಗೆ ಹೊರೆಯಾಗದಂತೆ ಮಾಡಬೇಕು. ಇದನ್ನೇ ಆರ್ಥಿಕ ಪರಿಣತಿ ಎಂದು ಹೇಳುತ್ತಾರೆ. ಸಾಲ ಮಾಡಿ ಸರ್ಕಾರ ನಡೆಸಲು ಇವರೇ ಬೇಕಿಲ್ಲ. ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಲಿದೆ ಎಂದು ಜನರು ಅಂದುಕೊಂಡಿದ್ದು ಸಂಪೂರ್ಣ ಸುಳ್ಳಾಗಿದೆ ಎಂದರು.

ಸಿದ್ದರಾಮಯ್ಯ ಎಂದರೆ ತೆರಿಗೆ ಹೇರುವ ರಾಮಯ್ಯ ಆಗಿದ್ದಾರೆ. ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್ ತೆರಿಗೆಗಳ ಹೊರೆ ಕಡಿಮೆ ಮಾಡಿದ್ದಾರೆ. ಆದರೆ, ಸಿದ್ದರಾಮಯ್ಯ ತಿಂಗಳಿಗೆ ನಾಲ್ಕರಂತೆ ತೆರಿಗೆ ಹಾಕುತ್ತಾರೆ. ಈಗಾಗಲೇ 36 ತೆರಿಗೆಗಳನ್ನು ಜನರ ಮೇಲೆ ಹೇರಿದ್ದಾರೆ. ಚುನಾವಣೆಗೆ ಮುನ್ನ ಜನರ ಮೇಲೆ ಹೊರೆ ಹಾಕದೆ ಗ್ಯಾರಂಟಿ ತರುತ್ತೇವೆ ಎಂದು ಭರವಸೆ ನೀಡಿ, ಈಗ ತೆರಿಗೆಗಳ ಹೊರೆ ಹೇರಿದ್ದಾರೆ. ಕಾಂಗ್ರೆಸ್ ಪ್ರತಿ ವರ್ಷ ಸಾಲ ಪಡೆಯುತ್ತಲೇ ಇದೆ. ಈ ಬಾರಿ 1.15 ಲಕ್ಷ ಕೋಟಿ ರೂ. ಸಾಲ ಪಡೆಯಲಿದ್ದಾರೆ. ಸಾಲವನ್ನು ಜನರ ತಲೆ ಮೇಲೆ ಹೇರುವ ಆಯವ್ಯಯವನ್ನು ಈ ಬಾರಿ ಮಂಡಿಸುತ್ತಾರೆ. ಸಿದ್ದರಾಮಯ್ಯ ಅವರ ಅವಧಿ ಮುಗಿಯುವ ವೇಳೆಗೆ ಒಟ್ಟು ಸಾಲ 8 ಲಕ್ಷ ಕೋಟಿ ರೂ. ಮೀರಲಿದೆ ಎಂದು ವಿವರಿಸಿದರು.

ಕೆಪಿಎಸ್‌ಸಿ ಹಗರಣ ಅಧಿವೇಶನದಲ್ಲಿ ಪ್ರಸ್ತಾಪ

ಕೆಪಿಎಸ್‌ಸಿ ಎಂದರೆ ಕಳ್ಳರ ದಂಧೆಯ ಕೇಂದ್ರ. ಹಣ ಕೊಡುವುದಿಲ್ಲ ಎಂದರೆ ಕಚೇರಿಯ ಒಳಗೂ ಬಿಡುವುದಿಲ್ಲ. ಕುಟುಂಬ, ಜಾತಿ ಎನ್ನುವುದು ಇಲ್ಲಿ ಮಾನದಂಡವೇ ಹೊರತು ಅಂಕ, ಪ್ರತಿಭೆ ಮುಖ್ಯವಲ್ಲ. ಕೆಪಿಎಸ್‌ಸಿ ಮುಚ್ಚಿ ಕೇಂದ್ರದ ಯುಪಿಎಸ್‌ಸಿ ಮಾದರಿಯ ಒಂದು ಸಂಸ್ಥೆಯನ್ನು ನಿರ್ಮಿಸಬೇಕು. ಈ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ಮಾತಾಡುತ್ತೇನೆ. ಜೊತೆಗೆ ಕಾನೂನು ಸುವ್ಯವಸ್ಥೆ, ಪ್ರತಿಭಟನೆಗಳು, ಮೊದಲಾದ ವಿಷಯಗಳ ಬಗ್ಗೆ ಮಾತಾಡುತ್ತೇನೆ ಎಂದರು.

ನಂಜುಂಡಪ್ಪ ವರದಿಯಲ್ಲಿದ್ದ ಹಿಂದುಳಿದ ತಾಲೂಕುಗಳ ಸಂಖ್ಯೆ, ಗೋವಿಂದರಾವ್ ವರದಿಯಲ್ಲಿ ಇನ್ನಷ್ಟು ಅಧಿಕವಾಗಿದೆ. ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಪ್ರತಿ ವರ್ಷ 15,000 ಕೋಟಿ ರೂ. ಮೀಸಲಿಡಬೇಕೆಂದು ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಈ ಆಯವ್ಯಯದಲ್ಲಿ ಸರ್ಕಾರ ಇಷ್ಟೂ ಅನುದಾನವನ್ನು ಮೀಸಲಿಡಬೇಕು ಎಂದು ಆಗ್ರಹಿಸಿದರು.

ಕೇಂದ್ರವನ್ನು ಟೀಕಿಸುವ ಆಯವ್ಯಯ ಇರಲಿದೆ: ಮುಖ್ಯಮಂತ್ರಿ ಹುದ್ದೆಗಾಗಿ ಕಚ್ಚಾಟ ನಡೆಯುತ್ತಿದೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗದಿದ್ದರೆ ರಾಜೀನಾಮೆ ನೀಡುತ್ತೇನೆಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದ್ದಾರೆ. ಇಂತಹ ಸ್ಥಿತಿಯಲ್ಲಿ ಮಂಡಿಸುವ ಬಜೆಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸುವ ಅಂಶಗಳಿರುತ್ತವೆ. ಆದೇಶ ಹೊರಡಿಸಲಾಗಿದೆ, ಅಭಿಪ್ರಾಯ ಸಂಗ್ರಹಣೆ ಎಂಬುದನ್ನೇ ಸಾಧನೆಯಾಗಿ ಈ ಬಜೆಟ್‌ನಲ್ಲಿ ತೋರಿಸುತ್ತಾರೆ ಎಂದರು.

ಸಿಎಂ ಬೃಹತ್ ಚಿತ್ರ ರಚನೆ



• **ಮೈಸೂರು:** ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು 17ನೇ ಬಜೆಟ್ ಮಂಡಿಸುತ್ತಿರುವ ಹಿನ್ನೆಲೆಯಲ್ಲಿ ತವರು ಜಿಲ್ಲೆ ಮೈಸೂರು ನಗರದ ಅರಮನೆ ಬಳಿಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾದ ಮುಂಭಾಗ ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಯುವ ಬ್ರಿಗೇಡ್ ವತಿಯಿಂದ 125 ಅಡಿ ಉದ್ದ ಹಾಗೂ 65 ಅಡಿ ಅಗಲದ ಸುಮಾರು 8000 ಚದುರ ಅಡಿಯಲ್ಲಿ ಸಿದ್ದರಾಮಯ್ಯ ಅವರ ಚಿತ್ರವನ್ನು ಬಿಡಿಸಿ ಅನಾವರಣಗೊಳಿಸಲಾಗಿದೆ.

ಭುವನ್ ಫೌಂಡೇಷನ್‌ಯ ಕಲಾವಿದರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಪ್ರತಿಯ ಸೂಟ್‌ಕೇಸ್ ಹಿಡಿದಿರುವ ಹಾಗೂ ಹಿಂಬದಿಯಲ್ಲಿ ಕರ್ನಾಟಕದ ಮ್ಯಾಪ್ ಇರುವ ಬೃಹತ್ ಚಿತ್ರವನ್ನು ರಚಿಸಲಾಗಿದೆ. ಇದಕ್ಕಾಗಿ ಸತತ 10 ಗಂಟೆಗಳ ಕಾಲ 5 ಮಂದಿ ಕಲಾವಿದರು ಶ್ರಮ ಹಾಕಿದ್ದಾರೆ. ಕಲಾವಿದರಾದ ಪುನೀತ್, ಲಕ್ಷ್ಮೀ. ಸಿ, ರವಿಚಂದ್ರನ್, ಸಂಜಯ್, ಕಂಸಾಳೆ ರವಿ ಅವರು ಈ ಚಿತ್ರಕಲೆಯನ್ನು ರಚಿಸಿದ್ದಾರೆ.

ಈ ಚಿತ್ರಕಲೆಯನ್ನು ಉದ್ಘಾಟಿಸಲು ಡಾ. ಯತೀಂದ್ರ ಸಿದ್ದರಾಮಯ್ಯ ಆಗಮಿಸಬೇಕಾಗಿತ್ತು. ಇವರ ಅನುಪಸ್ಥಿತಿಯಲ್ಲಿ ಡಿಸಿಸಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್ ಮತ್ತು ಪದಾಧಿಕಾರಿಗಳು ಸಾಂಕೇತಿಕವಾಗಿ ಚಿತ್ರವನ್ನು ಅನಾವರಣಗೊಳಿಸಿದರು.

ಕಿರುಸುದ್ದಿ

ಸರ್ಕಾರಕ್ಕೆ ಸಮಗ್ರ ವರದಿ: ಚೌಧರಿ

• **ಮಂಗಳೂರು:** ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳುವ ಮೂಲಕ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಕೆಲಸ ನಡೆಯುತ್ತಿದೆ ಎಂದು ಕರ್ನಾಟಕ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಹೇಳಿದ್ದಾರೆ. ಮಂಗಳೂರಿ ನಲ್ಲಿಂದು ವಿವಿಧ ಸಂಸ್ಥೆಗಳಿಗೆ ಭೇಟಿ ನೀಡಿದ ಅವರು, ಅಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಸಮಸ್ಯೆಗಳನ್ನು ಆಲಿಸಿದರು. ಮಂಗಳೂರಿನ ಬಲ್ಮಠದಲ್ಲಿನ ಸರ್ಕಾರಿ ಮಹಿಳಾ ಪದವಿ ಕಾಲೇಜಿಗೆ ಭೇಟಿ ನೀಡಿ ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಮಹಿಳಾ ದೌರ್ಜನ್ಯ ಹೆಚ್ಚಾಗಲು ಮೊಬೈಲ್‌ಗಳಲ್ಲಿನ ಅಶ್ಲೀಲ ವಿಡಿಯೋಗಳು ಕೂಡ ಕಾರಣವಾಗುತ್ತಿದೆ. ವಿದ್ಯಾರ್ಥಿಗಳು ಮಾದಕ ದ್ರವ್ಯ ಸೇವನೆಯಂತಹ ಚಟಗಳಿಗೆ ಬಲಿಯಾಗುತ್ತಿದ್ದು, ಈ ನಿಟ್ಟಿನಲ್ಲಿ ಸಮಾಜ ಜಾಗೃತವಾಗಬೇಕಿದೆ. ಪ್ರತಿ ಮನೆಯಲ್ಲಿ ತಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದರು.

ಗ್ಯಾರಂಟಿಗೆ ಎಸ್‌ಸಿಪಿ, ಟಿಎಸ್‌ಪಿ ಬಳಕೆಗೆ ಖಂಡನೆ

• **ಚಿಕ್ಕಮಗಳೂರು:** ಈ ಬಾರಿ ರಾಜ್ಯ ಬಜೆಟ್‌ನಲ್ಲಿ ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿಪಿ, ಟಿಎಸ್‌ಪಿ ಅನುದಾನವನ್ನು ಮೀಸಲಿಡಬಾರದು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಮುಖ್ಯಮಂತ್ರಿಗಳನ್ನು ಆಗ್ರಹಿಸಿದ್ದಾರೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 3 ವರ್ಷಗಳಿಂದ ರಾಜ್ಯ ಸರ್ಕಾರ ಹರಿಜನ, ಗಿರಿಜನರ ಕಲ್ಯಾಣಕ್ಕೆ ಮೀಸಲಾದ ಎಸ್‌ಸಿಪಿ, ಟಿಎಸ್‌ಪಿ ಅನುದಾನಕ್ಕೆ ಕನ್ನಾ ಹಾಕಿದೆ. ಈ ವರ್ಷ ಇದೇ ಅನ್ಯಾಯ ಮುಂದುವರಿಯಬಾರದು ಎಂದು ಆಗ್ರಹಿಸಿದರು. ಈ ವಿಚಾರವನ್ನು ನಾವು ಪರಿಷತ್‌ನಲ್ಲಿ ಪ್ರಶ್ನಿಸಿದಾಗ ಸಚಿವ ಮಹದೇವಪ್ಪ ಅವರು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಕಳೆದ 3 ವರ್ಷದಲ್ಲಿ 39 ಸಾವಿರ ಕೋಟಿ ರೂ. ಎಸ್‌ಸಿಪಿ, ಟಿಎಸ್‌ಪಿ ಅನುದಾನವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಈ ವರ್ಷವೂ ಸುಮಾರು 15 ಸಾವಿರ ಕೋಟಿ ರೂ. ಅನುದಾನವನ್ನು ಬಳಸಿಕೊಳ್ಳಲು ಸರ್ಕಾರ ಸಿದ್ಧತೆ ನಡೆಸಿದೆ ಎನ್ನುವ ಮಾಹಿತಿ ಇದೆ. ಹಾಗೆ ಆದಲ್ಲಿ 54 ಸಾವಿರ ಕೋಟಿ ರೂ. ದುರ್ಬಳಕೆ ಆದಂತಾಗುತ್ತದೆ ಎಂದು ದೂರಿದರು. ದಲಿತರು, ಆದಿವಾಸಿಗಳ ಸರ್ವಾಂಗೀಣ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ವಸತಿ ಸೇರಿದಂತೆ ಸ್ವಾವಲಂಬಿ ಯೋಜನೆಗಳಿಗೆ ಎಸ್‌ಸಿಪಿ, ಟಿಎಸ್‌ಪಿ ಅನುದಾನ ಸಂಪೂರ್ಣವಾಗಿ ಬಳಕೆ ಆಗಬೇಕು ಎಂದು ಆಗ್ರಹಿಸಿದರು.

ಸಂಕೇತ್ ಹತ್ಯೆ ಪ್ರಕರಣ ಎನ್‌ಐಎಗೆ ವಹಿಸಿ: ಚನ್ನಬಸಪ್ಪ

• **ಶಿವಮೊಗ್ಗ:** ಸಮೀಪದ ಊರುಗಡೂರಿನ ಬಳಿ ನಡೆದ ವಿದ್ಯಾರ್ಥಿ ಸಂಕೇತ್ ಹತ್ಯೆ ಪ್ರಕರಣವನ್ನು ಎನ್‌ಐಎಗೆ ವಹಿಸಬೇಕು ಎಂದು ಶಾಸಕ ಎಸ್.ಎನ್.ಚನ್ನಬಸಪ್ಪ ಒತ್ತಾಯಿಸಿದ್ದಾರೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಪ್ರಾಪ್ತ ವಯಸ್ಸಿನ ಮುಸ್ಲಿಂ ಸಮುದಾಯದ ಮಕ್ಕಳೇ ಮಾದಕವಸ್ತು, ಗಾಂಜಾ ಸೇವನೆ ಮಾಡಿ, ಹಿಂದೂ ಯುವಕರನ್ನು ಹತ್ಯೆಮಾಡುವ, ಕಲ್ಲು ತೂರಾಟ ಮಾಡುವ ಕೃತ್ಯ ಹೆಚ್ಚಾಗುತ್ತಿದೆ. ಅದಕ್ಕೆ ಉದಾಹರಣೆ ಇತ್ತೀಚೆಗೆ ಸೂಳೆಬೈಲಿನಲ್ಲಿ ನಡೆದ ಸಂಕೇತ್ ಎಂಬ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಯ ಹತ್ಯೆ, ಮುಸ್ಲಿಂ ಅಪ್ರಾಪ್ತರಿಂದಲೇ ಗಾಂಜಾ ಸೇವಿಸಿ ಅನೇಕ ಕಡೆ ಕಲ್ಲು ತೂರಾಟ, ಗಲಭೆ ಆಗಿವೆ. 8-9ನೇ ತರಗತಿಯಲ್ಲಿ ಫೇಲಾದ ಮುಸ್ಲಿಂ ಅಪ್ರಾಪ್ತರೇ ಎಲ್ಲಾ ಕುಕೃತ್ಯಗಳಿಗೆ ಕಾರಣರಾಗುತ್ತಿದ್ದಾರೆ. ಅಪ್ರಾಪ್ತರು ಎನ್ನುವ ಕಾರಣಕ್ಕಾಗಿ ಪೊಲೀಸರು ಇವರ ವಿರುದ್ಧ ಏನನ್ನೂ ಮಾಡಲಾಗುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದ್ದರು.

ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್ವಾಲ್ ಕರೆ

ನಮ್ಮಲ್ಲಿ ವ್ಯಕ್ತಿಗಿಂತ ಪಕ್ಷ ಮುಖ್ಯ

• **ದಾವಣಗೆರೆ:** ನಮ್ಮಲ್ಲಿ ವ್ಯಕ್ತಿ ಮುಖ್ಯವಲ್ಲ, ಪಕ್ಷ ಮುಖ್ಯ. ಬಿಜೆಪಿಯ ಕಮಲದ ಚಿಹ್ನೆ ಸಿಕ್ಕವರು ಅಭ್ಯರ್ಥಿಯಾಗಿದ್ದರೂ ಸರಿ, ಪಕ್ಷದ ಕಾರ್ಯಕರ್ತರು ಅಂತಹವರ ಜತೆ ನಿಂತು ಗೆಲ್ಲಿಸಬೇಕು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್ವಾಲ್ ಕರೆ ನೀಡಿದರು.

ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಗುರುವಾರ ನಡೆದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಹಾಗೂ ವಿಸ್ತಾರಕ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮದು ಕೇಡರ್ ಪಕ್ಷವೇ ಹೊರತು ಲೀಡರ್‌ಗಳ ಪಾರ್ಟಿಯಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ನಮ್ಮ 220 ಬೂತ್‌ಗಳಲ್ಲಿ ಪ್ರತಿ ಬೂತ್‌ಗೆ ಮೂರು ಜನರಂತೆ ಕಾರ್ಯಕರ್ತರಿದ್ದರೂ ಸೋಲನುಭವಿಸಿದ್ದು ದುರಂತ.



ಈ ಬಾರಿ ಕಠಾಯಿತಾಯಿ ದಾವಣಗೆರೆ ದಕ್ಷಿಣವನ್ನು ಗೆಲ್ಲಲೇಬೇಕು. ಯಾರಿಗೆ ಟಿಕೆಟ್ ಸಿಗುತ್ತದೋ ಗೊತ್ತಿಲ್ಲ ಆದರೆ ಟಿಕೆಟ್ ಸಿಕ್ಕವರ ಗೆಲುವು ಗ್ಯಾರಂಟಿ. ಈ ದಿಸೆಯಲ್ಲಿ ಕಮಲದ ಚಿಹ್ನೆ ಹಾಗೂ ನರೇಂದ್ರ ಮೋದಿಗಾಗಿ ಕಾರ್ಯಕರ್ತರು ಕೆಲಸ ಮಾಡಬೇಕು. 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವಂತಾಗಲು ದಾವಣಗೆರೆ ದಕ್ಷಿಣದ ಗೆಲುವು ಮುನ್ನುಡಿ ಬರೆಯಬೇಕು ದಾವಣಗೆರೆ ದಕ್ಷಿಣವನ್ನು ಗೆದ್ದರೆ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಬರುವುದು ನಿಶ್ಚಿತವಾಗುತ್ತದೆ ಎಂದರು.

ಬೂತ್ ಬಿಟ್ಟು ಹೋಗುವಂತಿಲ್ಲ: ಉಪಚುನಾವಣೆಗೆ ಇನ್ನೊಂದು ತಿಂಗಳು ಮಾತ್ರ ಸಮಯ ಇದೆ. ಚುನಾವಣೆ ಮುಗಿಯುವವರೆಗೂ ಕಾರ್ಯಕರ್ತರು ಬೂತ್ ಬಿಟ್ಟು ಹೋಗುವಂತಿಲ್ಲ. ನಾಯಕರು ಕೂಡ ಕೆಲಸ ಮಾಡುವಂತೆ ಕಾರ್ಯಕರ್ತರು ಅವರ ಮೇಲೆ ಕಣ್ಣಿಡಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡದ ನಾಯಕರಿಗೆ ಮುಂದಿನ ಚುನಾವಣೆಯಲ್ಲಿ ಪಾಠ ಕಲಿಸಬೇಕು. ಪಕ್ಷದ ನಾಯಕರು ಕೂಡ 2-3 ಶಕ್ತಿಕೇಂದ್ರಗಳ ಹೊಣೆ ಹೊತ್ತುಕೊಂಡು ಕೆಲಸ ಮಾಡಬೇಕು. ಕಳಪೆ ಪ್ರದರ್ಶನ ನೀಡುವ ನಾಯಕರಿಗೆ ಮುಂದಿನ ಚುನಾವಣೆಯಲ್ಲಿ ಟಿಕೆಟ್ ಇಲ್ಲ ಎಂದು ಅವರು ಎಚ್ಚರಿಸಿದರು.

ಬಿಜೆಪಿ ಸುವರ್ಣ ಯುಗ ಆರಂಭ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಯಾವತ್ತೇ ಚುನಾವಣೆ ನಡೆದರೂ ರಾಜ್ಯದಲ್ಲಿ ಬಿಜೆಪಿ ಸುವರ್ಣ ಯುಗ ಆರಂಭವಾಗುವುದು ಖಚಿತ. ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಉಪ ಚುನಾವಣೆಗಳ ಬಿಜೆಪಿ ಗೆಲುವು ರಾಜ್ಯ ರಾಜಕೀಯದ ದಿಕ್ಕು ಬದಲಾಯಿಸುತ್ತದೆ. ಕಾರ್ಯಕರ್ತರ ಸಂಘಟನೆ ಶಕ್ತಿಯಿಂದ ಈ ಬಾರಿ ದಾವಣಗೆರೆ ದಕ್ಷಿಣದಲ್ಲಿ ಕಮಲ ಅರಳುವುದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಚುನಾವಣೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಸವಾಲಾಗಿ ಸ್ವೀಕರಿಸಿ ಚುನಾವಣೆ ಎದುರಿಸಬೇಕು ಎಂದು ಸಲಹೆ ನೀಡಿದರು.

ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಕರುಣಾಕರ ರೆಡ್ಡಿ, ಮಾಜಿ ಶಾಸಕರಾದ ಮಾಡಾಳು ವಿರುಪಾಕ್ಷಪ್ಪ, ಎಂ. ಬಸವರಾಜ ನಾಯ್ಕ, ಎಸ್.ಎ. ರಾಮಚಂದ್ರ, ವಿಭಾಗ ಪ್ರಭಾರಿ ಮೇಘರಾಜ್, ದಾವಣಗೆರೆ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಶಿವಮೊಗ್ಗ ಜಿಲ್ಲಾಧ್ಯಕ್ಷ ಜಗದೀಶ್, ಮುಖಂಡರಾದ ಲೋಕಿಕೆರೆ ನಾಗರಾಜ್, ಬಿ.ಜಿ. ಅಜಯ್ ಕುಮಾರ್ ಇದ್ದರು.

> ಇಂದು ಜಿಲ್ಲೆಯ ಅನೇಕ ಮುಖಂಡರನ್ನು ಭೇಟಿಯಾಗಿ ಸಮಾಧಾನಪಡಿಸುವ ಪ್ರಯತ್ನ ಮಾಡಿದ್ದೇವೆ. ಆದರೆ ಎಲ್ಲರೂ ಒಂದನ್ನು ಅರ್ಥ ಮಾಡಿಕೊಳ್ಳಬೇಕು. ಪಕ್ಷಕ್ಕಿಂತ ದೊಡ್ಡವರು ಯಾರೂ ಇಲ್ಲ, ನಾನೂ ಅಲ್ಲ.
>
> ■ **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

> ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಬಿ.ಜಿ. ಅಜಯ್‌ಕುಮಾರ್ ಜೊತೆ ಇಂದು ಕಮಲ ಇದೆ, ನಾಳೆ ಇರುತ್ತೋ ಇಲ್ವೋ ಗೊತ್ತಿಲ್ಲ. ಕಮಲದ ಚಿಹ್ನೆ ಪಡೆದವರೇ ನಮ್ಮ ಅಧಿಕೃತ ಅಭ್ಯರ್ಥಿಗಳು. ಯಾರಿಗೇ ಟಿಕೆಟ್ ಸಿಕ್ಕರೂ ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲಬೇಕು.
>
> ■ **ರಾಧಾಮೋಹನದಾಸ್ ಅಗರ್ವಾಲ್,** ರಾಜ್ಯ ಬಿಜೆಪಿ ಉಸ್ತುವಾರಿ

ಧರ್ಮದಲ್ಲಿ ರಾಜಕಾರಣ ಸಲ್ಲ: ಡಿ.ಕೆ. ಶಿವಕುಮಾರ



• **ಚಿಕ್ಕೋಡಿ:** ಧರ್ಮ ಉಳಿಸಿದರೆ, ಅದು ನಮ್ಮನ್ನು ಕಾಪಾಡುತ್ತದೆ. ಅದು ನಮಗೆ ಶಕ್ತಿ ತುಂಬುತ್ತದೆ. ಮನುಷ್ಯರಿಗೆ ದೇವರು ಬೇಕು. ಇಲ್ಲವಾದಲ್ಲಿ ಬದುಕಿಗೆ ಅರ್ಥಕೊಡಲು ಸಾಧ್ಯವಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ ಹೇಳಿದರು.

ತಾಲೂಕಿನ ಯಡೂರ ಗ್ರಾಮದಲ್ಲಿ ವೀರಭದ್ರ ದೇವಸ್ಥಾನ ಹಾಗೂ ಕಾಡಸಿದ್ಧೇಶ್ವರ ಮಠದ ವತಿಯಿಂದ ಗುರುವಾರ ಹಮ್ಮಿಕೊಂಡ ವೀರಶೈವ ಲಿಂಗಾಯತ ಧರ್ಮಸ್ಥಾನ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿ, ದೇವರು ವರವನ್ನೂ ಕೊಡುವುದಿಲ್ಲ, ಶಾಪವನ್ನೂ ಕೊಡುವುದಿಲ್ಲ. ಅವಕಾಶ ವನ್ನು ಮಾತ್ರ ಕೊಡುತ್ತಾನೆ. ನಾವು ಎಷ್ಟು ದಿನ ಇರುತ್ತೇವೆ ಅನ್ನುವುದು ಮುಖ್ಯವಲ್ಲ, ಹೇಗೆ ಇರುತ್ತೇವೆ ಎನ್ನುವುದು ಮುಖ್ಯವಾಗುತ್ತದೆ. ರಾಜಕಾರಣದಲ್ಲಿ ಧರ್ಮ ಇರಬೇಕು. ಆದರೆ, ಧರ್ಮದಲ್ಲಿ ರಾಜಕಾರಣ ಇರಬಾರದು ಎಂದರು.

ಚಿಕ್ಕೋಡಿ ಭಾಗದಲ್ಲಿ ನೀರಾವರಿ ಕ್ಷೇತ್ರದ ಅಭಿವೃದ್ಧಿಗೆ ಸದಾ ಬದ್ಧನಾಗಿದ್ದೇನೆ. ಕ್ಷೇತ್ರದಲ್ಲಿ ಶಾಸಕ ಗಣೇಶ ಹುಕ್ಕೇರಿ ಅವರು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದಾರೆ. ನೊಣ ನನಗೆ ಹೆಮ್ಮೆ ಎನಿಸಿದೆ. ಜನರಿಗೆ ಅನ್ನ ನೀಡುವ ರೈತರ ಮೇಲೆ ಸದಾ ಅಭಿಮಾನ ಇರಲಿ. ನಾವೆಲ್ಲರೂ ಅವರ ಋಣದಲ್ಲಿದ್ದೇವೆ ಎಂದು ಹೇಳಿದರು.

ಉಜ್ಜಯಿನಿ ಪೀಠದ ಸಿದ್ದಲಿಂಗ ಶಿವಾಚಾರ್ಯ ದೇಶಿಕೇಂದ್ರ ಸ್ವಾಮೀಜಿ, ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಕಾಶಿ ಪೀಠದ ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಇದ್ದರು.

> ಧರ್ಮ ಗುರುಗಳನ್ನು ಕಂಡರೆ ಡಿ.ಕೆ. ಶಿವಕುಮಾರ ತಮ್ಮನ್ನೇ ತಾವು ಸಮರ್ಪಿಸಿಕೊಳ್ಳುತ್ತಾರೆ. ಹಾಗಾಗಿ ಅವರನ್ನು ಕಂಡರೆ ನಾನು ವೈಯಕ್ತಿಕವಾಗಿ ಇಷ್ಟಪಡುತ್ತೇನೆ. ಡಿ.ಕೆ.ಶಿವಕುಮಾರ ಅವರು ಮುಂದಿನ ಮುಖ್ಯಮಂತ್ರಿಯಾಗುತ್ತಾರೆ.
>
> ■ **ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ,** ಹುಕ್ಕೇರಿ ಹಿರೇಮಠ

ಇಂದು ಗುತ್ತಿಗೆದಾರರ ಸಂಘದಿಂದ ಪ್ರತಿಭಟನೆ

• **ಬೆಂಗಳೂರು:** ಸರ್ಕಾರದ ವಿವಿಧ ಇಲಾಖೆಗಳಲ್ಲಿ ಬಾಕಿ ಇರುವ ಸುಮಾರು 37 ಸಾವಿರ ಕೋಟಿ ಮೊತ್ತದ ಬಿಲ್ ಪಾವತಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ರಾಜ್ಯದ ಎಲ್ಲ ಭಾಗಗಳಲ್ಲಿ ಮಾರ್ಚ್ 6ರಂದು ಕಾಮಗಾರಿಗಳನ್ನು ನಿಲ್ಲಿಸಿ ರಾಜ್ಯ ಗುತ್ತಿಗೆದಾರರ ಸಂಘ ಹೋರಾಟ ನಡೆಸಲಿದೆ. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ದೊಡ್ಡಮಟ್ಟದ ಹೋರಾಟ ನಡೆಯಲಿದೆ.

ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಪ್ರತಿಭಟನೆಯಲ್ಲಿ ರಾಜ್ಯದ ಎಲ್ಲ ಜಿಲ್ಲೆ ಗಳಿಂದಲೂ ಸುಮಾರು 15 ರಿಂದ 20 ಸಾವಿರ ಗುತ್ತಿಗೆದಾರರು ಭಾಗವಹಿಸಲಿದ್ದಾರೆ ಎಂದು ರಾಜ್ಯ ಗುತ್ತಿಗೆದಾರರ ಸಂಘ ತಿಳಿಸಿದೆ.ಮುಖ್ಯಮಂತ್ರಿ ಸಿದ್ದರಾಮಯ್ಯ ರವರೊಂದಿಗೆ ಸಂಬಂಧಿಸಿದ ಇಲಾಖೆಗಳ ಸಚಿವರನ್ನು ಭೇಟಿ ಮಾಡಿ ವಿವರವಾಗಿ ಎರಡು ವರ್ಷದಿಂದ ಮನವಿ ಮಾಡುತ್ತಾ ಬಂದಿದ್ದೇವೆ. ಆದರೆ, ನಮ್ಮ ಬೇಡಿಕೆಗಳು ಈವರೆಗೆ ಈಡೇರಿಲ್ಲ. ಹೀಗಾಗಿ ನಾವು ಮುಷ್ಕರ ನಡೆಸಲು ನಿರ್ಧರಿಸಿದ್ದೇವೆ ಎಂದು ಸಂಘ ತಿಳಿಸಿದೆ. ರಾಜ್ಯ ಗುತ್ತಿಗೆದಾರರ ಸಂಘ ಹೋರಾಟಕ್ಕೆ ಗ್ರೇಟರ್ ಬೆಂಗಳೂರು ನಗರ ಪಾಲಿಕೆಗಳ ಗುತ್ತಿಗೆದಾರರ ಸಂಘ ಬೆಂಬಲ ನೀಡುವುದಾಗಿ ತಿಳಿಸಿದೆ.

ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ

ಗುತ್ತಿಗೆದಾರ ಹೋರಾಟದ ನಿರ್ಧಾರದ ನಡುವೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ 2025-26ನೇ ಸಾಲಿನ ವಿಶೇಷ ಮೂಲಸೌಕರ್ಯ ಅಭಿವೃದ್ಧಿಗೆ ನಿಗದಿಪಡಿಸಿದ್ದ 3,000 ಕೋಟಿ ರೂ.ಗಳ ಅನುದಾನದಲ್ಲಿ ನಾಲ್ಕನೇ ಕಂತಾಗಿ 750 ಕೋಟಿ ರೂ.ಬಿಡುಗಡೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.ರಾಜ್ಯ ಸರ್ಕಾರವು 2025-26ನೇ ಸಾಲಿನ ವಿಶೇಷ ಮೂಲಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆ ಅಡಿಯಲ್ಲಿ ಜಿಬಿಎಗೆ ಒಟ್ಟು 23,000 ಕೋಟಿ ರೂ. ಅನುದಾನವನ್ನು ನಿಗದಿ ಮಾಡಿತ್ತು. ಇದೀಗ ನಾಲ್ಕನೇ ಕಂತಿನಲ್ಲಿ 750 ಕೋಟಿ ರೂ.ಬಿಡುಗಡೆ ಮಾಡಲಾಗಿದ್ದು, ಸರ್ಕಾರ ಅನುಮೋದಿಸಿರುವ ಕ್ರಿಯಾ ಯೋಜನೆ ಕಾಮಗಾರಿಗಳಿಗೆ ಮಾತ್ರ ಈ ಹಣವನ್ನು ಬಳಕೆ ಮಾಡುವಂತೆ ಸೂಚಿಸಲಾಗಿದೆ. ಹೊಸ ಕಾಮಗಾರಿಗಳಿಗೆ ಈ ಅನುದಾನವನ್ನು ಬಳಸಬಾರದು ಎಂದು ಸ್ಪಷ್ಟನೆ ನೀಡಲಾಗಿದೆ. ಆದರೆ ಈಗ ಬಿಡುಗಡೆಯಾಗಿರುವುದು ಸರ್ಕಾರದ ತ್ರೈಮಾಸಿಕ ಕಂತಿನ ಅನುದಾನವೇ ಹೊರತು, ಜಿಬಿಎ ವ್ಯಾಪ್ತಿಯ ಗುತ್ತಿಗೆದಾರರ ಬಾಕಿ ಹಣವಲ್ಲ.ಪ್ರಮುಖವಾಗಿ 2020 ರಿಂದ ಬಾಕಿ ಇರುವ ಶೇ. 10 ರಷ್ಟು ಹಣವನ್ನು ಬಿಡುಗಡೆ ಮಾಡುವುದು ಈ ಹೋರಾಟದ ಪ್ರಮುಖ ಉದ್ದೇಶವಾಗಿದೆ ಜಿಬಿಎ ಗುತ್ತಿಗೆದಾರರ ಸಂಘ ತಿಳಿಸಿದೆ.

> ಈಗ ಬಿಡುಗಡೆಯಾಗಿರುವುದು ಸರ್ಕಾರದ ತ್ರೈಮಾಸಿಕ ಕಂತಿನ ಅನುದಾನವೇ ಹೊರತು, ಜಿಬಿಎ ವ್ಯಾಪ್ತಿಯ ಗುತ್ತಿಗೆದಾರರ ಬಾಕಿ ಹಣವಲ್ಲ.ಪ್ರಮುಖವಾಗಿ 2020 ರಿಂದ ಬಾಕಿ ಇರುವ ಶೇ. 10 ರಷ್ಟು ಹಣವನ್ನು ಬಿಡುಗಡೆ ಮಾಡುವುದು ಈ ಹೋರಾಟದ ಪ್ರಮುಖ ಉದ್ದೇಶವಾಗಿದೆ.
>
> ■ **ಎನ್.ಚೇತನ್‌ಕುಮಾರ್,** ಜಿಬಿಎ ಗುತ್ತಿಗೆದಾರ ಸಂಘದ ಪ್ರ.ಕಾರ್ಯದರ್ಶಿ

ಸರ್ಕಾರದಿಂದ ದಲಿತರಿಗೆ ಮೋಸ: ಬೆಲ್ಲದ್

• **ಬೆಂಗಳೂರು:** ಎಸ್‌ಸಿಎಸ್‌ಪಿ-ಟಿಎಸ್‌ಪಿ ಹಣವನ್ನು ದಲಿತರಿಗೆ ಬಳಸದೆ ಗ್ಯಾರಂಟಿಗಳಿಗೆ ವಿನಿಯೋಗಿಸಿ ಸಿದ್ದರಾಮಯ್ಯ ಅವರ ಸರ್ಕಾರ ದಲಿತರಿಗೆ ಮೋಸ ಮಾಡಿದೆ. ಸರ್ಕಾರ ಹಗಲು ದರೋಡೆ ಮಾಡುತ್ತಿದೆ ಎಂದು ಎಂದು ವಿಧಾನಸಭೆಯ ಪ್ರತಿಪಕ್ಷದ ಉಪ ನಾಯಕ ಅರವಿಂದ ಬೆಲ್ಲದ್ ಆರೋಪಿಸಿದರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ದಲಿತರು ಮತ್ತು ಹಿಂದುಳಿದವರ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಅವರ ಸರ್ಕಾರ ದಲಿತರಿಗೆ ಏನು ಮಾಡದೇ ಹಗಲು ದರೋಡೆ ಮಾಡುತ್ತಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರ 3 ವರ್ಷಗಳಿಂದ ಎಸ್‌ಸಿಎಸ್‌ಪಿ-ಟಿಎಸ್‌ಪಿಯಿಂದ 38,859ಕೋಟಿ ರೂ.ಗಳನ್ನು ಗ್ಯಾರಂಟಿಗಳಿಗೆ ಬಳಸಿದೆ ಎಂದು ದೂರಿದರು.

ಈ ಬಾರಿಯ ಆಯವ್ಯಯದಲ್ಲಿ ದಲಿತರ ಹಣ ಬಳಸಿರುವುದನ್ನು ವಾಪಸ್ ಕೊಡಬೇಕು. ಇದರೊಂದಿಗೆ ದಲಿತರಿಗೆ ಹೊಸದಾಗಿಯೂ ಹಣ ಕೊಡಬೇಕು. ಎಸ್‌ಸಿ-ಎಸ್‌ಟಿ ನಿಗಮಗಳಿಗೆ ಆಯವ್ಯಯದಲ್ಲಿ ಕನಿಷ್ಠ 1 ಸಾವಿರ ಕೋಟಿ ನೀಡಬೇಕು. 7ಸಿ ಮೂಲಕ ದುರ್ಬಳಕೆಯಾಗು ವುದನ್ನು ತಡೆಯಲು ಅದನ್ನು ತೆಗೆಯಬೇಕು. ದಲಿತರ ಹಣವನ್ನು ಗ್ಯಾರಂಟಿಗಳಿಗೆ ಬಳಸುವುದಿಲ್ಲ ಎಂಬ ವಾಗ್ದಾನ ಮಾಡಲಿ ಎಂದು ಆಗ್ರಹಿಸಿದರು. ದಲಿತರ ಜನಸಂಖ್ಯೆ ಪ್ರಕಾರ ಇಲಾಖೆಯಿಂದ ವೆಚ್ಚ ಮಾಡಬೇಕು. ದಲಿತರ, ವನವಾಸಿಗಳ ಸಬಲೀಕರಣಕ್ಕೆ ಆದ್ಯತೆ ನೀಡಬೇಕು ಎಂಬ ನಿಯಮವಿದೆ. ಅವರಿಗಾಗಿ ಕುಡಿಯುವ ನೀರು, ಆರೋಗ್ಯ, ಶಿಕ್ಷಣ, ಯೋಜನೆಗಳಿಗೆ ಉಪಯೋಗ ಮಾಡಬೇಕು. ಆದರೆ ಇವರು ಗ್ಯಾರಂಟಿಗೆ ಹಣ ಬಳಸಿದ್ದಾರೆ. ದಲಿತರಿಗೆ ಮಾತ್ರ ಬಳಕೆಯಾಗಬೇಕಾದ ಹಣ ಸವರ್ಣೀಯರಿಗೆ, ಅಲ್ಪಸಂಖ್ಯಾತರಿಗೆ ಬಳಕೆಯಾಗುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಕಳೆದ ಬಾರಿಯ ಆಯವ್ಯಯದಲ್ಲೂ ಎಸ್‌ಸಿಎಸ್‌ಪಿ-ಟಿಎಸ್‌ಪಿಗೆ 42,018 ಕೋಟಿ ರೂ. ಇಡಲಾಗಿತ್ತು. ಆದರೆ, ಅದನ್ನೂ ಸರಿಯಾಗಿ ಬಳಸಲಿಲ್ಲ. ಹಣ ದುರುಪಯೋಗ ಮಾಡಿದರೆ ಶಿಕ್ಷೆ ಕೊಡಬೇಕು ಎಂದು ಕಾನೂನು ಇದೆ. ಹಾಗಾದರೆ, ಸಿದ್ದರಾಮಯ್ಯ ಅವರೇ ನಿಮ್ಮನ್ನು ಜೈಲಿಗೆ ಹಾಕಬೇಕಾ, ಸಚಿವರನ್ನು ಜೈಲಿಗೆ ಹಾಕಬೇಕಾ? ಇದಕ್ಕೆ ಉತ್ತರ ಕೊಡಿ ಎಂದರು.

ನಿಗಮಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ?

ಸರ್ಕಾರದಲ್ಲಿ ದಲಿತರಿಗೆ ಸಂಬಂಧಿಸಿದ ಹಲವು ನಿಗಮಗಳಿವೆ. ಅಂಬೇಡ್ಕರ್ ನಿಗಮ, ಆದಿ ಜಾಂಬವ ನಿಗಮ. ವಾಲ್ಮೀಕಿ ನಿಗಮ, ತಾಂಡಾ ಅಭಿವೃದ್ಧಿ ನಿಗಮ, ಲಿಡ್ಕರ್, ಸಫಾಯಿ, ಅರೆ ಅಲೆಮಾರಿ ಹೀಗೆ ಬಹಳಷ್ಟಿವೆ. ಇವಕ್ಕೆಲ್ಲ ಎಷ್ಟು ಹಣ ಕೊಟ್ಟಿದ್ದೀರಿ ಎಂಬುದನ್ನು ಹೇಳಿ. ಕೊಡದೇ ಇದ್ದರೂ ದಲಿತ ಶಾಸಕರು ಏಕೆ ಸುಮ್ಮನೆ ಇದ್ದಾರೆ ಎಂದು ಹೇಳಿದರು.


ಇಂದು ದಂತ ವೈದ್ಯರ ದಿನಾಚರಣೆ: ಶುಭ್ರ ದಂತಪಂಕ್ತಿ ನೀಡುವ ವೈದ್ಯರಿಗೆ ವಂದನೆ ಹೇಳೋಣ

1790ರ ಮಾ. 6 ರಂದು ಅಮೇರಿಕಾದ ಖ್ಯಾತ ದಂತ ವೈದ್ಯ ಜಾನ್ ಗ್ರೀನ್‌ವುಡ್ ಎಂಬಾತ ಪ್ರಪ್ರಥಮ ಬಾರಿಗೆ ಕಾಲಿನಿಂದ ಚಾಲಿತವಾದ ದಂತ ಕುರ್ಚಿಯನ್ನು ಸಂಶೋಧಿಸಿದರು. ಇದರ ನೆನಪಿಗಾಗಿ ಮಾ. 6 ನ್ನು ವಿಶ್ವ ದಂತ ವೈದ್ಯರ ದಿನ ಎಂದು ಆಚರಿಸುತ್ತಾರೆ. ಭಾರತ ದೇಶದಲ್ಲಿ ಡಾ|| ಶಫಿಯುದ್ದೀನ್ ಅಹ್ಮದ್ ಅವರನ್ನು ದಂತ ವೈದ್ಯ ಶಾಸ್ತ್ರದ ಪಿತಾಮಹ ಎಂದೂ, ವಿಶ್ವದಲ್ಲಿ ಡಾ|| ಪಿಯರಿ ಫೌಚಾರ್ಡ್ ಅವರನ್ನು ಆಧುನಿಕ ದಂತ ವೈದ್ಯಕೀಯ ಶಾಸ್ತ್ರದ ಪಿತಾಮಹ ಎಂದೂ ಕರೆಯುತ್ತಾರೆ.

ದಂತ ವೈದ್ಯಕೀಯ ಕ್ಷೇತ್ರದಲ್ಲೀಗ ಈಗ ಹೊಸ ಹೊಸ ಆವಿಷ್ಕಾರ ಬಂದಿದೆ. ತಂತ್ರಜ್ಞಾನ ಮತ್ತು ವೈದ್ಯ ವಿಜ್ಞಾನದಲ್ಲಿ ಅಪಾರ ಬದಲಾವಣೆ ಉಂಟಾಗಿದೆ. ವಿಶಾಲವಾದ ಜಾಗ, ಮೆತ್ತನೆಯ ದೇಹದಾಕೃತಿಯ ದಂತ ಕುರ್ಚಿ, ಹವಾನಿಯಂತ್ರಿಕ ವಾತಾವರಣ, ಕಿವಿಗೊಪ್ಪುವ ಲಘು ಸಂಗೀತ...ಹಾಗೇ ಬಹಳಷ್ಟು ಬದಲಾವಣೆ ಉಂಟಾಗಿದೆ. ದಂತ ವೈದ್ಯಕೀಯ ಚಿಕಿತ್ಸೆ ಈಗ ಬರೀ ನೋವು ನಿವಾರಕ ವ್ಯವಸ್ಥೆಗಿಂತಲೂ ಸೌಂದರ್ಯವರ್ಧಕ ಚಿಕಿತ್ಸೆಯಾಗಿ ಬದಲಾಗಿರುವುದು ಸತ್ಯ. ಇಷ್ಟೆಲ್ಲಾ ಬದಲವಣೆಯಾಗಿದ್ದರೂ ಜನರು ಮಾತ್ರ ದಂತ ವೈದ್ಯರ ಬಗ್ಗೆ ಇನ್ನೂ ತಪ್ಪು ಕಲ್ಪನೆಗಳನ್ನು ಹೊಂದಿರುವುದು ಸೋಜಿಗವೇ ಸರಿ. ಅದೇನೋ ಇರಲಿ ನಿಮ್ಮ ನೋವನ್ನು ಶಮನ ಮಾಡುವ ನಿಮ್ಮನ್ನು ಸದಾ ನಗಿಸಲು ಮತ್ತು ಹಸನ್ಮುಖಿಯಾಗಿ ಇರುವಂತೆ ಶುಭ್ರ ದಂತಪಂಕ್ತಿಗಳಿಗಾಗಿ ಸದಾಕಾಲ ಶ್ರಮ ಪಡುವ ದಂತ ವೈದ್ಯರನ್ನು ಸ್ಮರಿಸುವ ಮತ್ತು ಒಂದು ಪುಟ್ಟ ಥ್ಯಾಂಕ್ಸ್ ಹೇಳುವ ದಿನ ಮಾ. 6 ಎಂಬುದಂತೂ ನಿಜ.

ಯಾಕಾಗಿ ದಂತ ವೈದ್ಯರ ದಿನ ಆಚರಿಸಲಾಗುತ್ತದೆ?

ಬಾಯಿ ಆರೋಗ್ಯದ ಬಗ್ಗೆ ಹೆಚ್ಚಿನ ಅರಿವು ಜಾಗೃತಿ ಮೂಡಿಸುವ ಉದ್ದೇಶದಿಂದ ಆಚರಣೆ ಮಾಡಲಾಗುತ್ತಿದೆ ●ದಂತ ಸಂಬಂಧ ರೋಗಗಳಾದ ದಂತ ಕ್ಷಯ, ದಂತ ಕುಳಿ, ದಂತ ಸವೆತ, ದಂತ ಅತಿ ಸಂವೇದನೆ ಮುಂತಾದ ರೋಗಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸದುದ್ದೇಶದಿಂದ ಈ ಆಚರಣೆ ಮಾಡಲಾಗುತ್ತದೆ ●ದಂತ ಆರೋಗ್ಯ ಮತ್ತು ಬಾಯಿ ಆರೋಗ್ಯಕ್ಕೆ ಪೂರಕವಾದ ಹವ್ಯಾಸಗಳ ಬಗ್ಗೆ ಜನರಲ್ಲಿ ಒಲವು ಮೂಡಿಸುವ ಉದ್ದೇಶದಿಂದಾಗಿ ಈ ಆಚರಣೆ ಮಾಡಲಾಗುತ್ತಿದೆ ●ಮಕ್ಕಳಲ್ಲಿ ದಂತ ಸಂಬಂಧಿ ರೋಗಗಳನ್ನು ತಡೆಯುವ ಬಗ್ಗೆ ಮತ್ತು ಮಕ್ಕಳಲ್ಲಿ ದಂತ ರಕ್ಷಣೆಯ ಬಗ್ಗೆ ಒಲವು ಮೂಡಿಸುವ ಉದ್ದೇಶದಿಂದ ●ಮುಖ ಮನಸ್ಸಿನ ಕನ್ನಡಿ ಇದ್ದಂತೆ. ಸುಂದರವಾದ ದಂತ ಪಂಕ್ತಿಗಳಿಂದ ಕೂಡಿದ ನಗು ಮುಖದ ಅಂದವನ್ನು ಹೆಚ್ಚಿಸುತ್ತದೆ. ಜನರ ಹಲ್ಲನ್ನು ಸರಿಪಡಿಸಿ ನಗುವಿನ ಮಾದಕತೆ ಹೆಚ್ಚಿಸುವಂತೆ ಪ್ರೇರೇಪಿಸಿ ರೋಗಿಗಳ ಆತ್ಮವಿಶ್ವಾಸವನ್ನು ವೃದ್ಧಿಸುವ ಸದುದ್ದೇಶದಿಂದ ಈ ಆಚರಣೆ ಮಾಡಲಾಗುತ್ತಿದೆ ●ದಂತ ಆರೋಗ್ಯವನ್ನು ವೃದ್ಧಿಸುವ ಹವ್ಯಾಸಗಳಾದ ದಂತದಾರ ಬಳಕೆ, ದಂತ ಕುಂಚಗಳ ಸೂಕ್ತ ಬಳಕೆ, ದಂತ ಚೂರ್ಣಗಳ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ಮಾರ್ಗದರ್ಶನ ನೀಡುವ ಮೂಲ ಉದ್ದೇಶದೊಂದಿಗೆ ದಂತ ವೈದ್ಯರ ದಿನ ಆಚರಿಸಲಾಗುತ್ತಿದೆ.



ದಂತ ವೈದ್ಯರ ದಿನದ ಸಂದೇಶ

★ದಿನಕ್ಕೆರಡು ಬಾರಿ ಕನಿಷ್ಠ ಮೂರು ನಿಮಿಷಗಳ ಕಾಲ ಹಲ್ಲುಜ್ಜಬೇಕು ★ದಿನಕ್ಕೊಮ್ಮೆಯಾದರೂ ದಂತದಾರ ಅಥವಾ ದಂತ ಬಳ್ಳಿ ಬಳಸಿ ಹಲ್ಲುಗಳ ಸಂದುಗಳನ್ನು ಶುಚಿಗೊಳಿಸಿ★ಕನಿಷ್ಠ ಆರು ತಿಂಗಳಿಗೊಮ್ಮೆ ದಂತ ವೈದ್ಯರನ್ನು ಭೇಟಿ ಮಾಡಬೇಕು. ಹಲ್ಲು ನೋವು ಬಂದಾಗ ಮಾತ್ರ ದಂತ ವೈದ್ಯರ ಭೇಟಿ ಮಾಡುವುದು ಸರಿಯಾದ ಕ್ರಮವಲ್ಲ ●ನೀವು ಸೇವಿಸುವ ಆಹಾರದ ಮೇಲೆ ನಿಗಾ ಇರಲಿ. ಸಮತೋಲಿತ ಮತ್ತು ಹಲ್ಲಿನ ಆರೋಗ್ಯಕ್ಕೆ ಪೂರಕವಾದ ನಾರುಯುಕ್ತ ಹಣ್ಣು ಹಂಪಲು, ಹಸಿ ತರಕಾರಿಯುಕ್ತ ಆಹಾರ ಸೇವಿಸಿ. ಇಂಗಾಲಯುಕ್ತ ಕೃತಕ ಪೇಯಗಳನ್ನು ತ್ಯಜಿಸಬೇಕು. ತಾಜಾ ಹಣ್ಣಿನ ರಸ, ಕಬ್ಬಿನ ಹಾಲು ,ಎಳನೀರು ಮುಂತಾದ ನೈಸರ್ಗಿಕ ಪೇಯಗಳನ್ನು ಸೇವಿಸಬೇಕು ●ಎರಡೂ ಊಟಗಳ ನಡುವೆ ಸಿಹಿ ಪದಾರ್ಥ ಮತ್ತು ಅಂಟು ಪದಾರ್ಥಗಳನ್ನು ಸೇವಿಸುವುದನ್ನು ಕಡಿಮೆ ಮಾಡಿ. ಅನಿವಾರ್ಯವಾದಲ್ಲಿ ಸೇವಿಸಿದ ಬಳಿಕ ಚೆನ್ನಾಗಿ ಬಾಯಿ ಮುಕ್ಕಳಿಸಬೇಕು ●ಪ್ರತಿ ನಿತ್ಯ ರಾತ್ರಿ ಮಲಗುವ ಮುನ್ನ ಮೌತ್‌ವಾಶ್ ಬಳಸುವ ಹವ್ಯಾಸ ಮಾಡಿಕೊಳ್ಳಿ. ಕನಿಷ್ಠ ಪಕ್ಷ ಬಿಸಿ ನೀರಿಗೆ ಒಂದು ಚಿಟಿಕೆ ಉಪ್ಪುಹಾಕಿ. ಆ ದ್ರಾವಣದಿಂದ ಬಾಯಿ ಶುಚಿಗೊಳಿಸಬೇಕು ●ಪ್ರತಿ ವರ್ಷದಲ್ಲಿ ಒಮ್ಮೆಯಾದರೂ ದಂತ ವೈದ್ಯರ ಬಳಿ ಹಲ್ಲು ಶುಚಿಗೊಳಿಸಬೇಕು. ಇದರಿಂದ ಬಾಯಿವಾಸನೆ, ವಸಡಿನ ಉರಿಯೂತ ಮತ್ತು ವಸಡಿನಲ್ಲಿ ರಕ್ತ ಒಸರುವುದು ನಿಯಂತ್ರಣಕ್ಕೆ ಬರುತ್ತದೆ ★ಹಲ್ಲುನೋವು ಬಂದಾಗ ಸ್ವಯಂ ಔಷಧಿಗಾರಿಕೆ ಮಾಡಿಕೊಂಡು ನೋವು ನಿವಾರಕ ಔಷಧ ತೆಗೆದುಕೊಳ್ಳುವುದು ಬಹಳ ಅಪಾಯಕಾರಿ. ದಂತ ವೈದ್ಯರ ಸಲಹೆ ಅತೀ ಅಗತ್ಯ.

ಒಬ್ಬ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಹಲ್ಲಿನ ಆರೋಗ್ಯವೂ ಅತೀ ಅವಶ್ಯಕ. ಬಾಯಿ ಎನ್ನುವುದು ನಮ್ಮ ದೇಹದ ಪ್ರವೇಶ ದ್ವಾರವಿದ್ದಂತೆ. ಜೀರ್ಣಾಂಗ ವ್ಯೂಹದ ಹೊಸ್ತಿಲೇ ನಮ್ಮ ಬಾಯಿ ಆಗಿರುತ್ತದೆ. ಹಲ್ಲಿನ ಆರೋಗ್ಯ ಚೆನ್ನಾಗಿದ್ದಲ್ಲಿ ಮಾತ್ರ ಮನುಷ್ಯನ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಪರಿಪೂರ್ಣವಾಗಲು ಸಾಧ್ಯವಾಗುತ್ತದೆ. ಈ ಕಾರಣದಿಂದ ಹಲ್ಲುಗಳ ಆರೋಗ್ಯ ನಿರ್ಲಕ್ಷಿಸಿದರೆ, ನಿಮ್ಮ ಆರೋಗ್ಯದ ಮೇಲೆ ಋಣಾತ್ಮಕ ಪರಿಣಾಮ ಉಂಟಾಗುವುದು ಸಹಜ

ಬದಲಾದ ದಂತ ಚಿಕಿತ್ಸೆಯ ಸ್ವರೂಪ

ಹಿಂದಿನ ಕಾಲದಲ್ಲಿ ದಂತ ವೈದ್ಯರು ಎಂದರೆ ಕೇವಲ ಹಲ್ಲು ತೆಗೆಯಲು ಮಾತ್ರ ಸೀಮಿತವಾಗಿದ್ದರು. ಆದರೆ ಈಗ ವಿಜ್ಞಾನ ತಂತ್ರಜ್ಞಾನ ಬೆಳೆದಂತೆ ಹೊಸ ಹೊಸ ಆವಿಷ್ಕಾರಗಳು ಬಂದಿದೆ. ಮೂರನೇ ದವಡೆ ಹಲ್ಲಿನ ಒಳಭಾಗ ದಂತ ಮಜ್ಜೆಯ ಒಳಗಿನ ಆಕಾರ ಕೋಶ ಜೀವಕೋಶಗಳಿಂದ ಹೊಸತಾದ ಹಲ್ಲನ್ನು ಸೃಷ್ಟಿ ಮಾಡುವಲ್ಲಿಯವರೆಗೆ ದಂತ ವೈದ್ಯ ವಿಜ್ಞಾನ ಬೆಳೆದಿದೆ. ಈಗ ದಂತ ಚಿಕಿತ್ಸೆ ಕೇವಲ ರೋಗ ಚಿಕಿತ್ಸೆ ಪದ್ಧತಿಯಾಗಿ ಉಳಿಯದೆ, ರೋಗ ಬರದಂತೆ ತಡೆಯುವ ಪ್ರಕ್ರಿಯೆಗೆ ಹೆಚ್ಚು ಒತ್ತು ನೀಡಲಾಗಿದೆ. ನಿಯಮಿತವಾದ ದಂತ ತಪಾಸಣೆ, ದಂತ ಶುಚಿಗೊಳಿಸುವಿಕೆ, ಹಲ್ಲು ತುಂಬಿಸುವಿಕೆಯಿಂದ ಹಲ್ಲು ಹುಳುಕಾಗದಂತೆ ಮಾಡುವ ಪ್ರಕ್ರಿಯೆಗೆ ಹೆಚ್ಚು ಒತ್ತು ನೀಡಲಾಗಿದೆ. ಜೊತೆಗೆ ಸೌಂದರ್ಯ ವರ್ಧಕ ಚಿಕಿತ್ಸೆಯಾಗಿ ಬದಲಾಗಿದೆ. ಹಲ್ಲಿನ ಅಂದವನ್ನು ವಿನೀರ್, ಕಿರೀಟ(ಕ್ರೌನ್) ಮತ್ತು ಹೊಸತಾದ ಸಿಮೆಂಟ್‌ಗಳಿಂದ ತುಂಬಿಸಿ, ವ್ಯಕ್ತಿಯ ನಗುವಿನ ವಿನ್ಯಾಸವನ್ನೇ ಬದಲಿಸಿ, ಆತನ ಜೀವನದ ದೃಷ್ಟಿಕೋನವನ್ನೇ ಬದಲಾಯಿಸುವ ಕಾಲದಲ್ಲಿ ನಾವಿದ್ದೇವೆ. ಹಿಂಜರಿಕೆ, ಕೀಳರಿಮೆ ಹೋಗಿ ಹೊಸ ಆತ್ಮ ವಿಶ್ವಾಸ ಬಂದು, ಆ ವ್ಯಕ್ತಿಯ ಜೀವನದ ದೃಷ್ಟಿಕೋನ ಬದಲಾಗಿ, ಆತ್ಮ ವಿಶ್ವಾಸ ಹೆಚ್ಚಿ, ಹೊಸತಾದ ಮರುಜನ್ಮ ನೀಡಲಾಗುತ್ತದೆ. ಚಿಕಿತ್ಸೆಗೆ ಹೆಚ್ಚು ಒತ್ತು ನೀಡುತ್ತಿದ್ದ ದಂತ ಚಿಕಿತ್ಸಾ ಪದ್ಧತಿ ಈಗ ಹೆಚ್ಚು ರೋಗ ತಡೆಯುವ ಚಿಕಿತ್ಸೆಯಾಗಿ ಪರಿವರ್ತನೆಯಾಗಿದೆ. ದಂತ ಚಿಕಿತ್ಸಾಲಯಗಳು ಬದಲಾಗಿ ಈಗ ದಂತ ಸ್ಪಾಗಳು ಹುಟ್ಟಿಕೊಂಡಿದೆ. ಒಟ್ಟು ಒಬ್ಬ ವ್ಯಕ್ತಿಯ ದೈಹಿಕ, ಮಾನಸಿಕ ಮತ್ತು ಪರಿಪೂರ್ಣ ಬೆಳವಣಿಗೆಯಲ್ಲಿ ಹಲ್ಲುಗಳ ಪಾತ್ರ ಬಹಳ ಮುಖ್ಯವಾಗಿದೆ. ಒಟ್ಟಿನಲ್ಲಿ ಸುಂದರ ಸದೃಢವಾದ ಹಲ್ಲುಗಳು ಮನುಷ್ಯನ ಆತ್ಮ ವಿಶ್ವಾಸದ ಮತ್ತು ವ್ಯಕ್ತಿತ್ವದ ಪ್ರತೀಕ. ಸುಂದರವಾಗಿ ನಗಲು, ಆಹಾರ ಜಗಿಯಲು, ಸ್ಪಷ್ಟವಾಗಿ ಮಾತನಾಡಲು ಮತ್ತು ದೇಹದ ಆರೋಗ್ಯದ ಸಮತೋಲನವನ್ನು ಕಾಪಾಡಲು ಹಲ್ಲಿನ ಆರೋಗ್ಯ ಅತೀ ಅವಶ್ಯಕ. ಈ ನಿಟ್ಟಿನಲ್ಲಿ ವ್ಯಕ್ತಿಯ ಆರೋಗ್ಯ ಪಾಲನೆಯಲ್ಲಿ ದಂತ ವೈದ್ಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

ಕೊನೆಮಾತು

ದಂತ ಸುರಕ್ಷತೆಗೆ ರೂಲ್ ಆಫ್ ಟೂ(ರೂಲ್ ಆಫ್ ಟು...2/2/2/2) ಇದರ ಪ್ರಕಾರ ಪ್ರತಿ ವರುಷದಲ್ಲಿ ಎರಡು ಬಾರಿ ದಂತ ವೈದ್ಯರ ಬಳಿ ದಂತ ತಪಾಸಣೆ,ದಿನಕ್ಕೆರಡು ಬಾರಿ ಎರಡು ನಿಮಿಷಗಳ ಕಾಲ ಹಲ್ಲುಜ್ಜುವಿಕೆ,ದಿನಕ್ಕೆರಡು ಬಾರಿ ದಂತ ದಾರ ಬಳಕೆ ಮಾಡಬೇಕು.



■**ಡಾ|| ಮುರಲೀ ಮೋಹನ್ ಚೂಂತಾರು**
ದಂತ ವೈದ್ಯರು ಹಾಗೂ ಬಾಯಿ ಮುಖ ದವಡೆ ಶಸ್ತ್ರಚಿಕಿತ್ಸಕರು. ಸುರಕ್ಷಾ ದಂತ ಚಿಕಿತ್ಸಾಲಯ. ಹೊಸಂಗಡಿ ಮಂಜೇಶ್ವರ.

ಸಂಪಾದಕೀಯ

ಭಾರತಕ್ಕೂ ತಟ್ಟಲಿದೆ ಯುದ್ಧದ ಪರಿಣಾಮ

ಯಾವುದೇ ಯುದ್ಧದ ಪರಿಣಾಮವು ಈಗ ಸಮರಗ್ರಸ್ತ ಪ್ರದೇಶಕ್ಕಷ್ಟೇ ಸೀಮಿತವಾಗಿರುವುದಿಲ್ಲ. ಸಮರನಿರತರಷ್ಟೇ ಪರಿಣಾಮ ಎದುರಿಸುವುದೂ ಅಲ್ಲ. ಜಗತ್ತೇ ಒಂದು ಮನೆಯಂತಾಗಿರುವ ಈ ಸಂದರ್ಭದಲ್ಲಿ ಯಾವುದೇ ಮೂಲೆಯಲ್ಲಿ ನಡೆಯುವ ಯುದ್ಧವು ಮತ್ತಾವುದೋ ಪ್ರದೇಶದ ಜನಜೀವನದ ಮೇಲೆ ಪರಿಣಾಮ ಬೀರುತ್ತದೆ. ಈಗಲೂ ಅಷ್ಟೆ. ಕೊಲ್ಲಿಯಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಭಾರತವು ಯಾರದೇ ಪಕ್ಷ ವಹಿಸದೆ ತಟಸ್ಥವಾಗುಳಿದಿದ್ದರೂ ಯುದ್ಧದ ಪರಿಣಾಮಗಳು ಭಾರತವನ್ನೂ ಕಾಡುವುದು ನಿಶ್ಚಿತವಾಗಿದೆ. ಆದರಲ್ಲಿಯೂ ತೈಲ ಪೂರೈಕೆಯ ಕೇಂದ್ರವಾಗಿರುವ ಹಾಗೂ



ಜಾಗತಿಕ ನೌಕಾ ಯಾನದ ಪ್ರಮುಖ ಕೊಂಡಿಯಾಗಿರುವ ಕೊಲ್ಲಿ ಪ್ರದೇಶದಲ್ಲಿ ಸಮರ ನಡೆಯುತ್ತಿರುವುದರಿಂದ ವಿಶ್ವದ ಎಲ್ಲಾ ದೇಶಗಳೂ ಅದರ ಪರಿಣಾಮ ಎದುರಿಸಬೇಕಾಗುವುದು ಖಂಡಿತ. ಈಗಂತೂ ಇರಾನ್ ಕೊಲ್ಲಿಯ ಎಲ್ಲಾ ದೇಶಗಳನ್ನು ಯುದ್ಧದ ಪರಿಧಿಯೊಳಗೆ ಸೆಳೆದುಕೊಂಡಿದೆ. ಸೌದಿ, ಬಹರೇನ್, ಯುಎಇ, ಟರ್ಕಿ, ಅಜರ್‌ಬೈಜಾನ್ ಮೊದಲಾದ ದೇಶಗಳೆಡೆಗೂ ಕ್ಷಿಪಣಿಗಳನ್ನು ಪ್ರಯೋಗಿಸಿದೆ. ತಾನು ನಾಶವಾಗುವುದಾದಲ್ಲಿ ಇತರರನ್ನೂ ನಾಶಮಾಡಿಯೇ ಹೋಗುವುದು ಎಂಬಂತಹ ಧೋರಣೆಯನ್ನು ಪ್ರದರ್ಶಿಸುತ್ತಿದೆ.

ಯುದ್ಧದಲ್ಲಿ ನೇರ ಪಾಲುದಾರನಲ್ಲದಿದ್ದರೂ ಭಾರತವು ಅದರ ಪರೋಕ್ಷ ಪರಿಣಾಮಗಳನ್ನು ಅನುಭವಿಸುವುದು ಅನಿವಾರ್ಯವಾಗಿದ್ದು, ಅದನ್ನು ನಿಭಾಯಿಸಲು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವುದು ಈಗಿನ ಅಗತ್ಯವಾಗಿದೆ. ಮೊತ್ತಮೊದಲಾಗಿ ಕೊಲ್ಲಿಯಲ್ಲಿರುವ ಭಾರತೀಯರ ರಕ್ಷಣೆ ಆದ್ಯತೆಯಾಗಿದ್ದು, ಈ ನಿಟ್ಟಿನಲ್ಲಿ ಸರಕಾರವು ಈಗಾಗಲೆ ಸೂಕ್ತ ಕ್ರಮಗಳನ್ನು ಕೈಗೊಂಡಿರುವುದು, ಲಭ್ಯ ವಿಮಾನಗಳಲ್ಲಿ ಸಾಧ್ಯವಾದಷ್ಟು ಮಂದಿಯನ್ನು ಕರೆತಂದಿರುವುದು ಸ್ವಾಗತಾರ್ಹ. ಕೊಲ್ಲಿಯಲ್ಲಿ ಲಕ್ಷಾಂತರ ಭಾರತೀಯರಿದ್ದು ಅವರ ಸುರಕ್ಷತೆಯು ಸದ್ಯಕ್ಕೆ ಮುಖ್ಯವೇ ಆಗಿದೆ.

ಕೊಲ್ಲಿ ಬಿಕ್ಕಟ್ಟಿನಿಂದಾಗಿ ತೈಲ ಪೂರೈಕೆಯಲ್ಲಿ ಕೊರತೆಯಾಗುವುದೂ ಖಂಡಿತ. ಹಾಗಾಗಿ ತೈಲ ಬೆಲೆಯಲ್ಲೂ ಏರಿಕೆಯಾಗಬಹುದು. ಯುದ್ಧ ದೀರ್ಘವಾದಷ್ಟೂ ಸಮಸ್ಯೆ ಹೆಚ್ಚು. ಸದ್ಯಕ್ಕೆ ಭಾರತವು ಹಲವಾರು ದಿನಗಳಿಗಾಗುವಷ್ಟು ಮೀಸಲು ತೈಲ ಸಂಗ್ರಹ ಹೊಂದಿರುವುದು ಸಮಾಧಾನಕಾರ. ತನ್ಮಧ್ಯೆ, ರಷ್ಯಾವು ಭಾರತದ ತೈಲ ಸಮಸ್ಯೆ ನಿಭಾಯಿಸಲು ತೈಲ ಪೂರೈಕೆ ಮಾಡುವ ಭರವಸೆ ನೀಡಿರುವುದು ಕೂಡಾ ನಿರಾಳತೆ ತರುವ ವಿಚಾರ. ಇದೇವೇಳೆ, ಜನರು ಕೂಡಾ ಪೆಟ್ರೋಲಿಯಂ ತೈಲಗಳ ಬಳಕೆಯಲ್ಲಿ ತುಸು ಮಿತವ್ಯಯ ಸಾಧಿಸುವುದು ಅಗತ್ಯವಾಗಿದೆ. ಬಿಕ್ಕಟ್ಟಿನ ಸಂದರ್ಭದಲ್ಲಿ ರಾಷ್ಟ್ರಹಿತಕ್ಕೆ ಪೂರಕವಾಗುವ ಕ್ರಮಗಳನ್ನು ಅನುಸರಿಸಬೇಕಾಗಿದೆ.

ಹೊರ್ಮುಜ್ ಜಲಸಂಧಿಯಲ್ಲಿ ನೌಕೆಗಳ ಸಾಗಣೆಗೆ ಅಡ್ಡಿ ಬಂದಿರುವುದರಿಂದ ಪೆಟ್ರೋಲಿಯಂ ತೈಲ ಪೂರೈಕೆ ಮಾತ್ರವಲ್ಲದೆ ಇನ್ನಿತರ ಹಲವಾರು ಜೀವನಾವಶ್ಯಕ ವಸ್ತುಗಳ ಪೂರೈಕೆಗೂ ಅಡ್ಡಿಯಾಗಬಹುದು. ಪಾಮ್ ಆಯಿಲ್, ಸೂರ್ಯಕಾಂತಿ ಎಣ್ಣೆ, ಸೋಯಾಬೀನ್ ತೈಲ ಮೊದಲಾದವು ಕೂಡಾ ಭಾರತಕ್ಕೆ ವಿದೇಶಗಳಿಂದ ಆಮದಾಗುತ್ತವೆ. ಕೆಲವಾರು ತರಕಾರಿಗಳು, ರಸಗೊಬ್ಬರಗಳು, ಪ್ಲಾಸ್ಟಿಕ್‌ಗಳು, ಔಷಧ ವಸ್ತುಗಳು ಕೂಡಾ ಪೂರೈಕೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆಗಳಿವೆ. ಅದೇರೀತಿ, ಭಾರತದ ಕೆಲವು ರಫ್ತಿನ ಮೇಲೂ ದುಷ್ಪರಿಣಾಮವಾಗಲಿದೆ. ಇವೆಲ್ಲ ಪ್ರತಿಕೂಲ ಪರಿಣಾಮ ಗಳನ್ನು ಸಮರ್ಥವಾಗಿ ನಿಭಾಯಿಸಲು ದೇಶವು ಸನ್ನದ್ಧವಾಗಿರುವುದು ಅಗತ್ಯವಾಗಿದೆ.

ಖಮೇನಿಗೆ ಆಯಸ್ಸು ತುಂಬಿದ್ದೇ ಜಗತ್ತಿನ ಒಳ್ಳೆತನ!

ಉಘೇ ವೀರಭೂಮಿಗೆ


ಸಂತೋಷ್ ತಮ್ಮಯ್ಯ
santoshthammaiah@gmail.com



ಹದಿನೆಂಟನೆ ಶತಮಾನದ ಮಹತ್ತ್ವದ ಕವಿ ಪಿ.ಬಿ ಶೆಲ್ಲಿಯ 'ಓಜಿಮಂಡಿಯಾಸ್' (Ozymandias) ಕವನವನ್ನು ಕಾಲೇಜು ಮೆಟ್ಟಿಲೇರಿದವರಂತೂ ಓದಿಯೇ ಇರುತ್ತಾರೆ. ಕ್ರಿ.ಪೂ 13ನೇ ಶತಮಾನದ ಈಜಿಪ್ಟಿನ ರಾಜ ಎರಡನೆಯ ರಾಮೆಸೆಸ್ ಕುರಿತು ಶೆಲ್ಲಿ ಬರೆದ ಕವನ ಇಂದಿಗೂ ವಿಮರ್ಶೆಗೊಳಪಡುತ್ತಲೇ ಇದೆ. ಮರಳುಗಾಡಿನಲ್ಲಿ ದಾರಿಹೋಕನೊಬ್ಬ ಯಾವುದೋ ಕಾಲದಲ್ಲಿ ಶ್ರದ್ಧೆಯಿಂದ ಕೆತ್ತಿದ ಮೂರ್ತಿಯೊಂದನ್ನು ಕಾಣುತ್ತಾನೆ. ಅದರ ಅಂಗಾಂಗಗಳು ಮುರಿದಿವೆ. ರುಂಡರಹಿತವಾದ ಪ್ರತಿಮೆಯ ಕಾಲುಗಳೆರಡು ಮರಳಿನಲ್ಲಿ ಹೂತಿವೆ. ಅದರ ಪೀಠದಲ್ಲಿ "ನಾನು ಓಜಿಮಂಡಿಯಾಸ್, ಅರಸರ ಅರಸ. ಇದು ನಾನು ಸೃಷ್ಟಿಸಿದ ಮಹಾ ಸಾಮ್ರಾಜ್ಯ. ಎಲ್ಲರೂ ನನ್ನ ವೈಭವವನ್ನು ನೋಡಿ ಹೊಟ್ಟೆ ಉರಿದುಕೊಳ್ಳಿ" ಎಂಬ ಬರಹವಿರುತ್ತದೆ. ಆದರೆ ಕಣ್ಣುಹಾಯಿಸಿದಷ್ಟು ದೂರವೂ ಮರಳುಗಾಡು! ಅಹಂಕಾರದ ನಶ್ವರತೆ, ಕಾಲದ ಅನಿಶ್ಚಿತತೆಗಳನ್ನು ರೂಪಕದ ಮೂಲಕ ಕಟ್ಟಿಕೊಡುವ ಶೆಲ್ಲಿ ಕಾಲಕಾಲಕ್ಕೆ ಬದಲಾದ ಭೂರಾಜಕೀಯ ಮತ್ತು ಸ್ಥಿತ್ಯಂತರಗಳನ್ನು ಓಜಿಮಂಡಿಯಾಸ್ ಮೂಲಕ ನೆನಪಿಸುತ್ತಾನೆ.

ಬಹುಶ ಶೆಲ್ಲಿ ಈ ಕಾಲಘಟ್ಟದಲ್ಲಿ ಬದುಕಿದ್ದರೂ ಓಜಿಮಂಡಿಯಾಸ್ ಬರೆದಿರುತ್ತಿದ್ದ! ಈಜಿಪ್ಟಿನ ಮರಳುಗಾಡಿನಲ್ಲಿ ಕಂಡ ಚಿತ್ರಣವನ್ನು ಆತ ಇರಾನಿನ ಮರಳುಗಾಡಿನಲ್ಲೂ ಕಾಣುತ್ತಿದ್ದ. ರಾಮೆಸೆಸ್ ರಾಜನಂತೆ ಕೊಬ್ಬಿನಿಂದ "ನಾನು ಷಾಗಳ ಷಾ" ಎಂದಬ್ಬರಿಸಿ, ಮಾಡಬಾರದ ಅನಾಚಾರಗಳನ್ನು ಮಾಡಿ, ಜಗತ್‌ಕಂಟಕನಾಗಿ ಮೆರೆದು ಕೊನೆಗೆ ನಾಯಿಯಂತೆ ಸತ್ತ ಆಯತುಲ್ಲಾಹ್ ಖಮೇನಿಯನ್ನು ಅಧಿಕಾರರ ನಶ್ವರತೆ, ಪ್ರಕೃತಿಯ ಅಧಿಪತ್ಯ ಮತ್ತು ಅಹಂಕಾರದ ನಾಶಕ್ಕೆ ಉದಾಹರಣೆಯಾಗಿ ಬಳಸುತ್ತಿದ್ದ. ಅದರ ಜೊತೆಗೆ ಮತಾಂಧತೆಯ ಹುಚ್ಚುತನ ಎಂಬ ಇನ್ನೊಂದೆರಡು ಸಾಲುಗಳನ್ನೂ ಜೋಡಿಸಿರುತ್ತಿದ್ದ!

1979ರಿಂದ ನಿನ್ನೆಮೊನ್ನೆಯವರಗೆ 'ಷಾಗಳ ಷಾ' ಎನ್ನುತ್ತಿದ್ದ ಖಮೇನಿಯ ಚಿಂತನೆಗಳಿಗೆ ತಡವಾಗಿಯಾದರೂ ಜಗತ್ತು ಮದ್ದನ್ನು ಕಂಡುಕೊಂಡಿದೆ. ಇರಾನ್, ಪರ್ಷಿಯಾ ಆಗುವತ್ತ ಸಾಗುತ್ತಿದೆ ಎನ್ನುವಲ್ಲಿಯವರೆಗೆ ಕ್ಷಿಪಣಿಗಳು ಆರ್ಭಟಿಸುತ್ತಿವೆ. ಯುದ್ಧ ಕಾಲದಲ್ಲಿ ಹುಟ್ಟುವ ಎಗ್ಗಿಲ್ಲದ ಆಲೋಚನೆಗಳೆಲ್ಲವೂ ಇಂದು ಇರಾನ್ ಕೇಂದ್ರಿತವಾಗಿಯೇ ನೆಟ್ಟಿದೆ. ಗಡಿಗಳು ಅಳಿಯುವವೇ? ಹೊಸ ಗಡಿ ನಿರ್ಮಾಣವಾಗುತ್ತದೆಯೇ? ಹೊಸ ಶಕ್ತಿಯ ಅವತಾರವಾಗುತ್ತದೆಯೇ? ಪರಿಣಾಮವನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯ ಯಾರಿಗೆಲ್ಲಾ ಇದೆ? ಚೆಂದ ನೋಡುತ್ತಾ ಕುಳಿತವರಾರು? ಬೆಂಕಿ ಕಾಯಿಸಿಕೊಳ್ಳುತ್ತಿರುವವರಾರು?–ಇಂಥ ಲಗಾಮಿಲ್ಲದ ಚಿಂತನೆಗಳು ಅರ್ಧಗಂಟೆಯ ಟಿ.ವಿ ಚರ್ಚೆಯನ್ನು ನೋಡಿದ ಮನುಷ್ಯನಲ್ಲೂ ಹುಟ್ಟುತ್ತಿವೆ. ಅದಕ್ಕೆ ಆರ್ಭಟದ ಸದ್ದಿಗೆ ಕಿವಿ ನೆಡುವ ಮಾನವಸಹಜ ಗುಣವೆನ್ನಬೇಕೋ, ಮನುಷ್ಯನ ಕದನ ಕುತೂಹಲವೆನ್ನಬೇಕೋ ತಿಳಿಯದು. ಆದರೆ ಹುಟ್ಟುವ ಎಲ್ಲಾ ಚಿಂತನೆಗಳು, ಸತ್ತ ಖಮೇನಿಗಾಗಿ ಕರಳುಹಿಂಡುವಂತೆ ಅತ್ತವರಲ್ಲಿ ನಿಲ್ಲುತ್ತವೆ.



ಅಳುವವರ ಪಾಲಿಗೆ ಖಮೇನಿ ಧರ್ಮ ಗುರು. ಆದರೆ ಖಮೇನಿ ಸಾಯುವ ಹಿಂದಿನ ದಿನವರೆಗೂ ಅವರೆಲ್ಲರೂ ಅಮೆರಿಕಾ ಮತ್ತು ಇಸ್ರೇಲನ್ನು ಬಂಡವಾಳಶಾಹಿ ದೇಶಗಳ ಆಕ್ರಮಣಕಾರಿ ಧೋರಣೆ, ತೈಲ ರಾಜಕೀಯ, ಎಕನಾಮಿಕ್ ಹಿಟ್ಮನ್ ಗುಣ ಎಂದು ಟೀಕಿಸುತ್ತಿದ್ದರು! ಈ ಕಾರಣಗಳಿಂದ ಇರಾನ್ ಮೇಲೆ ದಾಳಿ ನಡೆದಿದೆ ಎನ್ನುವುದಾದರೆ ಖಮೇನಿ ಇರಾನಿನ ರಾಜಕೀಯ ಮುಖಂಡ ಮಾತ್ರ. ಆದರೆ ಸಾವಿಗೆ ಅಳುವವರದ್ದು ಶುದ್ಧ ಮತೀಯ ಶೋಕ! ಇದೇನು ವಿಚಿತ್ರ? ಕೆಲ ತಿಂಗಳ ಹಿಂದಿನವರೆಗೂ ಟಾರಿಫ್ ಹೇರಿದ ಟ್ರಂಪನನ್ನು ಅರೆಹುಚ್ಚ ಎಂದು ನಿಂದಿಸಿದ್ದವರೆಲ್ಲರೂ ಆತನ ಇರಾನ್ ವಿರುದ್ಧ ಹೇಳಿಕೆಗಳನ್ನೂ ಟೀಕಿಸಿದ್ದರು! ಟಾರಿಫ್ ಕಾರಣಕ್ಕೆ ಖಳನಾಗಿದ್ದ ಟ್ರಂಪ್, ಖಮೇನಿಯನ್ನು ಕೊಂದ ಕಾರಣಕ್ಕೆ ಹೀರೋ ಆಗಿಬಿಟ್ಟಿದ್ದಾನೆ! ಕೆಲವರು ಟ್ರಂಪನ ಹುಚ್ಚಾಟಗಳನ್ನು ಟೀಕಿಸಲು ಒಂದು ಹಂತದಲ್ಲಿ ಖಮೇನಿಗಾಗಿಯೂ ಮರುಗಿದ್ದರು. ಆದರೆ ಮಧ್ಯಪ್ರಾಚ್ಯದ ಅರಬ್ ರಾಷ್ಟ್ರೀಯತೆ, ಸರ್ವಾಧಿಕಾರದ ಹಿಂದಿನ ಮತೀಯ ಉದ್ದೇಶಗಳ ಹಿನ್ನೆಲೆ ತಿಳಿದವರಿಗೆ ಇಂದು ಉದುರಿದ ಕಣ್ಣೀರು ಆಶ್ಚರ್ಯ ತರಿಸುತ್ತಿಲ್ಲ. ಏಕೆಂದರೆ ಸುಮಾರು ನೂರು ವರ್ಷದ ಹಿಂದೆ ಕೂಡ ಹೀಗೆಯೇ ರಾಜಕೀಯ ನಾಯಕನ ಮುಸುಕು ಧರಿಸಿದ ಮತೀಯ ನಾಯಕನ ಸ್ಥಾನಪಲ್ಲಟಕ್ಕಾಗಿ ಭಾರತ ಎರಡಾಗಿತ್ತೆಂಬುದು ಕೆಲವರಿಗಾದರೂ ತಿಳಿದಿದೆ. ಖಮೇನಿಯಂತೆ ಅಂದು ಖಲೀಫನಿಗಾಗಿ ಬೆಂಕಿ ಹಚ್ಚಿ, ದ್ವಿರಾಷ್ಟ್ರವಾದದ ಬೀಜ ಬಿತ್ತಿ, ಗಾಂಧಿಯಂಥವರ ಬೆಂಬಲ ಪಡೆದು ದೇಶ ಒಡೆದು ಇಂದಿಗೂ ಅದು ವ್ರಣವಾಗಿ ಕಾಡುತ್ತಿದೆ. ಇಂದು ಖಮೇನಿಗಾಗಿ ಮಿಡಿದಂತೆ ಅಂದು ಹೃದಯಗಳು ಖಲೀಫನಿಗಾಗಿ ಮಿಡಿದಿತ್ತೆಂಬ ಇತಿಹಾಸ ನೆನಪಿರುವವರಿಗೆ ಈ ಅಳು ಕೇವಲ ಅಳುವಲ್ಲ. ಅದು ಭಯಾನಕವಾದ ಅಪಶಕುನ.

ಖಮೇನಿ ಮತೀಯ ಗುರುವೋ, ರಾಜಕೀಯ ನಾಯಕನೋ ಎಂಬ ಪ್ರಶ್ನೆಗೆ ಉತ್ತರವನ್ನು ಬ್ರಹ್ಮವಿದ್ಯೆಯಿಂದೇನೂ ಪಡೆಯಬೇಕಾಗಿಲ್ಲ. ಖಮೇನಿಯ ಆಡಳಿತದಲ್ಲೇ ಅದರ ಲಕ್ಷಣಗಳು ಎದ್ದುಕಾಣುತ್ತಿದ್ದವು. ಖಮೇನಿ ತನ್ನ ಕನಸ್ಸಿನ ಇಸ್ಲಾಮಿಕ್ ಸ್ಟೇಟ್‌ಗಾಗಿ ಐದು ಅಂಶಗಳ ಕಾರ್ಯಗಳನ್ನು ಯೋಜಿಸಿದ್ದ. ಮತೀಯ ನಾಯಕನೇ (ಫಕೀಹ್) ದೇಶದ ಅಂತಿಮ ನಾಯಕನಾಗಿರಬೇಕೆಂದು ವಿಲಾಯತ್–ಎ–ಫಕೀಹ್ (Velayat-e Faqih) ಎಂಬ ಸುಪ್ರೀಂ ಲೀಡರ್ ಸ್ಥಾನವನ್ನು ಸೃಷ್ಟಿಸಲಾಯಿತು. ಪಶ್ಚಿಮದ ಪ್ರಭಾವಕ್ಕೆ ಒಳಗಾಗದ ಮತ್ತು ಅದರ ಸಂಸ್ಕೃತಿಯಿಂದ ಮುಕ್ತವಾಗಿರುವ ಸಮಾಜ ನಿರ್ಮಾಣ ಮಾಡಬೇಕು. ರಾಜಪ್ರಭುತ್ವದ ಅಂತ್ಯವಾಗಬೇಕು, ಶಿಯಾ ಆಧಾರದಲ್ಲಿ ವಿಶ್ವದ ಎಲ್ಲಾ ಮುಸ್ಲಿಮರು ಒಗ್ಗೂಡಬೇಕು, ಕಾನೂನು ಮತ್ತು ಜನಜೀವನ ಮತೀಯ ಆಧಾರದಲ್ಲಿರಬೇಕು ಎಂಬ ಐದು ನಿಯಮಗಳ ಆಧಾರದಲ್ಲಿ ಖಮೇನಿ ಹೊಸ ಇರಾನನ್ನು ಕಟ್ಟುವ ಸಂಕಲ್ಪಕ್ಕಿಳಿದಿದ್ದ. ಅಧಿಕಾರಕ್ಕೆ ಬಂದ ಮೊದಲ ದಿನದಿಂದಲೇ ಖಮೇನಿ ಇವುಗಳ ಅನುಷ್ಠಾನದಲ್ಲಿ ತೊಡಗಿದ್ದ. 1979ರ ಕ್ರಾಂತಿಯಲ್ಲಿ ಖಮೇನಿಯ ಅಣತಿಯ ಮೇರೆಗೆ ಇರಾನಿನ ಇಸ್ಲಾಮಿಕ್ ವಿದ್ಯಾರ್ಥಿ ಚಳವಳಿಗಾರರು ಟೆಹರಾನಿನ ಅಮೆರಿಕಾ ರಾಯಭಾರ ಕಛೇರಿಯ ಮೇಲೆ ದಾಳಿ ನಡೆಸಿ ಕಛೇರಿಯ 52 ಜನರನ್ನು 444 ದಿನಗಳ ಕಾಲ ಒತ್ತೆಯಾಳುಗಳನ್ನಿಟ್ಟುಕೊಂಡಿದ್ದರು. ಆಗ ಇಡೀ ಜಗತ್ತು ರಾಜ ಪಹ್ಲವಿಯನ್ನು ಅಮೆರಿಕಾ ಕೈಗೊಂಬೆಯಾಗಿಟ್ಟುಕೊಂಡಿದ್ದಕ್ಕೆ ಪ್ರತಿಕಾರ ಎಂದು ಬಿಂಬಿಸಿತ್ತು. ಹಾಗೆ ನೋಡಿದರೆ ಅಮೆರಿಕಾ ಅಧ್ಯಕ್ಷ ಜಿಮ್ಮಿ ಕಾರ್ಟರ್ ಅಂದೇ ಇರಾನ್ ಮೇಲೆ ಕ್ಷಿಪಣಿ ಉಡಾಯಿಸಿ ಖಮೇನಿಯನ್ನು ಹತ್ಯೆ ಮಾಡಬೇಕಿತ್ತು. ಅಮೆರಿಕಾ ಒಂದೇ ಅಲ್ಲ, ಜಗತ್ತಿನ ಶಾಂತಿಯನ್ನು ಬಯಸುವ ಯಾರೇ ಆದರೂ ಎಂದೋ ಇರಾನನ್ನು ಧ್ವಂಸ ಮಾಡಬೇಕಿತ್ತು. 2009ರಲ್ಲಿ ಸಿರಿಯಾದಲ್ಲಿ ದಂಗೆ ನಡೆದಾಗ ಅದನ್ನು ಕ್ರೂರವಾಗಿ ಅಡಗಿಸಲು ಖಮೇನಿ ಸಿರಿಯಾ ಅಧ್ಯಕ್ಷ ಬಶರ್ ಅಲ್–ಅಸ್ಸಾದ್‌ಗೆ ಸಲಹೆ ನೀಡಿದ್ದ. ಸಿರಿಯಾ ಅದನ್ನು ಕಾರ್ಯರೂಪಕ್ಕೂ ತಂದಿತ್ತು. 2015ರಲ್ಲಿ ವಿಶ್ವಸಂಸ್ಥೆ ಮತ್ತು ಜಗತ್ತಿನ ಬಹುತೇಕ ದೇಶಗಳು ಒಮ್ಮತದಿಂದ ಜಾರಿಗೊಳಿಸಿದ್ದ ಪರಮಾಣು ಶಸ್ತ್ರಾಸ್ತ್ರ ಒಪ್ಪಂದವನ್ನು ಮೈ ಫೂಟ್ ಎಂದು ತಿರಸ್ಕರಿಸಿದ ಇರಾನ್ ಪರಮಾಣು ಸಾಮರ್ಥ್ಯವಿರುವ ಬಾಲಿಸ್ಟಿಕ್ ಕ್ಷಿಕಣಿಗಳನ್ನು ಅಭಿವೃದ್ಧಿಪಡಿಸಿ ಪರೀಕ್ಷೆ ನಡೆಸಿತು. ಆಗಲೂ ಜಗತ್ತು ಇರಾನ್ ಮೇಲೆ ಆರ್ಥಿಕ ದಿಗ್ಬಂಧನವನ್ನು ಹೇರಿತೇ ಹೊರತು ದಾಳಿ ನಡೆಸಲಿಲ್ಲ. 2018ರಲ್ಲಿ ಹೊಸ ಕಾಯ್ದೆಯೊಂದನ್ನು ಜಾರಿಗೆ ತಂದ ಖಮೇನಿ ಇರಾನಿನ ಮತೀಯ ಅಲ್ಪಸಂಖ್ಯಾತ ಸಮುದಾಯಗಳಾದ ಜೊರಾಷ್ಟ್ರೀಯನ್ನರು, ಕ್ರೈಸ್ತರು, ಬಹಾಯಿಗಳು ಮತ್ತು ಸುನ್ನಿಗಳನ್ನು ಕಾರಣವಿಲ್ಲದೆ ಬಂಧಿಸುವ, ವಿಚಾರಣೆ ನಡೆಸುವ ಆದೇಶವನ್ನು ಜಾರಿಗೆ ತಂದ. ಆಗಲೂ ಅಮೆರಿಕ ನೇತೃತ್ವದಲ್ಲಿ ಕ್ರೈಸ್ತ ದೇಶಗಳು ಇರಾನಿನ ಮೇಲೆ ದಾಳಿ ನಡೆಸಬೇಕೆಂದು ಒತ್ತಡ ಅಂತಾರಾಷ್ಟ್ರೀಯ ಸಮುದಾಯದಲ್ಲಿ ವ್ಯಕ್ತವಾಗಿತ್ತು. ಅಂದರೆ ಅಮೆರಿಕಾಕ್ಕೆ ಅಂದೇ ಇರಾನಿನ ಮೇಲೆ ದಾಳಿ ನಡೆಸುವ ಎಲ್ಲಾ ಅವಕಾಶಗಳಿದ್ದವು. ಆದರೆ ಜಗತ್ತಿನ ದೊಡ್ಡಣ್ಣನೂ ತಾಳ್ಮೆ ವಹಿಸಿತು. ಅಷ್ಟೇ ಅಲ್ಲ, 1979ರ ಕ್ರಾಂತಿಯ ನಂತರ ಇರಾನ್ ಆಡಳಿತ 20ಕ್ಕೂ ಹೆಚ್ಚು ದೇಶಗಳಲ್ಲಿ ಭಯೋತ್ಪಾದಕ ದಾಳಿ ಮತ್ತು ಹತ್ಯೆಗಳನ್ನು ನಡೆಸಿತು. ಜುಲೈ 2018ರಲ್ಲಿ ಪ್ಯಾರಿಸ್‌ನಲ್ಲಿ ಖಮೇನಿ ವಿರೋಧಿ ಬಣದ ವಿರುದ್ಧ ನೇರ ಇರಾನ್ ಸರ್ಕಾರ ಭಯೋತ್ಪಾದಕ ಸಂಚನ್ನು ಹೂಡಿತು. 2019ರಲ್ಲಿ ಇರಾನ್, ಇರಾಕಿ ಪತ್ರಕರ್ತರೊಬ್ಬರನ್ನು ಅಪಹರಿಸಿ ಕೊಂದಿತು. ಅದೇ ವರ್ಷ ಟರ್ಕಿಯಲ್ಲಿ ವಿರೋಧ ಪಕ್ಷದ ನಾಯಕರೊಬ್ಬರನ್ನು ಕೊಂದಿತು. ಇವನ್ನೆಲ್ಲಾ ಖಮೇನಿ ನಿರ್ಭಿಡೆಯಿಂದ ಮಾಡಿದ. ಹಮಾಸ್, ಹಿಜ್ಬುಲ್ಲಾ ಮತ್ತು ಹೌತಿಗಳಿಗೆ ನೇರ ಹಣಸಹಾಯವನ್ನು ಮಾಡಿದ. ಜಗತ್ತಿನ ಎಲ್ಲಾ ದೇಶಗಳೂ ನೆರೆಯ ದೇಶಗಳಿಗೆ ಧನಸಹಾಯವನ್ನು ಮಾಡುತ್ತವೆ. ಆದರೆ ಇರಾನ್ ಅದನ್ನು ದ್ವೇಷ ಬಿತ್ತಲೆಂದೇ ಮಾಡಿದ. ಇಸ್ರೇಲ್ ವಿರುದ್ಧ ಖಮೇನಿ ಬೆನ್ನುಬಿದ್ದ ಪರಿಗೆ ಇಸ್ರೇಲ್ ಆತನನ್ನು ಇಷ್ಟು ವರ್ಷ ಬಿಟ್ಟಿದ್ದೇ ಹೆಚ್ಚು. ಕೊನೆಕೊನೆಗೆ ಇಸ್ರೇಲ್ ನಾಶವೇ ನನ್ನ ಮೊದಲ ಗುರಿ ಎನ್ನುತ್ತಿದ್ದಾಗಲೂ ಇಸ್ರೇಲ್ ಆತನನ್ನು ವರ್ಷಗಳ ಕಾಲ ಸಹಿಸುತ್ತಾ ಬಂತು.

ಇಷ್ಟೆಲ್ಲಾ ಇದ್ದರೂ ಶಿಯಾಗಳ ಹೊರತಾದ ಒಂದು ವರ್ಗ ಖಮೇನಿಯನ್ನು ಹೊಗಳುತ್ತದೆ ಎಂದರೆ ಅದಕ್ಕೆ ಏನನ್ನಬೇಕು? ಆತ ಸರ್ವಾಧಿಕಾರಿಯ ಜೊತೆಗೆ ಮತೀಯ ಗುರುವೇ ಇರಬಹುದು. ಆತನ ಧರ್ಮ ವರ್ತನೆ ಜಗತ್ತಿಗೆ ಕಂಟಕವಾದರೆ ಯಾರಾದರೊಬ್ಬರು ಆತನ ನಾಶಕ್ಕೆ ಮುಂದಾಗಲೇಬೇಕಿತ್ತು. ತನ್ನ ಶತ್ರುವನ್ನು ಜಗತ್ತು ನಾನಾ ಕಾರಣಗಳಿಗೆ ತೆಗಳುವುದನ್ನೇ ಗುರಾಣಿಯಂತೆ ಬಳಸಿಕೊಂಡ ಖಮೇನಿ ಇಷ್ಟು ವರ್ಷ ಪ್ರಾಣ ಉಳಿಸಿಕೊಂಡಿದ್ದ. ಇಂಥ ಖಮೇನಿಯ ಸಾವಿಗೆ ಭಾರತದ ಯಾವುದೋ ಮೂಲೆಯ ಒಂದು ಹಳ್ಳಿಯೂ ಮರುಗುತ್ತದೆಯೆಂದರೆ ಇತಿಹಾಸ ನೆನಪಿನಲ್ಲಿರುವವರಿಗೆ 'ಮಾಪ್ಲಾ ದಂಗೆ' ನೆನಪಾಗುವುದು ಸಹಜ. ಏಕೆಂದರೆ ಖಮೇನಿಗಾಗಿ ಮರುಗುವುದೆಂದರೆ ಹಿಂದೆ ಖಲೀಫನಿಗಾಗಿ ಮರುಗಿದ್ದಕ್ಕಿಂತಲೂ ಅಪಾಯಕಾರಿ.

ಏಕೆಂದರೆ ಐದಂಶಗಳ ಜಾರಿಯನ್ನು ಖಲೀಫನು ಖಮೇನಿಯಷ್ಟು ತೀವ್ರವಾಗಿ ಜಾರಿಗೆ ತರಲುಹೊರಟಿರಲಿಲ್ಲ. ಟರ್ಕಿಯ ಖಲೀಫ ಖಮೇನಿಯಂತೆ ಮತೀಯವಾದವನ್ನೇ ರಾಷ್ಟ್ರೀಯತೆ ಎಂದು ಈ ಪರಿಯಲ್ಲಿ ಹರಡಲು ಪಣತೊಟ್ಟಿರಲಿಲ್ಲ. ಹಿಂದಿನ ಖಲೀಫ ಖಮೇನಿಯಂತೆ ಇಷ್ಟು ಹಿಂಸೆಯ ದಾರಿಯನ್ನು ಹಿಡಿದಿರಲಿಲ್ಲ. ಆ ಖಲೀಫ ಖಮೇನಿಯಂತೆ ಕುಟಿಲ ಕುತಂತ್ರಿಯೂ ಆಗಿರಲಿಲ್ಲ. ಆದರೆ ಅಂಥ ಖಲೀಫನಿಗಾಗಿ ಬೀದಿಗಿಳಿದ ಪರಿಣಾಮ ಮಾತ್ರ ಘೋರವಾಗಿತ್ತು. ಪುಣ್ಯವಶಾತ್ ಖಮೇನಿಗಾಗಿ ಕೇವಲ ಕಣ್ಣೀರಷ್ಟೇ ಬಿತ್ತು. ಇಂದು ಇಸ್ಲಾಂ ಜಗತ್ತು ಭಾರತದಲ್ಲಿ ಕಣ್ಣೀರು ಸುರಿಸಿದವರಿಗಿಂತ ಪ್ರಬುದ್ಧವಾಗಿದೆ. ಹಾಗಾಗಿ ಇತಿಹಾಸದಲ್ಲಿ ಖಮೇನಿ ಸಾವಿಗೆ ದಕ್ಕುವುದು ಇಷ್ಟೇ. ಓಜಿಮಂಡಿಯಾಸ್ ಪದ್ಯದಂತೆ ಮುಂದಿನ ಜಗತ್ತು ಖಮೇನಿಯನ್ನು ನೆನಪಿಟ್ಟುಕೊಳ್ಳುವುದು ಬರಡು ಮರುಭೂಮಿಯಲ್ಲಿ ಮುರಿದ ಮೂರ್ತಿಗಳಂತೆ ಮತ್ತು ಪೀಠದಲ್ಲಿ ಬರೆದ 'ನಾನು ಷಾಗಳ ಷಾ' ಎಂಬ ಹಳಹಳಿಕೆಯ ಬರಹದಿಂದ ಮಾತ್ರ.

ಇಸ್ರೇಲ್: ನಿಖರ ಗುಪ್ತಚರ ಮಾಹಿತಿ, ಸುಸಜ್ಜಿತ ಯೋಜನೆ, ತಪ್ಪದ ಗುರಿಗಳು...

ದಿನೇಶ್

ಇರಾನಿನ ಸರ್ವೋಚ್ಚ ಮುಖಂಡ ಆಯತೊಲ್ಲಾ ಆಲಿ ಖಮೇನಿಯನ್ನು ಯುದ್ಧಾರಂಭದ ಮೊದಲ ದಿನವೇ ಇಸ್ರೇಲ್ ಮತ್ತು ಅಮೆರಿಕ ಕ್ಷಿಪಣಿ ದಾಳಿ ನಡೆಸಿ ಹತಗೊಳಿಸಿದ್ದು ಇಸ್ರೇಲಿನ ಗುಪ್ತಚರ ಸಂಸ್ಥೆಯ ಮಾಹಿತಿ ಸಂಗ್ರಹ ಸಾಮರ್ಥ್ಯ ಮತ್ತು ಸುಸಜ್ಜಿತ ಯೋಜನೆಯ ಸಂಕೇತ. ಖಮೇನಿಯ ಇರವನ್ನು ಸಂಪೂರ್ಣ ಖಚಿತಪಡಿಸಿಕೊಂಡು ಅವರಿದ್ದ ನಿಖರ ಪ್ರದೇಶಕ್ಕೆ ದಾಳಿ ಮಾಡಿ ಹತ್ಯೆಗೊಳಿಸಲಾಯಿತು. ಇದೇನೂ ತಕ್ಷಣದ ಬೆಳವಣಿಗೆಯಲ್ಲ. ಖಮೇನಿ ಹತ್ಯೆಗೆ ಇಸ್ರೇಲ್ ಕೆಲವಾರು ತಿಂಗಳುಗಳಿಂದಲೇ ತಂತ್ರ ಹೆಣೆಯುತ್ತಿತ್ತು. ಖಮೇನಿಯಷ್ಟೇ ಅಲ್ಲ, ಇಸ್ರೇಲಿಗೆ ವಿರೋಧಿಗಳಾಗಿರುವ ಹಲವಾರು ಮಂದಿಯನ್ನು ಇಸ್ರೇಲ್‌ನ ಗುಪ್ತಚರ ಸಂಸ್ಥೆ ಮೊಸಾದ್ ಸುಸಜ್ಜಿತ ಯೋಜನೆಯ ಮೂಲಕ ಹತ್ಯೆಗೈದ ಹಲವಾರು ನಿದರ್ಶನಗಳು ಇವೆ. ಇಸ್ರೇಲ್ ವಿರೋಧಿಗಳನ್ನು ಎಲ್ಲಿದ್ದರೂ ಪತ್ತೆ ಹಚ್ಚಿ ಅವರ ಹತ್ಯೆಗೆ ಸಂಚು ರೂಪಿಸಿ ಅದನ್ನು ಕಾರ್ಯಗತಗೊಳಿಸುವಲ್ಲಿ ಮೊಸಾದ್ ನಿಷ್ಣಾತ. ಇತ್ತೀಚಿನ ಕೆಲವು ವರ್ಷಗಳಲ್ಲೇ ಅಂತಹ ಕೆಲವು ಗುರಿನಿರ್ದೇಶಿತ ಹತ್ಯೆಗಳನ್ನು ಇಸ್ರೇಲ್ ಸಾಧಿಸಿದೆ.

ಆಯತೊಲ್ಲಾ ಖಮೇನಿ

ಆಯತೊಲ್ಲಾ ಖಮೇನಿ ಫೆ. 28ರಂದು ಮುಂಜಾನೆ ತಮ್ಮ ಕಚೇರಿಯಲ್ಲಿ ಆಪ್ತರೊಂದಿಗೆ ಸಭೆ ನಡೆಸುತ್ತಿದ್ದಾಗಲೇ ಕ್ಷಿಪಣಿ ದಾಳಿಗೆ ಬಲಿಯಾದರು. ಖಮೇನಿ ಜತೆಗೆ ಅವರ ಕುಟುಂಬ ಸದಸ್ಯರು ಕೂಡಾ ಮೃತರಾದರು. ಕೇವಲ 60 ಸೆಕೆಂಡುಗಳ ಅವಧಿಯಲ್ಲಿ ಇರಾನಿನ ಹಲವಾರು ಗುರಿಗಳ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ ನಡೆಸಿ ಆಡಳಿತದ 7 ಮಂದಿ ಉನ್ನತ ಅಧಿಕಾರಿಗಳು ಸೇರಿದಂತೆ 40 ಮಂದಿ ಮುಖಂಡರನ್ನು ಹತ್ಯೆ ಮಾಡಿತು.

ಈ ಯೋಜನೆಯನ್ನು ಕಾರ್ಯಗತಗೊಳಿಸಲು ಮೊಸಾದ್ ವರ್ಷದಿಂದಲೇ ಬಹಳಷ್ಟು ಗುಪ್ತಚರ ಮಾಹಿತಿಗಳನ್ನು ಸಂಗ್ರಹಿಸಿತ್ತು. ಇರಾನಿನ ಪ್ರತಿಯೊಬ್ಬ ಮುಖಂಡರ ಚಲನವಲನಗಳ ಮೇಲೆ ಕಣ್ಣಿಟ್ಟಿತ್ತು. ಖಮೇನಿಯ ಪ್ರತಿದಿನದ ದಿನಚರಿ ಹೇಗಿರುತ್ತದೆ, ಯಾವ ಜಾಗದಲ್ಲಿ ಯಾವಾಗ ಸೇರುತ್ತಾರೆ ಎಂಬ ಕುರಿತಂತೆ ಮೊಸಾದ್ ಕಡತ ರೆಡಿ ಮಾಡಿಟ್ಟಿತ್ತು. ಖಮೇನಿಯ ಕುಟುಂಬ ಸದಸ್ಯರು, ಅವರ ಸಹಚರರು, ಭದ್ರತಾ ಸಿಬ್ಬಂದಿಗಳು, ಅವರೊಂದಿಗೆ ಸಂಪರ್ಕದಲ್ಲಿದ್ದ ಇನ್ನಿತರ ಪ್ರಮುಖರು ಎಲ್ಲರ ಮಾಹಿತಿಯೂ ಮೊಸಾದ್‌ನ ಜೇಬಿನಲ್ಲಿತ್ತು.

ಖಮೇನಿ ಮತ್ತು ಇರಾನಿನ ಉನ್ನತ ನಾಯಕರ ಚಲನವಲನ ತಿಳಿಯಲು ಮೊಸಾದ್ ಇರಾನಿನ ಟ್ರಾಫಿಕ್ ಕ್ಯಾಮೆರಾಗಳನ್ನು ಕೂಡಾ ಹ್ಯಾಕ್ ಮಾಡಿತ್ತು. ಪ್ರತಿಯೊಂದು ಕ್ಯಾಮೆರಾದ ಲೈವ್ ಚಿತ್ರಣದ ಮಾಹಿತಿಯು ದೂರದ ಇಸ್ರೇಲ್‌ನಲ್ಲಿರುವ ಮೊಸಾದ್ ಕಚೇರಿಗೆ ಪ್ರತಿಕ್ಷಣವೂ ತಲುಪುತ್ತಿತ್ತು.

ತನ್ನಲ್ಲಿರುವ ಮಾಹಿತಿಗಳನ್ನು ಮೊಸಾದ್ ಅಮೆರಿಕದೊಂದಿಗೆ ಹಂಚಿಕೊಂಡುದರ ಫಲವಾಗಿಯೇ ಅಮೆರಿಕ ಮತ್ತು ಇಸ್ರೇಲ್ ಜಂಟಿ ಕಾರ್ಯಾಚರಣೆ ನಡೆಸಿ ಖಮೇನಿ ಮತ್ತು ಅವರ ಉನ್ನತ ಮುಖಂಡರನ್ನು ನಿರಾಯಾಸವಾಗಿ ಹತ್ಯೆಗೈಯಲು ಸಾಧ್ಯವಾಯಿತು.

"ಕೇವಲ 60 ಸೆಕೆಂಡುಗಳು! ಈ ಕಾರ್ಯಾಚರಣೆ ನಡೆಸಲು ಬೇಕಾದುದು ಕೇವಲ ಒಂದು ನಿಮಿಷ. ಆದರೆ ಇದು ಹಲವಾರು ವರ್ಷಗಳ ಪ್ರಯತ್ನದ ಫಲವಾಗಿ ನಡೆದುದು" ಎಂದು ಮೊಸಾದ್‌ನ ಮಾಜಿ ಮುಖ್ಯಸ್ಥರೊಬ್ಬರು ಹೇಳುತ್ತಾರೆ. "ಆಧುನಿಕ ಯುದ್ಧವು ಕೇವಲ ಟ್ಯಾಂಕ್ ಮತ್ತು ಯುದ್ಧವಿಮಾನಗಳಿಂದ ನಡೆಯುವುದಲ್ಲ. ಮಾಹಿತಿ ಸಂಗ್ರಹ, ಅದರ ವಿಶ್ಲೇಷಣೆ, ಅದನ್ನು ಅನುಸರಿಸಿ ರೂಪುಗೊಳ್ಳುವ ಯೋಜನೆ ಮುಂತಾದವುಗಳ ಸಮಗ್ರ ಆಧಾರದಲ್ಲಿ ನಡೆಯುತ್ತದೆ. ಕೇವಲ ಒಂದು ನಿಮಿಷ ಒಂದು ಪ್ರದೇಶದ ಚಿತ್ರಣವನ್ನೇ ಬದಲಿಸಬಲ್ಲುದು" ಎನ್ನುತ್ತಾರೆ ಅವರು.

ಹಸನ್ ನಸ್ರಲ್ಲಾ

ಲೆಬನಾನ್‌ನ ಹಿಜ್ಬುಲ್ ಸಂಘಟನೆಯ ಮುಖಂಡ ಹಸನ್ ನಸ್ರಲ್ಲಾನನ್ನು ಇಸ್ರೇಲ್ ಹತ್ಯೆಗೈದುದೂ ಯೋಜನಾ ಬದ್ಧವಾಗಿಯೆ. 2024ರ ಸೆಪ್ಟೆಂಬರ್‌ನಲ್ಲಿ ಲೆಬನಾನ್‌ನ ರಾಜಧಾನಿ ಬೆರೂತ್‌ನಲ್ಲಿಯೇ ಇಸ್ರೇಲ್ ಆತನನ್ನು ಹತ್ಯೆಗೈದಿತ್ತು. 2006ರಲ್ಲಿ ಮೂರು ಬಾರಿ ಆತನನ್ನು ಕೊಲ್ಲಲು ಇಸ್ರೇಲ್ ಪ್ರಯತ್ನಿಸಿತ್ತಾದರೂ ಅದು ಫಲ ನೀಡಿರಲಿಲ್ಲ.

ಕೊನೆಗೂ ನಸ್ರಲ್ಲಾನನ್ನು ಕೊನೆಗಾಣಿಸಲು ಇಸ್ರೇಲ್‌ಗೆ ನೆರವಿಗೆ ಬಂದುದು ಗುಪ್ತಚರ ಮಾಹಿತಿ. 2024ರ ಜುಲೈನಲ್ಲಿ ನಸ್ರಲ್ಲಾನ ಪ್ರಮುಖ ಸಹಚರ ಫಾವುದ್ ಶುಕ್ರ್‌ನನ್ನು ಹತ್ಯೆಗೈದ ಮೊಸಾದ್ ಆ ಬಳಿಕ ನಸ್ರಲ್ಲಾ ಕುರಿತಂತೆ ಮಾಹಿತಿ ಸಂಗ್ರಹಣೆ ಆರಂಭಿಸಿತು. ನಸ್ರಲ್ಲಾ ಇರಾನಿನ ಭದ್ರತಾ ಮುಖಂಡನೊಬ್ಬನನ್ನು ಲೆಬನಾನ್‌ನಲ್ಲಿ ಭೇಟಿಯಾಗುವುದರ ಮಾಹಿತಿ ಸಿಕ್ಕಿತು. ಆತ ಎಲ್ಲಿ ಈ ಭೇಟಿ ನಿಗದಿಪಡಿಸುತ್ತಾನೆ ಎಂಬ ಮಾಹಿತಿಯನ್ನೂ ಸಂಗ್ರಹಿಸಿತು. ಅತ್ತ ಇಸ್ರೇಲ್‌ನ ಯುದ್ಧ ವಿಮಾನಗಳು ಹಿಜ್ಬುಲ್‌ನ ಪ್ರದೇಶಗಳ ಮೇಲೆ ಬಾಂಬ್ ದಾಳಿ ನಡೆಸುತ್ತಿರಬೇಕಾದರೆ ಇತ್ತ ಮೊಸಾದ್‌ನ ಕೆಲವು ಏಜೆಂಟರು ರಹಸ್ಯವಾಗಿ ಬೆರೂತ್‌ನೊಳಕ್ಕೆ ನುಸುಳಿದರು. ಹಿಜ್ಬುಲ್‌ನ



ಮುಖ್ಯ ಕಚೇರಿಯ ನೆಲಮನೆಯಲ್ಲಿರುವ ಬಂಕರ್‌ನಲ್ಲಿ ಹಿಜ್ಬುಲ್ ಮುಖಂಡರು ಮತ್ತು ಇರಾನಿ ಮುಖಂಡರು ಸಭೆ ಸೇರುವುದರ ಮಾಹಿತಿ ಮೊಸಾದ್‌ಗೆ ದೊರಕಿತ್ತು. ಏಜಂಟರು ಆ ಬಂಕರ್‌ನೊಳಗೆ ಟ್ರ್ಯಾಕಿಂಗ್ ಸಾಧನವೊಂದನ್ನು ಅಳವಡಿಸಿ ಬಂದಂತೆಯೇ ಸದ್ದಿಲ್ಲದೆ ಮರಳಿದರು. ಬಳಿಕ ಆ ಜಾಗದಲ್ಲಿ ನಸ್ರುಲ್ಲಾ ತನ್ನ ಸಹಚರರೊಂದಿಗೆ ಸಭೆ ನಡೆಸುತ್ತಿರುವಾಗ ಇಸ್ರೇಲ್ ಗುರಿ ನಿರ್ದೇಶಿತ ಕ್ಷಿಪಣಿಗಳನ್ನು ಪ್ರಯೋಗಿಸಿ ಆ ಪ್ರದೇಶವನ್ನು ನೆಲಸಮಗೊಳಿಸಿತು.

ಲೆಬನಾನ್‌ನ ಪೇಜರ್ ಬಾಂಬಿಂಗ್

2024ರ ಸೆಪ್ಟೆಂಬರ್ 17ರಂದು ಲೆಬನಾನ್‌ನಾದ್ಯಂತ ಸಾವಿರಾರು ಪೇಜರ್‌ಗಳು ಸ್ಫೋಟಿಸಿ 12 ಮಂದಿ ಸಾವಿಗೀಡಾಗಿ 3000ಕ್ಕೂ ಅಧಿಕ ಮಂದಿ ಗಾಯಗೊಂಡರು. ಅದರ ಮರುದಿನವೇ ಸಾವಿರಾರು ವಾಕಿಟಾಕಿಗಳು ಸ್ಫೋಟಗೊಂಡವು. ಇಲ್ಲೂ 30 ಜನ ಸತ್ತು ಸಾವಿರಾರು ಮಂದಿ ಗಾಯಗೊಂಡರು.

ಎರಡು ತಿಂಗಳ ಬಳಿಕ ಇಸ್ರೇಲ್‌ನ ಪ್ರಧಾನಿ ಈ ಸ್ಫೋಟಗಳು ತಮ್ಮದೇ ಕೃತ್ಯವೆಂದು ಒಪ್ಪಿಕೊಂಡರು. ಬಳಿಕ ಮೊಸಾದ್‌ನ ಮಾಜಿ ಏಜೆಂಟರಿಬ್ಬರು ಈ ಸ್ಫೋಟ ಹೇಗೆ ನಡೆಸಲಾಯಿತು ಎಂಬುದನ್ನು ವಿವರಿಸಿದರು. ಇದಕ್ಕೆ ಸಿದ್ಧತೆ 10 ವರ್ಷಗಳ ಹಿಂದೆಯೆ ನಡೆದಿತ್ತು ಎಂಬುದು ಮಾತ್ರ ಆಶ್ಚರ್ಯವಾದರೂ ಸತ್ಯ. ಮೊಬೈಲ್‌ಗಳಿಂದ ತಮ್ಮನ್ನು ಟ್ರ್ಯಾಕ್ ಮಾಡುವುದು ಸುಲಭ ಎಂದು ಅರಿತಿದ್ದ ಹಿಜ್ಬುಲ್ ತನ್ನ ಸಂಘಟನೆಯ ಸದಸ್ಯರಿಗೆ ಪೇಜರ್ ಮತ್ತು ವಾಕಿಟಾಕಿಗಳನ್ನು ಬಳಸುವಂತೆ ಆದೇಶಿಸಿತ್ತು. ಇದನ್ನು ಕಂಡುಕೊಂಡ ಮೊಸಾದ್ ಅವುಗಳನ್ನೆ ಹಿಜ್ಬುಲ್ ವಿರುದ್ಧ ದಾಳಿ ನಡೆಸಲು ಬಳಸಿಕೊಂಡಿತು.

ಹಿಜ್ಬುಲ್ ಕಡಿಮೆ ಬೆಲೆಗೆ 16,000 ವಾಕಿಟಾಕಿಗಳನ್ನು ಹತ್ತು ವರ್ಷಗಳ ಹಿಂದೆಯೇ ಖರೀದಿಸಿತ್ತು. ಆದರೆ ಅದಕ್ಕೆ ವಾಕಿಟಾಕಿ ಪೂರೈಸಿದ ಕಂಪೆನಿ ನಕಲಿಯಾಗಿತ್ತು. ಅದು ಇಸ್ರೇಲ್ ಹುಟ್ಟು ಹಾಕಿದ ಕಂಪೆನಿ. ಇಸ್ರೇಲ್ ಈ ವಾಕಿಟಾಕಿಗಳ ಬ್ಯಾಟರಿಯಲ್ಲಿ ಅತೀ ಸಣ್ಣ ಸ್ಫೋಟಕವನ್ನು ಅಳವಡಿಸಿ ಅವುಗಳನ್ನು ಪೂರೈಸಿತ್ತು.

2022ರಲ್ಲಿ ಇಂತಹ ಪುಟ್ಟ ಸ್ಫೋಟಕ ಅಳವಡಿಸುವ ಕ್ರಿಯೆಯನ್ನು ಪೇಜರ್‌ಗಳಿಗೂ ವಿಸ್ತರಿಸಲಾಯಿತು. ಹಿಜ್ಬುಲ್ ತೈವಾನ್‌ನ ಕಂಪೆನಿಯೊಂದರಿಂದ ಪೇಜರ್ ಖರೀದಿಸುವುದನ್ನು ಅರಿತ ಮೊಸಾದ್ ಅದೇ ಕಂಪೆನಿಯ ಹೆಸರಿನಲ್ಲಿ ತನ್ನದೊಂದು ನಕಲಿ ಕಂಪೆನಿ ಸ್ಥಾಪಿಸಿತು. ಕಡಿಮೆ ಬೆಲೆಗೆ ಪೇಜರ್‌ಗಳನ್ನು ಪೂರೈಸುವ ಆಫರ್ ನೀಡಿತು. ಇಂತಹ 5,000 ಪೇಜರ್‌ಗಳನ್ನು ಹಿಜ್ಬುಲ್ ಖರೀದಿಸಿತು. ಪೇಜರ್ ಮತ್ತು ವಾಕಿಟಾಕಿಗಳಲ್ಲಿ ಅಳವಡಿಸಿದ್ದ ಸ್ಫೋಟಕವು ಅದರ ಬಳಕೆದಾರನಿಗೆ ಮಾತ್ರ ಹಾನಿ ಮಾಡುವಷ್ಟು ಪ್ರಬಲತೆ ಹೊಂದಿತ್ತೇ ಹೊರತು ಇಡೀ ಪ್ರದೇಶವನ್ನು ನಾಶ ಮಾಡುವಷ್ಟು ಸಾಮರ್ಥ್ಯ ಹೊಂದಿರಲಿಲ್ಲ. ಈ ಉಪಕರಣಗಳ ಬಗ್ಗೆ ಹಿಜ್ಬುಲ್‌ಗೆ ಅನುಮಾನ ಬರಲು ಶುರುವಾಗಿದೆ ಎಂಬ ಮಾಹಿತಿ ಬಂದ ಕೂಡಲೇ ಇಸ್ರೇಲ್ ತನ್ನಲ್ಲಿಂದಲೇ ರಿಮೋಟ್ ಕಂಟ್ರೋಲ್ ಮೂಲಕ ಅವುಗಳನ್ನೆಲ್ಲಾ ಸ್ಫೋಟಿಸಿತು.

ಇಸ್ಮಾಯಿಲ್ ಹನಿಯೆ

ಹಿಜ್ಬುಲ್ ಮುಖಂಡ ನಸ್ರುಲ್ಲಾನನ್ನು ಕೊಲ್ಲುವ ಮೊದಲು ಹಮಾಸ್ ಮುಖಂಡ ಇಸ್ಮಾಯಿಲ್ ಹನಿಯೆನನ್ನು ಕೂಡಾ ಇಸ್ರೇಲ್ ಕೊಲ್ಲಲು ಸಫಲವಾಗಿತ್ತು. ಹಮಾಸ್ ಮುಖಂಡ ಇಸ್ಮಾಯಿಲ್ ಇರಾನಿನ ಅಧ್ಯಕ್ಷರ ಪ್ರಮಾಣವಚನ ಸಮಾರಂಭದಲ್ಲಿ ಭಾಗಿಯಾಗಲೆಂದು ಟೆಹರಾನ್‌ಗೆ ತೆರಳಿದ್ದ. ಆತನ ಬೆಡ್‌ರೂಂನಲ್ಲಿ ಇಸ್ರೇಲ್ ಎರಡು ತಿಂಗಳ ಮೊದಲೇ ಸ್ಫೋಟಕವೊಂದನ್ನು ಅಳವಡಿಸಿತ್ತು. ಟೆಹರಾನ್‌ಗೆ ಬಂದ ಹನಿಯೆ ಆ ಬೆಡ್‌ರೂಂನಲ್ಲಿ ಬಂದು ತಂಗಿರುವುದನ್ನು ಖಚಿತಪಡಿಸಿಕೊಂಡ ಮೊಸಾದ್ ರಿಮೋಟ್ ಕಂಟ್ರೋಲ್ ಮೂಲಕ ಬಾಂಬ್ ಸ್ಫೋಟಗೊಳ್ಳುವಂತೆ ಮಾಡಿತು. ಹನಿಯೇ ಮತ್ತು ಆತನ ಅಂಗರಕ್ಷಕ ಸ್ಫೋಟದಲ್ಲಿ ಮೃತರಾದರು.

ಇರಾನ್‌ಗೆ ಬಂದಾಗ ಹನಿಯೆ ಉಳಿದುಕೊಳ್ಳುವುದು ಎಲ್ಲಿ ಎಂಬ ಖಚಿತ ಮಾಹಿತಿಯನ್ನು ಪಡೆದುಕೊಳ್ಳುವಲ್ಲಿ ಇಸ್ರೇಲ್ ಗುಪ್ತಚರ ಸಂಸ್ಥೆ ಸಫಲವಾದುದು ಈ ಕಾರ್ಯಾಚರಣೆ ಯಶಸ್ವಿಯಾಗಲು ಕಾರಣವಾಯಿತು. ಇಸ್ರೇಲ್‌ನ ಗುಪ್ತಚರರು ಇರಾನಿನ ಆಡಳಿತ ವ್ಯವಸ್ಥೆಯಲ್ಲೂ ತೂರಿಕೊಂಡಿದ್ದಾರೆ ಎಂಬುದು ಕೂಡಾ ಇದರಿಂದ ಸಾಬೀತಾಯಿತು.

ಮೊಹ್ಸಿನ್ ಫಕ್ರಿಜಾದ್

ಈತ ಇರಾನಿನ ಪರಮಾಣು ವಿಜ್ಞಾನಿ. ಇರಾನ್‌ನ ಪರಮಾಣು ಬಾಂಬು ತಯಾರಿ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರ ವಹಿಸಿದ್ದವರು. 2020ರಲ್ಲಿ ಕಾರಿನಲ್ಲಿ ಕೂತಿದ್ದ ಅವರ ಮೇಲೆ ಗುಂಡು ಹಾರಿಸಿ ಕೊಲ್ಲಲಾಯಿತು ಎಂದು ವರದಿಯಾಯಿತು. ಅವರು ಮೃತಪಟ್ಟ ಕೆಲವೇ ಕ್ಷಣಗಳಲ್ಲಿ ಸಮೀಪದಲ್ಲೇ ಇದ್ದ ಒಂದು ಪಿಕಪ್ ಟ್ರಕ್ ಕೂಡಾ ಸ್ಫೋಟಗೊಂಡು ನಾಶವಾಯಿತು. ಈ ಹತ್ಯೆ ಕೂಡಾ ಇಸ್ರೇಲ್ ಮಾಡಿದ್ದೆಂಬುದು ಬಳಿಕ ಬಹಿರಂಗವಾಯಿತು. ರಿಮೋಟ್ ಕಂಟ್ರೋಲ್ ಬಂದೂಕಿನ ಮೂಲಕ ಈ ಹತ್ಯೆ ನಡೆಸಲಾಗಿತ್ತು. ಅದಕ್ಕೂ ಇಸ್ರೇಲ್ ಸಾಕಷ್ಟು ಪೂರ್ವ ಸಿದ್ಧತೆ ನಡೆಸಿತ್ತು. ಮೊದಲಿಗೆ ಅಮೆರಿಕ ನಿರ್ಮಿತ ಅತ್ಯಾಧುನಿಕ ಮೆಶಿನ್‌ಗನ್‌ನ್ನು ಬಿಡಿಬಿಡಿಯಾಗಿ ಇರಾನಿನೊಳಗೆ ತರಲಾಗಿತ್ತು. ಮೊಸಾದ್ ತಂಡವೊಂದು ಎಂಟು ತಿಂಗಳ ಕಾಲ ಶ್ರಮ ವಹಿಸಿ ಆ ಬಂದೂಕನ್ನು ಮರಳಿ ಜೋಡಿಸಿತ್ತು. ಅದಕ್ಕೆ ರಿಮೋಟ್ ಕಂಟ್ರೋಲ್ ಉಪಕರಣ ಕೂಡಾ ಅಳವಡಿಸಲಾಯಿತು. ಅದನ್ನು ಪಿಕಪ್ ಟ್ರಕ್‌ಗೆ ಅಳವಡಿಸಿ, ಆ ಟ್ರಕ್‌ನ್ನು ವಿಜ್ಞಾನಿ ಸಾಗುವ ದಾರಿಯಲ್ಲಿ ನಿಲ್ಲಿಸಲಾಯಿತು. ಕಾರಿನಲ್ಲೇ ವಿಜ್ಞಾನಿ ಜತೆಗೇ ಪ್ರಯಾಣಿಸುವ ಅವರ ಪತ್ನಿಗೆ ಯಾವುದೇ ಹಾನಿಯಾಗದಂತೆ, ದೂರ ನಿಯಂತ್ರಣದ ಮೂಲಕವೇ ಆ ಬಂದೂಕು ಚಲಾಯಿಸುವಂತೆ ಮಾಡಲಾಯಿತು. ಅದರಂತೆ ವಿಜ್ಞಾನಿ ಆ ದಾರಿಯಲ್ಲಿ ಸಾಗುತ್ತಿದ್ದಾಗ ರಿಮೋಟ್ ಕಂಟ್ರೋಲ್ ಮೂಲಕ ಆ ಮೆಶಿನ್ ಗನ್ ಗುಂಡುಹಾರಿಸುವಂತೆ ಮಾಡಿ ಅವರನ್ನು ಹತ್ಯೆ ಮಾಡಲಾಯಿತು. ಅದರ ಕುರುಹು ಸಿಗದಂತೆ ಮಾಡಲು ಬಂದೂಕು ಇದ್ದ ಪಿಕಪ್ ಟ್ರಕ್ಕನ್ನೇ ಬಳಿಕ ಸ್ಫೋಟಿಸಲಾಯಿತು.

ಉನ್ನತ ಶಿಕ್ಷಣದ ಪುನರುತ್ಥಾನ

ಶಿಕ್ಷಣ ಎಂದಿಗೂ ನಿಂತ ನೀರಲ್ಲ. ಅದು ಆಕಾಶದಿಂದ ಭೂಮಿಗೆ ಬೀಳುವ ಮಳೆಯ ಹನಿಯಂತೆ ಹರಿಯುತ್ತಲೇ ಇರುತ್ತದೆ. ಬದಲಾವಣೆ ಅದರ ಸ್ವಭಾವ. ಪ್ರತಿಯೊಬ್ಬ ಶಿಕ್ಷಕರಿಗೂ ತಿಳಿದಿರುವ ಸತ್ಯ ಏನೆಂದರೆ ಕಲಿಕೆ ನಿರಂತರ. ಕಲಿಸುವುದು ನಿರಂತರ.

ಡಾ. ರವೀಶ ಎನ್.ಎಸ್.

ಉನ್ನತ ಶಿಕ್ಷಣ ವ್ಯವಸ್ಥೆ ತನ್ನ ಅಂತ್ಯಕಾಲವನ್ನು ಎದುರಿಸುತ್ತಿದೆ ಎನ್ನುವ ವಾದಗಳು ಇತ್ತೀಚಿನ ವರ್ಷಗಳಲ್ಲಿ ಕೇಳಿಬರುತ್ತಿವೆ. ಆದರೆ ವಾಸ್ತವದಲ್ಲಿ ನಡೆಯುತ್ತಿರುವುದು ಅಂತ್ಯವಲ್ಲ; ಅದು ಒಂದು ಆಳವಾದ ರೂಪಾಂತರ. ಹಿಂದೆ ಪದವಿ ಪ್ರಮಾಣಪತ್ರವೇ ಉದ್ಯೋಗದ ಪ್ರವೇಶಪತ್ರವಾಗಿತ್ತು. ಇಂದು ಉದ್ಯೋಗದಾತರು ಕೇವಲ ಪ್ರಮಾಣಪತ್ರವನ್ನಲ್ಲ, ವ್ಯಕ್ತಿಯ ನೈಜ ಸಾಮರ್ಥ್ಯ, ಸಮಸ್ಯೆ ಪರಿಹಾರ ಕೌಶಲ ಮತ್ತು ಅನ್ವಯಾತ್ಮಕ ಚಿಂತನೆಗಳನ್ನು ಅಳೆಯುತ್ತಿದ್ದಾರೆ. Indeed ಮತ್ತು LinkedIn ವರದಿಗಳ ಪ್ರಕಾರ ಅನೇಕ ಉದ್ಯೋಗ ಜಾಹೀರಾತುಗಳಲ್ಲಿ ಪದವಿ ಕಡ್ಡಾಯತೆಯನ್ನು ಸಡಿಲಗೊಳಿಸಲಾಗಿದೆ. ಆದರೆ ಇದರ ಅರ್ಥ 'ಪದವಿ ಬೇಡ' ಎನ್ನುವುದಲ್ಲ; 'ಪದವಿ ಮಾತ್ರ ಸಾಕಾಗುವುದಿಲ್ಲ' ಎನ್ನುವ ಹೊಸ ವಾಸ್ತವದ ಅಂಗೀಕಾರ. ಹೀಗಾಗಿ ಪ್ರಶ್ನೆ ಪದವಿಯ ಅಗತ್ಯತೆ ಕುರಿತಲ್ಲ; ಅದರ ಸ್ವರೂಪ ಮತ್ತು ಉದ್ದೇಶ ಮರುಪರಿಭಾಷೆಗೊಳ್ಳುತ್ತಿರುವುದು ಕುರಿತಾಗಿದೆ.

ಜಾಗತಿಕ ಮಟ್ಟದಲ್ಲಿ University of Kent ಮತ್ತು University of Greenwich ವಿಲೀನದಂತಹ ಬೆಳವಣಿಗೆಗಳು ಉನ್ನತ ಶಿಕ್ಷಣ ರಂಗ ಎದುರಿಸುತ್ತಿರುವ ಆರ್ಥಿಕ ಹಾಗೂ ರಚನಾತ್ಮಕ ಸವಾಲುಗಳನ್ನು ಸೂಚಿಸುತ್ತವೆ. ಜಗತ್ತಿನ ಪ್ರಸಿದ್ಧ Harvard University ಕೂಡ ಪದವಿಗಳ ಮೌಲ್ಯ ಬದಲಾಗುತ್ತಿರುವ ಬಗ್ಗೆ ಅಧ್ಯಯನ ನಡೆಸಿದೆ. ಜ್ಞಾನದ ಆಯುಷ್ಯ ಕಡಿಮೆಯಾಗುತ್ತಿರುವುದು ಸತ್ಯ. ತಂತ್ರಜ್ಞಾನದ ವೇಗದಿಂದ ನಾಲ್ಕು ವರ್ಷಗಳ ಪದವಿ ಮುಗಿಯುವ ಹೊತ್ತಿಗೆ ಕೆಲವು ವಿಷಯಗಳು ಹಳೆಯದಾಗಬಹುದು. ಆದರೆ ಈ ವಾಸ್ತವವು ವಿಶ್ವವಿದ್ಯಾಲಯಗಳ ಅಗತ್ಯ ಕಡಿಮೆಯಾಗಿದೆ ಎಂಬುದಕ್ಕೆ ಸಾಕ್ಷಿಯಲ್ಲ. ಬದಲಿಗೆ 'ಸ್ಥಿರ ಪಠ್ಯಕ್ರಮ' ಮಾದರಿಯಿಂದ 'ಚಲನೆಯ, ನವೀಕೃತ ಕಲಿಕಾ ವ್ಯವಸ್ಥೆ'ಗೆ ಬದಲಾವಣೆಯ ಅಗತ್ಯವನ್ನು ಎತ್ತಿ ತೋರಿಸುತ್ತದೆ. ಜ್ಞಾನವನ್ನು ಕೇವಲ ಬೋಧಿಸುವುದಲ್ಲ, ಜ್ಞಾನವನ್ನು ನಿರ್ಮಿಸುವ, ಪ್ರಶ್ನಿಸುವ ಮತ್ತು ಸಮಾಜಕ್ಕೆ ಅನ್ವಯಿಸುವ ಸಾಮರ್ಥ್ಯವನ್ನು ಬೆಳೆಸುವುದು ಇಂದಿನ ಶಿಕ್ಷಣದ ಧ್ಯೇಯ.

ಈ ಸಂಕ್ರಮಣ ಕಾಲದಲ್ಲಿ ಹೆಚ್ಚು ಮೆಚ್ಚುಗೆಗೆ ಅರ್ಹರಾಗಿರುವವರು ನಮ್ಮ ಪ್ರಾಧ್ಯಾಪಕ ವರ್ಗ. 'ಕಲಿಕೆ ನಿರಂತರ' ಎಂಬ ಸತ್ಯವನ್ನು ಅವರು ತಮ್ಮ ಜೀವನದಲ್ಲೇ ಅನುಸರಿಸಿದ್ದಾರೆ. ಇ-ಮೇಲ್, ವಾಟ್ಸಾಪ್, ಇನ್ಸ್ಟಾಗ್ರಾಮ್, ಸ್ನ್ಯಾಪ್‌ಚಾಟ್, ಸಾಮಾಜಿಕ ಮಾಧ್ಯಮಗಳು, ಡಿಜಿಟಲ್ ಬ್ಯಾಂಕಿಂಗ್, ಡಿಜಿಟಲ್ ಗ್ರಾಹಕ ವರ್ತನೆ, ಆನ್‌ಲೈನ್ ಮಾರುಕಟ್ಟೆಗಳು, ಕೃತಕ ಬುದ್ಧಿಮತ್ತೆ–ಇವುಗಳಲ್ಲಿ ಯಾವುದೂ ಅವರ ವಿದ್ಯಾರ್ಥಿ ಜೀವನದ ಪಠ್ಯಕ್ರಮದ ಭಾಗವಾಗಿರಲಿಲ್ಲ. ಆದರೂ 'ನಾನು ಓದಿಲ್ಲ, ಆದ್ದರಿಂದ ಬೋಧಿಸುವುದಿಲ್ಲ' ಎಂದು ಹೇಳದೇ, ಬದಲಾದ ಸನ್ನಿವೇಶಕ್ಕೆ ತಕ್ಕಂತೆ ತಮ್ಮನ್ನು ತಾವು ನವೀಕರಿಸಿಕೊಂಡು ಇಂದಿನ ವಿದ್ಯಾರ್ಥಿಗಳಿಗೆ ನಿಖರವಾಗಿ, ಆತ್ಮವಿಶ್ವಾಸದಿಂದ ಬೋಧಿಸುತ್ತಿದ್ದಾರೆ. ದೊಡ್ಡ ದೊಡ್ಡ ಹುದ್ದೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ಜವಾಬ್ದಾರಿಯನ್ನು ಅವರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಹುದ್ದೆಗಳು ಖಾಲಿ ಇರಬಹುದು. ಆದರೆ ಪಾಠಗಳು ನಿಂತಿಲ್ಲ. ತರಗತಿಗಳು ತೊಂದರೆಯಾಗದಂತೆ ಉನ್ನತ ಶಿಕ್ಷಣದ ಹೊಣೆ ಹೊತ್ತಿರುವ ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ನಿರಂತರವಾಗಿ ನೆರವೇರಿಸಿದ್ದಾರೆ. ಈ ಕ್ರಿಯಾಶೀಲತೆ, ವೃತ್ತಿಪರ ಕಾಳಜಿ ಮತ್ತು ಆತ್ಮಸಮರ್ಪಣೆ ಉನ್ನತ ಶಿಕ್ಷಣವನ್ನು ಮತ್ತೊಂದು ಮಜಲಿಗೆ ಕೊಂಡೊಯ್ಯುವ ಶಕ್ತಿ ಹೊಂದಿದೆ.

ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಮಾಹಿತಿ ಅಪಾರವಾಗಿದೆ. ಆದರೆ ಮಾಹಿತಿ ಮತ್ತು ಅರ್ಥ ಒಂದೇ ಅಲ್ಲ. Yuval Noah Harari ಸೂಚಿಸುವಂತೆ, ಮಾನವ ಸಮಾಜವು ನಿರಂತರ ಮರುಕಲಿಕೆಗೆ ಸಿದ್ಧವಾಗಬೇಕು. World Economic Forum ವರದಿಗಳ ಪ್ರಕಾರ ಮುಂಬರುವ ವರ್ಷಗಳಲ್ಲಿ ಉದ್ಯೋಗ ಕೌಶಲಗಳಲ್ಲಿ ಮಹತ್ತರ ಬದಲಾವಣೆ ಆಗಲಿದೆ. ಇಂತಹ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳ ಪಾತ್ರ ಕಡಿಮೆಯಾಗುವುದಿಲ್ಲ; ಬದಲಿಗೆ ಹೆಚ್ಚಾಗುತ್ತದೆ. ಏಕೆಂದರೆ AI ಮಾಹಿತಿ ನೀಡಬಹುದು, ಆದರೆ ನೈತಿಕ ವಿವೇಕ, ಮೌಲ್ಯಾಧಾರಿತ ನಿರ್ಣಯ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ರೂಪಿಸುವುದು ಮಾನವೀಯ ಶಿಕ್ಷಣದ ಮೂಲಕವೇ ಸಾಧ್ಯ.

ಉನ್ನತ ಶಿಕ್ಷಣದ ಮತ್ತೊಂದು ಅವಿಭಾಜ್ಯ ಅಂಗ ಸಂಶೋಧನೆ. ಬೋಧನೆ ಮಾತ್ರವಲ್ಲ, ಜ್ಞಾನಸೃಷ್ಟಿಯೂ ವಿಶ್ವವಿದ್ಯಾಲಯಗಳ ಮೂಲ ಕರ್ತವ್ಯ. ಇಂದಿನ ಕಾಲ ಸಂಶೋಧನೆಗೆ ಪರ್ವಕಾಲ ಎಂದು ಹೇಳಬಹುದು. ಡಿಜಿಟಲ್ ವೇದಿಕೆಗಳು, ಮುಕ್ತ ಮಾಹಿತಿಯ ಲಭ್ಯತೆ, ಕೃತಕ ಬುದ್ಧಿಮತ್ತೆಯ ಸಹಕಾರ–ಇವುಗಳ ಮೂಲಕ ನಾವು ನಮ್ಮದೇ ವಿಷಯಗಳನ್ನು ಸೃಷ್ಟಿಸಬಹುದು, ನಮ್ಮದೇ ಭಾಷೆಗಳಲ್ಲಿ ಜಗತ್ತನ್ನು ಮುಟ್ಟಬಹುದು. ಕಂಟೆಂಟ್ ಸೃಷ್ಟಿಕರ್ತರಾಗುವುದರಿಂದ ಹಿಡಿದು ಜಾಗತಿಕ ಸಂಶೋಧನಾ ಜಾಲಗಳಿಗೆ ಸೇರುವವರೆಗೂ ಅನೇಕ ಅವಕಾಶಗಳು ತೆರೆದಿವೆ. AI ಅನ್ನು ಸ್ಪರ್ಧಿಯಾಗಿ ಅಲ್ಲ, ಸಹಕಾರಿಯಾಗಿ ಬಳಸಿಕೊಂಡರೆ ನಮ್ಮ ಶಿಕ್ಷಣ ವ್ಯವಸ್ಥೆ ಮತ್ತೊಂದು ಎತ್ತರ ತಲುಪಬಹುದು.

ಬದಲಾಗುತ್ತಿರುವ ಕಾಲಘಟ್ಟದಲ್ಲಿ ಶಿಕ್ಷಣ ಯಾವಾಗಲೂ ಸಾಮಾಜಿಕ ಬದಲಾವಣೆಯ ಸಾಧನವಾಗಿದೆ. ಸಾಮಾಜಿಕ ನ್ಯಾಯದ ಪರಿಕಲ್ಪನೆ ಶಿಕ್ಷಣದ ಮೂಲಕವೇ ವಿಸ್ತರಿಸಿದೆ. ಹಿಂದುಳಿದ ವರ್ಗಗಳಿಗೆ ಶಿಕ್ಷಣದ ಪ್ರವೇಶ ದೊರೆತಾಗ ಮಾತ್ರ ಸಮಾನತೆ ಸಾಧ್ಯವಾಯಿತು.

ಹೀಗಾಗಿ ಇಂದಿನ ರೂಪಾಂತರವು ಕೇವಲ ತಾಂತ್ರಿಕ ಬದಲಾವಣೆಯಲ್ಲ; ಅದು ಒಳಗೊಳ್ಳುವಿಕೆಯ, ಸಮಾನತೆಯ ಮತ್ತು ನ್ಯಾಯದ ದಿಕ್ಕಿನಲ್ಲಿ ಸಾಗುವ ಅವಕಾಶವೂ ಹೌದು. ವಿಶ್ವವಿದ್ಯಾಲಯಗಳು ಕೌಶಲ ತರಬೇತಿ ಕೇಂದ್ರಗಳಾಗಿ ಕುಗ್ಗಬಾರದು; ಅವು ಸಮಾಜದ ಬೌದ್ಧಿಕ ಮತ್ತು ನೈತಿಕ ಬುನಾದಿಯನ್ನು ಬಲಪಡಿಸುವ ಕೇಂದ್ರಗಳಾಗಿರಬೇಕು.

ಶಿಕ್ಷಣ ಎಂದಿಗೂ ನಿಂತ ನೀರಲ್ಲ. ಅದು ಆಕಾಶದಿಂದ ಭೂಮಿಗೆ ಬೀಳುವ ಮಳೆಯ ಹನಿಯಂತೆ ಹರಿಯುತ್ತಲೇ ಇರುತ್ತದೆ. ಬದಲಾವಣೆ ಅದರ ಸ್ವಭಾವ. ಪ್ರತಿಯೊಬ್ಬ ಶಿಕ್ಷಕರಿಗೂ ತಿಳಿದಿರುವ ಸತ್ಯ ಏನೆಂದರೆ ಕಲಿಕೆ ನಿರಂತರ. ಕಲಿಸುವುದು ನಿರಂತರ. ಮತ್ತು ಶಿಕ್ಷಣವೇ ಸಮಾಜದ ಅನೇಕ ಪ್ರಶ್ನೆಗಳಿಗೆ ದೀರ್ಘಕಾಲಿಕ ಉತ್ತರ. ಆದ್ದರಿಂದ ಇದು ಉನ್ನತ ಶಿಕ್ಷಣದ ಪತನಕಾಲವಲ್ಲ. ಇದು ನವಯುಗಾರಂಭ–ಸಾಮರ್ಥ್ಯ, ಸಂಶೋಧನೆ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ದಿಕ್ಕಿನಲ್ಲಿ ಮುನ್ನಡೆಯುವ ಹೊಸ ಅಧ್ಯಾಯ.

ಕಿರುಸುದ್ದಿ

ಮಾ.10ರಿಂದ ರಾಮಕೃಷ್ಣ ಮಠದಲ್ಲಿ ಯೋಗಾಸನ ಶಿಬಿರ

ಮಂಗಳೂರು: ನಗರದ ಮಂಗಳಾದೇವಿಯಲ್ಲಿರುವ ರಾಮಕೃಷ್ಣ ಮಠದಲ್ಲಿ ಮಾ. 10ರಿಂದ ಸಂಜೆ 5ರಿಂದ 6.30ರವರೆಗೆ ಯೋಗಾಸನ ಶಿಬಿರ ನಡೆಯಲಿದೆ. ಹಿರಿಯ ಯೋಗಗುರು ಗೋಪಾಲಕೃಷ್ಣ ದೇಲಂಪಾಡಿ ಅವರು ಯೋಗಾಸನ, ಮುದ್ರೆಗಳು, ಕ್ರಿಯೆಗಳು, ಪ್ರಾಣಾಯಾಮ, ಸೂರ್ಯನಮಸ್ಕಾರ, ಧ್ಯಾನ ಮಾಡುವ ವಿಧಾನ ತಿಳಿಸಿಕೊಡುವರು. ಆಸಕ್ತರು ತಮ್ಮ ಹೆಸರುಗಳನ್ನು ಆಶ್ರಮದ ಕಾರ್ಯಾಲಯದಲ್ಲಿ ನೋಂದಾಯಿಸಬಹುದು. ಹೆಚ್ಚಿನ ವಿವರಗಳಿಗಾಗಿ ದೂ. 0824-2414412 ಸಂಪರ್ಕಿಸಬಹುದು.

ಬಿಜೆಪಿ ದ.ಕ. ಜಿಲ್ಲಾ ಓಬಿಸಿ ಮೋರ್ಚಾದ ಉಪಾಧ್ಯಕ್ಷರಾಗಿ ಪುರುಷೋತ್ತಮ್ ಆಯ್ಕೆ

ಬಂಟ್ವಾಳ: ಬಿಜೆಪಿ ದ.ಕ.ಜಿಲ್ಲಾ ಓಬಿಸಿ ಮೋರ್ಚಾದ ಉಪಾಧ್ಯಕ್ಷರಾಗಿ ಪುರುಷೋತ್ತಮ ಸಾಲ್ಯಾನ್ ನರಿಕೊಂಬು ಆಯ್ಕೆಯಾಗಿದ್ದಾರೆ. ಕಳೆದ 25 ವರ್ಷಗಳಿಂದ ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ವಿಟ್ಲ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷರಾಗಿ, ಬಂಟ್ವಾಳ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷರಾಗಿ, ಬಂಟ್ವಾಳ ವಿಧಾನಸಭಾ ಕ್ಷೇತ್ರದ ಸಹಕಾರಿ ಪ್ರಕೋಷ್ಠದ ಸಂಚಾಲಕನಾಗಿ, ದ.ಕ. ಜಿಲ್ಲಾ ಸಹಕಾರಿ ಯೂನಿಯನ್ ನ ನಿರ್ದೇಶಕರಾಗಿ, ಜಿಲ್ಲಾ ಓಬಿಸಿ ಮೋರ್ಚಾದ ಉಪಾಧ್ಯಕ್ಷನಾಗಿ, ನರಿಕೊಂಬು ಗ್ರಾಮ ಪಂಚಾಯತಿ ನ ಸದಸ್ಯನಾಗಿ , ಪ್ರಸ್ತುತ ಜಿಲ್ಲಾ ಕಾರ್ಯಕಾರಿಣಿ ಸದಸ್ಯರಾಗಿದ್ದು,ಇದೀಗ ಪಕ್ಷ ಅವರ ಪ್ರಾಮಾಣಿಕ ಸೇವೆ,ಸಂಘಟನಾತ್ಮಕ ಚಟುವಟಿಕೆಯನ್ನು ಗುರುತಿಸಿ ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಈ ನೇಮಕಾತಿಯನ್ನು ಮಾಡಿದ್ದಾರೆ.



ಮಂಗಳೂರು ವಿ.ವಿ. ಪದವಿ ಪರೀಕ್ಷೆ: ಫಿಲೋಮಿನಾ ಕಾಲೇಜಿಗೆ 4 ರ್‍ಯಾಂಕ್‌ಗಳು

ಪುತ್ತೂರು: 2024-25ನೇ ಶೈಕ್ಷಣಿಕ ವರ್ಷದ ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಗಳಲ್ಲಿ ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನ ಬಿಎಸ್ಸಿ ವಿಭಾಗದಲ್ಲಿ ಶ್ರೀದೇವಿ ಎನ್.(4065 ಅಂಕಗಳು) ಪ್ರಥಮ ರ್‍ಯಾಂಕ್, ಆಯಿಷತ್ ಶಮಾ ಎ.(4036) 4ನೇ ರ್‍ಯಾಂಕ್, ಬಿ.ಎ. ವಿಭಾಗದಲ್ಲಿ ಮಾದ್ರಿ ಅರ್ಚನಾ(4186) 8ನೇ ರ್‍ಯಾಂಕ್, ಬಿ.ಬಿ.ಎ. ವಿಭಾಗದಲ್ಲಿ ಶೈರಿನ್ ಬಾನು(3855) 10ನೇ ರ್‍ಯಾಂಕ್ ಪಡೆದಿದ್ದಾರೆ.



ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಬಿ. ಉಮೇಶ್ ಕುಲಾಲ್, ಅಗ್ರಹಾರ ಬೀದಿ, ನಾವೂರು, ಬಂಟ್ವಾಳ (ತಾ).
2. ಪ್ರೇಮಾನಂದ ಸುರೇಖ ಶೆಟ್ಟಿ, 'ನಂದಗೋಕುಲ', ಪೆರ್ಮುದೆ ವಯಾ ಬಜಪೆ.
3. ಲೀಲಾವತಿ ಕೊರಗಪ್ಪ ಪೂಜಾರಿ, ಹತ್ತು ಕಳಸೆ ಮನೆ, ಕರುವೇಲು, ಬಿಳಿಯೂರು ಪೆರ್ನೆ, ಬಂಟ್ವಾಳ (ತಾ).
4. ನಳಿನಿ ಮತ್ತು ಉಗ್ಗಪ್ಪ ಸುವರ್ಣ, ಕುಕ್ಕುದಡಿ, ಪಾಲಡ್ಕ - ಸಚ್ಚರಿಪೇಟೆ ಗಾಂಧಿ ಮೈದಾನದಲ್ಲಿ.
5. ದೆಪ್ಪುಣಿಗುತ್ತು ದಿ। ಸದಾಶಿವ ಶೆಟ್ರ ಹಾಗೂ ಶೆಡ್ಡೆ ಮೇಗಿನ ಮನೆ ದಿ। ಜಯರಾಮ ನಾಯ್ಕರ ಸ್ಮರಣಾರ್ಥ ಕಾವೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಠಾರ.
6. ವಿಜಯ ಸುಬ್ರಹ್ಮಣ್ಯ ರಾವ್, 'ವಿಕಾಸ್ ನಿವಾಸ', ಸನ್ನಿಧಿ ಲೇಔಟ್, ಬೈರಿಕಟ್ಟೆ, ಬನ್ನೂರು, ಪುತ್ತೂರು.
7. ನಿತ್ಯಾನಂದ ಭಜನಾ ಮಂದಿರ, ಹಳೆಗೇಟು, ನಾವೂರು, ಬಂಟ್ವಾಳ (ತಾ)..

ಶ್ರೀ ಧರ್ಮಸ್ಥಳ ಮೇಳ
ಕುಂಭಾಶಿಯಲ್ಲಿ
ಶ್ರೀ ವಿನೋದರಾಯ ಹೆಗ್ಡೆ, ಆರ್ಯದುರ್ಗಾ ಮನೆ

ಶ್ರೀ ಸಾಲಿಗ್ರಾಮ ಮೇಳ
ಮಡಬೂರಿನಲ್ಲಿ ಜಾತ್ರೆ ಪ್ರಯುಕ್ತ -
ಷಣ್ಮುಖಪ್ರಿಯ

ಶ್ರೀ ಪೆರ್ಡೂರು ಮೇಳ
ಮನಮನೆ ಸಿದ್ದಾಪುರದಲ್ಲಿ
ಗುಣಸುಂದರಿ, ವೀರ ಬರ್ಬರಿಕೆ

ಶ್ರೀ ಹನುಮಗಿರಿ ಮೇಳ
ಹೊಸಬೆಟ್ಟುವಿನಲ್ಲಿ

ಶ್ರೀ ಪಾವಂಜೆ ಮೇಳ
ಪುತ್ತಿಗೆ ಚೀವ ತರವಾಡು, ಮುಗು, ಮಂಜೇಶ್ವರದಲ್ಲಿ
ಬಪ್ಪನಾಡು ಕ್ಷೇತ್ರ ಮಹಾತ್ಮೆ



ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವರ ಗರ್ಡಾಡಿಯಲ್ಲಿರುವ ನಿವಾಸಕ್ಕೆ ಹೊಸನಗರ ಶ್ರೀ ರಾಮಚಂದ್ರಾಪುರ ಮಠದ ಪೀಠಾಧಿಪತಿಗಳಾದ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿಯವರು ಗುರುವಾರ ಆಗಮಿಸಿ ಆಶೀರ್ವದಿಸಿದರು.

ಕರಾವಳಿ ಭಾಗದ ಜಿಲ್ಲೆಗಳಲ್ಲಿ ಇಂದಿನಿಂದಲೇ ಬೆಳ್ಳಿತೆರೆ ಏರಲಿದೆ 'ಧರ್ಮಚಾವಡಿ' ತುಳು ಚಿತ್ರ

ಮಂಗಳೂರು: ಕರಾವಳಿಯಾದ್ಯಂತ ಬಿಡುಗಡೆಗೊಂಡು ಜನಮನ್ನಣೆ ಪಡೆದ ಕೃಷ್ಣವಾಣಿ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಜಗದೀಶ್ ಅಮೀನ್ ನಿರ್ಮಾಣದ ತುಳು ಸಿನೆಮಾ ಧರ್ಮಚಾವಡಿ ಇದೀಗ ಟಾಕೀಸ್ ಆ್ಯಪ್ ಓಟಿಟಿಯಲ್ಲಿ ಮಾ.6ರಂದು ಬಿಡುಗಡೆಯಾಗಲಿದೆ ಎಂದು ಸಿನೆಮಾ ನಿರ್ದೇಶಕ ನಿತಿನ್ ರೈ ಕುಕ್ಕುವಳ್ಳಿ ತಿಳಿಸಿದರು.

ಧರ್ಮ ಚಾವಡಿ ಸಿನೆಮಾ ಕರಾವಳಿಯಾದ್ಯಂತ ಉತ್ತಮ ಪ್ರದರ್ಶನ ಕಂಡಿದೆ. ಆದರೆ, ಚಿತ್ರ ಬಿಡುಗಡೆಯ ಸಂದರ್ಭದಲ್ಲಿ ಸಿನೆಮಾ ನೋಡಲು ಕೆಲವರಿಗೆ ಸಾಧ್ಯವಾಗಿರಲಿಲ್ಲ. ಇತರ ಸಿನೆಮಾ ಅದೇ ಕಾಲಕ್ಕೆ ಬಂದ ಕಾರಣದಿಂದ ಥಿಯೇಟರ್‌ನಲ್ಲಿ ಧರ್ಮಚಾವಡಿ ಹೆಚ್ಚು ದಿನ ಪ್ರದರ್ಶನಕ್ಕೆ ಅವಕಾಶ ದೊರಕಿರಲಿಲ್ಲ. ಆದರೆ, ಸಿನೆಮಾ ನೋಡಬೇಕು ಎಂಬ ಆಸಕ್ತಿಯನ್ನು ತುಳುನಾಡಿನ ಜನರು ವ್ಯಕ್ತಪಡಿಸಿದ್ದರು. ಇದಕ್ಕಾಗಿ ಧರ್ಮಚಾವಡಿಯನ್ನು ಇದೀಗ ಮೊಬೈಲ್‌ನಲ್ಲಿಯೇ ನೋಡುವ ಅವಕಾಶ ಕಲ್ಪಿಸಲಾಗಿದೆ. ಟಾಕೀಸ್ ಆ್ಯಪ್ ಓಟಿಟಿ ಮೂಲಕ ಸಿನೆಮಾ ಪ್ರೇಕ್ಷಕರಿಗೆ ಲಭ್ಯವಾಗಲಿದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.



ನಟ ರಮೇಶ್ ರೈ ಕುಕ್ಕುವಳ್ಳಿ ಮಾತನಾಡಿ, ಈ ಹಿಂದೆ ಧರ್ಮದೈವ ಎಂಬ ಚಿತ್ರ ನಿರ್ದೇಶಿಸಿದ್ದ ನಿತಿನ್ ರೈ ಕುಕ್ಕುವಳ್ಳಿ ಅವರೇ ಧರ್ಮಚಾವಡಿ ಮಾಡಿದ್ದಾರೆ. ಮುಂದೆ ಬನ ಎಂಬ ತುಳು ಸಿನೆಮಾ ಮಾಡುತ್ತಿದ್ದಾರೆ. ತುಳು ಸಿನೆಮಾ ಪಾಲಿಗೆ ಓಟಿಟಿ ಅವಕಾಶ ಹೆಚ್ಚು ಅನುಕೂಲಕರವಾಗಲಿದೆ ಎಂದರು.

ನಟ ರಕ್ಷಣ್ ಮಾಡೂರು, ನಟಿ ನೇಹಾ ಕೋಟ್ಯಾನ್, ಚಿತ್ರ ಸಾಹಿತಿ ರಝಾಕ್ ಪುತ್ತೂರು, ಸ್ವಯಂಪ್ರಭ ಎಂಟರ್‌ಟೈನ್‌ಮೆಂಟ್ ಅಡ್ಮಿನ್ ಎಕ್ಸಿಕ್ಯೂಟಿವ್ ಚಿದಾನಂದ ಪೈ ಉಪಸ್ಥಿತರಿದ್ದರು.

30 ನಿಮಿಷದಲ್ಲಿ ಮೂರು ಕಾರ್ಮಿಕರ ಕೆಲಸ | ಮಹತ್ವಾಕಾಂಕ್ಷಿ ಯೋಜನೆ ಕಾಸರಗೋಡಲ್ಲಿ ಅನುಷ್ಠಾನ

ಬಾಳೆ ತೋಟದಲ್ಲಿ ಡ್ರೋನ್ ಹವಾ!

ಕಾಸರಗೋಡು: ಮಹತ್ವಾಕಾಂಕ್ಷೆಯ ಯೋಜನೆಯೊಂದು ಕಾಸರಗೋಡು ಜಿಲ್ಲೆಯಲ್ಲಿ ಅನುಷ್ಠಾನಕ್ಕೆ ಬಂದಿದೆ. ಅದರಂತೆ ಮಡಿಕ್ಕೈ ಮಣಕ್ಕಡವ್ ಪ್ರದೇಶದ ಬಾಳೆ ತೋಟದಲ್ಲಿ ಜಿಲ್ಲಾ ಕೃಷಿ ವಿಜ್ಞಾನ ಕೇಂದ್ರದ ನೇತೃತ್ವದಲ್ಲಿ ಡ್ರೋನ್ ಮೂಲಕ ನಡೆಸಲಾದ ಗೊಬ್ಬರ ಮಿಶ್ರಣ ಪ್ರಯೋಗವು ಕೃಷಿಕರಲ್ಲಿ ನೂತನ ಅರಿವು, ಕುತೂಹಲ ಹಾಗೂ ಹೊಸತನವನ್ನು ಮೂಡಿಸುವಲ್ಲಿ ಯಶಸ್ವಿಯಾಯಿತು. ಮೂರು ಮಂದಿ ಕಾರ್ಮಿಕರು ಒಂದು ದಿನಪೂರ್ತಿ ಮಾಡಬೇಕಾದ ಕೆಲಸವನ್ನು ಡ್ರೋನ್ ಮೂಲಕ ಕೇವಲ ಮೂವತ್ತು ನಿಮಿಷಗಳಲ್ಲಿ ಸಮರ್ಪಕವಾಗಿ ಪೂರ್ಣಗೊಳಿಸಲಾಯಿತು.

ಫಸಲು ಹೆಚ್ಚಳಕ್ಕಾಗಿ ಉಪಯೋಗಿಸುವ ಗೊಬ್ಬರ ಮಿಶ್ರಣವನ್ನು ಪರೀಕ್ಷಾರ್ಥವಾಗಿ ಬಾಳೆ ಕೃಷಿಗೆ ಡ್ರೋನ್ ಮೂಲಕ ಪ್ರಯೋಗಿಸಲಾಯಿತು. ಕೇರಳ ವಿಶ್ವವಿದ್ಯಾಲಯವು ಬನಾನಸಂಪೂರ್ಣ ಮಲ್ಟಿಪ್ಲಸ್ ಎಂಬ ಮಿಶ್ರಣವನ್ನು ಅಭಿವೃದ್ಧಿಪಡಿಸಿದೆ. ಬಾಳೆ ಗಿಡಗಳನ್ನು ನಾಟಿ ಮಾಡಿ ಎರಡನೇ ತಿಂಗಳಿನಿಂದ ಬಳಿಕದ ಎರಡು ತಿಂಗಳುಗಳ ಕಾಲಾವಧಿಯಲ್ಲಿ ಮಿಶ್ರಣವನ್ನು ಎಲೆಗಳಿಗೆ ಸಿಂಪಡಿಸಬೇಕು ಎಂದು ಕೃಷಿ ವಿಶ್ವವಿದ್ಯಾಲಯವು ನಿರ್ದೇಶಿಸುತ್ತದೆ.

ಜಿಲ್ಲೆಯಲ್ಲಿ ಪೋಷಕಾಂಶಗಳ ಕೊರತೆ ಕಾರಣದಿಂದಾಗಿ ಬಾಳೆ ಎಲೆಗಳು ಸುರುಟುವುದು ಮೊದಲಾದ ರೋಗಗಳನ್ನು ಸಮರ್ಥವಾಗಿ ತಡೆಗಟ್ಟಲು ಮತ್ತು ಪ್ರತಿರೋಧ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಮಿಶ್ರಣ ಸಿಂಪಡಣೆ ಅನಿವಾರ್ಯವಾಗಿದೆ. ಸಾಮಾನ್ಯವಾಗಿ ಒಂದು ಎಕ್ರೆ ತೋಟದಲ್ಲಿ ಗೊಬ್ಬರ ಪ್ರಯೋಗಿಸಲು 250 ರಿಂದ 300 ಲೀಟರ್‌ನಷ್ಟು ನೀರು ಬೇಕಾಗುತ್ತದೆ. ಡ್ರೋನ್ ಮೂಲಕವಾದರೆ ಕೇವಲ 25 ಲೀಟರ್ ನೀರು ಸಾಕಾಗುತ್ತದೆ ಎಂಬುದು ಪರೀಕ್ಷಾರ್ಥ ಪ್ರಯೋಗದಿಂದ ಸಾಬೀತಾಗಿದೆ.





ಒಂದು ಎಕ್ರೆಯಷ್ಟು ತೋಟದಲ್ಲಿ ಬಾಳೆಗಿಡಗಳ ಎಡೆಯಿಂದ ನಡೆದು ಗೊಬ್ಬರ ಪ್ರಯೋಗಿಸಲು ಮೂವರು ಕಾರ್ಮಿಕರು ಒಂದು ದಿನದ ದುಡಿಮೆ ನಡೆಸಬೇಕಾಗುತ್ತದೆ. ಆದರೆ ಡ್ರೋನ್ ಮೂಲಕ ಅತ್ಯಂತಸುಲಭದಲ್ಲಿಕೆಲಸಪೂರ್ತಿಯಾಗಿರುವುದು ಕೃಷಿಕರಲ್ಲಿ ಹೊಸ ಹುಮ್ಮಸ್ಸು ಮೂಡಿಸಿದೆ. ಡ್ರೋನ್ ತಂತ್ರಜ್ಞಾನವನ್ನು ಪ್ರೋತ್ಸಾಹಿಸುವುದರ ಅಂಗವಾಗಿ ಐಸಿಎಆರ್ - ಸಿಪಿಸಿಆರ್‌ಐಯ ಅಧೀನದಲ್ಲಿ ಕಾರ್ಯಾಚರಿಸುತ್ತಿರುವ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ)ವು ಕೃಷಿಕರೊಂದಿಗೆ ನೂತನ ಕೃಷಿ ಆಶಯಗಳನ್ನು ಮತ್ತು ಅತ್ಯಾಧುನಿಕ ಮಾದರಿಯ ತಂತ್ರಜ್ಞಾನಗಳನ್ನು ಹಂಚಿಕೊಳ್ಳುತ್ತಿದೆ ಜೊತೆಗೆ ಸಮಗ್ರ ಮಾಹಿತಿಗಳನ್ನು ಒದಗಿಸುತ್ತಿದೆ.

ಇದೇ ವೇಳೆ ಇಲ್ಲಿಯವರೆಗೆ ಜಿಲ್ಲೆಯ ಭತ್ತದ ಗದ್ದೆಗಳಿಗೆ ಡ್ರೋನ್ ತಂತ್ರಜ್ಞಾನ ಬಳಸಿಕೊಂಡು ಪರೀಕ್ಷಾರ್ಥವಾಗಿ ಕೀಟನಾಶಕ ಔಷಧಿಗಳನ್ನು ಸಿಂಪಡಿಸಲಾಗುತ್ತಿತ್ತು. ಪ್ರಸ್ತುತ ಬಾಳೆ ತೋಟಗಳಿಗೆ ಡ್ರೋನ್ ಪ್ರಯೋಗವನ್ನು ಏರ್ಪಡಿಸಲಾಯಿತು. ಇನ್ನು ಮುಂದೆ ಅಡಿಕೆ ತೋಟಗಳಲ್ಲಿ ಅಪಾರವಾಗಿ ಕಂಡುಬರುವ ಎಲೆಚುಕ್ಕಿ ರೋಗ ಪ್ರತಿರೋಧಕ್ಕೆ ಕೃಷಿ ವಿಜ್ಞಾನ ಕೇಂದ್ರವು ಸಮಗ್ರ ಸಿದ್ಧತೆಗಳನ್ನು ನಡೆಸುತ್ತಿದೆ.

ಮಣಕ್ಕಡವ್‌ನಲ್ಲಿ ಪರೀಕ್ಷಾರ್ಥ ಪ್ರಯೋಗ

ಮಡಿಕ್ಕೈ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಣಕ್ಕಡವ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಪರೀಕ್ಷಾರ್ಥ ಗೊಬ್ಬರ ಪ್ರಯೋಗ ವ್ಯವಸ್ಥೆಯನ್ನು ಗ್ರಾಮ ಪಂಚಾಯತ್ ಅಧ್ಯಕ್ಷ ಪಿ.ಪ್ರಕಾಶನ್ ಉದ್ಘಾಟಿಸಿ, ಕೃಷಿ ರಂಗದಲ್ಲಿ ಹೊಸ ತಂತ್ರಜ್ಞಾನಗಳು ಅಳವಡಿಕೆಯಾಗಬೇಕೆಂದು ಕರೆ ನೀಡಿದರು. ಬಾಳೆ ಕೃಷಿಗೆ ಇನ್ನಷ್ಟು ಬೆಂಬಲ ನೀಡಿದಾಗ ಸ್ವಾವಲಂಬನೆ ಗುರಿ ಸಾಧ್ಯವಾದೀತು. ಇದಕ್ಕಾಗಿ ರಾಜ್ಯ ಸರಕಾರ ಹಾಗೂ ಸ್ಥಳೀಯಾಡಳಿತ ಸಂಸ್ಥೆಗಳ ಪ್ರೋತ್ಸಾಹ ಅತೀ ಅಗತ್ಯ ಎಂದರು. ಮಡಿಕ್ಕೈ ಕೃಷಿ ಅಧಿಕಾರಿ ಪ್ರಮೋದ್ ಮತ್ತು ಕೆವಿಕೆ ವಿಜ್ಞಾನಿಗಳು, ತಾಂತ್ರಿಕ ತಜ್ಞರು ಮುಂತಾದವರು ನೇತೃತ್ವ ವಹಿಸಿದ್ದರು.

ಕಾರ್ಮಿಕರ ಕೊರತೆಗೆ ಡ್ರೋನ್ ಪರಿಹಾರ

ಕಾಸರಗೋಡಿನಲ್ಲಿ ಕಾರ್ಮಿಕರ ಕೊರತೆ ಎದುರಿಸುತ್ತಿರುವ ಕೃಷಿ ವಲಯದಲ್ಲಿ ಸಮಯ, ಲಾಭ, ಸಮರ್ಥತೆ ಇತ್ಯಾದಿಗಳನ್ನು ಖಚಿತಪಡಿಸಿಕೊಳ್ಳಲು ಹೊಸ ತಂತ್ರಜ್ಞಾನಗಳ ಬಳಕೆಯು ಅಗತ್ಯವಾಗಿದೆ ಎಂದು ಕೆವಿಕೆ ಹಾರ್ಟಿಕಲ್ಚರ್ ವಿಭಾಗದ ಸಬ್‌ಜೆಕ್ಟ್ ಮ್ಯಾಟರ್ ತಜ್ಞ ಡಾ.ಬೆಂಜಮಿನ್ ಮ್ಯಾಥ್ಯೂ ಹೇಳಿದ್ದಾರೆ. ಉತ್ಪಾದನಾ ದಕ್ಷತೆಯೊಂದಿಗೆ ಉತ್ಪಾದನಾ ವೆಚ್ಚ ಕಡಿಮೆ ಮಾಡಲು ನೂತನ ತಂತ್ರಜ್ಞಾನಗಳು ಅನಿವಾರ್ಯ. ಈ ನಿಟ್ಟಿನಲ್ಲಿ ಕೃಷಿಕರ ಸಂಪೂರ್ಣ ಸಹಭಾಗಿತ್ವ ಅತೀ ಆವಶ್ಯಕ ಎಂದು ಕೆವಿಕೆ ಮುಖ್ಯಸ್ಥ ಡಾ.ಟಿ.ಎಸ್.ಮನೋಜ್ ಕುಮಾರ್ ತಿಳಿಸಿದ್ದಾರೆ.

ಪುತ್ತೂರು: ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಪುತ್ತೂರು: ವಿಜ್ಞಾನದ ಬೆಳವಣಿಗೆ ತನ್ಮೂಲಕ ದೇಶದ ಪ್ರಗತಿಯು ಮಹಿಳೆ ಮತ್ತು ಪುರುಷರ ಸಮಾನ ಕೊಡುಗೆಯ ಪ್ರತೀಕವಾಗಿದೆ. ಹೀಗಾಗಿ ಸ್ತ್ರೀ-ಪುರುಷರೆನ್ನುವ ಸಾಮಾಜಿಕ ಅಂತರವನ್ನು ತೊಡೆದು ಹಾಕುವುದಲ್ಲದೆ, ಲಿಂಗ ಆಧಾರಿತ ವೇತನ ಅಸಮಾನತೆಯನ್ನು ಅಂತ್ಯಗೊಳಿಸಬೇಕು ಎಂದು ಕಾಸರಗೋಡಿನ ಕೃಷಿ ಅಭಿವೃದ್ಧಿ ಮತ್ತು ರೈತ ಕಲ್ಯಾಣ ಇಲಾಖೆಯ ಅಧಿಕಾರಿ ಡಾ. ಲಕ್ಷ್ಮಿ ಮುರಳೀಕೃಷ್ಣ ಹೇಳಿದರು.

ರಾಷ್ಟ್ರೀಯ ವಿಜ್ಞಾನ ದಿನದ ಸಂದರ್ಭದಲ್ಲಿ ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಮೂಲ ವಿಜ್ಞಾನ ವಿಭಾಗದ ಆಶ್ರಯದಲ್ಲಿ 'ವಿಜ್ಞಾನದ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ-ವಿಕಸಿತ ಭಾರತಕ್ಕೆ ವೇಗವರ್ಧಕ' ಎನ್ನುವ ವಿಷಯಾಧಾರಿತ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಅವರು ಮಾತಾಡಿದರು.

ಡಿಜಿಟಲ್ ಸಾಕ್ಷರತೆ, ಕೃಷಿ ಅಭಿವೃದ್ಧಿಯಲ್ಲಿ ಸಮಾನ ಅವಕಾಶಗಳು ಇವೆಲ್ಲವನ್ನೂ ಒಳಗೊಂಡ ಸಾಮಾಜಿಕ ಅಭಿವೃದ್ಧಿಯು ದೇಶದ ಉನ್ನತಿಗೆ ಅತೀ ಮುಖ್ಯವಾದದ್ದು. ಅಭಿವೃದ್ಧಿಯ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಹಿಳೆಯರು ಅಪಾರ ಕೊಡುಗೆಯನ್ನು ನೀಡುವುದರ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ ಎಂದ ಅವರು, ರಚನಾತ್ಮಕ ಸಾಮಾಜಿಕ ಪರಿವರ್ತನೆಯನ್ನು ತರುವಲ್ಲಿ ವಿದ್ಯಾರ್ಥಿಗಳು ತಮ್ಮ ಕೊಡುಗೆಯನ್ನು ನೀಡಬೇಕು. ಅಲ್ಲದೆ, ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಲ್ಲಿ ಲಿಂಗ ಅಸಮಾನತೆಯನ್ನು ತೊಡೆದು ಹಾಕುವತ್ತ ಗಮನಹರಿಸಬೇಕು ಎಂದರು.



- **ಅಭಿವೃದ್ಧಿಯ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಹಿಳೆಯರು ಅಪಾರ ಕೊಡುಗೆಯನ್ನು ನೀಡುವುದರ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ**
- **ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಲ್ಲಿ ಲಿಂಗ ಅಸಮಾನತೆಯನ್ನು ತೊಡೆದು ಹಾಕುವತ್ತ ಗಮನಹರಿಸಬೇಕು**

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಆಡಳಿತ ಮಂಡಳಿಯ ನಿರ್ದೇಶಕ ಸತ್ಯನಾರಾಯಣ ಭಟ್, ವಿಜ್ಞಾನವು ಭಾರತೀಯ ನಾಗರಿಕತೆಯಲ್ಲಿ ಆಳವಾದ ಬೇರನ್ನು ಪಸರಿಸಿದೆ. ಭಾರತದ ಶ್ರೀಮಂತ ವೈಜ್ಞಾನಿಕ ಪರಂಪರೆಯು ನಮ್ಮ ಪೂರ್ವಜರ ಕೊಡುಗೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ರಾಮಾಯಣ ಮಹಾಭಾರತದಂತಹ ಪ್ರಾಚೀನ ಮಹಾನ್ ಗ್ರಂಥಗಳಲ್ಲಿಯೂ ಇದು ಪ್ರತಿಫಲಿಸುತ್ತಿದ್ದು, ಸಾಂಪ್ರದಾಯಿಕ ಜ್ಞಾನ ಮತ್ತು ವೈಜ್ಞಾನಿಕ ಚಿಂತನೆಗಳ ಆಳವನ್ನು ನಮಗೆ ತಿಳಿಸುತ್ತದೆ ಎಂದರು.

ಕಾರ್ಯಕ್ರಮ ಸಂಯೋಜಕಿ, ಮೂಲ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಶ್ವೇತಾಂಬಿಕಾ ಪಿ. ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ನಿಹಾರಿಕಾ ಪ್ರಸ್ತಾವನೆಗೈದರು. ಸುಪ್ರೀತಾ ಸ್ವಾಗತಿಸಿ, ಅಶ್ವಿತಾ ವಂದಿಸಿದರು. ಏಂಜೆಲ್ ಫೋರ್ಡ್ ಮತ್ತು ಪ್ರಾಪ್ತಿ ಕಾರ್ಯಕ್ರಮ ನಿರ್ವಹಿಸಿದರು.

ಕುಡಿಯುವ ನೀರು ಪೂರೈಕೆ ವ್ಯತ್ಯಯ ಆಗದಂತೆ ಗಮನಹರಿಸಿ: ಡಾ. ಮಂಥರ್

ಮಡಿಕೇರಿ: ತಾಲೂಕಿನ ಎಂಟು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಗಮನಹರಿಸಲು ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಶಾಸಕ ಡಾ.ಮಂಥರ್ ಗೌಡ ಅವರು ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ನಗರದ ಗಾಂಧಿಭವನದಲ್ಲಿ ನಡೆದ ವಿಶೇಷ ಕಾರ್ಯಪಡೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ, ಶಾಲಾ-ಕಾಲೇಜು, ಅಂಗನವಾಡಿ, ಆರೋಗ್ಯ ಕೇಂದ್ರಗಳು, ವಿದ್ಯಾರ್ಥಿ ನಿಲಯಗಳು ಸೇರಿದಂತೆ ಎಲ್ಲೆಡೆ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರನ್ನು ಎಂದಿನಂತೆ ಸಮರ್ಪಕವಾಗಿ ಪೂರೈಸಬೇಕು ಎಂದು ಅವರು ಸೂಚಿಸಿದರು.

ಕುಡಿಯುವ ನೀರಿನ ಪೂರೈಕೆಯ ಸಂದರ್ಭ ವಿದ್ಯುತ್ ಕಡಿತಗೊಳಿಸಬಾರದು. ಸಾರ್ವಜನಿಕರು ಕುಡಿಯುವ ನೀರನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳಲು ನಗರಸಭೆಯಿಂದ ಆಗಾಗ್ಗೆ ಸೂಚನೆ ನೀಡಬೇಕು ಎಂದರು. ಜಲಜೀವನ್ ಯೋಜನೆಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಇದೇ ಸಂದರ್ಭ ಶಾಸಕರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಬೇಸಿಗೆಯಲ್ಲಿ ರೋಗಗಳು ಹರಡದಂತೆ ಆರೋಗ್ಯ ಇಲಾಖೆ ವತಿಯಿಂದ ಎಚ್ಚರವಹಿಸಬೇಕು. ಜತೆಗೆ ಜಾಗೃತಿ ಮೂಡಿಸಬೇಕು. ಶಾಲೆ, ಕಾಲೇಜು, ಸೇರಿದಂತೆ ವಿವಾಹ ಸಂದರ್ಭದಲ್ಲಿ ನೀರಿನ ಟ್ಯಾಂಕ್‌ಗಳನ್ನು ಪರಿಶೀಲಿಸುವಂತೆ ಹಾಗೂ ಸ್ವಚ್ಛತೆ ಕಾಪಾಡುವಂತೆ ಸಂಬಂಧಪಟ್ಟವರಿಗೆ ಸೂಚನೆ ನೀಡಬೇಕು. ರಾಜಕಾಲುವೆ, ಚರಂಡಿಗಳಲ್ಲಿ ಮಳೆನೀರು ಸರಾಗವಾಗಿ ಹರಿದು ಹೋಗಲು ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಬೇಕು. ರಸ್ತೆಗಳಿಗೆ ಅಡ್ಡವಾಗಿ ಬೆಳೆದಿರುವ ಗಿಡಗಂಟಿಗಳನ್ನು ಕಡಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.

ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳು ಇರಬೇಕು ಹಾಗೂ ಸಾರ್ವಜನಿಕರಿಗೆ ಸಕಾಲದಲ್ಲಿ ವೈದ್ಯಕೀಯ ಚಿಕಿತ್ಸೆ ಸಿಗಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಅಂಗನವಾಡಿಗಳಿಗೆ ಸಮಯಕ್ಕೆ ಸರಿಯಾಗಿ ಪೌಷ್ಟಿಕಾಂಶದ ಆಹಾರ ಸಾಮಾಗ್ರಿಗಳನ್ನು ಪೂರೈಕೆ ಮಾಡಬೇಕು. ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸುವ ಮೂಲಕ ಸಾರ್ವಜನಿಕರ ಸಮಸ್ಯೆಗಳಿಗೆ ಸಕಾಲದಲ್ಲಿ ಸ್ಪಂದಿಸುವಂತಾಗಬೇಕು ಎಂದು ತಿಳಿಸಿದರು. ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ಪ್ರಗತಿ ಬಗ್ಗೆ ಸಂಬಂಧಪಟ್ಟ ಎಂಜಿನಿಯರ್ ಅವರಿಂದ ಶಾಸಕರು ಮಾಹಿತಿ ಪಡೆದರು. ತಾ.ಪಂ. ಇಒ ಶೇಖರ್ ಮಾತನಾಡಿ, ಈಗಾಗಲೇ ಗ್ರಾ.ಪಂ ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಭೆ ನಡೆಸಲಾಗಿದ್ದು, ಕುಡಿಯುವ ನೀರು ಮತ್ತು ಜಾನುವಾರಿಗೆ ಮೇವು ಸಂಬಂಧ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು. ನಗರಸಭೆ ಪೌರಾಯುಕ್ತ ಎಚ್.ಆರ್.ರಮೇಶ್, ತಾ.ಪಂ. ಆಡಳಿತಾಧಿಕಾರಿ ಚಂದ್ರಶೇಖರ್, ತಹಶೀಲ್ದಾರ್ ಶ್ರೀಧರ್, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಶಶಿಧರ್, ಸೆಸ್ಕ್ ಎಇಇ ವಿನಯ ಕುಮಾರ್, ವಿವಿಧ ಇಲಾಖೆ ಅಧಿಕಾರಿಗಳು, ಗ್ರಾ.ಪಂ. ಆಡಳಿತಾಧಿಕಾರಿಗಳು, ಪಿಡಿಒ ಇದ್ದರು.

ಬಿ.ಸಿ.ರೋಡ್‌ನ ಮಹಿಳೆಯರ ಸಾಂತ್ವನ ಕೇಂದ್ರ, ಬಂಟ್ವಾಳ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಭೇಟಿ

ಜಿಲ್ಲೆಯ ಸಂಪ್ರದಾಯದಂತೆ ಮಲ್ಲಿಗೆ ಹೂ ಮುಡಿಸಿ, ತಾಂಬೂಲವಿತ್ತು ಗೌರವಿಸಿ ಸ್ವಾಗತ!

ಬಂಟ್ವಾಳ: ಕರ್ನಾಟಕ ಮಹಿಳಾ ಆಯೋಗದ ಅಧ್ಯಕ್ಷರಾಗಿರುವ ಡಾ ನಾಗಲಕ್ಷ್ಮಿ ಚೌದುರಿ ಅವರು ಗುರುವಾರ ಬಿ.ಸಿ. ರೋಡಿನಲ್ಲಿರುವ ಮಹಿಳೆಯರ ಸಾಂತ್ವನ ಕೇಂದ್ರ ಹಾಗೂ ಬಂಟ್ವಾಳ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದರು.

ಮಲ್ಲಿಗೆ ಮುಡಿದು ಸ್ವಾಗತ

ಮಹಿಳಾ ಸಾಂತ್ವನ ಕೇಂದ್ರಕ್ಕೆ ಭೇಟಿ ನೀಡಿದ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌದುರಿ ಅವರಿಗೆ ಸಾಂತ್ವನ ಕೇಂದ್ರದಲ್ಲಿ ಜಿಲ್ಲೆಯ ಸಾಂಪ್ರದಾಯದಂತೆ ಗೃಹಿಣಿಯರು ಮಲ್ಲಿಗೆ ಹೂ ಮುಡಿಸಿ, ತಾಂಬೂಲವನ್ನಿತ್ತು ಗೌರವಿಸಿ, ಸ್ವಾಗತಿಸಿದರು.

ಮಾಹಿತಿ ಪಡೆದ ಅಧ್ಯಕ್ಷೆ

ಬಳಿಕ ಕೇಂದ್ರದ ಸಮಾಜ ಕಾರ್ಯಕರ್ತರಾದ ಪ್ರಶಾಂತ್,ವಿದ್ಯಾ ಅವರಿಂದ ದಾಖಲಾಗಿರುವ ಪ್ರಕರಣಗಳು ಅದಕ್ಕೆ ಕಂಡುಕೊಳ್ಳಲಾಗುತ್ತಿರುವ ಪರಿಹಾರಸಹಿತ ಚಟುವಟಿಕೆಗಳ ಬಗ್ಗೆ ಡಾ.ನಾಗಲಕ್ಷ್ಮೀ ಮಾಹಿತಿ ಪಡೆದರು. 2017 ರಲ್ಲಿ ಸಾಂತ್ವನ ಕೇಂದ್ರ ಆರಂಭವಾಗಿದ್ದು ,ಇದುವರೆಗೆ 1170 ಪ್ರಕರಣ ದಾಖಲಾಗಿವೆ. ಇವುಗಳ ಪೈಕಿ 1167 ಪ್ರಕರಣವನ್ನು ಇತ್ಯರ್ಥಪಡಿಸಲಾಗಿದ್ದು,ಮೂರು ಪ್ರಕರಣ ತನಿಖಾ ಹಂತದಲ್ಲಿದೆ,ಹೆಚ್ಚಾಗಿ ಕೌಟುಂಬಿಕ ಕಲಹಕ್ಕೆ ಸಂಬಂಧಿಸಿದ ಪ್ರಕರಣಗಳೇ ದಾಖಲಾಗುತ್ತಿವೆ ಎಂದು ಸಾಮಾಜ ಕಾರ್ಯಕರ್ತರು ಮಾಹಿತಿ ನೀಡಿದರು.

.ಇಲ್ಲಿ ಉಚಿತ ಸಹಾಯವಾಣಿಯನ್ನು ಹೊಂದಿದ್ದು,ಸಮಸ್ಯೆ ಹೇಳಿಕೊಂಡು ಕರೆ ಮಾಡಿದ ಸಂತ್ರಸ್ಥ ಮಹಿಳೆಯರಿಗೆ ಸಾಂತ್ವನ ಹೇಳುವುದರ ಜತೆಗೆ ಅವರಿಗೆ ಸಲಹೆ ನೀಡಲಾಗುವುದಲ್ಲದೆ ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನಿಸಲಾಗುತ್ತಿದೆ ಎಂದು ಸಾಮಾಜ ಕಾರ್ಯಕರ್ತರು ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀಯವರಿಗೆ ಮಾಹಿತಿ ನೀಡಿದರು.



ಇಲ್ಲೊಂದು ಸಾಂತ್ವನ ಕೇಂದ್ರ ಇದೆ ಎಂದು ಗೊತ್ತೇ ಇಲ್ಲ!

ದೌರ್ಜನ್ಯಕ್ಕೊಳಗಾದ, ನೊಂದ ಮಹಿಳೆಯರ ಕಣ್ಣೀರು ಒರೆಸುವ ನಿಟ್ಟಿನಲ್ಲಿ ಉಚಿತ ಸಹಾಯವಾಣಿ ತೆರೆದು ಸಾಂತ್ವನ ಕೇಂದ್ರವೊಂದು ಕಾರ್ಯಾಚರಿಸುತ್ತಿದೆ ಎಂಬುದು ನನಗೆ ಗೊತ್ತೇ ಇಲ್ಲ ಎಂದು ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಅವರು ಬಳಿಕ ನಡೆದ ಸಂವಾದ ಕಾರ್ಯಕ್ರಮದಲ್ಲಿ ತಿಳಿಸಿದರು. ಇಲ್ಲೊಂದು ಸಾಂತ್ವನ ಕೇಂದ್ರವಿದೆ ಎಂಬುದು ತಾಲೂಕಿನ ಎಲ್ಲರಿಗೂ ಗೊತ್ತಾಗಬೇಕು, ಮಹಿಳೆಯರಿಗೆ ಇಲ್ಲಿನ ಸಹಾಯವಾಣಿ ಸಂಖ್ಯೆಯ ಅರಿವಿರಬೇಕು. ಯಾವುದೇ ಸಮಸ್ಯೆ ಬಂದಾಗ ಸಾಂತ್ವನ ಹೇಳಲು ಸರಕಾರ ನಮ್ಮೊಂದಿಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದ ಅವರು ಈ ಕೇಂದ್ರಕ್ಕೆ ಆಯೋಗದಿಂದ ಎಲ್ಲಾ ರೀತಿಯ ಸಹಕಾರ ನೀಡಲಾಗುವುದಲ್ಲದೆ ಬಂಟ್ವಾಳ ಸಾಂತ್ವನ ಕೇಂದ್ರದ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ 'ಸ್ವಚ್ಛ ಮನೆ ಅಭಿಯಾನ' ಪುಸ್ತಕ ಬಿಡುಗಡೆಗೊಳಿಸಲಾಯಿತು. ಮೊದಲ ಬಾರಿಗೆ ಬಂಟ್ವಾಳಕ್ಕಾಗಮಿಸಿದ ಕರ್ನಾಟಕ ಡಾ.ನಾಗಲಕ್ಷ್ಮೀ ಅವರನ್ನು ಗೌರವಿಸಲಾಯಿತು. ಜನಶಿಕ್ಷಣ ಟ್ರಸ್ಟ್ ನ ಎನ್.ಶೀನ ಶೆಟ್ಟಿ ಹಾಗೂ ಕೃಷ್ಣಮೂಲ್ಯ ಅವರು ಆಯೋಗದ ಅಧ್ಯಕ್ಷರಿಗೆ ಪೂರಕ ಮಾಹಿತಿ ನೀಡಿದರು.

ತಾಲೂಕು ಆಸ್ಪತ್ರೆಗೆ ಭೇಟಿ

ಬಳಿಕಮಹಿಳಾಆಯೋಗದಅಧ್ಯಕ್ಷೆಡಾ.ನಾಗಲಕ್ಷ್ಮೀ ಅವರು ಬಂಟ್ವಾಳ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದರು. ಆಸ್ಪತ್ರೆಯಲ್ಲಿ ಕಳೆದ ಹಲವು ವರ್ಷಗಳಿಂದ ಹೆರಿಗೆ ಮಾಡಿಸಲು ಗೈನಕಾಲಜಿಸ್ಟ್ ಇಲ್ಲ ಎಂಬ ವಿಚಾರವನ್ನು ಅವರ ಗಮನಕ್ಕೆ ತರಲಾಯಿತು. ಸರಕಾರ ಇಷ್ಟೊಂದು ವ್ಯವಸ್ಥೆ, ಮೂಲ ಸೌಕರ್ಯಗಳನ್ನು ಮಾಡಿದ ಮೇಲೆ ತಜ್ಞ ವೈದ್ಯರೂ ಬೇಕು ಎಂದು ಈ ಸಂದರ್ಭ ಅವರು ತಿಳಿಸಿದರಲ್ಲದೇ ಔಷಧಗಳ ಸ್ಟಾಕ್ ಇದ್ದಾಗ ಹೊರಗೆ ಕಳುಹಿಸುವ ಕುರಿತು ದೂರುಗಳು ಬಂದದ್ದನ್ನು ಪರಿಶೀಲಿಸಿದರು. ಜಿಲ್ಲಾ ಆರೋಗ್ಯಾಽಕಾರಿ ಡಾ. ಎಚ್.ಎಸ್.ತಿಮ್ಮಯ್ಯ, ಖಾಸಗಿ ಮೆಡಿಕಲ್ ಕಾಲೇಜಿನೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಶೀಘ್ರದಲ್ಲಿ ಆಸ್ಪತ್ರೆಯ ವೈದ್ಯರ ಸಮಸ್ಯೆಗೆ ಪರಿಹಾರ ದೊರಕಲಿದೆ ಎಂದು ಅಧ್ಯಕ್ಷೆಯ ಗಮನಕ್ಕೆ ತಂದರು.

ಅಧ್ಯಕ್ಷರ ಭೇಟಿಯ ವೇಳೆ ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ ಅಧ್ಯಕ್ಷೆ ಲಾವಣ್ಯ ಬಲ್ಲಾಳ್, ತಾ.ಪಂ.ಇಒ ಸಚ್ಚಿನ್ ಕುಮಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಡಿ.ಡಿ.ಉಸ್ಮಾನ್ ,ಬಂಟ್ವಾಳ ಸಿಡಿಪಿಒ ಮಮ್ತಾಜ್,ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯೆ ಐಡಾ ಸುರೇಶ್,ಬಂಟ್ವಾಳ ಪುರಸಭೆಯ ಮಾಜಿ ಅಧ್ಯಕ್ಷ ಜೋಸ್ಪಿನ್ ಡಿಸೋಜ, ನ್ಯಾಯವಾದಿ ಶೈಲಜಾ ರಾಜೇಶ್,ತಾಲೂಕು ಆರೋಗ್ಯಾಽಕಾರಿ ಡಾ. ಅಶೋಕ್ ಕುಮಾರ್ ರೈ, ತಾಲೂಕು ಸರಕಾರಿ ಆಸ್ಪತ್ರೆ ಆಡಳಿತ ವೈದ್ಯಾಽಕಾರಿ ಡಾ. ಪುಷ್ಪಲತಾ, ತಾಲೂಕು ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿ ಸದಸ್ಯ ವೆಂಕಪ್ಪ ಪೂಜಾರಿ ಬಂಟ್ವಾಳ, ಪ್ರಮುಖರಾದ ಅಬ್ಬಾಸ್ ಅಲಿ,ಮಹಮ್ಮದ್ ನಂದಾವರ ಮತ್ತಿತರರು ಉಪಸ್ಥಿತರಿದ್ದರು.

IN THE COURT OF I ADDL. SENIOR CIVIL JUDGE AND C.J.M AT MANGALORE, D.K.

In I.A No./2026
S.C No.44/2024
Hg. 30-04-2026

Between:
Canara Bank,
Deralakatte Branch ...Plaintiff
And
Aisabi ...Defendant

NOTICE

To Defendant :
Mrs. Aisabi, Aged 62 Years, W/o Ullal Khader Mohammed, R/at:D.No. 1-140(2), Danish Cottage, Natekal, Manjanady, Assaigoli, Mangaluru-574199.

Please take notice that the plaintiff named above has filed the above suit against you. You are not available for service of suit notice so far. Hence, the Honourable court has ordered the plaintiff to cause suit notice through paper publication against you. Therefore you are hereby called upon to appear in person or through pleader before the above said Honourable Court at **11.00 A.M. on 30-04-2026.** If you fail to appear the matter will be decided in your absence according the merits of the suit treating you ex-parte by the court.

Given under my hand and the seal of the court on this 03th day of February, 2026.

(By order of the Court)
Sd/- Chief Ministerial Officer
Court of Senior Civil Judge & CJM, Mangaluru, D.K.
Sd/- (Ravichandra P.M.)
Advocate for plaintiff
Mangalore, D.K.
Date: 25-02-2026

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ಬಂಟ್ವಾಳ

ಕ್ರಿಮ್‌ಸಿ: 235/2025

ಇವರೊಳಗೆ:
ಲೀಲಾವತಿ ಮತ್ತು ಇತರರು ...ಅರ್ಜಿದಾರರು
ಮತ್ತು
ತಹಶೀಲ್ದಾರರು
ಬಂಟ್ವಾಳ ತಾಲೂಕು ...ಎದ್ರಿದಾರರು

ಸಾರ್ವಜನಿಕ ಪ್ರಕಟಣೆ

ಈ ಮೇಲಿನ ಪ್ರಕರಣದಲ್ಲಿ ಎದ್ರಿದಾರರ ಕಾರ್ಯವ್ಯಾಪ್ತಿಗೆ ಒಳಪಟ್ಟ ಬಂಟ್ವಾಳ ತಾಲೂಕಿನ ಸಜಿಪಮೂಡ ಗ್ರಾಮದ ಕುಕ್ಕುದಕಟ್ಟೆ ಎಂಬಲ್ಲಿ ವಾಸವಾಗಿರುವ ದಿ. ಕೋಟಿ ಮೂಲ್ಯ ರವರ ಪತ್ನಿ ಕೊರಪೊಳು ಇವರು ದಿನಾಂಕ 15-06-1960 ರಂದು ಮೃತಪಟ್ಟಿದ್ದು, ಅವರ ಮರಣವನ್ನು ಮರಣ ನೋಂದಾವಣಾ ಪತ್ರದಲ್ಲಿ ದಾಖಲಿಸುವಂತೆ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಕರಣ ದಿನಾಂಕ 22-04-2026ರಂದು ಬೆಳಿಗ್ಗೆ 11 ಗಂಟೆಗೆ ನ್ಯಾಯಾಲಯದಲ್ಲಿ ವಿಚಾರಣೆಗಿದ್ದು, ಆ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ, ಆ ದಿನ ವೈಯಕ್ತಿಕ ಅಥವಾ ವಕೀಲರ ಮೂಲಕ ಹಾಜರಾಗ ಬಹುದಾಗಿದೆ.

ನನ್ನ ಸಹಿ & ನ್ಯಾಯಾಲಯದ ಮೊಹರಿನೊಂದಿಗೆ 24ನೇ ಫೆಬ್ರವರಿ 2026ರಂದು ನೀಡಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೆದಾರರು
ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು & ಜೆ.ಎಂ.ಎಫ್.ಸಿ. ಬಂಟ್ವಾಳ
ಸಹಿ/- ದೀಪಕ್ ಪೆರಾಜೆ
ವಕೀಲರು, ಬಂಟ್ವಾಳ

24-02-2026

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ-1/ಟೆಂಡರ-35/2025-26/5604 ದಿನಾಂಕ: 04-03-2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ-3 & 4) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 11-03-2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 12-03-2026 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 13-03-2026 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 16-03-2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕ ಶೀರ್ಷಿಕೆ: 4059-80-051-0-60-132 CMIDP During 2025-26 ವರ್ಕ ಇನಡೆಂಟ್ (1) PWD/2025-26/RD/WORK_INDENT 33742 (2) PWD/2025-26/RD/WORK_INDENT32931

ಲೆಕ್ಕ ಶೀರ್ಷಿಕೆ : Mitigation- 8443-Deposite Contribution During 2025-26 ವರ್ಕ ಇನಡೆಂಟ್ (1) PWD/2025-26/FP/WORK_INDENT34090 (2) PWD/2025-26/RD/WORK_INDENT32837 (3) PWD/2025-26/RD/WORK_INDENT32836

(ಕೆಡಬ್ಲೂ- 3 & 4) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/1176/25-26 dt. 05.03.2026

ಕರ್ನಾಟಕ ಸರ್ಕಾರ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ದಾವಣಗೆರೆ ವಿಭಾಗ ಕಛೇರಿ, ದಾವಣಗೆರೆ.

ನಂ.ಕಕೊಅಮ/ಕಾಪಾಅ/ದಾವಿ/ಐ.ಎಫ್.ಟಿ-05/2025-26/ ದಿನಾಂಕ:05-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ವಿವಿದ ನಗರ/ಪಟ್ಟಣಗಳಲ್ಲಿ ಬಿ.ಡಿ.ಎ. ಸೆಸ್ ಲೆಕ್ಕಶೀರ್ಷಿಕೆಯಡಿ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ kppp.karnataka.gov.in ಮುಖಾಂತರ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕೆ.ಡಬ್ಲ್ಯೂ- 2 ರ ನಿಯಮಾವಳಿಗಳಂತೆ ಟೆಂಡರ್‌ನ್ನು ಕರೆಯಲಾಗಿದೆ. ಅದರಂತೆ kppp.karnataka.gov.in ವೆಬ್‌ಸೈಟ್‌ನಲ್ಲಿ ದಿನಾಂಕ 20.03.2026 ಸಾಯಂಕಾಲ 4.00 ಗಂಟೆಯವರೆಗೆ Upload ಮಾಡಬಹುದಾಗಿರುತ್ತದೆ ಸದರಿ ಟೆಂಡರ್‌ನ್ನು ದಿನಾಂಕ 24.03.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಕಾಮಗಾರಿಯ ವಿವರ ಮತ್ತು ಇತರೆ ವಿಷಯಗಳನ್ನು kppp.karnataka.gov.in ವೆಬ್ ಸೈಟನಲ್ಲಿ ಪಡೆಯಬಹುದಾಗಿದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ವಿಭಾಗ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿದೆ. ಕಾಮಗಾರಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.

(1) Indent No. KSDB/2025-26/RD/WORK_INDENT443
Amount Put Tender 20,48,268/- EMD (in Rupees) 51,207/-
(2) Indent No KSDB/2025-26/RD/WORK_INDENT442
Amount Put Tender 20,49,895/- EMD (in Rupees) 51,247/-

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ದಾವಣಗೆರೆ ವಿಭಾಗ, ದಾವಣಗೆರೆ.

ವಾಸಾಇ/ಡಿವಿಜಿ/799/ಕೆಎಸ್‌ಎಂಸಿಎ/2025-26

IN THE COURT OF I ADDITIONAL CIVIL JUDGE AND J.M.F.C COURT AT MANGALORE, D.K.

In O.S No.864/2025

Between:
Bank of Baroda,
Ladyhill Branch ...Plaintiff
And
Vittal Mutagud ...Defendant

NOTICE

To Defendant :
Mr. Vittal Mutagudd
S/o Kashappa
Aged about 40 years
R/at: Narenur, Badami, Bagalkot District-587206.

Please take notice that the plaintiff named above has filed the above suit against you. You are not available for service of suit notice so far. Hence, the Honourable court has ordered the plaintiff to cause suit notice through paper publication against you. Therefore you are hereby called upon to appear in person or through pleader before the above said Honourable Court at **11.00 A.M. on 27-04-2026.** If you fail to appear the matter will be decided in your absence according the merits of the suit treating you ex-parte by the court.

Given under my hand and the seal of the court on this 4th day of March, 2026.

(By order of the Court)
Sd/- Chief Ministerial Officer
Court of Senior Civil Judge & CJM, Mangaluru, D.K.
Sd/- (Ravichandra P.M.)
Advocate for plaintiff
Mangalore, D.K.
Date: 03-03-2026

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಕೊಪ್ಪಳ. ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2025-26/1442 ದಿನಾಂಕ: 04.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿತೀಯ & ತೃತೀಯ ಕರೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ http://kppp.karnataka.gov.in ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2025-26 ನೇ ಸಾಲಿನ MVS O & M Non SDP ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ http://kppp.karnataka.gov.in ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ: **05/03/2026** ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ: kppp.karnataka.gov.in ನಲ್ಲಿರುವಂತೆ ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ: **05/03/2026** ಸಮಯ 10:00 ಗಂಟೆಯಿಂದ **16/03/2026** ಸಮಯ 16:00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ: **05/03/2026** ಸಮಯ 16:00 ಗಂಟೆಯಿಂದ **16/03/2026** ಸಮಯ 16:00 ಗಂಟೆವರೆಗೆ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **17/03/2026** ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರು ದಿನ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **20/03/2026** ರಂದು 11:00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ

ಟಿಪ್ಪಣಿ: ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ 8 ದಿವಸದೊಳಗಾಗಿ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಗುತ್ತಿಗೆದಾರರ ಉಮೇದುವಾರಿಕೆಯನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/730/ಕೆಎಸ್‌ಎಂಸಿಎ/2025-26

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ

ಉರ್ವಾಸ್ಟೋರ್ಸ್, ಅಶೋಕನಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ಸಂಖ್ಯೆ: ಮನಪ್ರಾ: ತಾಂತ್ರಿಕ : ಜೆಇ(305) : 2025-26 ದಿನಾಂಕ: 05-03-2026

ಟೆಂಡರು ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ http://kppp.karnataka.gov.in ನಲ್ಲಿ ಆಯುಕ್ತರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ Standard Tender Document KW-3 ರ ಪ್ರಕಾರ ಆಹ್ವಾನಿಸಲಾಗಿರುತ್ತದೆ. ಟೆಂಡರುದಾರರು ಟೆಂಡರ್ ನಿಯಮಾವಳಿಯಂತೆ ಕನಿಷ್ಟ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. ಟೆಂಡರುದಾರರು ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಅಂತರ್‌ಜಾಲದ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ. ಟೆಂಡರುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೀಡಲಾದ ವಿವರದಂತೆ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ. ಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬೇಕಾಗಿರುತ್ತದೆ. ಇಂಡೆಂಟ್ ಸಂಖ್ಯೆ MNGUDA/2025-26/EL/WORK_INDENT102 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20-03-2026 ಅಪರಾಹ್ನ 5.15 ಗಂಟೆ (17-15 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಕ್ಯಾಲೆಂಡರ್ ಅನ್ನು ಮುಂದೂಡುವುದು (ಯಾವುದಾದರೂ ಇದ್ದರೆ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಅಧಿಸೂಚಿಸಲಗುವುದು ಮತ್ತು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/- ಆಯುಕ್ತರು,
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು

DIPR/DK/KSMCA/1701/25-26 dt.05.03.2026

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಜೆಇ-4/ಐಎಫ್‌ಟಿ-58/2025-26
ದಿನಾಂಕ: 05-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 3ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ- ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:06-03-2026 ರಿಂದ 13-03-2026

ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿಗಳು
4059-80-051-0-29-422 ಪರಿಶಿಷ್ಠ ಜಾತಿ ಉಪ ಯೋಜನೆಯಡಿ

1. ಸಾಗರ ತಾಲ್ಲೂಕು 1 ಕಾಮಗಾರಿ (ಇ.ನಂ:33753)
2. ಸಾಗರ ತಾಲ್ಲೂಕು 1 ಕಾಮಗಾರಿ (ಇ.ನಂ:33815)

ಕ್ರಸಂ: 01ರ ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : 45 ದಿನಗಳು ಕ್ರ.ಸಂ: 02ರ ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ): 02 ತಿಂಗಳುಗಳು

ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182-274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-25501216/ 080-25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/36/03/1950

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನೀಯರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ: ಕಾ.ಇಂ/ಕನೀನಿನಿ/ಬಿಡಿಯನ್-4/ತಾ.ಸಂ/ಪಿ.ಬಿ 1/4701 ಭದ್ರಾ/2ನೇ ಕರೆ ಟೆಂಡರ್ ಪ್ರಕಟಣೆ ಸಂಖ್ಯೆ : 15/2025-26 ದಿನಾಂಕ : 03.03.2026

Ref. No: EE/KNNL/BDN-4/TA/PB-1/4701 Bhadra/Tender Notification No: 15/2025-26: Dtd: 18.12.2025

ಅಲ್ಪಾವಧಿ ಟೆಂಡರ್ ಪ್ರಕಟಣೆ-2ನೇ ಕರೆ
(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 02 ಸಂಖ್ಯೆ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 04.03.2026 ರಿಂದ 16.03.2026 ರವರೆಗೆ ಸಂಜೆ 17.30 ಗಂಟೆಗೆ. 2) ಪ್ರೀ ಬಿಡ್ ಮೀಟಿಂಗ್ : 11.03.2026 ರಂದು ಬೆಳಿಗ್ಗೆ 11.00 ಗಂಟೆಗೆ, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 17.03.2026 ರಂದು 17.30 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : After obtaining approval of technical bid from competent authority 5) ಕಾಲಾವಧಿ : 08 ತಿಂಗಳು (ಮಳೆಗಾಲ ಸಹಿತ). 6) ಟೆಂಡರ್‌ಗಿಟ್ಟ ಮೊತ್ತ : ರೂ. 169.48 ಲಕ್ಷದಿಂದ ರೂ.186.30 ಲಕ್ಷಗಳವರೆಗೆ. 7) ಇಎಂಡಿ ಮೊತ್ತ : ರೂ. 2,55,000/- ದಿಂದ ರೂ. 2,80,000/-.

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/-
ಕಾರ್ಯಪಾಲಕ ಇಂಜನೀಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ.10-03/ಝೋಂಕಾರ್/2025-26

ಕರ್ನಾಟಕ ಸರ್ಕಾರ

(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

ಐ.ಎಫ್.ಟಿ.ಸಂಖ್ಯೆ: 40/2025-26 ದಿನಾಂಕ: 27.02.2026

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ-2 & 3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಜಿಲ್ಲೆಂಯ ಕಾಮಗಾರಿಗಳಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.99.99ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.39.50 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 7-03-2026 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ-ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/1135/ಕೆಎಸ್‌ಎಂಸಿಎ/2025-26

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ

ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-560 001. ದೂರವಾಣಿ ಸಂಖ್ಯೆ: 080-22133370

ಸಂಖ್ಯೆ: 63/2025-26 ದಿನಾಂಕ:04.03.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರುರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ಹೊಸಕೋಟೆ & ಆನೇಕಲ್ ಉಪವಿಭಾಗಕ್ಕೆ** ಸಂಬಂಧಿಸಿದಂತೆ **04 ಸಂಖ್ಯೆಯ (ರೂ.45.00 ರಿಂದ 400.00 ಲಕ್ಷಗಳ)** ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ-ಪೋರ್ಟಲ್ https://kppp.karnataka.gov.in ನಲ್ಲಿ ಸೂಚಿಸಲಾಗಿದೆ.

ಕ್ರಸಂ. 01 & 02ಕ್ಕೆ:
(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ:12.03.2026 ಸಂಜೆ 4.00 ಗಂಟೆಯವರೆಗೆ.**
(2) ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ ದಿನಾಂಕ: **13.03.2026 ಸಂಜೆ 4.30 ಗಂಟೆಗೆ** ಅಥವಾ ಮುಂದಿನ ದಿನಾಂಕಗಳಲ್ಲಿ ತೆರೆಯಲಾಗುವುದು.

ಕ್ರಸಂ. 03 & 04ಕ್ಕೆ:
(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 23.03.2026 ಸಂಜೆ 4.00 ಗಂಟೆಯವರೆಗೆ.**
(2) ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 24.03.2026 ಸಂಜೆ 4.30 ಗಂಟೆಗೆ** ಅಥವಾ ಮುಂದಿನ ದಿನಾಂಕಗಳಲ್ಲಿ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ಉನಿ-ಸಿ.ಪಿ/6013/ಕೆಎಸ್‌ಎಂಸಿಎ/2025-26

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು-560001, ಕರ್ನಾಟಕ,
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080-25586321
E-mail: ho@kspcb.gov.in, Website: https://kspcb.karnataka.gov.in

ಸಂಖ್ಯೆ:ಮಾನಿಮಂ/ತ್ಯಾನಿವಿ-1/205/ಟಿಎಂಸಿ/ಎಂಎಸ್‌ಡಬ್ಲ್ಯು/2020/2025-26/5272 ದಿನಾಂಕ: 05.03.2026

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಪುರಸಭೆ, ಬಿಡದಿ ಇವರು ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೂಕು, ಹರಿಸಂದ್ರ ಗ್ರಾಮದ ಸರ್ವೆ ನಂ. 166ರ 9.38 ಎಕರೆ ಪ್ರದೇಶದಲ್ಲಿ 18 ಟಿಪಿಡಿ ಸಾಮರ್ಥ್ಯದ ಸಮಗ್ರ ಘನ ತ್ಯಾಜ್ಯ ನಿರ್ವಹಣಾ ಸಂಸ್ಕರಣೆ ಮತ್ತು ವಿಲೇವಾರಿಯ (SWMP & DF) ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ:14.9.2006ರ (ತಿದ್ದುಪಡಿ ದಿನಾಂಕ:01.12.2009) ಪ್ರಕಾರ ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರ್ಕಾರ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರ, ಕರ್ನಾಟಕ ಇವರ Terms of Reference ಪತ್ರ ಸಂಖ್ಯೆ: File No. SEIAA 08 IND 2025, ದಿನಾಂಕ: 24.02.2025 ರಂತೆ ಹಾಗೂ ಪುರಸಭೆ, ಬಿಡದಿ ಇವರ ನಿವೇದನೆ ಪತ್ರ ದಿನಾಂಕ: 01.08.2025 ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ದಿನಾಂಕ: 08.04.2026 ರಂದು ನಿಗಧಿ ಪಡಿಸಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ.

1. **ಸ್ಥಳೀಯ ಸಂಸ್ಥೆ ಹೆಸರು ಮತ್ತು ಕಛೇರಿಯ ವಿಳಾಸ** : ಮುಖ್ಯಾಧಿಕಾರಿ, ಪುರಸಭೆ, ಬಿಡದಿ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
2. **ಉದ್ದೇಶಿತ ವಿಸ್ತರಣಾ ಯೋಜನೆಯ ಸ್ಥಳ** : ಸರ್ವೆ ನಂ. 166, ಹರಿಸಂದ್ರ ಗ್ರಾಮ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
3. **ಉದ್ದೇಶಿತ ವಿಸ್ತರಣಾ ಯೋಜನೆಯ ವಿವರ** : 18 ಟಿಪಿಡಿ ಸಾಮರ್ಥ್ಯದ ಸಮಗ್ರ ಸಾಮರ್ಥ್ಯದ ಘನ ತ್ಯಾಜ್ಯ ನಿರ್ವಹಣೆ, ಸಂಸ್ಕರಣೆ ಮತ್ತು ವಿಲೇವಾರಿ (SWMP & DF) ಘಟಕದ ಸ್ಥಾಪನಾ ಯೋಜನೆ.
4. **ಪರಿಸರ ಸಾರ್ವಜನಿಕ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ : 8ನೇ ಏಪ್ರಿಲ್ 2026 ರಂದು ಬುಧವಾರ ಅಪರಾಹ್ನ 12.30 ಘಂಟೆಗೆ, ಸರ್ವೆ ನಂ. 166, ಹರಿಸಂದ್ರ ಗ್ರಾಮ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.**

5. **ವಿಸ್ತರಣಾ ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಷೆಗೆ ಇಡುವ ಸ್ಥಳ.** : (ಅ) ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ದಕ್ಷಿಣ ಜಿಲ್ಲೆ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯತ್, ಪಂಚಾಯತ್ ಭವನ, ಬಿ.ಎಂ. ರಸ್ತೆ, ವಿದ್ಯಾನಗರ, ರಾಮನಗರ-562159, ಬೆಂಗಳೂರು ದಕ್ಷಿಣ ಜಿಲ್ಲೆ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ದಕ್ಷಿಣ ಜಿಲ್ಲೆ. (ಈ) ತಾಲ್ಲೂಕು ಪಂಚಾಯತಿ, ಪಂಚಾಯಿತಿ ಕಾರ್ಯಾಲಯ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. (ಉ) ತಹಶೀಲ್ದಾರ್ ಕಾರ್ಯಾಲಯ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. (ಊ) ಪುರಸಭೆ ಕಾರ್ಯಾಲಯ, ಬಿಡದಿ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. (ಋ) ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ರಾಮನಗರ, ನಂ. 62/5, ವಡೇರಹಳ್ಳಿ, ಬೆಂಗಳೂರು-ಮೈಸೂರು ರಸ್ತೆ, ಜಿಲ್ಲಾಧಿಕಾರಿ ಕಛೇರಿ ಹತ್ತಿರ, ರಾಮನಗರ-562159. (ಎ) ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ರಾಮನಗರ, ನಂ. 62/5, ವಡೇರಹಳ್ಳಿ, ಬೆಂಗಳೂರು-ಮೈಸೂರು ರಸ್ತೆ, ಜಿಲ್ಲಾಧಿಕಾರಿ ಕಛೇರಿ ಹತ್ತಿರ, ರಾಮನಗರ-562159. (ಏ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560034. (ಐ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ (ಜಿಲ್ಲಾಧಿಕಾರಿಗಳು, ಬೆಂಗಳೂರು ದಕ್ಷಿಣ ಜಿಲ್ಲೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ : **http://kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

ಕರ್ನಾಟಕ ಸರ್ಕಾರ

ಕೃಷಿ ಇಲಾಖೆ
ಉಪ ಕೃಷಿ ನಿರ್ದೇಶಕರು-1, ಕಚೇರಿ ವಿಜಯಪುರ

ದೂರವಾಣಿ:08352-242516, ಇ-ಮೇಲ್:dda1vjp@gmail/com
ಸಂ:ಉಕೃನಿ-1/ವಿ/ಸಿ-1/ಹೊ.ಗು/2026-27 ದಿನಾಂಕ:03.03.2026

ಪತ್ರಿಕಾ ಪ್ರಕಟಣೆ

ಉಪ ಕೃಷಿ ನಿರ್ದೇಶಕರು-1 ವಿಜಯಪುರ ಕಚೇರಿಗೆ ಹಾಗೂ ಅಧೀನದಲ್ಲಿ ಬರುವ ಸಹಾಯಕ ಕೃಷಿ ನಿರ್ದೇಶಕರು ವಿಜಯಪುರ/ಮುದ್ದೇಬಿಹಾಳ/ ಬಸವನ ಬಾಗೇವಾಡಿ ಕಚೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಇ-ಟೆಂಡರ ಸಂಖ್ಯೆ AD/2025-26/SE0474 ರ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅರ್ಜಿದಾರರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **20.03.2026** ರ 5.30 ಘಂಟೆ ವರೆಗೆ ಅವಕಾಶವಿರುತ್ತದೆ. ನಿಗಧಿತ ಶುಲ್ಕ ಪಾವತಿಸಿ https://kppp.karnataka.gov.in ವೆಬ್ ಸೈಟ್ ಮೂಲಕ ಭಾಗವಹಿಸಬಹುದಾಗಿರುತ್ತದೆ. ಬೇರೆ ವಿಧಾನದಲ್ಲಿ ಅರ್ಜಿಗಳನ್ನು ಸ್ವೀಕರಿಸುವದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸರಕಾರದ ಕೆಲಸದ ದಿನಗಳಂದು ಕಚೇರಿ ವೇಳೆಯಲ್ಲಿ ಖುದ್ದಾಗಿ ಭೇಟಿ ನೀಡಿ ಪಡೆಯಬಹುದಾಗಿದೆ.

ಸಹಿ/- ಉಪ ಕೃಷಿ ನಿರ್ದೇಶಕರ-1, ವಿಜಯಪುರ

ವಾಸಾಸಂಇ/ವಿಜಯಪುರ/772/ಕೆಎಸ್‌ಎಂಸಿಎ/2025-26

ಕರ್ನಾಟಕ ಸರಕಾರ (ರಾಷ್ಟ್ರೀಯ ಆರೋಗ್ಯ ಅಭಿಯಾನ)
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಹಾವೇರಿ
ಬಿ ಬ್ಲಾಕ್ ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ ಆವರಣ,
ಜಿಲ್ಲಾ ಆಡಳಿತ ಭವನ, ದೇವಗಿರಿ, ಹಾವೇರಿ-581110

Phone No. : 08375-249127 Fax : 08375-249009
Email : rchohaveri@gmail.com
SL.No/DPMU/HVR/NHM/2025-26 Date : 02/03/2026

ಚಾಲಕನೊಂದಿಗೆ ಬಾಡಿಗೆ ವಾಹನದ ಸೇವೆ ಒದಗಿಸಲು ಇ-ಟೆಂಡರ್ ಆಹ್ವಾನ

ಸನ್ 2026-27ನೇ ಸಾಲಿಗೆ ಹಾವೇರಿ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಬರುವ ವಿವಿಧ ಕಾರ್ಯಕ್ರಮ ಅನುಷ್ಠಾನಕ್ಕೆ ಚಾಲಕನೊಂದಿಗೆ ಬಾಡಿಗೆ ವಾಹನದ ಅವಶ್ಯಕತೆ ಇದ್ದು, ಒಂದು ವರ್ಷದ ಅವಧಿಗೆ ಚಾಲಕನೊಂದಿಗೆ ಬಾಡಿಗೆ ವಾಹನದ ಸೇವೆಯನ್ನು ಅರ್ಹ ನೊಂದಾಯಿತ ಟೂರ್ಸ್ ಮತ್ತು ಟ್ರಾವೆಲ್ಸ್ ಏಜೆನ್ಸಿ ಮುಖಾಂತರ ಪಡೆದುಕೊಳ್ಳಲು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿದಂತೆ ಇ-ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತರು kppp.karnataka.gov.in ಮೂಲಕ ಅರ್ಹ ಟೆಂಡರ್‌ದಾರರು ಟೆಂಡರ್‌ನ್ನು ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಜಿಲ್ಲಾಡಳಿತ ಭವನ, ಹಾವೇರಿ ಇಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

(1) ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ : **03/03/2026** (2) ಟೆಂಡರ್‌ನ ಅಂದಾಜು ಮೌಲ್ಯ ರೂ. **87.00** ಲಕ್ಷಗಳು (3) ಟೆಂಡರ್ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ವೇಳೆ : **17/03/2026** ಸಾಯಂಕಾಲ 4.00 ಗಂಟೆಯವರೆಗೆ (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ:**18/03/2026** ರಂದು ಸಾಯಂಕಾಲ 4.30 ಗಂಟೆ (5) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : ತಿಳಿಸಲಾಗುವುದು (6) ಪಾವತಿಸಬೇಕಾದ ಇ.ಎಂ.ಡಿ ಮೊತ್ತ 5% ರೂ. **1,72,000/-** (7) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ) ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಜಿಲ್ಲಾಡಳಿತ ಭವನ, ಹಾವೇರಿ **9449843113**

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಹಾವೇರಿ

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/770/2025-26

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-613) ಡ್ರಾ ಮಾರ್ಚ್ 05ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
PJ 855885 (KASARAGOD)

Consolation Prize Rs.5,000/-
PA 855885 PB 855885 PC 855885 PD 855885
PE 855885 PF 855885 PG 855885 PH 855885
PK 855885 PL 855885 PM 855885

2nd Prize Rs.30,00,000/- [30 Lakhs]
PD 580743 (ALAPPUZHA)

3rd Prize Rs.5,00,000/- [5 Lakhs]
PL 595642 (KOLLAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0369 1687 2568 3061 3076 4392 4499 5371 5541 5696
6151 6362 8005 8148 8440 8625 8924 9110 9960

5th Prize Rs.2,000/-
0120 0337 0589 3766 4276 4665

6th Prize Rs.1,000/-
0591 0726 1594 2709 3038 3207 3896 3989 4780 4900
6052 6058 6115 6622 6981 7003 7211 7294 7788 7836
7870 8540 8747 9757 9826

7th Prize Rs.500/-
0080 0347 0391 0553 0706 0710 0737 0757 1192 1268
1505 1571 2041 2046 2057 2117 2152 2314 2406 2482
2503 2730 2886 2928 2931 2942 3044 3160 3726 4014
4345 4459 4531 4573 4596 4706 4755 4824 5093 5451
5651 5734 5747 5778 5939 6195 6320 6334 6472 6637
6715 6834 6853 7087 7116 7238 7588 7619 7650 7675
7957 8041 8249 8306 8604 8902 9006 9045 9056 9064
9285 9293 9629 9703 9896 9958

8th Prize Rs.200/-
0142 0344 0378 0476 0698 0777 0781 1052 1137 1312
1409 1580 1680 1729 1786 1920 1999 2040 2137 2580
2595 2622 2706 2792 2952 2997 3197 3329 3387 3539
3650 3723 3785 3916 3920 4400 4401 4465 4511 4724
4994 5122 5216 5238 5283 5514 5645 5666 5711 5766
6047 6135 6161 6604 6613 6636 6655 6667 6806 6867
7047 7053 7098 7437 7573 7580 7656 7666 7962 8011
8097 8136 8221 8278 8347 8503 8762 9177 9183 9408
9532 9537 9538 9689

9th Prize Rs.100/-
0149 0211 0266 0346 0496 0504 0580 0584 0647 0657
0783 0840 0872 0898 0928 1107 1133 1199 1233 1283
1292 1328 1341 1422 1495 1542 1569 1639 1652 1741
1748 1827 1842 1873 1981 2019 2102 2136 2297 2321
2389 2409 2430 2465 2491 2519 2549 2553 2603 2775
2832 2872 2888 2906 3011 3123 3250 3320 3396 3540
3549 3593 3649 3834 3874 3942 4067 4155 4184 4251
4268 4347 4417 4437 4440 4441 4556 4654 4708 4778
4782 4791 4858 4906 4947 5010 5085 5147 5241 5497
5523 5537 5629 5642 5763 5815 5844 6017 6018 6023
6066 6081 6090 6111 6150 6185 6316 6422 6526 6582
6751 6803 6858 6877 6925 6970 7164 7181 7232 7261
7298 7309 7327 7334 7461 7692 7993 8113 8234 8304
8318 8504 8522 8541 8593 8605 8606 8671 8718 8756
8799 8840 8860 8920 9048 9078 9130 9359 9428 9468
9498 9674 9725 9828 9839 9872

ಕಿರುಸುದ್ದಿ

ಕಾಲೇಜಿಗೆ ಹೋಗುವಂತೆ ಬುದ್ಧಿಮಾತು: ನೊಂದು ವಿದ್ಯಾರ್ಥಿ ಆತ್ಮಹತ್ಯೆ

ಉಡುಪಿ: ಸರಿಯಾಗಿ ಕಾಲೇಜಿಗೆ ಹೋಗುವಂತೆ ತಂದೆ ಬುದ್ಧಿಮಾತು ಹೇಳಿದ್ದಕ್ಕೆ ಮನನೊಂದ ವಿದ್ಯಾರ್ಥಿಯೊಬ್ಬ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕೆರಾಡಿ ಗ್ರಾಮದ ಹಯ್ಯಂಗಾರು ನಿವಾಸಿ ಮನೀಷ (16) ಮೃತ ದುರ್ದೈವಿ. ಈತ ಕೊಳಲಗಿರಿಯ ಜಿ.ಟಿ.ಟಿ.ಸಿ ಕಾಲೇಜಿನಲ್ಲಿ ಡಿಪ್ಲೋಮಾ ವ್ಯಾಸಂಗ ಮಾಡುತ್ತಿದ್ದನು. ಫೆ. 16ರಂದು ಮನೆಯಲ್ಲಿ ವಿಷಪದಾರ್ಥ ಸೇವಿಸಿದ್ದ ಮನೀಷನನ್ನು ಕುಂದಾಪುರ ಹಾಗೂ ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಮಾ. 4ರಂದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಕೊಲ್ಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಂದೂರು: ಮನೆಯ ಬೀಗ ಮುರಿದು ಚಿನ್ನಾಭರಣ ದೋಚಿ ಪರಾರಿ

ಬೈಂದೂರು: ಮನೆಯ ಬೀಗ ಮುರಿದು ಒಳನುಗ್ಗಿ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ದೋಚಿ ಪರಾರಿಯಾದ ಘಟನೆ ಗುರುವಾರ ಇಲ್ಲಿನ ಬೈಂದೂರು ತಾಲೂಕಿನ ಪಡುವರಿ ಎಂಬಲ್ಲಿ ನಡೆದಿದೆ.

ಘಟನೆಯ ವಿವರ: ಇಲ್ಲಿನ ಪರಮೇಶ್ವರ ಪಟವಾಲ್ ಎನ್ನುವವರ ಮನೆಗೆ ನುಗ್ಗಿದ ಕಳ್ಳರು ಹಾಡುಹಗಲೆ ಅಂದಾಜು 20 ಪವನ್ ಚಿನ್ನ ಹಾಗೂ ಎರಡು ಲಕ್ಷಕ್ಕೂ ಅಽಕ ನಗದು ದೋಚಿ ಪರಾರಿಯಾಗಿದ್ದಾರೆ.ಮನೆಯಲ್ಲಿ ಪಟವಾಲ್ ರವರ ಮಗ, ಮಗಳು ಉದ್ಯೋಗಕ್ಕೆ ತೆರಳಿದ್ದು ಯಾರು ಇಲ್ಲದಿರುವ ಖಚಿತ ಮಾಹಿತಿ ಮೇರೆಗೆ ಮನೆಯ ಹಿಂಬದಿಯ ಮೂಲಕ ಒಳನುಗ್ಗಿ ಬಾಗಿಲು ಮುರಿದು ಕವಾಟಿನಲ್ಲಿರುವ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ.ಬೆಳಿಗ್ಗೆ 10 ರಿಂದ ಸುಮಾರು 1 ಗಂಟೆಯ ಒಳಗೆ ಈ ಕಳ್ಳತನ ನಡೆದಿದೆ.ಒಟ್ಟು ಕಳ್ಳತನದ ಮಾಹಿತಿ ಇನ್ನಷ್ಟೆ ದೊರೆಯಬೇಕಿದೆ. ಘಟನಾ ಸ್ಥಳಕ್ಕೆ ಆರಕ್ಷಕ ಅಧಿಕಾರಿಗಳು,ಬೆರಳಚ್ಚು ತಂಡ,ಶ್ವಾನದಳ ಆಗಮಿಸಿ ತನಿಖೆ ನಡೆಸುತ್ತಿದ್ದಾರೆ.

ಮಲ್ಪೆ: ಬೋಟಿನಿಂದ ಆಕಸ್ಮಿಕವಾಗಿ ಬಿದ್ದು ಮೀನುಗಾರ ಸಾವು

ಮಲ್ಪೆ: ಮೀನುಗಾರಿಕಾ ಬೋಟಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಆಕಸ್ಮಿಕವಾಗಿ ಬಿದ್ದು ಮೀನುಗಾರರೊಬ್ಬರು ಮೃತಪಟ್ಟ ಘಟನೆ ಗುರುವಾರ ನಡೆದಿದೆ. ಈಶ್ವರನಗರದ ರಮೇಶ ಮೆಂಡನ್ (66) ಮೃತಪಟ್ಟವರು.

ಇವರು ಸುಂದರ್ ಕುಂದರ್ ಮಾಲೀಕತ್ವದ 'ಸ್ವರ್ಣ ಕೇಸರಿ' ಬೋಟಿನಲ್ಲಿ ಕೆಲಸ ಮಾಡುತ್ತಿದ್ದರು. ಮಾ. 5ರಂದು ಅರಬ್ಬಿ ಸಮುದ್ರದಲ್ಲಿ ಮೀನುಗಾರಿಕೆ ನಡೆಸುತ್ತಿದ್ದಾಗ ಆಕಸ್ಮಿಕವಾಗಿ ಬೋಟಿನ ಮೇಲೆ ಬಿದ್ದಿದ್ದಾರೆ. ತಕ್ಷಣ ಜಿಲ್ಲಾ ಆಸ್ಪತ್ರೆಗೆ ಕರೆತರಲಾಯಿತಾದರೂ, ಪರೀಕ್ಷಿಸಿದ ವೈದ್ಯರು ಅವರು ಈಗಾಗಲೇ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ. ಮಲ್ಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಡುಪಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಸೂಚನೆ

ಜಲಕ್ಷಾಮ ಕಾಡದಂತೆ ಎಚ್ಚರವಹಿಸಿ

ಉಡುಪಿ: ಜಿಲ್ಲೆಯಲ್ಲಿ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಇಂದಿನಿಂದ ಜೂನ್‌ನ ಮುಂಗಾರು ಮಳೆ ಆರಂಭ ಆಗುವವರೆಗೆ ಜನರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ ಸೂಚನೆ ನೀಡಿದರು.

ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಸ್ತುತ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಪ್ರದೇಶಗಲ್ಲಿ ಯಾವುದೇ ರೀತಿಯ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ತಾಲೂಕುವಾರು ನೀಡಿರುವ ವರದಿ ಅನ್ವಯ ಮುಂದಿನ ಮೇ 15 ರ ವರೆಗೆ ನೀರಿನ ಸಮಸ್ಯೆ ಉಂಟಾಗುವುದಿಲ್ಲ, ಆದರೂ ಸಹ ಈಗಿನಿಂದಲೇ ಕುಡಿಯುವ ನೀರಿನ ಸಮಸ್ಯೆ ಉಂಟಾದಾಗ ನೀರು ಸರಬರಾಜಿಗೆ ಯೋಜನೆ ರೂಪಿಸಿಕೊಳ್ಳಬೇಕು ಎಂದು ತಾಲೂಕು ತಹಶೀಲ್ದಾರ್ ಗಳು, ತಾಲೂಕು ಪಂ.ಕಾರ್ಯನಿರ್ವಹಣಾಧಿಕಾರಿ ಹಾಗೂ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರಿಗೆ ಸೂಚನೆ ನೀಡಿದರು.

ಸರಕಾರಿ ಬಾವಿಗಳು, ಕೆರೆಗಳು ಸ್ವಚ್ಛವಾಗಿಟ್ಟು ಕೊಳ್ಳುವುದರೊಂದಿಗೆ ಪ್ರಾಣಿ, ಪಕ್ಷಿಗಳಿಗೆ ನೀರನ್ನು ಕುಡಿಯಲು ಅನುಕೂಲ ಮಾಡಿಕೊಡಬೇಕು.



12- 3 ಗಂಟೆವರೆಗೂ ಹೊರ ಹೋಗಬೇಡಿ

ಅತೀ ಹೆಚ್ಚು ತಾಪಮಾನ ದಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟಲು ಆರೋಗ್ಯ ಇಲಾಖೆ ಅಧಿಕಾರಿಗಳು ಅಗತ್ಯ ಔಷಧಿಗಳನ್ನು ಹಾಗೂ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಓ.ಆರ್.ಎಸ್ ಪ್ಯಾಕೇಟ್‌ಗಳನ್ನು ದಾಸ್ತಾನು ಇರುವಂತೆ ನೋಡಿಕೊಳ್ಳಬೇಕು ಎಂದ ಅವರು, ಜನರು ಸಾಧ್ಯವಾದಷ್ಟು ಗರಿಷ್ಠ ತಾಪಮಾನದ ಅವಧಿ ಅಂದರೆ ಮಧ್ಯಾಹ್ನ 12 ರಿಂದ 3 ಗಂಟೆಯ ವರೆಗೆ ಬಿಸಿಲಿನಲ್ಲಿ ಹೋಗುವುದನ್ನು ತಪ್ಪಿಸಬೇಕು. ಸಾಕಷ್ಟು ಪ್ರಮಾಣದಲ್ಲಿ ನೀರನ್ನು ಸೇವಿಸಬೇಕು ಹಾಗೂ ಹಗುರವಾದ ತಿಳಿ ಬಣ್ಣದ ಸಡಿಲವಾದ ಹತ್ತಿಬಟ್ಟೆಗಳನ್ನು ಧರಿಸಬೇಕು ಎಂದರು.

ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆಗಳಲ್ಲಿ ಸ್ಥಳೀಯ ಜನಪ್ರತಿನಿಧಿಗಳ ಅಧ್ಯಕ್ಷತೆಯಲ್ಲಿ ಕರೆದು ತಾಲೂಕಿನಲ್ಲಿ ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆಗಳು ಉಂಟಾಗದಂತೆ ಕಂಡು ಕೊಳ್ಳಬಹುದಾದ ಕ್ರಮಗಳನ್ನು ಚರ್ಚಿಸಿ, ಯೋಜನೆಯನ್ನು ರೂಪಿಸಬೇಕು ಎಂದರು.

38 ವಾರಗಳಿಗೆ ಬೇಕಾದಷ್ಟು ಮೇವಿದೆ

ಕಳೆದ 5 ವರ್ಷಗಳಲ್ಲಿ ಜಿಲ್ಲೆಯಲ್ಲಿ ದನಕಾರುಗಳಿಗೆ ಮೇವಿನ ಕೊರತೆ ಕಂಡು ಬಂದಿಲ್ಲ. ಪ್ರಸ್ತುತ ಎಲ್ಲಾ ತಾಲೂಕುಗಳಲ್ಲಿ ಮುಂದಿನ 38 ವಾರಗಳಿಗೆ ಆಗುವಷ್ಟು ಮೇವು ದಾಸ್ತಾನಿದೆ ಎಂದರು.

ಬೇಸಿಗೆ ದಿನಗಳಲ್ಲಿ ಅಗ್ನಿ ಅನಾಹುತಗಳು ಉಂಟಾಗುವ ಸಾಧ್ಯತೆಗಳು ಹೆಚ್ಚು ಇರುತ್ತವೆ. ಅಗ್ನಿ ಅನಾಹುತಗಳು ಉಂಟಾದಲ್ಲಿ ಕೂಡಲೇ ಸ್ಪಂದಿಸಲು ಸನ್ನದ್ಧರಾಗಿರಬೇಕು.. ಸಾರ್ವಜನಿಕ ಸ್ಥಳಗಳಲ್ಲಿ ಅಗ್ನಿ ಸುರಕ್ಷತಾ ಆಡಿಟ್ ಮಾಡುವುದರೊಂದಿಗೆ ವರದಿಯನ್ನು ನೀಡಬೇಕು ಎಂದು ಅಗ್ನಿ ಶಾಮಕ ಠಾಣಾಧಿಕಾರಿಗಳಿಗೆ ಸೂಚನೆ ನೀಡಿದ ಅವರು, ಅರಣ್ಯ ಪ್ರದೇಶಗಳಲ್ಲಿ ಅಗ್ನಿ ಅನಾಹುತಗಳು ಉಂಟಾಗಬಹುದು, ಈ ಬಗ್ಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು ಎಂದರು.

ಪೂರ್ವ ಮುಂಗಾರು ಮಳೆಗಾಲದಲ್ಲಿ ಗುಡುಗು, ಸಿಡಿಲುಗಳಿಂದ ಅಪಾಯಗಳನ್ನ ತಪ್ಪಿಸಲು ತೆಗೆದು ಕೊಳ್ಳಬಹುದಾದ ಮುಂಜಾಗ್ರತ ಕ್ರಮಗಳನ್ನು ಬಗ್ಗೆ ಹೆಚ್ಚಿನ ಪ್ರಚಾರ ಕೈಗೊಳ್ಳುವು ದರೊಂದಿಗೆ ಸಾರ್ವಜನಿಕರು ಎಚ್ಚರದಿಂದ ಇರುವಂತೆ ನೋಡಿಕೊಳ್ಳಬೇಕು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಎಸ್. ಎಸ್ ಕಾದ್ರೋಳ್ಳಿ, ಸಹಾಯಕ ಕಮಿಷನರ್ ರಶ್ಮಿ, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು, ತಹಶೀಲ್ದಾರ್ ಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು..

ನೀರಿನ ಮೂಲದ ಕುರಿತು ವರದಿ ಕೊಡಿ

ಮುಂಬರುವ ದಿನಗಳಲ್ಲಿ ಕಾರ್ಕಳದ 14, ಕುಂದಾಪುರದ 36, ಬೈಂದೂರಿನ 15, ಉಡುಪಿಯ 9, ಬ್ರಹ್ಮಾವರದ 13, ಕಾಪುವಿನ 4 ಹಾಗೂ ಹೆಬ್ರಿ ತಾಲೂಕಿನಲ್ಲಿ 2 ಗ್ರಾಮ ಪಂಚಾಯತ್ ಗಳಲ್ಲಿ ಮತ್ತು ಸಾಲಿಗ್ರಾಮದ 5 ಹಾಗೂ ಬೈಂದೂರಿನ 19 ವಾರ್ಡ್‌ಗಳಲ್ಲಿ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬರುವ ಸಾಧ್ಯತೆಗಳಿರುವುದಾಗಿ ಗುರುತಿಸಲಾಗಿದ್ದು, ಪ್ರಸ್ತುತ ನೀಡುತ್ತಿರುವ ನೀರಿನ ಮೂಲಗಳು ಎಷ್ಟು ದಿನಗಳು ಬರುತ್ತವೆ ಎಂಬ ಬಗ್ಗೆ ಎರಡು ದಿನಗಳ ಒಳಗಾಗಿ ಪರಿಶೀಲಿಸಿ ವರದಿ ನೀಡಬೇಕೆಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಅಭಿಯಂತರರಿಗೆ ಸೂಚನೆ ನೀಡಿದರು. ಒಂದೊಮ್ಮೆ ನೀರಿನ ಕೊರತೆ ಕಂಡುಬಂದಲ್ಲಿ ಹತ್ತಿರದ ಖಾಸಗಿ ಬಾವಿಗಳನ್ನು ಗುರುತಿಸಿ ಇಟ್ಟುಕೊಂಡು ತಕ್ಷಣಕ್ಕೆ ನೀರು ನೀಡಲು ಸನ್ನದ್ಧರಾಗಿರುವುದರೊಂದಿಗೆ ಜನರಿಗೆ ಸಮಸ್ಯೆ ಆಗದೆ ಇರುವ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದರು.

ಬೋಳಾರದ ಟಿವಿಎಸ್ ಫ್ಯಾಕ್ಟರಿ ರಸ್ತೆ ಸಮಗ್ರ ಅಭಿವೃದ್ಧಿಗೆ ಗುದ್ದಲಿ ಪೂಜೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 58ನೇ ಬೋಳಾರ ವಾರ್ಡಿನಲ್ಲಿ ಸುಮಾರು ಒಂದು ಕೋಟಿ ರೂ. ವಿಶೇಷ ಅನುದಾನದಲ್ಲಿ ಟಿವಿಎಸ್ ಫ್ಯಾಕ್ಟರಿ ರಸ್ತೆಯು ಸಮಗ್ರ ಅಭಿವೃದ್ಧಿಗೊಳ್ಳಲಿದ್ದು, ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಗುದ್ದಲಿ ಪೂಜೆ ನಡೆಯಿತು.

ನಂತರ ಮಾತನಾಡಿದ ಶಾಸಕರು, ಹಿಂದಿನ ಬಿಜೆಪಿ ಸರ್ಕಾರದ ಅವಽಯಲ್ಲಿ ಮಂಜೂರುಗೊಂಡ ಅನೇಕ ಕಾಮಗಾರಿಗಳಿಗೆ ಈಗಿನ ಕಾಂಗ್ರೆಸ್ ಸರಕಾರ ತಡೆ ನೀಡಿತ್ತು. ಈ ಬಗ್ಗೆ ಲೋಕೋಪಯೋಗಿ ಇಲಾಖೆಯ ಸಚಿವ ಸತೀಶ್ ಜಾರಕಿಹೊಳಿಯವರಲ್ಲಿ ಅನೇಕ ಬಾರಿ ಮನವಿ ಮಾಡಿದ ನಂತರ, ತಡೆ ಹಿಡಿಯಲಾಗಿದ್ದ ಅನುದಾನಗಳು ಮತ್ತೆ ಬಿಡುಗಡೆಗೊಂಡಿದ್ದು ಶೀಘ್ರದಲ್ಲಿ ಕಾಮಗಾರಿ ಆರಂಭವಾಗಲಿದೆ ಎಂದರು.

ಪಾಲಿಕೆ ಮಾಜಿ ಸದಸ್ಯರಾದ ಭಾನುಮತಿ ಪಿ.ಎಸ್, ಶೈಲೇಶ್ ಶೆಟ್ಟಿ, ಮಂಡಲದ ಉಪಾಧ್ಯಕ್ಷ ದೀಪಕ್ ಪೈ, ಶಕ್ತಿ ಕೇಂದ್ರದ ಅಧ್ಯಕ್ಷ ಪ್ರಸಾದ್ ಬೋಳಾರ್, ಪ್ರಮುಖರಾದ ಅಮಿತ್ ಶೆಟ್ಟಿ, ದಿನೇಶ್ ಕರ್ಕೇರ, ಪ್ರವೀಣ್ ನಿಡ್ಡೆಲ್, ನಾಗರಾಜ್ ಆಚಾರ್ಯ, ಸಾತ್ವಿಕ್ ಭುವನ್, ಸುಜಾತ ಆಳ್ವ, ರೂಪ, ಜಯಶ್ರೀ ಕೇಶವ್ ಶೆಟ್ಟಿ, ದಿನೇಶ್ ಶೆಟ್ಟಿ, ಸುರೇಶ, ಪುಂಡಲೀಕ ಸುವರ್ಣ, ದೇವದಾಸ್ ಶೆಟ್ಟಿ, ರವಿ ಆಚಾರಿ, ಪುಟ್ಟ, ಗಿರೀಶ್,ರಕ್ಷಿತ್ ಮೊದಲಾದವರು ಇದ್ದರು.

ಮಾ.8: ಮಹಿಳಾ ಸರ್ಕಾರಿ ನೌಕರರಿಗೆ ಕ್ರೀಡಾ ಸ್ಪರ್ಧೆ

ಮಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ– 2026 ರ ಪ್ರಯುಕ್ತ ದಕ್ಷಿಣ ಕನ್ನಡ ಜಿಲ್ಲೆಯ ಮಹಿಳಾ ಸರ್ಕಾರಿ ನೌಕರರಿಗೆ ಮಾರ್ಚ್ 8 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಕ್ಲಾಕ್ ಟವರ್ನ ಹತ್ತಿರ ಇರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದಲ್ಲಿ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ದ.ಕ ಜಿಲ್ಲೆಯ ಮಹಿಳಾ ಸರ್ಕಾರಿ ನೌಕರರಿಗೆ ಮಾತ್ರ ಅವಕಾಶ. ದ.ಕ. ಜಿಲ್ಲೆಯ ಸರ್ಕಾರಿ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಮಹಿಳಾ ಸರ್ಕಾರಿ ನೌಕರರು ಮಾತ್ರ ಭಾಗವಹಿಸುವುದು ಮತ್ತು ಇಲಾಖಾ ಗುರುತಿನ ಚೀಟಿ ತರಬೇಕು.

ವೈಯಕ್ತಿಕ/ಗುಂಪು ಸ್ಪರ್ಧೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬ ಮಹಿಳಾ ಸರ್ಕಾರಿ ನೌಕರರು ಕಡ್ಡಾಯವಾಗಿ ಜಿಲ್ಲಾ ಸಂಘದಿಂದ ಬಿಡುಗಡೆ ಮಾಡಿರುವ ಗೂಗಲ್ ಫಾರ್ಮ್‌ನಲ್ಲಿ ಮಾರ್ಚ್ 7 ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ಈ ಕೆಳಗಿನ ಸ್ಕ್ಯಾನರ್‌ನಲ್ಲಿ ಗೂಗಲ್ ಫಾರ್ಮ್ ಲಿಂಕ್ ಲಭ್ಯವಿದೆ.

ಅಂತಿಮ ದಿನಾಂಕದ ನಂತರ ಯಾವುದೇ ನೋಂದಣಿಗೆ ಅವಕಾಶವಿರುವುದಿಲ್ಲ. ಸ್ಪರ್ಧಿಗಳು ನಿಗದಿಪಡಿಸಿರುವ ಸ್ಪರ್ಧೆಯ ಸ್ಥಳಗಳಲ್ಲಿ ಮತ್ತು ಸಮಯಕ್ಕೆ ಸರಿಯಾಗಿ ಹಾಜರಿರಬೇಕು. ಸ್ಪರ್ಧೆಗಳ ತೀರ್ಪುಗಾರರ ನಿರ್ಣಯವೇ ಅಂತಿಮವಾಗಿರುತ್ತದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

5-03-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	260 - 470
ಚೋಲ್ ಅಡಿಕೆ	:	505 - 530
ಡಬಲ್ ಚೋಲ್	:	505 - 530
ಹೊಸ ಪಟೋರ	:	360 - 410
ಹಳೆ ಪಟೋರ	:	390 - 420
ಹೊಸ ಉಳ್ಳಿ	:	115 - 300
ಹಳೆ ಉಳ್ಳಿ	:	105 - 305
ಹೊಸ ಕೋಕಾ	:	330 - 350
ಹಳೆ ಕೋಕಾ	:	355 - 375
ಹೊಸ ಕರಿಗೋಟು	:	240 - 270
ಹಳೆ ಕರಿಗೋಟು	:	240 - 270
ಹಸಿ ಕೊಕ್ಕೋ	:	80 - 110
ಒಣ ಕೊಕ್ಕೋ	:	320 - 350

ಕಾಳುಮೆಣಸು ಧಾರಣೆ

ಕಾಳುಮೆಣಸು	:	465 - 660

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	213.50
ಆರ್‌ಎಸ್‌ಎಸ್ 2	-	197.00
ಸ್ಕ್ರಾಪ್ 1	-	135.00
ಸ್ಕ್ರಾಪ್ 2	-	130.00

ನಾರಾವಿ ಶ್ರೀ ಸೂರ್ಯ ನಾರಾಯಣ ದೇಗುಲ ಬ್ರಹ್ಮಕಲಶೋತ್ಸವ

ಧರ್ಮಕ್ಕೆ ಅಧಿಕಾರಿ ದೇವರು: ಸುಬ್ರಹ್ಮಣ್ಯ ಶ್ರೀ



ಬೆಳ್ತಂಗಡಿ: ನಮ್ಮ ಬದುಕನ್ನು ನಿಯಂತ್ರಿಸಲು ಧರ್ಮದ ಅವಿರ್ಭಾವ ಆಗಿದೆ. ಧರ್ಮವಿಲ್ಲದೆ ಬದುಕು ಸಾಧ್ಯವಿಲ್ಲ. ಹೀಗಾಗಿ ಧರ್ಮಸಂರಕ್ಷಣೆ ನಮ್ಮ ಜವಾಬ್ದಾರಿ ಎಂದು ಸುಬ್ರಹ್ಮಣ್ಯ ನರಸಿಂಹ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ನುಡಿದರು.

ಅವರು ನಾರಾವಿ ಶ್ರೀ ಸೂರ್ಯ ನಾರಾಯಣನಿಗೆ ನಡೆಯುತ್ತಿರುವ ಅಷ್ಟಬಂಧ ಬ್ರಹ್ಮಕಲಶೋತ್ಸವ ಸಂದರ್ಭ ನಾಲ್ಕನೇ ದಿನವಾದ ಬುಧವಾರ ನಡೆದ ಧಾರ್ಮಿಕ ಸಭೆಯಲ್ಲಿ ಆಶೀರ್ವದಿಸಿದರು.

ಪ್ರಾಣಿ ಪಕ್ಷಿಗಳಿಗೆ ನಿಯತ್ತು ಎಂಬುದು ಪ್ರಕೃತಿದತ್ತವಾಗಿಯೇ ಬಂದಿದೆ. ಆದರೆ ಮನುಷ್ಯನ ಜೀವನವು ನಿಯತ್ತು, ನಿಯಮ ಗಳಿಂದ ನಡೆಯಬೇಕಿದ್ದರೆ ಧರ್ಮ ಅಗತ್ಯ. ಹೀಗಾಗಿ ಧರ್ಮದ ಜನನ ವಾಗಿದೆ. ನಮ್ಮಿಂದಾಗಿ ಧರ್ಮ ಇರುವಂತಾಗಬೇಕು ಮತ್ತು ಧರ್ಮದೊಂದಿಗೆ ನಾವು ಬದುಕಬೇಕು. ಧರ್ಮಕ್ಕೆ ಅಧಿಕಾರಿ ದೇವರು ಎಂದರು.

ದೇವಸ್ಥಾನದ ಆಡಳಿತ ಮೊಕ್ತೇಸರ ರವೀಂದ್ರ ಪೂಜಾರಿ ಬಾಂದೊಟ್ಟು ಅಧ್ಯಕ್ಷತೆ ವಹಿಸಿದ್ದರು.

ಅತಿಥಿಗಳಾಗಿ ಪುಣೆ ಬಿಲ್ಲವ ಸಂಘದ ಅಧ್ಯಕ್ಷ ವಿಶ್ವನಾಥ ಪೂಜಾರಿ ಕಡ್ತಲ, ಶ್ರೀಕ್ಷೇ. ಧ.ಗ್ರಾ. ಯೋಜನೆಯ ಕಾರ್ಯ ನಿರ್ವಹಣಾಧಿಕಾರಿ ಅನಿಲ್ ಕುಮಾರ್ ಎಸ್. ಎಸ್., ಯೋಜನೆಯ ಟ್ರಸ್ಟಿ ಹರೀಶ್ ಕೃಷ್ಣಸ್ವಾಮಿ, ಹಣಕಾಸು ಅಧಿಕಾರಿ ಶಾಂತಾರಾಮ ಪೈ, ಕಾರ್ಕಳ ತಾ.ಪಂ. ಮಾಜಿ ಅಧ್ಯಕ್ಷ ಸುಂದರ ಪೂಜಾರಿ,ನಾರಾವಿ ಕೊಡಮಣಿತ್ತಾಯ ದೈವಸ್ಥಾನದ ಗೌರವಾಧ್ಯಕ್ಷ ಮಹಾವೀರ ಜೈನ್, ಬೆಳ್ಳಿಬೀಡು ಹೇಮರಾಜ್, ಸುಂದರ ಪೂಜಾರಿ ಪುಣೆ, ಮರೋಡಿ ಗ್ರಾ.ಪಂ. ಮಾಜಿ ಅಧ್ಯಕ್ಷ ಸೇಸಪ್ಪ ಪೂಜಾರಿ, ನಾರಅವಿ ದೇವಾಡಿಗರ ಸಂಘದ ಅಧ್ಯಕ್ಷ ಜಗನ್ನಾಥ ದೇವಾಡಿಗ, ನಾರಾವಿ ಮೂಲ್ಯರ ಯಾನೆ ಕುಲಾಲರ ಸಂಘದ ಅಧ್ಯಕ್ಷ ಸದಾನಂದ ಬಂಗೇರ, ನಾಗೇಶ್ ಕುಮಾರ್ ಗೌಡ, ಪಾಂಡ್ಯೆಪ್ಪರಗುತ್ತು ಶ್ರೀಕಾಂತ್ ಅರಿಗ, ನಿವೃತ್ತ ಸೈನಿಕ ರಾಘವೇಂದ್ರ ಭಟ್, ಮೊದಲಾದವರು ಉಪಸ್ಥಿತರಿದ್ದರು. ವ್ಯವಸ್ಥಾಪನಾ ಸಮಿತಿ ಸದಸ್ಯ ದಿವಾಕರ ಭಂಡಾರಿ ಸ್ವಾಗತಿಸಿದರು. ವಸಂತ ಗುಣನಿಲ ವಂದಿಸಿದರು.

ಇಂದಿನ ಕಾರ್ಯಕ್ರಮ

ಶ್ರೀ ದೇವರ ಪ್ರತಿಷ್ಠಾಷ್ಟಬಂಧ ಬ್ರಹ್ಮಕಲಶೋತ್ಸ ಸಂಭ್ರಮ ಕೊನೆಯ ದಿನವಾದ ಇಂದು ಬೆಳಿಗ್ಗೆ ಗಂಟೆ 10-44ರ ವೃಷಭ ಲಗ್ನ ಸುಮೂಹರ್ತದಲ್ಲಿ ಬ್ರಹ್ಮಕಲಶಾಭಿಷೇಕ ಪ್ರಸನ್ನ ಪೂಜೆ ನೆರವೇರಲಿದೆ.

ಮಂಜೇಶ್ವರ ಶಾಸಕರ ಅನಾಸ್ಥೆಯಿಂದ ಮಲೆಯಾಳ ಕಡ್ಡಾಯ: ಸುರೇಂದ್ರನ್



ಉಪ್ಪಳ: ಕೇರಳದಲ್ಲಿ ಎಡರಂಗ ಸರಕಾರ ಭಾಷಾ ಮಸೂದೆ ಜಾರಿಗೆ ತಂದು ಮಲೆಯಾಳ ಕಡ್ಡಾಯಗೊಳಿಸಿರುವುದರಿಂದ ಇನ್ನು ಮುಂದೆ ರಾಜ್ಯದ ಶಾಲೆಗಳಲ್ಲಿ ಕಡ್ಡಾಯ ಮಲೆಯಾಳ ಕಲಿಕೆ ಜಾರಿಯಾಗಲಿದೆ ಹಾಗೂ ಪಿಎಸ್‌ಸಿ ಪರೀಕ್ಷೆ ಮಲೆಯಾಳ ಕಡ್ಡಾಯವಾಗುವುದರಿಂದ ಭಾಷಾ ಅಲ್ಪಸಂಖ್ಯಾಕರಿಗೆ ಹಾಗೂ ಗಡಿನಾಡು ಕನ್ನಡಿಗರಿಗೆ ಅನ್ಯಾಯವಾಗಲಿದೆ ಎಂದು ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಕೆ.ಸುರೇಂದ್ರನ್ ಹೇಳಿದರು.

ಮಂಜೇಶ್ವರದಲ್ಲಿ ನಡೆದ ಬಿಜೆಪಿ ಸಭೆಯಲ್ಲಿ ಮಾತನಾಡಿದ ಅವರು, ಸರಕಾರಿ ಉದ್ಯೋಗ ಗಡಿನಾಡ ಕನ್ನಡಿಗರಿಗೆ ಮರೀಚಿಕೆಯಾಗಲಿದೆ. ವಿಧಾನ ಸಭೆಯಲ್ಲಿ ಭಾಷಾ ಮಸೂದೆ ಮಂಡನೆ ಆಗುವಾಗ ನಿಯಮ ಸಭೆಯಲ್ಲಿ ಗೈರು ಹಾಜರಾಗಿದ ಮಂಜೇಶ್ವರ ಶಾಸಕ ಅಶ್ರಫ್‌ರ ಬೇಜವಾಬ್ದಾರಿ ಕನ್ನಡಿಗರಿಗೆ ಮಾಡಿದ ಅವಮಾನ ಎಂದರು.

ವಿಧಾನಸಭೆಯಲ್ಲಿ ಗೈರು ಆಗಿದ್ದು ಮಾತ್ರವಲ್ಲ ನಂತರ ದಿನಗಳಲ್ಲಿಯೂ ವಿಧಾನಸಭೆಯಲ್ಲಿ ಮಾತನಾಡುವ ಅವಕಾಶ ಇದ್ದಾಗ ಕನ್ನಡ ಪರವಾಗಿ ಮಾತನಾಡದೆ ಸರಕಾರದ ಕಡ್ಡಾಯ ಮಲೆಯಾಳ ಭಾಷಾ ಮಸೂದೆ ವಿರೋಧಿಸದ ಮಂಜೇಶ್ವರ ಹಾಗೂ ಕಾಸರಗೋಡು ಶಾಸಕರ ಕನ್ನಡ ವಿರೋಧಿ ನೀತಿಗೆ ಉತ್ತರ ನೀಡಬೇಕಿದೆ ಎಂದರು.

ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ., ಮಣಿಕಂಠ ರೈ ಪಟ್ಲ, ವಿಜಯಕುಮಾರ್ ರೈ, ಎ.ಕೆ. ಕಯ್ಯಾರ್, ಸುನೀಲ್ ಅನಂತಪುರ, ವಸಂತಕುಮಾರ್ ಮಯ್ಯ ಮೊದಲಾದವರು ಉಪಸ್ಥಿತರಿದ್ದರು.

ಕಿರುಸುದ್ದಿ

ತಂದೆ ವಿಪರೀತ ಮದ್ಯಪಾನ: ಆತ್ಮಹತ್ಯೆಯತ್ನಿಸಿದ ಮಗಳು

ಕಾಸರಗೋಡು: ತಂದೆಯ ವಿಪರೀತ ಮದ್ಯಪಾನದಿಂದ ಮನನೊಂದು ಪ್ಲಸ್‌ವನ್ ವಿದ್ಯಾರ್ಥಿನಿ ಆತ್ಮಹತ್ಯೆಗೆತ್ನಿಸಿ ಆಸ್ಪತ್ರೆಯಲ್ಲಿ ದಾಖಲಾದ ಘಟನೆ ನಡೆದಿದೆ. ಮೇಲ್ಪರಂಬ ಪೊಲೀಸ್ ಠಾಣಾ ಪರಿಸರದಲ್ಲಿ ವಾಸಿಸುವ ಹದಿನಾರರ ಹರೆಯದ ಬಾಲಕಿ ಕೈಯ ನರ ಕತ್ತರಿಸಿ ಅಸ್ವಸ್ಥಗೊಂಡಿದ್ದು, ಕಾಸರಗೋಡಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾಳೆ. ತಂದೆ ವಿಪರೀತವಾಗಿ ಮದ್ಯ ಸೇವಿಸುತ್ತಿರುವುದರಿಂದ ಕುಟುಂಬದಲ್ಲಿ ಉಂಟಾಗುವ ಸಮಸ್ಯೆಗಳನ್ನು ನೆನೆದು ಬಾಲಕಿ ತೀವ್ರವಾಗಿ ನೊಂದುಕೊಂಡಿದ್ದಾಳೆನ್ನಲಾಗಿದೆ. ಮದ್ಯ ಸೇವಿಸದಂತೆ ಹಲವು ಬಾರಿ ತಂದೆಯಲ್ಲಿ ವಿನಂತಿಸಿದರೂ ಅದಕ್ಕೆ ತಂದೆ ಸಿದ್ಧವಾಗಲಿಲ್ಲವೆನ್ನಲಾಗಿದೆ. ಇದರಿಂದ ಮನನೊಂದು ಬಾಲಕಿ ಕೈಯ ನರ ಕತ್ತರಿಸಿ ಆತ್ಮಹತ್ಯೆಗೆತ್ನಿಸಿದ್ದಾಳೆಂದು ಹೇಳಲಾಗುತ್ತಿದೆ.

ಸಿಎ ಪರೀಕ್ಷೆ: ಡಾ. ಎನ್ ಎಸ್ಎಎಮ್ ವಿದ್ಯಾರ್ಥಿನಿ ರೋಸ್ ಡಿ'ಸಿಲ್ವಾ ಉತ್ತೀರ್ಣ

ಕಾರ್ಕಳ: ಹೊಸದಿಲ್ಲಿ ಲೆಕ್ಕಪರಿಶೋಧಕರ ಸಂಸ್ಥೆ ಐಸಿಎಐ ಜನವರಿ 2026 ರಲ್ಲಿ ನಡೆಸಿದ ಸಿ.ಎ ಅಂತಿಮ ಪರೀಕ್ಷೆಯಲ್ಲಿ ಡಾ. ಎನ್.ಎಸ್.ಎ.ಎಮ್. ಪ್ರಥಮದರ್ಜೆ ಕಾಲೇಜಿನ ಹಳೆ ವಿದ್ಯಾರ್ಥಿನಿ ಕುಮಾರಿ ರೋಸ್ ಡಿ'ಸಿಲ್ವಾ ಅತ್ಯುತ್ತಮ ಅಂಕಗಳಿಸುವ ಮೂಲಕ ತೇರ್ಗಡೆಯಾಗಿದ್ದಾರೆ. ಇವರು ಕಾರ್ಕಳದ ಕರಿಯಕಲ್ಲಿನ ಸಿಂಥಿಯಾ ಡಿ'ಸಿಲ್ವಾ ಮತ್ತು ಕ್ಯಾರೆಲ್ ಡಿ'ಸಿಲ್ವಾ ಅವರ ಪುತ್ರಿಯಾಗಿದ್ದಾರೆ.



ಡಾ.ಎನ್.ಎಸ್.ಎ.ಎಮ್. ಪ್ರಥಮದರ್ಜೆ ಕಾಲೇಜಿನಲ್ಲಿ 2018 ರಿಂದ 2021ನೇ ಸಾಲಿನಲ್ಲಿ ಬಿಕಾಂ ಪದವಿ ಪೂರೈಸಿದ ಇವರು 2021 ರ ಎಪ್ರಿಲ್– ಮೇ ನಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾನಿಲಯದ ಅಂತಿಮ ಪರೀಕ್ಷೆಯಲ್ಲಿ ಬಿಕಾಂ ವಿಭಾಗದಲ್ಲಿ ದ್ವಿತೀಯ ರ್‍ಯಾಂಕ್ ಪಡೆದಿರುತ್ತಾರೆ. 2022 ರ ಮೇಯಲ್ಲಿ ಇಂಟರ್ ಮೀಡಿಯೇಟ್ ಗ್ರೂಪ್ ಒಂದರ ಪರೀಕ್ಷೆ ತೇರ್ಗಡೆಯಾದ ಇವರು, ಗ್ರೂಪ್ ಎರಡರ ಪರೀಕ್ಷೆಯನ್ನು 2023 ರ ಮೇಯಲ್ಲಿ ತೇರ್ಗಡೆಯಾಗಿದ್ದರು. ಸತತ ಪ್ರಯತ್ನ ಮತ್ತು ಸ್ವಯಂ ಕಲಿಕೆಯ ಮುಖಾಂತರ ಇದೀಗ ಸಿ.ಎ. ಪದವಿಯನ್ನು ಪಡೆದಿರುತ್ತಾರೆ. ಇವರಿಗೆ ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಾಽಪತಿಗಳಾದ ವಿಶಾಲ್ ಹೆಗ್ಡೆ, ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎಂ.ಎಸ್. ಮೂಡಿತ್ತಾಯ ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಡಾ.ವೀಣಾ ಕುಮಾರಿ ಬಿ.ಕೆ, ಕಾಲೇಜಿನ ಅಧ್ಯಾಪಕ ಅಧ್ಯಾಪಕೇತರ ಬಳಗ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ನಿಧನ ಸುದ್ದಿ

ಸೀತಾ ಕೊಟ್ಟಾರಿ



ಮಂಗಳೂರು: ಇರಾ ತಾಳಿತ್ತಬೆಟ್ಟು ನಿವಾಸಿ ದಿ.ಈಶ್ವರ ಕೊಟ್ಟಾರಿ ಅವರ ಪತ್ನಿ ಸೀತಾ ಕೊಟ್ಟಾರಿ (96) ಅವರು ಮಾ.5ರಂದು ನಿಧನ ಹೊಂದಿದರು. ಮೃತರು ನಾಲ್ವರು ಪುತ್ರರು ಹಾಗೂ ಪುತ್ರಿಯನ್ನು ಅಗಲಿದ್ದಾರೆ.

ಜನಾರ್ದನ



ಉಪ್ಪಳ: ಕುಂಬಳೆ ಶ್ರೀ ಗೋಪಾಲಕೃಷ್ಣ ಕ್ಷೇತ್ರ ರಸ್ತೆಯಲ್ಲಿ ಸುಮಾರು 45 ವರ್ಷಗಳಿಂದ ಕಾರ್ಯಾಚರಿಸುತ್ತಿರುವ ಪ್ರಸಿದ್ಧ ಗೀತಾ ಜುವೆಲ್ಲರಿ ಮಾಲಕ ಕುಂಬಳೆ ಹೈಸ್ಕೂಲ್ ಬಳಿಯ ನಿವಾಸಿ ಕೆ.ಜನಾರ್ದನ ಆಚಾರ್ಯ (86) ನಿಧನ ಹೊಂದಿದರು. ಅವರು ಬುಧವಾರ ಸಂಜೆ ಮನೆಯಿಂದ ಕುಂಬಳೆ ಪೇಟೆಗೆ ತೆರಳಿದ್ದರು ಅಲ್ಲಿ ಅವರಿಗೆ ಹೃದಯಾಘಾತ ಉಂಟಾಗಿದ್ದು, ಕೂಡಲೇ ಸ್ಥಳೀಯರು ಕುಂಬಳೆ ಜಿಲ್ಲಾ ಸಹಕಾರಿ ಆಸ್ಪತ್ರೆಗೆ ತಲುಪಿಸಿದ್ದರೂ ಅಷ್ಟರಲ್ಲಿ ಸಾವು ಸಂಭವಿಸಿತು. ಆರ್‌ಎಸ್‌ಎಸ್‌ನ ಹಿರಿಯ ಸ್ವಯಂಸೇವಕರಾಗಿ, ಬಂಗ್ರಮಂಜೇಶ್ವರ ಶ್ರೀ ಕಾಳಿಕಾಪರಮೇಶ್ವರೀ ಕ್ಷೇತ್ರದ ಮಾಜಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ವೇದಾವತಿ, ಮಕ್ಕಳಾದ ಮನೋಜ್ ಆಚಾರ್ಯ, ವಸಂತ ಆಚಾರ್ಯ, ಗೀತಾ ಅವರನ್ನು ಅಗಲಿದ್ದಾರೆ.

ಕೆ.ಬಾಲನ್

ಕಾಸರಗೋಡು: ನಗರದಲ್ಲಿ ಹೂವು ಮಾರಾಟ ನಡೆಸುತ್ತಿದ್ದ ಪೈಕ ಬಳಿಯ ಬಾಲನಡ್ಕ ವಿಸ್ಮಯ ನಿಲಯದ ಕೆ.ಬಾಲನ್ (60) ನಿಧನ ಹೊಂದಿದರು. ಹಲವು ವರ್ಷಗಳಿಂದ ನಗರದ ಶ್ರೀಮಲ್ಲಿಕಾರ್ಜುನ ಕ್ಷೇತ್ರ ಸಮೀಪ, ಚಕ್ಕರ ಬಜಾರ್ ರಸ್ತೆ ಜಂಕ್ಷನ್‌ನಲ್ಲಿ ಹೂವು ಮಾರಾಟ ನಡೆಸುತ್ತಿದ್ದರು. ಕುಮಾರನ್ ಮತ್ತು ಲಕ್ಷ್ಮೀ ದಂಪತಿಯ ಪುತ್ರನಾದ ಬಾಲನ್ ಅವರು ಅಲ್ಪಕಾಲದಿಂದ ಅವರಿಗೆ ಅಸೌಖ್ಯ ಬಾಧಿಸಿತ್ತೆನ್ನಲಾಗಿದೆ. ಮೃತರು. ಪತ್ನಿ ಕಮಲಾಕ್ಷಿ, ಮಕ್ಕಳಾದ ರಮ್ಯಾ, ರೇಷ್ಮಾ, ವಿಸ್ಮಯ ಅವರನ್ನು ಅಗಲಿದ್ದಾರೆ.



ಐಸಿಎಐ ಮಂಗಳೂರು ಶಾಖೆಯ ವ್ಯವಸ್ಥಾಪನಾ ಸಮಿತಿ ಚುನಾವಣೆ ಐಸಿಎಐ ಭವನ ಪಡೀಲ್‌ನಲ್ಲಿ ನಡೆಯಿತು.ಸಿಎ ಡ್ಯಾನಿನೆಲ್ ಮಾರ್ಷ್ ಪಿರೇರಾ, ಅಧ್ಯಕ್ಷರಾಗಿ, ಸಿಎ ಮಮತಾ ರಾವ್ ಉಪಾಧ್ಯಕ್ಷರಾಗಿ, ಸಿಎ ಬಾಲಸುಬ್ರಹ್ಮಣ್ಯ ಎನ್ ಕಾರ್ಯದರ್ಶಿಯಾಗಿ, ಸಿಎ ನಿತಿನ್ ಬಾಳಿಗ ಖಜಾಂಚಿಯಾಗಿ, ಸಿಎ ಗೌರವ್ ಹೆಗ್ಡೆ ವಿದ್ಯಾರ್ಥಿ ವಿಭಾಗದ (ಸಿಕಾಸಾ) ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಸಿಎ ಕೃಷ್ಣಾನಂದ ಪೈ ಮತ್ತು ನಿರ್ಗಮಿತ ಅಧ್ಯಕ್ಷ ಸಿಎ ಪ್ರಶಾಂತ್ ಪೈ ಕೆ. ಸದಸ್ಯರಾಗಿ ಮುಂದುವರಿಯಲಿದ್ದಾರೆ. ಐಸಿಎಐನ ದಕ್ಷಿಣ ಭಾರತ ಪ್ರಾದೇಶಿಕ ಮಂಡಳಿಯ ಕಾರ್ಯದರ್ಶಿ ಸಿಎ ಪ್ರಮೋದ್ ಹೆಗ್ಡೆ ಮತ್ತು ಮಂಗಳೂರು ಶಾಖೆಯ ಇತರ ಹಿಂದಿನ ಅಧ್ಯಕ್ಷರು ಉಪಸ್ಥಿತರಿದ್ದರು.

ನೇತ್ರಾವತಿ ನದಿ ತೀರದಲ್ಲಿ ಆಧಾರ್ ಕಾರ್ಡ್‌ಗಳ ರಾಶಿ ಪತ್ತೆ

ತನಿಖೆಗೆ ಸ್ಪೀಕರ್ ಖಾದರ್ ಸೂಚನೆ

ಬಂಟ್ವಾಳ: ತಾಲೂಕಿನ ಫರಂಗಿಪೇಟೆ ಸಮೀಪದ ನೇತ್ರಾವತಿ ನದಿ ತೀರದಲ್ಲಿ ಅಪಾರ ಪ್ರಮಾಣದಲ್ಲಿ ಆಧಾರ್ ಕಾರ್ಡ್‌ಗಳು ಪತ್ತೆಯಾಗಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಇದರ ಮೂಲ ಕಾರಣವನ್ನು ಪತ್ತೆಹಚ್ಚುವಂತೆ ಕರ್ನಾಟಕ ವಿಧಾನಸಭಾಧ್ಯಕ್ಷರು, ಸ್ಥಳೀಯ ಶಾಸಕರಾದ ಯು.ಟಿ. ಖಾದರ್ ಸೂಚಿಸಿದ್ದಾರೆ.



ಈ ಸಂಬಂಧ ಯುಐಡಿಎಐ ಯೋಜನಾ ವ್ಯವಸ್ಥಾಪಕರಿಗೆ ಪತ್ರ ಬರೆದಿರುವ ಸ್ಪೀಕರ್ ಯು.ಟಿ. ಖಾದರ್ ಅವರು ಸಮಗ್ರ ತನಿಖೆ ನಡೆಸಿ,ಇದರ ಮೂಲ ಪತ್ತೆ ಹಚ್ಚಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ಅಂಚೆ ಇಲಾಖೆಯ ಅಧಿಕಾರಿಗಳು ಈ ಅನಿರೀಕ್ಷಿತ ವಿದ್ಯಮಾನದ ಬಗ್ಗೆ ಗಮನ ಹರಿಸಿದ್ದು, ಅಂಚೆ ಇಲಾಖೆಯ ನಿರೀಕ್ಷಕರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದು, ವರದಿ ಸಲ್ಲಿಸಿದ ಬಳಿಕ ಮುಂದಿನ ಕ್ರಮದ ಬಗ್ಗೆ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ. ಈ ಘಟನೆಗೆ ಸಂಬಂಧಿಸಿದಂತೆ ಸಂಪೂರ್ಣ ಸತ್ಯಾಸತ್ಯತೆ ಅಧಿಕಾರಿಗಳ ತನಿಖೆಯ ನಂತರವೇ ಹೊರಬರಬೇಕಾಗಿದೆ. ನೇತ್ರಾವತಿ ನದಿ ಕಿನಾರೆಯಲ್ಲಿ ಆಧಾರ್ ಕಾರ್ಡ್ ಪತ್ತೆಯಾಗಿರುವ ಪ್ರಕರಣ ಸ್ಥಳೀಯರಲ್ಲಿ ಹತ್ತು ಹಲವು ಅನುಮಾನಗಳ ಜೊತೆಗೆ ಕುತೂಹಲವನ್ನುಂಟು ಮಾಡಿದೆ.

ಪುದು ಗ್ರಾಮದ ಬಳಿ ನದಿ ತಟದಲ್ಲಿ ಕಾರ್ಡ್‌ಗಳು ಬಿದ್ದಿರುವುದನ್ನು ಕೆಲ ಸ್ಥಳೀಯರು ಗಮನಿಸಿ ಅಧಿಕಾರಿಗಳ ಗಮನಕ್ಕೆ ತಂದಿದ್ದರು.

ಸಾರ್ವಜನಿಕರು ನೀಡಿದ ಮಾಹಿತಿಯನ್ವಯ ಪುದು ಗ್ರಾಮ ಪಂಚಾಯತ್ ಅಧ್ಯಕ್ಷ ರಮ್ಲಾನ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಗ್ರಾಮ ಪಂಚಾಯತ್ ಸದಸ್ಯರು ಮತ್ತು ಸ್ಥಳೀಯರ ಸಹಕಾರದಿಂದ ನದಿ ತೀರದಲ್ಲಿ ಕಂಡುಬಂದ ಆಧಾರ್ ಕಾರ್ಡ್ ಗಳನ್ನು ಸಂಗ್ರಹಿಸಿಟ್ಟು.

ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಸ್ಥಳೀಯ ಶಾಸಕ ಯು.ಟಿ. ಖಾದರ್ ಅವರಿಗೆ ಸಮಗ್ರವಾಗಿ ಮಾಹಿತಿ ನೀಡಲಾಗಿತ್ತು.

ದಕ್ಷಿಣ ಕನ್ನಡಕ್ಕೆ ಡಾ. ನಾಗಲಕ್ಷ್ಮಿ ಚೌಧರಿ ಭೇಟಿ | ಮೀನುಮಾರುಕಟ್ಟೆಯಲ್ಲಿ ಅಹವಾಲು ಆಲಿಕೆ

ಆಯೋಗದ ಅಧ್ಯಕ್ಷೆಗೆ ದೂರು ಪೆಟ್ಟಿ!

ಮಂಗಳೂರು: ಉದ್ಯಮ ಸೇರಿದಂತೆ ವಿವಿಧ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರು, ವಿದ್ಯಾರ್ಥಿನಿಯರ ಸಮಸ್ಯೆಗಳನ್ನು ಆಲಿಸುವಮೂಲಕ ಬಗೆಹರಿಸಲು ವಿಶೇಷ ಆದ್ಯತೆ ನೀಡಲಾಗುವುದು. ಅಲ್ಲದೆ ವರದಿಯನ್ನು ಸರ್ಕಾರಕ್ಕೂ ಸಲ್ಲಿಸಲಾಗುವುದು ಎಂದು ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಹೇಳಿದ್ದಾರೆ.

ರಾಜ್ಯ ಪ್ರವಾಸ ಕೈಗೊಂಡಿರುವ ಅವರು 25 ಜಿಲ್ಲೆಗಳನ್ನು ಪೂರ್ಣಗೊಳಿಸಿ ಗುರುವಾರ ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಿ ಮಹಿಳೆಯರ ಸಮಸ್ಯೆಗಳನ್ನು ಆಲಿಸಿದರು.

ಸರಕಾರದ ಗಮನಕ್ಕೂ ತರುತ್ತೇನೆ

ನಗರದ ಸ್ಟೇಟ್‌ಬ್ಯಾಂಕ್‌ನ ಹಸಿ ಮತ್ತು ಒಣ ಮೀನು ಮಾರುಕಟ್ಟೆಗೆ ಭೇಟಿ ನೀಡಿ ಅವರ ಸಮಸ್ಯೆ ಆಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೂತನವಾಗಿ ನಿರ್ಮಾಣವಾಗಿರುವ ಮೀನು ಮಾರುಕಟ್ಟೆಯಲ್ಲಿ ವ್ಯವಸ್ಥೆಗಳು ಅವೈಜ್ಞಾನಿಕ ವಾಗಿರುವುದಾಗಿ ಹೇಳಿಕೊಂಡಿರುವ ಮಹಿಳೆಯರು ಅಲ್ಲಿಗೆ ತಮ್ಮ ವ್ಯಾಪಾರವನ್ನು ಸ್ಥಳಾಂತರಿಸಲು ನಿರಾಕರಿಸುತ್ತಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿ ಮಾತ್ರವಲ್ಲದೆ ಸರಕಾರದ ಗಮನಕ್ಕೂ ತರುವುದಾಗಿ ತಿಳಿಸಿದರು.

ಸ್ಟೇಟ್‌ಬ್ಯಾಂಕ್ ಹಸಿ ಮೀನು ಮಾರುಕಟ್ಟೆಯಲ್ಲಿ ತಾವು ಹಲವು ದಶಕಗಳಿಂದ ವ್ಯಾಪಾರ ಮಾಡುತ್ತಿದ್ದು, ಇಲ್ಲಿಯೇ ವ್ಯಾಪಾರಕ್ಕೆ ಅವಕಾಶ ಮಾಡುವಂತೆ ಮಹಿಳೆಯರು ತಮ್ಮ ಬೇಡಿಕೆ ಇರಿಸಿದ್ದಾರೆ. ನೂತನವಾಗಿ ನಿರ್ಮಿಸಲಾಗಿರುವ ಮಾರುಕಟ್ಟೆಯಲ್ಲಿ ಸೂಕ್ತ ಗಾಳಿ, ಬೆಳಕಿನ ವ್ಯವಸ್ಥೆಯ ಕೊರತೆಯ ಜತೆಗೆ ಬಾಡಿಗೆಯೂ ದುಬಾರಿಯಾಗಿದೆ ಎಂದು ಹೇಳಿದ್ದಾರೆ. ದ.ಕ. ಜಿಲ್ಲಾಧಿಕಾರಿ ಹಾಗೂ ಇತರ ಜಿಲ್ಲಾ ಮಟ್ಟದ ಅಧಿಕಾರಿಗಳ ಜತೆ ನಡೆಯುವ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾವಿಸಲಿದ್ದೇನೆ. ಸಮಸ್ಯೆಯನ್ನು ಆಡಳಿತದ ಗಮನಕ್ಕೆ ತರುವ ನಿಟ್ಟಿನಲ್ಲಿ ಮಹಿಳಾ ಮೀನುಗಾರ ಪ್ರತಿನಿಧಿಗಳೂ ಭಾಗವಹಿಸುವಂತೆ ಕೋರಿದ್ದೇನೆ. ಮೀನುಗಾರ ಮಹಿಳೆಯರು ಲಿಖಿತವಾಗಿ ನೀಡುವ ಬೇಡಿಕೆಗಳ ಕುರಿತಂತೆ, ಸೂಕ್ತ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಸರಕಾರದ ಗಮನಕ್ಕೆ ತರಲಾಗುವುದು ಎಂದರು. ಆರಂಭದಲ್ಲಿ ಹಸಿ ಮೀನು ಮಾರುಕಟ್ಟೆಗೆ ಭೇಟಿ ನೀಡಿದ ಡಾ. ನಾಗಲಕ್ಷ್ಮಿ ಚೌಧರಿಯವರು ಸಮಸ್ಯೆ ಏನಿದೆ ಹೇಳಿ ಎಂದು ಕೋರಿದಾಗ ಮೀನುಗಾರ ಮಹಿಳೆಯರು ಮೌನ ವಹಿಸಿದರು. ಮತ್ತೆ ಕೆಲವರಲ್ಲಿ ಮಾತನಾಡಿದ ಡಾ. ನಾಗಲಕ್ಷ್ಮಿ, ಸಮಸ್ಯೆ ಹೇಳಿಕೊಂಡರೆ ಅದಕ್ಕೆ ತಕ್ಕುದಾದ ರೀತಿಯಲ್ಲಿ ವ್ಯವಸ್ಥೆ ಕಲ್ಪಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವುದಾಗಿ ತಿಳಿಸಿದಾಗ, ಯಶೋಧಾ ಎಂಬವರು ಮುಂದೆ ಬಂದು ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದರು.

ಔ ನಾವು ಇಲ್ಲಿ ಹಲವು ವರ್ಷಗಳಿಂದ ವ್ಯಾಪಾರ ಮಾಡಿಕೊಂಡು ಬಂದಿದ್ದೇವೆ. ಈಗ ಬೇರೆ ಕಡೆಗೆ ಸ್ಥಳಾಂತರಿಸಿದರೆ ನಮಗೆ ವ್ಯಾಪಾರ ಆಗದು. ಮಾತ್ರವಲ್ಲದೆ, ನೂತನ ಮಾರುಕಟ್ಟೆಯಲ್ಲಿ ಇಲ್ಲಿರುವಷ್ಟು ಗಾಳಿ ಬೆಳಕಿನ ವ್ಯವಸ್ಥೆಯೂ ಇಲ್ಲ. ಅಲ್ಲಿ ಬಾಡಿಗೆಯೂ ದುಬಾರಿಯಾಗಿದೆ ಎಂದರು. ಇದಕ್ಕೆ ಅಲ್ಲಿದ್ದ ಹಲವು ಮೀನುಗಾರ ಮಹಿಳೆಯರು ಧ್ವನಿಗೂಡಿಸಿದರು.

ಒಣ ಮೀನು ಮಾರುಕಟ್ಟೆಗೆ ಭೇಟಿ ನೀಡಿದ ವೇಳೆ ಮೀನುಗಾರ ಮಹಿಳೆಯಾದ ರವಿಕಲಾ ಎಂಬವರು ಮಾತನಾಡಿ, ಈಗಾಗಲೇ ಹೊಸ ಮಾರುಕಟ್ಟೆಗೆ ಸ್ಥಳಾಂತರಕ್ಕೆ ಸೂಚಿಸಲಾಗಿದೆ. ಆದರೆ ಅಲ್ಲಿ ಒಂದು ಮೂಲೆಯಲ್ಲಿ ಒಣ ಮೀನುಗಾರರಿಗೆ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ವ್ಯಾಪಾರ ನಷ್ಟದಿಂದ ಸಂಕಷ್ಟದಲ್ಲಿರುವ ಮಹಿಳೆಯರು ಅವ್ಯವಸ್ಥಿತ ಜಾಗದಲ್ಲಿ ವ್ಯಾಪಾರ ಮಾಡಲು ಕಷ್ಟವಾಗಲಿದೆ ಎಂದರು.

ಬಳಿಕ ಸಮೀಪದ ಖಾಸಗಿ ಬಸ್ಸು ನಿಲ್ದಾಣಕ್ಕೆ ಡಾ. ನಾಗಲಕ್ಷ್ಮಿ ಚೌಧರಿ ಭೇಟಿ ನೀಡಿದಾಗ, ಅಲ್ಲಿ ಸಿಸಿ ಕ್ಯಾಮರಾ ಕೊರತೆ, ಪ್ರಯಾಣಿಕರಿಗೆ ವಿಶ್ರಾಂತಿ ಪಡೆಯಲು ಆಸನಗಳ ಕೊರತೆ ಬಗ್ಗೆ ಅಲ್ಲಿದ್ದವರು ಗಮನ ಸೆಳೆದರು. ಮೀನುಗಾರಿಕಾ ಇಲಾಖೆಯ ಉಪ ನಿರ್ದೇಶಕ ದಿಲೀಪ್ ಕುಮಾರ್ ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.





ಹಸಿ ಮತ್ತು ಒಣ ಮೀನು ಮಾರುಕಟ್ಟೆಗೆ ಭೇಟಿ ನೀಡಿದ ಡಾ.ನಾಗಲಕ್ಷ್ಮಿ ಚೌಧರಿ ಅಲ್ಲಿನ ಮಹಿಳೆಯರ ಸಮಸ್ಯೆಗಳನ್ನು ಆಲಿಸಿದರು.

ಶೌಚಾಲಯಕ್ಕೆ ದುಡ್ಡು

ಸ್ಟೇಟ್‌ಬ್ಯಾಂಕ್ ಬಳಿ ಮೀನುಗಾರ ಮಹಿಳೆಯರಿಗೆ ಶೌಚಾಲಯದ ವ್ಯವಸ್ಥೆ ಇದ್ದರೂ ಅದಕ್ಕೆ ದುಡ್ಡು ತೆರಬೇಕು. ಕುಡಿಯಲು ನೀರನ್ನು ಹೊಟೇಲ್‌ಗಳಿಂದ ತರಬೇಕು. ಮಾರುಕಟ್ಟೆ ಸ್ವಚ್ಛತೆಗೆ ನೀರಿನ ಸಮಸ್ಯೆ ಇದೆ ಎಂದು ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅವರೊಂದಿಗೆ ಮಹಿಳಾ ಮೀನುಗಾರರು ಸಮಸ್ಯೆ ಹಂಚಿಕೊಂಡರು.

ಕಳ್ಳರ ಹಾವಳಿ!

ಹಾಲಿ ಮಾರುಕಟ್ಟೆಯಲ್ಲಿ ಮಳೆಗಾಲದಲ್ಲಿ ನೀರು ಸೋರಿಕೆಯಾಗುತ್ತದೆ. ಕಳ್ಳರು ನುಗ್ಗಿ ಹಣ ದೋಚುತ್ತಿರುವ ಪ್ರಕರಣಗಳು ನಡೆದಿವೆ. ಇಲ್ಲಿ ಸಿಸಿ ಟಿವಿ ಕ್ಯಾಮರಾ ಅಳವಡಿಸಬೇಕು ಎಂದು ಇತರ ಮೀನುಗಾರ ಮಹಿಳೆಯರು ಆಗ್ರಹಿಸಿದರು.

ಆಯುರ್ವೇದ ಸಂಶೋಧನೆಗಳು ಪುಸ್ತಕಕ್ಕೆ ಸೀಮಿತ ಬೇಡ: ಡಾ. ಶೆಣೈ

ಮೂಡುಬಿದಿರೆ: ಆಯುರ್ವೇದದಲ್ಲಿ ನಡೆಯುತ್ತಿರುವಸಂಶೋಧನೆಗಳು ಕೇವಲ ಪುಸ್ತಕಗಳಿಗೆ ಸೀಮಿತವಾಗದೆ, ಸಮಾಜಕ್ಕೆ ಉಪಯೋಗ, ಆರ್ಥಿಕ ಬೆಳವಣಿಗೆಗೆ ದಾರಿ ಮಾಡಿಕೊಡಬಲ್ಲ ಸಂಶೋಧನೆ ಆಗಬೇಕು ಎಂದು ಮೈಸೂರಿನ ಸರಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ ಲಕ್ಷ್ಮೀ ನಾರಾಯಣ ಶೆಣೈ ಹೇಳಿದರು.

ಅವರು ಆಳ್ವಾಸ್ ಆಯುರ್ವೇದ ಕಾಲೇಜಿನ ಆತ್ರ ಸಂಶೋಧನಾ ಕೇಂದ್ರ ಮೈಸೂರಿನ ಸರಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿದ್ದ ಒಂದು ದಿನದ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಅಲೋಕ 2026 ನ್ನು ಉದ್ಘಾಟಿಸಿ ಮಾತನಾಡಿದರು.

ವ್ಯಾಪಾರ ಕ್ಷೇತ್ರಕ್ಕೂ ತಲುಪಿಸಬೇಕು

ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ಎಂ. ಮೋಹನ ಆಳ್ವ, ಹಿಂದೆ ಆಯುರ್ವೇದದಲ್ಲಿ ಸಂಶೋಧನೆಗಳಿಗೆ ಹೆಚ್ಚಿನ ಮಹತ್ವವಿರಲಿಲ್ಲ. ಆದರೆ ಇಂದಿನ ಕಾಲದಲ್ಲಿ ಪುರಾವೆ ಮತ್ತು ದಾಖಲೆಗಳು ಅತ್ಯಂತ ಅಗತ್ಯ. ಪುರಾವೆ ಇಲ್ಲದೆ ಹೇಳುವ ವಿಷಯಗಳು ವಿಶ್ವಾಸಾರ್ಹವಾಗುವುದಿಲ್ಲ. ಆಯುರ್ವೇದ ಕ್ಷೇತ್ರದ ಸಂಶೋಧನೆಗಳನ್ನು ದಾಖಲೆಗಳ ಮೂಲಕ ವಿಶ್ವಕ್ಕೆ ಪರಿಚಯಿಸಿ, ಅವುಗಳನ್ನು ವ್ಯಾಪಾರ ಕ್ಷೇತ್ರಕ್ಕೂ ತಲುಪಿಸಬೇಕಾಗಿದೆ. ಆಯುರ್ವೇದ ವಿದ್ಯಾರ್ಥಿಗಳು ಈ ಕ್ಷೇತ್ರದ ಅವಕಾಶ ಅರಿತುಕೊಳ್ಳಬೇಕು ಎಂದರು. ಕೇಂದ್ರ ಸರ್ಕಾರ ಈ ವರ್ಷದ ಬಜೆಟ್‌ನಲ್ಲಿ ಆಯುರ್ವೇದಕ್ಕೆ 4000 ಕೋಟಿಗೂ ಅಧಿಕ ಅನುದಾನವನ್ನು ಘೋಷಿಸಿರುವುದು ಆಯುರ್ವೇದ ಕ್ಷೇತ್ರದ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.



ಮೈಸೂರಿನ ಸರಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ವತಿಯಿಂದ ಡಾ. ಎಂ. ಮೋಹನ ಆಳ್ವ ಅವರನ್ನು ಗೌರವಿಸಲಾಯಿತು. ವಿವಿಧ ಕ್ಷೇತ್ರಗಳ ಸಂಪನ್ಮೂಲ ವ್ಯಕ್ತಿಗಳು ನಂತರದ ಅಧಿವೇಶನಗಳನ್ನು ನಡೆಸಿಕೊಟ್ಟರು.

ಆಳ್ವಾಸ್ ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಡಾ. ಸುಶೀಲ್ ಶೆಟ್ಟಿ, ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್‌ನ ಮುಖ್ಯಸ್ಥ ಪ್ರೊ. ಶ್ರೀನಾಥ್ ರಾಮ್ಪೂರೆ, ಆತ್ರ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಸುಬ್ರಮಣ್ಯ ಪದ್ಯಾಣ ಸ್ನಾತಕೋತ್ತರ ವಿಭಾಗದ ಡೀನ್ ಮಂಜುನಾಥ ಭಟ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಡಾ. ಗೀತಾ ಮಾರ್ಕಂಡೇಯ ನಿರೂಪಿಸಿ, ಡಾ. ಸುಮಂತ ಶೆಣೈ ವಂದಿಸಿದರು.

ಪ್ರಶಾಂತ್ ನಿರ್ದೇಶನದ ಕಿರುಚಿತ್ರದ ಚಿತ್ರೀಕರಣ ಆರಂಭ

ಕೊಡಗಲ್ಲಿ 'ನನ್ನ ಸೈಕಲ್ ಸವಾರಿ'!

ಮಡಿಕೇರಿ: ಪ್ರಶಾಂತ್ ಟಿ.ಆರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿರುವ 'ನನ್ನ ಸೈಕಲ್ ಸವಾರಿ' ಕಿರುಚಿತ್ರದ ಚಿತ್ರೀಕರಣ ಆರಂಭವಾಗಿದೆ.

ಚಿತ್ರದ ಮೊದಲ ದೃಶ್ಯಕ್ಕೆ ದಂತ ವೈದ್ಯೆ ಡಾ. ಅನುಶ್ರೀ ಕ್ಲಾಪ್ ಮಾಡಿ ಶುಭ ಕೋರಿದರು. ಜಯಶ್ರೀ ಅನಂತ ಶಯನ, ವಿನೋದ್ ಮೆಡಿಕಲ್‌ನ ವ್ಯವಸ್ಥಾಪಕ ನಿರ್ದೇಶಕ ಅಂಬೆಕಲ್ ಕುಶಾಲಪ್ಪ, ಸಂಜೀವ್, ಸುನೀತಾ, ಶ್ರುತಿ, ದಿವ್ಯಾ ಮುಂತಾದವರು ಈ ಸಂದರ್ಭ ಹಾಜರಿದ್ದರು.

ಸೈಕ್ಲಿಂಗ್‌ನಲ್ಲಿ ಸಾಧನೆ ಮಾಡಿದ ಯುವತಿಯ ಯಶೋಗಾಥೆಯನ್ನೊಳಗೊಂಡ ಈ ಕಿರುಚಿತ್ರದಲ್ಲಿ ಹಿರಿಯ ಪತ್ರಕರ್ತ, ಕಲಾವಿದ ಬಿ.ಜಿ. ಅನಂತಶಯನ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಅಲ್ಲಾರಂಡ ವಿಠಲ್ ನಂಜಪ್ಪ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದು, ಶ್ರುತಿ ಶಿಕ್ಷಕಿಯ ಪಾತ್ರದಲ್ಲಿ ಬಣ್ಣ ಹಚ್ಚಿದ್ದಾರೆ. ಉಳಿದಂತೆ ಎಂ.ಎಫ್. ರಫಾಖಾನ್, ಬಾಲ ನಟರಾದ ಆರಾಧ್ಯಾ, ಚೆಸ್ವಿ, ಅಭಿಷ್ಯಂತ್ ಮುಂತಾದವರು 'ನನ್ನ ಸೈಕಲ್ ಸವಾರಿ' ಕಿರುಚಿತ್ರದ ತಾರಾ ಬಳಗದಲ್ಲಿದ್ದಾರೆ.



ಅಮೆರಿಕದಲ್ಲಿ ಕ್ಲೈಮ್ಯಾಕ್ಸ್ ಚಿತ್ರೀಕರಣ

ಮಡಿಕೇರಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗುತ್ತಿದ್ದು, ಕಿರುಚಿತ್ರದ ಕ್ಲೈಮ್ಯಾಕ್ಸ್ ಚಿತ್ರೀಕರಣ ಅಮೆರಿಕದ ಒಹಿಯೋ ನಗರದಲ್ಲಿ ನಡೆಯಲಿದೆ. ಖ್ಯಾತ ನಿರ್ದೇಶಕ ಕೆ.ಶಿವರುದ್ರಯ್ಯ ಸಂಭಾಷಣೆ ಬರೆದಿದ್ದು, ಎಂ.ಆರ್.ಫಿರೋಜ್‌ಖಾನ್ ಸುಂಟಿಕೊಪ್ಪ ಛಾಯಾಗ್ರಹಣದ ಜವಾಬ್ದಾರಿ ಹೊತ್ತಿದ್ದಾರೆ. ರಾಕಾ ವಿಶ್ವನಾಥ್ ಸಾಹಿತ್ಯ ಬರೆದಿದ್ದು, ಸತೀಶ್ ಆರ್ಯನ್ ಸಂಗೀತ ಸಂಯೋಜಿಸಿದ್ದಾರೆ. ವಂಶಿ ಸಂಕಲನ, ಖುಷಿ ಕಲಾ ನಿರ್ದೇಶನ ಈ ಚಿತ್ರಕ್ಕಿದೆ. ಖ್ಯಾತ ನಟ ಅನಿರುದ್ಧ್ ಅರ್ಪಿಸುತ್ತಿರುವ ಈ ಕಿರುಚಿತ್ರ, ಸಿಂಹಾದ್ರಿ ಪ್ರೊಡಕ್ಷನ್‌ನಿಂದ ನಿರ್ಮಾಣವಾಗುತ್ತಿದೆ.

ಶ್ರೀ ಮೂಕಾಂಬಿಕೆ ಸನ್ನಿಧಿಯಲ್ಲಿ ಮಾ.14ರವರೆಗೆ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು

ಕೊಲ್ಲೂರು ದೇವಳದಲ್ಲಿ ಜಾತ್ರೆ ಸಂಭ್ರಮಕ್ಕೆ ಚಾಲನೆ

ಉಪ್ಪುಂದ: ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದಲ್ಲಿ ಮಾ. 14ರವರೆಗೆ ನಡೆಯಲಿರುವ ಶ್ರೀ ಮೂಕಾಂಬಿಕಾ ಅಮ್ಮನವರ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ಗುರುವಾರ ಚಾಲನೆ ಸಿಕ್ಕಿದೆ.

ಬೆಳಿಗ್ಗೆ ದೇವಳದ ಅರ್ಚಕ ಹಾಗೂ ತಂತ್ರಿ ಕೆ. ಎನ್. ಸುಬ್ರಹ್ಮಣ್ಯ ಅಡಿಗ ಗಣಪತಿ ಪ್ರಾರ್ಥನೆ, ನಾಂದಿ ಪುಣ್ಯಾಹ, ಅಂಕುರಾವಾಸ ಸಿಂಹಯಾಗದ ನಂತರ ಧ್ವಜಾರೋಹಣದ ಮೂಲಕ ಜಾತ್ರೆಗೆ ಚಾಲನೆ ನೀಡಿದರು. ಸ್ವರ್ಣಮುಖಿ ಮಂಟಪದಲ್ಲಿ ಪ್ರತಿದಿನ ಆಯ್ದ ಕಲಾವಿದರಿಂದ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ ಚಾಲನೆ ನೀಡಿದರು.

ದೇವಳದ ಸಿಇಒ ಪ್ರಶಾಂತಕುಮಾರ್ ಶೆಟ್ಟಿ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ರಘುರಾಮ ದೇವಾಡಿಗ, ಧನಾಕ್ಷಿ ವಿಶ್ವನಾಥ, ಮಹಾಲಿಂಗ ನಾಯ್ಕ್ ಜೋಗಿಜೆಡ್ಡು, ಮಾಜಿ ಸದಸ್ಯ ಕೆ. ರಮೇಶ ಗಾಣಿಗ, ಮಾಜಿ ಸಾಸಕ ಕೆ. ಗೋಪಾಲ ಪೂಜಾರಿ, ದೇವಳದ ಅರ್ಚಕ ವೃಂದ, ಸಿಬ್ಬಂದಿಗಳು ಇದ್ದರು.



ಮಧ್ಯಾಹ್ನ ವಿವಿಧ ಧಾರ್ಮಿಕ ಕಾರ್ಯಗಳು ಜರುಗಿತು. ಸಂಜೆ ಯಾಗಶಾಲಾ ಪ್ರವೇಶ, ರಜ್ಜು ಬಂಧನ, ಮುಹೂರ್ತ ಬಲಿ, ಭೇರಿತಾಡನ, ಕೌತುಕ ಬಂಧನದ ಬಳಿಕ ರಾತ್ರಿ ನಗರೋತ್ಸವ ನಡೆಯಿತು.

ಮಾ.6ರ ರಾತ್ರಿ ಮಯೂರಾರೋಹ ಣೋತ್ಸವ, ಮಾ.7ರ ರಾತ್ರಿ ಡೋಲಾರೋಹ ಣೋತ್ಸವ, ಮಾ.8ರ ರಾತ್ರಿ ಪುಷ್ಪಮಂಟಪಾರೋಹಣೋತ್ಸವ, ಮಾ.9ರ ರಾತ್ರಿ ವೃಷಭಾರೋಹಣೋತ್ಸವ, ಮಾ. 10ರ ರಾತ್ರಿ ಗಜಾರೋಹಣೋತ್ಸವ, ಮಾ. 11ರ ಬೆಳಿಗ್ಗೆ ಶಿಖರ ಪ್ರತಿಷ್ಠೆ, ಸಂಜೆ ಹಿರೇರಂಗಪೂಜೆ, ರಾತ್ರಿ ಸಿಂಹಾರೋಹಣೋತ್ಸವ ಜರುಗಲಿದೆ. ಮಾ. 12ರಂದು ಬೆಳಿಗ್ಗೆ ಮುಹೂರ್ತ ಬಲಿ, ಕ್ಷಿಪ್ರಬಲಿ, ರಥಬಲಿ ನಂತರ ಮಧ್ಯಾಹ್ನ 12 ಗಂಟೆಗೆ ವೃಷಭ ಲಗ್ನ ಮುಹೂರ್ತದಲ್ಲಿ ರಥಾರೋಹಣ ನಡೆಯಲಿದೆ. ಅಂದು ಸಂಜೆ ಶ್ರೀಮನ್ಮಹಾರಥೋತ್ಸವ ಜರುಗಲಿದೆ. ಮಾ. 13ರ ರಾತ್ರಿ ಓಕುಳಿ, ಅವಭೃತಸ್ನಾನ ನಡೆಯಲಿದ್ದು, ಮಾ. 14ರ ಬೆಳಿಗ್ಗೆ ಅಶ್ವಾರೋಹಣೋತ್ಸವದ ಬಳಿಕ ಮಹಾಪೂರ್ಣಾಹುತಿ, ಧ್ವಜಾವರೋಹಣ, ಪೂರ್ಣಕುಂಭಾಭಿಷೇಕ ಹಾಗೂ ಅಂಕುರ ಪ್ರಸಾದ ವಿತರಣೆಯಾಗಲಿದೆ.

ಅಲ್ಲದೇ ಜಾತ್ರಾ ಅವಧಿಯ ಆರು ದಿನ ಪ್ರತಿಸಂಜೆ 5ಕ್ಕೆ ಮಾಂಗಲ್ಯೋತ್ಸವ (ಕಟ್ಟೆ ಉತ್ಸವ) ನಡೆಯಲಿದ್ದು, ಶ್ರೀ ಮೂಕಾಂಬಿಕಾ ಅಮ್ಮನವರ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ಈಗಾಗಲೇ ಸಕಲ ಸಿದ್ಧತೆ ಮಾಡಲಾಗಿದೆ.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಮೇಳೈಸಿತು ಹೋಳಿ ಹಬ್ಬ ಸಂಭ್ರಮ!

ಬ್ರಹ್ಮಾವರ: ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಚೇರ್ಕಾಡಿ ಯಲ್ಲಿ ಬುಧವಾರ ಹೋಳಿ ಹಬ್ಬವನ್ನು ಆಚರಿ ಸಲಾಯಿತು.

6ನೇ ತರಗತಿಯ ವಿದ್ಯಾರ್ಥಿ ತೇಜಸ್ ಜೋಯ್ಸ, ಹಬ್ಬದ ಹಿನ್ನೆಲೆ, ಆಚರಿಸುವ ಬಗೆಯ ಕುರಿತು ತಿಳಿಸಿದರು. ಹೋಳಿ ಹಬ್ಬದ ಸಂಭ್ರಮವನ್ನು ಸಾರುವ ಸಮೂಹಗೀತೆಗೆವಿದ್ಯಾರ್ಥಿಗಳು ಧ್ವನಿಯಾದರು. ವಿದ್ಯಾರ್ಥಿಗಳ ಮತ್ತು ಶಿಕ್ಷಕರು ಪರಸ್ಪರ ಬಣ್ಣ ಹಚ್ಚಿಕೊಳ್ಳುವುದರ ಮೂಲಕ ಹಬ್ಬವನ್ನು ಸಾಂಕೇತಿಕವಾಗಿ ಆಚರಿಸಿದರು. ಮಧ್ಯಾಹ್ನದ ಅವಧಿಯಲ್ಲಿ ಶಾಲಾ ಮೈದಾನದಲ್ಲಿ ಹೋಲಿಕಾ ದಹನ, ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ವಾಹಿನಿಗಳ ಅನುಸಾರ ತಂಡವನ್ನು ಕಟ್ಟಿಕೊಂಡು, ಪಿರಮಿಡ್ ರಚಿಸಿ, ಬಣ್ಣದ ಮಡಿಕೆ ಒಡೆದು ಸಾಹಸ ಪ್ರದರ್ಶಿಸಿದರು. ನಂತರ ವಿದ್ಯಾರ್ಥಿಗಳು ಶಿಕ್ಷಕರು ಪರಸ್ಪರ ಬಣ್ಣ ಹಂಚಿಕೊಳ್ಳುವ ಮೂಲಕ ಹೋಳಿ ಸಂಭ್ರಮ ಸಾರುವ ಹಾಡುಗಳಿಗೆ ಹೆಜ್ಜೆ ಆಗುವ ಮೂಲಕ ಸಂಭ್ರಮಿಸಿದರು.



ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪ್ರಧಾನಾಚಾರ್ಯ ಪೂರ್ಣಿಮ ಎಸ್‌ಡಿ, ಸಂಸ್ಥೆಯ ಆಡಳಿತ ಅಧಿಕಾರಿ ಸುರೇಶ್ ಹೆಜ್ಮಾಡಿ, ಸಂಯೋಜಕಿ ಅನಿತಾ ಮುಜುಂದರ್ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಪ್ರಾಂಜಲಿ ಪೈ ಸ್ವಾಗತಿಸಿ, ವಂದಿಸಿ, ಕಾರ್ಯಕ್ರಮ ನಿರೂಪಿಸಿದರು.

ಇಂಗ್ಲೆಂಡ್‌ಗೆ ವೀರೋಚಿತ ಸೋಲು | ಬ್ಯಾಥಲ್ ಪರಾಕ್ರಮಕ್ಕೆ ಒಲಿಯದ ಫೈನಲ್ | ಸೆಮಿಫೈನಲ್‌ನಲ್ಲಿ ಗೆದ್ದ ಸೂರ್ಯ ಪಡೆ

ಬ್ರಿಟಿಷರ ಹೊರಹಾಕಿ ಫೈನಲ್‌ಗೆ ಭಾರತ

ಮುಂಬೈ: ಸಂಜು ಸ್ಯಾಮ್ಸನ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಟಿ20 ವಿಶ್ವಕಪ್ ಇತಿಹಾಸದಲ್ಲಿ ಮತ್ತೊಮ್ಮೆ ಸ್ಮರಣೀಯ ಗೆಲುವು ದಾಖಲಿಸಿರುವ ಭಾರತ ತಂಡವು ಸೆಮಿಫೈನಲ್‌ನಲ್ಲೇ ಬ್ರಿಟಿಷರನ್ನು ಪಂದ್ಯಾವಳಿಯಿಂದ ಹೊರಹಾಕಿ ಫೈನಲ್‌ಗೇರಿತು.

ಎಂದಿನಂತೆ ವಾಂಖೆಡೆ ಕ್ರೀಡಾಂಗಣದಲ್ಲಿ ಮತ್ತೊಮ್ಮೆ ವಂದೇ ಮಾತರಂ ಹಾಡು ಮೊಳಗಿತು. ಅಭಿಮಾನಿಗಳ ಸಂಭ್ರಮ, ಕೂಗಾಟ, ಉತ್ಸಾಹ ಮತ್ತು ಜಯಘೋಷ ಮೈದಾನದಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಿದ ಸೂರ್ಯ ಪಡೆಗೆ ಹುರುಪು ನೀಡಿತು. ಇದೇ ಹುರುಪಿನೊಂದಿಗೆ ಆಡಿದ ಸೂರ್ಯ ಪಡೆ ಬುಧವಾರದಂದು ಭಾರತವನ್ನು ನಿಶ್ಯಬ್ದವಾಗಿಸುತ್ತೇನೆ ಎಂಬ ಹೇಳಿಕೆ ನೀಡಿದ್ದ ತಂಡವನ್ನು ನಿಬ್ಬೆರಗಾಗಿಸಿತು. ದೊಡ್ಡ ಸ್ಕೋರ್ ಬಾರಿಸಿ ರೋಚಕ ಗೆಲುವು ಸಾಧಿಸಿ ಫೈನಲ್‌ಗೇರಿತು. ನ್ಯೂಜಿಲೆಂಡ್ ತಂಡದೊಂದಿಗೆ ಪಂದ್ಯವಾಡುವುದಕ್ಕೆ ಅಣಿಯಾಯಿತು.

ಗುರುವಾರದ ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದ ಭಾರತ 20 ಓವರ್‌ಗಳಲ್ಲಿ ದಾಖಲೆಯ 253 ರನ್ ಬಾರಿಸಿತು. ಗುರಿ ಬೆನ್ನತ್ತಿದ ಇಂಗ್ಲೆಂಡ್ ತಕ್ಕ ಪ್ರತಿರೋಧ ತೋರಿ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 246 ರನ್ ಗಳಿಸಿ ವೀರೋಚಿತ ಸೋಲು ಕಂಡಿತು.

ಆತಂಕ ಹೆಚ್ಚಿಸಿದ ಬ್ಯಾಥಲ್ ಶತಕ: ದೊಡ್ಡ ಸ್ಕೋರ್, ದೊಡ್ಡ ಪಂದ್ಯ, ದೊಡ್ಡ ಒತ್ತಡದೊಂದಿಗೆ ಬ್ಯಾಟಿಂಗ್‌ಗಿಳಿದ ಇಂಗ್ಲೆಂಡ್ ಆರಂಭಿಕ ಹಂತದಲ್ಲೇ ಸಾಲ್ಟ್ ವಿಕೆಟ್ ಮೂಲಕ ಆಘಾತ ಅನುಭವಿಸಿತು. ಬ್ರೂಕ್ ಆಟವೂ ನಿಲ್ಲಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಬ್ಯಾಥಲ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಸಿಕ್ಸರ್‌ಗಳನ್ನು ಬಾರಿಸುತ್ತಾ ಕೋಟ್ಯಾಂತರ ಅಭಿಮಾನಿಗಳಿಗೆ ಒಂದು ಮಟ್ಟದಲ್ಲಿ ಆತಂಕ ನೀಡಿದರು. ಅವರಿಗೆ ವಿಲ್ ಜ್ಯಾಕ್ಸ್ ಸಾಥ್ ಸಿಕ್ಕಿತು. ಈ ಇಬ್ಬರೂ ಬಂದ ಬೌಲರ್‌ಗಳನ್ನೆಲ್ಲಾ ದಂಡಿಸುತ್ತಾ ಬಂದರು. 14ನೇ ಓವರ್‌ವರೆಗೂ ಓವರಿಗೆ ಕನಿಷ್ಠ 13 ರನ್ ಬಾರಿಸುತ್ತಾ ಮಿಂಚಿದರು. 7ರಿಂದ 14ನೇ ಓವರ್‌ವರೆಗೆ ಈ ಜೋಡಿ 100 ರನ್ ಬಾರಿಸಿತ್ತು.

ದಿಗ್ಗಜರ ಸಮಾಗಮ

ಮುಂಬೈನ ವಾಂಖೆಡೆ ಕ್ರೀಡಾಂಗಣವು ಸೆಮಿಫೈನಲ್ ಪಂದ್ಯಕ್ಕೆ ಆತಿಥ್ಯ ನೀಡಿದ್ದಲ್ಲದೆ, ದಿಗ್ಗಜರ ಸಮಾಗಮಕ್ಕೂ ಸಾಕ್ಷಿಯಾಯಿತು. ಪಂದ್ಯ ವೀಕ್ಷಣೆಗೆ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ, ರೋಹಿತ್ ಶರ್ಮ, ದಿಗ್ಗಜ ಸಚಿನ್ ತೆಂಡೂಲ್ಕರ್, ಐಸಿಸಿ ಅಧ್ಯಕ್ಷ ಜಯ್ ಶಾ, ನಟ ರಣಬೀರ್ ಕಪೂರ್, ನಟಿ ಆಲಿಯಾ ಭಟ್ ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರು ದಿಗ್ಗಜರು ಮೈದಾನದಲ್ಲಿದ್ದರು.



ಆಂಗ್ಲರ ದಂಡಿಸಿದ ಬ್ಯಾಟರ್ಸ್

ಮೊದಲನೇ ಎಸೆತದಿಂದಲೂ ಆವೇಗ, ಆಕ್ರಮಣಕಾರಿ ಮನಸ್ಥಿತಿ ತೋರಿಸಿದ ಸಂಜು ಸ್ಯಾಮ್ಸನ್ ಸೆಮಿಫೈನಲ್‌ನಲ್ಲಿ ಬಿಟ್ಟ ಆಟ ಮುಂದುವರಿಸಿದರು. ಎಷ್ಟು ಬದ್ಧತೆಯಿಂದ ದಂಡಿಸಿದರೋ ಅಷ್ಟೇ ಶಿಸ್ತಿನಿಂದ ಉತ್ತಮ ಎಸೆತಗಳಿಗೆ ಗೌರವಿಸಿದ ಅವರು, ಬೌಂಡರಿ ಸಿಕ್ಸರ್‌ಗಳ ಸುರಿಮಳೆಗೆ ಸಿಂಗಲ್‌ಗಳ ಹನಿಗೂಡಿಸಿ 26 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿ ದಂಡಿಸುವ ಕಾರ್ಯಕ್ರಮ ಮುಂದುವರಿಸಿದರು. ಅಭಿಷೇಕ್ ಶರ್ಮ ಅವರು ಬೇಗನೇ ವಿಕೆಟ್ ಒಪ್ಪಿಸಿದ ನಂತರ ಇಶಾನ್ ಕಿಶನ್ ಉತ್ತಮ ಬ್ಯಾಟಿಂಗ್‌ನೊಂದಿಗೆ ಸಂಜು ಅವರೊಂದಿಗೆ ಕೈ ಮಿಲಾಯಿಸಿದರು. ಆಂಗ್ಲರನ್ನು ದಂಡಿಸುವ ಹೊರೆ ತಾವೂ ಹೊತ್ತರು. 39ಕ್ಕೆ ಅವರ ಆಟ ನಿಂತಿತು, ಈ ಇನ್ನಿಂಗ್ಸ್‌ನಲ್ಲಿ 4 ಬೌಂಡರಿ 2 ಸಿಕ್ಸರ್‌ಗಳಿದ್ದವು. ಭಾರತದ ಸ್ಕೋರ್ ನೂರರ ಗಡಿ ದಾಟಿತ್ತು. ವಿಶ್ವಕಪ್ ಉದ್ದಕ್ಕೂ ಪರಿಣಾಮಕಾರಿ ಪ್ರದರ್ಶನ ನೀಡಿದ್ದ ಶಿವಂ ದುಬೆ ಆಶ್ಚರ್ಯವಾಗಿ ನಾಲ್ಕನೇ ಕ್ರಮಾಂಕಕ್ಕೆ ಬಂದರು. ದಂಡಿಸುವ ಲೈಸನ್ಸ್ ಪಡೆದುಕೊಂಡೇ ಬಂದಿದ್ದ ಅವರು ಸೆಟ್ ಆಗುವ ಮುಲಾಜಿಗೆ ಬೀಳಲಿಲ್ಲ. ಸ್ಫೋಟಕ ಸಿಕ್ಸರ್‌ಗಳನ್ನು ಬಾರಿಸತೊಡಗಿದರು. ಸಂಜು 7 ಭರ್ಜರಿ ಸಿಕ್ಸರ್, 8 ಲೀಲಾಜಾಲ ಬೌಂಡರಿಗಳನ್ನು ದಂಡಿಸಿ 89 ರನ್ ರನ್ ಗಳಿಸಿದರು. ಮತ್ತೊಂದು ಅಮುಲ್ಯ, ಅರ್ಧ ಶತಕದಿಂದ ವಂಚಿತರಾದರು. ದುಬೆ ತಮ್ಮ ಸಿಕ್ಸರ್‌ಗಳ ಆರ್ಭಟದಿಂದ ಸ್ಕೋರ್ ಹಿಗ್ಗಿಸಿ 43 ರನ್ ಗಳಿಸಿ ರನೌಟ್‌ಗೆ ಔಟಾದರು. ಕೊನೆಯ ಓವರ್‌ಗಳಲ್ಲಿ ಸಿಕ್ಸರ್‌ಗಳ ಸುರಿಮಳೆಗೈದ ತಿಲಕ್ ವರ್ಮಾ(27) ಮತ್ತು ಹಾರ್ದಿಕ್ ಪಾಂಡ್ಯ (21) ಸ್ಕೋರ್ ಹಿಗ್ಗಿಸಿದರು.

ರೋಚಕ ಅಂತ್ಯ

ಇನ್ನೇನು ಭಾರತೀಯರಿಂದ ಪಂದ್ಯ ಕಸಿದರು ಅನ್ನುಷ್ಟರಲ್ಲಿ ಬೌಲಿಂಗ್‌ಗೆ ಬಂದ ಅರ್ಶದೀಪ್ ಸಿಂಗ್ ವಿಕೆಟ್ ತೆಗೆದರು. ಅಕ್ಷರ್ ಮತ್ತೊಮ್ಮೆ ರೋಮಾಂಚಕ ಕ್ಯಾಚ್ ಮಾಡಿದರು. ಬ್ಯಾಥಲ್ ತಮ್ಮ ಅತ್ಯುತ್ತಮ ಬ್ಯಾಟಿಂಗ್ ಮುಂದುವರಿಸಿದರು. ಆದರೆ ಸ್ಕೋರ್ ಬೋರ್ಡ್‌ನಲ್ಲಿದ್ದ ಅತಿ ದೊಡ್ಡ ಗುರಿ ಮುಟ್ಟುವುದಕ್ಕೆ ಯಾವುದೇ ಏಕಾಂಕಿ ಹೋರಾಟ ಸಾಲದೆಂಬುದು ಅವರಿಗೆ ಮುಂದಿನ ಬ್ಯಾಟರ್‌ಗಳು ಕೈಕೊಟ್ಟ ನಂತರ ಅರಿವಾಯಿತು. ಕೊನೆಯ 24 ಬಾಲ್‌ಗಳಲ್ಲಿ 61 ರನ್‌ಗಳು ಬೇಕಿದ್ದವು. 17ನೇ ಓವರ್‌ನಲ್ಲಿ ಅರ್ಶದೀಪ್ ಸಿಂಗ್ 16 ರನ್ ಮಾತ್ರ ನೀಡಿದರು. 18ನೇ ಓವರ್ ಮಾಡಲು ಬಂದ ಬೂಮ್ರಾ 6 ರನ್ ಮಾತ್ರ ನೀಡಿ ನಿರಾಳ ನೀಡಿದರು. 2 ಓವರ್‌ನಲ್ಲಿ 39ರನ್ ಬೇಕಿತ್ತು. ಬ್ಯಾಥಲ್ ಸಿಕ್ಸರ್‌ನೊಂದಿಗೆ ಶತಕ ಪೂರೈಸಿಕೊಂಡರು. ಪಾಂಡ್ಯ ಕರ್‌ನ್ ವಿಕೆಟ್ ಪಡೆದು 9 ರನ್ ಮಾತ್ರ ನೀಡಿದರು. ಕೊನೆ ಓವರ್‌ನಲ್ಲಿ 30 ರನ್ ಬೇಕಿತ್ತು. ದುಬೆ ಬೌಲಿಂಗ್‌ಗೆ ಬಂದರು. ಬ್ಯಾಥಲ್ ಮೊದಲ ಬಾಲ್‌ನಲ್ಲೇ 105 ರನ್‌ಗಳಿಗೆ ರನ್‌ಔಟ್ ಆದರು.

ಸಂಕ್ಷಿಪ್ತ ಸ್ಕೋರ್

- ಭಾರತ 20 ಓವರ್‌ಗಳಲ್ಲಿ 253/7: ಸಂಜು 89, ದುಬೆ 43, ಕಿಶನ್ 39; ಜ್ಯಾಕ್ಸ್ 40/2
- ಇಂಗ್ಲೆಂಡ್ 20 ಓವರ್‌ಗಳಲ್ಲಿ 246/7: ಬ್ಯಾಥಲ್ 105, ಜ್ಯಾಕ್ಸ್ 35; ಪಾಂಡ್ಯ 38/2, ಬೂಮ್ರಾ 33/1

4ನೇ ಬಾರಿ ಫೈನಲ್‌ಗೆ

ಇದರೊಂದಿಗೆ ಭಾರತ ನಾಲ್ಕನೇ ಬಾರಿಗೆ ಫೈನಲ್‌ಗೇರಿದೆ. ಮೊದಲನೇ ಸೀಸನಿನಲ್ಲಿ ಫೈನಲ್ ಆಡಿದ್ದ ಭಾರತ, 2014ರಲ್ಲಿ ಆಡಿತ್ತು. 2024ರಲ್ಲಿ ಆಡಿದ್ದು, ಇದೀಗ ನಾಲ್ಕನೇ ಬಾರಿ ಫೈನಲ್‌ಗೇರಿದೆ. ಇದರೊಂದಿಗೆ ಅತಿ ಹೆಚ್ಚು ಫೈನಲ್ ಆಡಿದ ತಂಡ ಎಂಬ ದಾಖಲೆ ಮಾಡಿದೆ.



ಸೆಮಿಫೈನಲ್‌ನ ಅತಿ ಹೆಚ್ಚು ರನ್

253 ರನ್ ಗಳಿಸುವ ಮೂಲಕ ಭಾರತ ತಂಡ ಇತಹಾಸ ನಿರ್ಮಿಸಿತು. ಸೆಮಿಫೈನಲ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಹಿರಿಮೆಗೆ ಪಾತ್ರವಾಯಿತು. 2016ರಲ್ಲಿ ಭಾರತವೇ 192 ರನ್ ಗಳಿಸಿ ಸೆಮಿಫೈನಲ್‌ನ ಅತಿ ಹೆಚ್ಚು ರನ್ ಗಳಿಸಿದ್ದ ದಾಖಲೆ ಹೊಂದಿತ್ತು. ಆ ದಾಖಲೆ ನವೀಕರಿಸಿಕೊಂಡ ಭಾರತ 253ಕ್ಕೆ ವಿಸ್ತರಿಸಿತು.

ಸೆಮಿಗೆ ವೈಷ್ಣವಿ ಅಡ್ಕರ್ -ಅಂಕಿತಾ ಜೋಡಿ

ರಾಚಪ್ಪಾ ಜಂಬಗಿ

ಕಲಬುರಗಿ: ಉತ್ತಮ ಸರ್ವಿಸ್ ಹಾಗೂ ನಿಖರ ರಿಟರ್ನ್‌ಗಳಿಂದ ಎದುರಾಳಿಯ ಚಲನವಲನಗಳನ್ನು ಅರಿತುಕೊಂಡ ಭಾರತದ 3ನೇ ಶ್ರೇಯಾಂಕಿತ ಮಹಾರಾಷ್ಟ್ರದ ವೈಷ್ಣವಿ ಅಡ್ಕರ್ ಹಾಗೂ ಗುಜರಾತ್ ಮೂಲದ ಅಂಕಿತಾ ರೈನಾ, ತಮ್ಮ ತಮ್ಮ ಪಂದ್ಯಗಳಲ್ಲಿ ಕ್ರಮವಾಗಿ ರಷ್ಯಾ, ಉಜ್ಬೇಕಿಸ್ತಾನ್ ಆಟಗಾರ್ತಿರನ್ನು ಗುರುವಾರ ನಡೆದ ಸಿಂಗಲ್ಸ್ ಪಂದ್ಯದಲ್ಲಿ ಮಣಿಸಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟರು.

ಅದೇ ಪ್ರದರ್ಶನ ಜೊತೆಯಾಗಿ ಮುಂದುವರಿಸುತ್ತಾ ಡಬಲ್ಸ್ ಪಂದ್ಯಗಳಲ್ಲಿ ರಷ್ಯಾದ ಈ ಬರಡಿನಾ ಹಾಗೂ ಎಸ್ ಮಾರ್ಟಿನೋವಾ ವಿರುದ್ಧ ಗೆದ್ದು ಸೆಮಿಫೈನಲ್‌ಗೆ ಎಂಟ್ರಿ ಕೊಟ್ಟರು.

ಬಿಸಿಲು ನಾಡಿನ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದ ಲಾನ್ ಟೆನಿಸ್ ಅಂಗಣದಲ್ಲಿ ಗುರುವಾರ ನಡೆದ ಐಟಿಎಫ್ ಡಬ್ಲ್ಯು 35 ಮಹಿಳಾ ಓಪನ್ ಟೆನಿಸ್ ಟೂರ್ನಿಯ 3ನೇ ದಿನದ ಸಿಂಗಲ್ಸ್ ಪಂದ್ಯದಲ್ಲಿ ಭಾರತದ 3ನೇ ಶ್ರೇಯಾಂಕಿತ ವೈಷ್ಣವಿ ಅಡ್ಕರ್ ತೀಕ್ಷ್ಣ ಹೊಡೆತದೊಂದಿಗೆ ಆರಂಭದಿಂದ ಅಂತ್ಯದವರೆಗೂ ಸಮತೋಲಿತ ಪ್ರದರ್ಶನ ನೀಡಿ ರಷ್ಯಾದ ಅನ್ನಾ ಸೇಡಿಶೇವಾ ವಿರುದ್ಧ 6-2,6-0 ಅಂತರದಿಂದ ಗೆದ್ದರು. ಕೋರ್ಟ್ 1ರಲ್ಲಿ ನಡೆದ ಪಂದ್ಯದಲ್ಲಿ ಅಂಕಿತಾ ರೈನಾ, ಉಜ್ಬೇಕಿಸ್ತಾನಿನ ಮಿಲಾನಾ ಮಸ್ಲೆಂಕೋವಾ ವಿರುದ್ಧ ಬಲವಾದ ರ್‍ಯಾಲಿಯೊಂದಿಗೆ ಪಂದ್ಯವನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿ ಇಟ್ಟುಕೊಂಡರು. 6-2, 6-1 ಅಂತರದಲ್ಲಿ ಗೆದ್ದರು.



ಸಿಂಗಲ್ಸ್ ಪಂದ್ಯಗಳಲ್ಲಿ ಗೆದ್ದವರು ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದರೆ, ಡಬಲ್ಸ್ ಪಂದ್ಯಗಳಲ್ಲಿ ಮಿಂಚಿದವರು ಸೆಮಿ ಫೈನಲ್‌ಗೆ ಲಗ್ಗೆ ಹಾಕಿದರು.

ಇನ್ನೂ ಜೀಲ್ ದೇಸಾಯಿ, ಮಿಚಿಕಾ ವೊರ್ಝುಕಿ, ಸೋಫಿಯಾ ಸುಸ್ಲೋವಾ ಸೇರಿದಂತೆ ಪ್ರಮುಖ ಆಟಗಾರ್ತಿಯರು ಕೂಟದಿಂದ ಹೊರ ನಡೆದರು.

ಡಬಲ್ಸ್‌ನಲ್ಲಿ ಕರ್ನಾಟಕಕ್ಕೆ ಸೋಲು

ಡಬಲ್ಸ್ ಪಂದ್ಯದಲ್ಲಿ ಕರ್ನಾಟಕದ ಸ್ನಿಗ್ಧಾ ಕಾಂತ, ಹರ್ಷಿಣಿ ನಾಗರಾಜ್ ಜೋಡಿ ಸೋನಾಲ್ ಪಾಟೀಲ್, ತಮಂಕರ್ ವಿರುದ್ಧ 7-5,6-2 ಅಂತರದಲ್ಲಿ ಸೋಲನುಭವಿಸಿತು. ವೈಷ್ಣವಿ ಅಡ್ಕರ್ ಹಾಗೂ ಅಂಕಿತಾ ರೈನಾ, ಈ ಬರಡಿನಾ ಹಾಗೂ ಮಾರ್ಟಿನೋವಾ ವಿರುದ್ಧ 6-2,6-2 ಅಂತರದಲ್ಲಿ ಗೆದ್ದು ಸೆಮಿಗೇರಿದರು.

ಎದುರಾಳಿಯ ಆಟ ಹೇಗಿದೆ ಮುಂಚೆಯೇ ಗೊತ್ತಿತ್ತು. ಮೊದಲನೇ ಸೆಟ್‌ನಲ್ಲಿ ನಾನು ತಪ್ಪು ಮಾಡಿದೆ. ಎರಡನೇ ಸೆಟ್‌ನಲ್ಲಿ ಎದುರಾಳಿಯ ತಪ್ಪನ್ನು ಸಮರ್ಥವಾಗಿ ಬಳಸಿಕೊಂಡು ಗೆಲುವು ಸಾಧಿಸಿದೆ.

■ ವೈಷ್ಣವಿ ಅಡ್ಕರ್, ಟೆನಿಸ್ ಆಟಗಾರ್ತಿ

ಸ್ನೂಕರ್: ಸೀನ್ ಡೇವಿಸ್‌ಗೆ ಕಿರೀಟ



ಮಂಗಳೂರು: ನಗರದ ಕಾಸ್ಮೋಪಾಲಿಟನ್ ಕ್ಲಬ್ ವತಿಯಿಂದ ಆಯೋಜಿಸಲಾದ ಸ್ನೂಕರ್ -ಬಿಲಿಯರ್ಡ್ಸ್ ಇನ್ವಿಟೇಶನಲ್ ಟೂರ್ನಮೆಂಟ್‌ನಲ್ಲಿ ಬಿಲಿಯರ್ಡ್ಸ್ ವಿಭಾಗದಲ್ಲಿ ಐ.ಎಚ್. ಮನುದೇವ್ 400-242 ಅಂತರದಿಂದ ಕ್ಷಿತಿಜ್ ಗಾರ್ಗ್ ಅವರನ್ನು ಮಣಿಸಿ ಚಾಂಪಿಯನ್ ಪಟ್ಟ ಅಲಂಕರಿಸಿದರು. ಫೈನಲ್‌ನಲ್ಲಿ ಮನುದೇವ್ 101 ಅಂಕಗಳ ಅತ್ಯುನ್ನತ ಬ್ರೇಕ್ ದಾಖಲಿಸಿದರು. ಕ್ಷಿತಿಜ್ ಗಾರ್ಗ್ ರನ್ನರ್-ಅಪ್‌ಗೆ ತೃಪ್ತಿಪಟ್ಟರು. ಬೆಸ್ಟ್ ಆಫ್ 7 ಸ್ನೂಕರ್ ಫೈನಲ್‌ನಲ್ಲಿ ಸೀನ್ ಡೇವಿಸ್ 4-3 ಅಂತರದಿಂದ ಎಂ. ಯೋಗೇಶ್ ಕುಮಾರ್ ಅವರನ್ನು ಸೋಲಿಸಿ ಕಿರೀಟ ತಮ್ಮದಾಗಿಸಿಕೊಂಡರು. ಆರಂಭದಿಂದ ಅಂತ್ಯವರೆಗೆ ಕುತೂಹಲ ಮೂಡಿಸಿದ ಈ ಹಣಾಹಣಿಯಲ್ಲಿ ಸೀನ್ 62 ಅಂಕಗಳ ಅತ್ಯುನ್ನತ ಬ್ರೇಕ್ ಸಾಧಿಸಿದ್ದು ವಿಶೇಷ. ಅವರಿಂದ 53 ಅಂಕಗಳ ಮತ್ತೊಂದು ಗಮನಾರ್ಹ ಬ್ರೇಕ್ ಕೂಡ ದಾಖಲಾಗಿದೆ. ಇತ್ತ ಯೋಗೇಶ್ ಕುಮಾರ್ 61 ಅಂಕಗಳ ಉತ್ತಮ ಬ್ರೇಕ್ ಹೊಡೆದು ಪೈಪೋಟಿ ನೀಡಿದರು.

ಯುದ್ಧ ಉದ್ವೇಗದ ಪರಿಣಾಮ ಸಿಲುಕಿಕೊಂಡಿದ್ದ ಆಟಗಾರರು

ಹಂತ ಹಂತವಾಗಿ ಸ್ವದೇಶಕ್ಕೆ ಕ್ರಿಕೆಟರ್ಸ್!

ಮುಂಬೈ: ಗಲ್ಫ್ ಪ್ರದೇಶದಲ್ಲಿ ವಿಮಾನ ಹಾರಾಟ ನಿಲ್ಲಿಸಲಾಗಿದ್ದ ಪರಿಣಾಮ ಭಾರತದಲ್ಲೇ ಸಿಲುಕಿದ್ದ ಜಿಂಬಾಬ್ವೆ ಕ್ರಿಕೆಟ್ ತಂಡದ ಆಟಗಾರರು ಈಗ ಹಂತ ಹಂತವಾಗಿ ತಮ್ಮ ದೇಶಕ್ಕೆ ಮರಳಲು ಆರಂಭಿಸಿದ್ದಾರೆ.

ಜಿಂಬಾಬ್ವೆಯ ಹಲವು ಆಟಗಾರರು ತವರಿಗೆ



ನಡೆಯುತ್ತಿರುವ ಸಂಘರ್ಷ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ ತಂಡದ ಪ್ರಯಾಣ ವ್ಯವಸ್ಥೆಯನ್ನು ಮರು ರೂಪಿಸಿ ಪರ್ಯಾಯ ಮಾರ್ಗದ ಮೂಲಕ ವಾಪಸ್ಸು ಕಳುಹಿಸುವ ಕ್ರಮ ಕೈಗೊಂಡಿದೆ.

ಜಿಂಬಾಬ್ವೆ ತಂಡ ಈ ಬಾರಿ ವಿಶ್ವಕಪ್ ಟೂರ್ನಿಯಲ್ಲಿ ಗಮನಾರ್ಹ ಪ್ರದರ್ಶನ ನೀಡಿತ್ತು. ಬಲಿಷ್ಠ ಆಸ್ಟ್ರೇಲಿಯಾ ಮತ್ತು ಶ್ರೀಲಂಕಾ ತಂಡಗಳನ್ನು ಸೋಲಿಸಿ ಸೂಪರ್ ಎಂಟು ಹಂತಕ್ಕೇರಿದ ಜಿಂಬಾಬ್ವೆ, ಅಲ್ಲಿಂದ ಮುಂದಿನ ಹಂತಕ್ಕೆ ಸಾಗಲು ಸಾಧ್ಯವಾಗದೆ ಕಳೆದ ವಾರ ಟೂರ್ನಿಯಿಂದ ಹೊರಬಿದ್ದಿತ್ತು.


ಮಾರ್ಚ್ 2ರಂದು ಭಾರತದಿಂದ ಹೊರಡಬೇಕಿದ್ದರೂ, ಅಮೆರಿಕ ಮತ್ತು ಇಸ್ರೇಲ್ ದೇಶಗಳು ಇರಾನ್ ಮೇಲೆ ನಡೆಸಿದ ದಾಳಿಯ ನಂತರ ಗಲ್ಫ್ ಪ್ರದೇಶದ ವಾಯುಪ್ರದೇಶವನ್ನು ಮುಚ್ಚಿದ ಪರಿಣಾಮ ತಂಡ ದಿಲ್ಲಿಯಲ್ಲಿ ಸಿಲುಕಿಕೊಂಡಿತ್ತು. ಈ ಕಾರಣದಿಂದಾಗಿ ನಿಗದಿತ ಪ್ರಯಾಣ ವ್ಯವಸ್ಥೆ ಸಂಪೂರ್ಣವಾಗಿ ವ್ಯತ್ಯಯಗೊಂಡಿತ್ತು.

ಇದೀಗ ಪರ್ಯಾಯ ವ್ಯವಸ್ಥೆಯ ಮೂಲಕ ಆಟಗಾರರನ್ನು ಹಂತ ಹಂತವಾಗಿ ಕಳುಹಿಸುವ ಕಾರ್ಯ ಆರಂಭವಾಗಿದೆ. ಮೊದಲ ತಂಡದ ಆಟಗಾರರು ಬುಧವಾರ ಭಾರತದಿಂದ ಹೊರಟಿದ್ದಾರೆ. ಉಳಿದ ಆಟಗಾರರು ಶುಕ್ರವಾರ ಮಧ್ಯಾಹ್ನ ತಮ್ಮ ದೇಶದತ್ತ ಪ್ರಯಾಣ ಆರಂಭಿಸುವ ನಿರೀಕ್ಷೆಯಿದೆ.

ಸಿಲುಕಿಕೊಂಡ ವಿಂಡೀಸ್: ಮೊದಲು ಜಿಂಬಾಬ್ವೆ ತಂಡ ದುಬೈ ಮೂಲಕ ಪ್ರಯಾಣಿಸಿ ತಮ್ಮ ರಾಜಧಾನಿ ಹರಾರೆ ತಲುಪಬೇಕಾಗಿತ್ತು. ಆದರೆ ಪ್ರಸ್ತುತ ಪರಿಸ್ಥಿತಿಯಿಂದಾಗಿ ಆ ಮಾರ್ಗವನ್ನು ಬದಲಾಯಿಸಲಾಗಿದ್ದು, ಈಗ ಎಥಿಯೋಪಿಯಾ ದೇಶದ ರಾಜಧಾನಿ ಆಡಿಸ್ ಅಬಾಬಾ ಮೂಲಕ ಹರಾರೆ ತಲುಪುವಂತೆ ಹೊಸ ಪ್ರಯಾಣ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿದು ಬಂದಿದೆ. ಇದೇ ಪರಿಸ್ಥಿತಿಯಿಂದ ವೆಸ್ಟ್ ಇಂಡೀಸ್ ತಂಡವೂ ಭಾರತದಲ್ಲೇ ಸಿಲುಕಿಕೊಂಡಿದೆ. ಆದರೆ ಅವರ ಪ್ರಯಾಣ ವ್ಯವಸ್ಥೆ ಕುರಿತು ಇನ್ನೂ ಯಾವುದೇ ಅಧಿಕೃತ ಮಾಹಿತಿ ಪ್ರಕಟವಾಗಿಲ್ಲ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5915

ಎಡದಿಂದ ಬಲಕ್ಕೆ
2.ಮುಳ್ಳುಗಳಿರುವ ಮರಳುಗಾಡಿನ ಸಸ್ಯ (5)
5.ಸಂಸಾರ ಸಾಗರ ದಾಟಿಸುವವಳು (5)
6.ಯಮನ ಹಗ್ಗವನ್ನು ಹೀಗೆನ್ನಬಹುದೆ? (2)
7.ಕೆಲಸದ ಸಮಾನಪದ (2)
9.ಗೊಂದಲ-ಕಸಿವಿಸಿಯಿಲ್ಲಿ ತಿರುಗಿದೆ (4)
11.ಲಯದಿಂದ ಕೊನೆಗೊಂಡ ಮಂದಿರ (4)
15.ಆಮೇಲಿನ ವಿಷಯ ಈ ಹಬೆಯದ್ದೇ ಆಗಿದೆ (2)
16.ಹೆದರಿಕೆ-ಅಂಜಿಕೆ (2)
17.ನಾವಾಡುವ ನುಡಿಗಳ ಹುಟ್ಟು-ಬೆಳವಣಿಗೆ ತಿಳಿಸುವ ಶಾಸ್ತ್ರ (5)
19.ಗಾದಿ-ವರ ಒಳಗೊಂಡ ಸುದ್ದಿ ಕೊಡುವವನು (5)

ಮೇಲಿನಿಂದ ಕೆಳಕ್ಕೆ
1.ಪುಟ್ಟಣ್ಣ ಕಣಗಾಲ ನಿರ್ದೇಶನದ ಚಿತ್ರ (5)
2.ನೆಗಡಿ ಕಡೆಯಲ್ಲಿ ದೀರ್ಘವಾಗಿದೆ (2)
3.ಪಾತ್ರೆಯಂತೆ ಒಡ್ಡಿದ ಕೈ-ಬೊಗಸೆ (4)
4.ಇದು ಬೆಳ್ಳಿಯ ಬೆಟ್ಟ (5)
8.ಮೊಳಕೈಯಿಂದ ಹಸ್ತದ ತುದಿಯವರೆಗಿನ ಅಳತೆ (2)
10.ತೋಟದಲ್ಲಿ ಸಂತಸಮಯ ಸಂಚಾರ (5)
12.ಮಾತಿನ ದೇವತೆಯಾದ ಶಾರದೆ (2)
13.ದೆಹಲಿಯ ಪಕ್ಕದಲ್ಲಿ ಹರಿವ ಹೊಳೆ (5)
14.ರಾಯರು ಮಾಡಿದ ಸಂಧಾನ (4)
18.ಓದಿನಿಂದ ಬರುವ ಜ್ಞಾನ (2)

5914 ಉತ್ತರ

ಎಡದಿಂದ ಬಲಕ್ಕೆ:
1.ಸಸಿ 2.ಮನುಜಮತ
4.ಮೂರೆಲೆ 5.ನಾಗರಿಕ
7.ನಗೆನಟ 9.ಜನಧನ
13.ಬಡಾವಣೆ 15.ಕಲಹ
16.ರಂಗನತಿಟ್ಟು 17.ಹಗೆ

ಮೇಲಿನಿಂದ ಕೆಳಕ್ಕೆ:
1.ಸಹಗಮನ
2.ಮಲೆನಾಡು 3.ತಪ್ಪು
4.ಮೂರ್ಖತನ
6.ಕಬಂಧ 8.ಬಡಿಗೆ
10.ನರವ್ಯೂಹ
11.ನಕಲುತೆಗೆ
12.ಅಣೆಕಟ್ಟು 14.ರಂಭೆ

ವಿಶೇಷ ಚೇತನರ ಉನ್ನತಿಗೆ ವಿಶೇಷ ಪ್ರಯತ್ನ

ಸಮಾಜದಲ್ಲಿ ವಿಶೇಷ ಚೇತನ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಅನುಸರಿಸಬೇಕಾದ ಅಗತ್ಯ ಕ್ರಮಗಳತ್ತ ಗಮನಹರಿಸುವುದು ಈ ಬರಹದ ಉದ್ದೇಶವಾಗಿದೆ. ಶಾರೀರಿಕ, ಬೌದ್ಧಿಕ, ಕಲಿಕೆ ಅಥವಾ ವರ್ತನಾ ಅಡಚಣೆಗಳಿರುವ ಮಕ್ಕಳು ನಮ್ಮ ಸುತ್ತಲೂ ಜನಿಸಿ ಬೆಳೆದುಕೊಳ್ಳುತ್ತಿದ್ದಾರೆ; ಅವರ ಅಗತ್ಯಗಳನ್ನುಅರ್ಥಮಾಡಿಕೊಳ್ಳುವ ದೃಷ್ಟಿಕೋನ ಎಲ್ಲರಲ್ಲಿ ಬೆಳೆಯಬೇಕಿದೆ. ಅದಕ್ಕಾಗಿ ನಾವು ನಮ್ಮ ಮನೋಭಾವನೆ ಮತ್ತು ವರ್ತನೆಗಳಲ್ಲಿ ಹಲವಾರು ಬದಲಾವಣೆಗಳನ್ನು ತೋರುವುದು ಅವಶ್ಯ.

ಇನ್‌ಕ್ಲೂಷನ್ (ಐಕ್ಯಜಿಟ್ಟ) ಎಂದರೇನು?

ಶಿಕ್ಷಣದ ಕ್ಷೇತ್ರದಲ್ಲಿ ಐಕ್ಯಜಿಟ್ಟ ಅಂದರೆ ಎಲ್ಲ ಮಕ್ಕಳಿಗೂ, ಅವರ ಸಾಮರ್ಥ್ಯ, ಹಿನ್ನೆಲೆ, ಅಡಚಣೆ ಏನೇ ಇದ್ದರೂ, ಒಂದೇ ಶಾಲೆಯಲ್ಲಿ ಮತ್ತು ಸಾಧ್ಯವಾದಷ್ಟು ಒಂದೇ ತರಗತಿಯಲ್ಲಿ ಕಲಿಯುವ ಅವಕಾಶ ಒದಗಿಸುವುದು. ಅದೆ ಪ್ರತಿ ಮಗುವಿನ/ವಿದ್ಯಾರ್ಥಿಯ ವೈಯಕ್ತಿಕ ಅಗತ್ಯಗಳಿಗೆ ತಕ್ಕಂತೆ ಹೆಚ್ಚುವರಿ ಬೆಂಬಲ, ಅನುಕೂಲತೆಗಳು ಮತ್ತು ಪ್ರಶಕ್ತ ಪಠ್ಯಕ್ರಮಗಳನ್ನು ರೂಪಿಸುವುದು ಇದರ ಮುಖ್ಯ ಅಂಶ.

ಒಂದು ಸಾಮಾನ್ಯ ಶಾಲೆಯ ಅನುಭವ : ಈಗ ಹಲವು ಶಾಲೆಗಳಲ್ಲಿ ಇಂತಹ ಸಮಾವೇಶಿತ ಶಿಕ್ಷಣದ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಅಂತಹ ಶಾಲೆಯಗಳಲ್ಲಿ ಸಾಮಾನ್ಯ ಮಕ್ಕಳು, ದಿವ್ಯಾಂಗ ಮಕ್ಕಳು ಮತ್ತು ವಿಶೇಷ ಚೇತನ ಮಕ್ಕಳು ಒಂದೇ ತರಗತಿಯಲ್ಲಿ ಒಟ್ಟಿಗೆ ಕುಳಿತು ಕಲಿಯುವ ಅವಕಾಶ ಹೊಂದಿದ್ದಾರೆ, ಜೊತೆಗೆ ವಿಶೇಷ ಅಗತ್ಯವಿರುವ ಮಕ್ಕಳಿಗಾಗಿ ಪ್ರತ್ಯೇಕ ವಿಶೇಷ ತರಗತಿಯಲ್ಲಿ ಅವರ ಸಾಮರ್ಥ್ಯಕ್ಕೆತಕ್ಕ ಪಾಠಗಳನ್ನು ಕಲಿಸಿಕೊಡುವ ವ್ಯವಸ್ಥೆ ಇರುತ್ತದೆ.

ಈ ವಿಶೇಷ ತರಗತಿಗೆ ತರಬೇತಿ ಪಡೆದ ವಿಶೇಷ ಅಧ್ಯಾಪಕರು ಇರುವುದು ಮತ್ತೊಂದು ವಿಶೇಷ. ಮಕ್ಕಳ ಕಲಿಕಾ ವೇಗ, ಗಮನ ಸಾಮರ್ಥ್ಯ, ಭಾಷಾ ಅಭಿವದ್ಧಿ ಇತ್ಯಾದಿಗಳನ್ನು ಗಮನದಲ್ಲಿಟ್ಟು ಪಠ್ಯಕ್ರಮವನ್ನು ರೂಪಿಸಿ, ಹಂತ ಹಂತವಾಗಿ ಕಲಿಸಿಕೊಡುತ್ತಾರೆ. ಅಕ್ಷರ ಪರಿಚಯ, ಶಬ್ದ ಓದು, ಲಿಖಿತ ಅಭ್ಯಾಸ, ಸಂಜ್ಞೆಗಳ ಮೂಲಕ ಕಲಿಕೆ, ಆಟ ಆಧಾರಿತ ಚಟುವಟಿಕೆಗಳು ಇವುಗಳ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸುವ ಯತ್ನ ಸಾಗುತ್ತದೆ. ಹೀಗೆ ಅವರಿಗೆ ಅಗತ್ಯವುಳ್ಳ ಸಹಾಯ ಕೂಡ ಆ ಮಕ್ಕಳಿಗೆ ಮಾಡಲಾಗುತ್ತದೆ.

ಸನ್ನಿಯ ಸಣ್ಣ ಗೆಲುವು: ಒಂದು ಸಮಾವೇಶಿತ ಶಾಲೆಯಲ್ಲಿ ಓದುತ್ತಿದ್ದ 4ನೇ ತರಗತಿಯ ಸನ್ನಿಗೆ (ಹೆಸರು ಬದಲಾಯಿಸಲಾಗಿದೆ) ಕಲಿಕೆಯಲ್ಲಿ ತೊಂದರೆ ಇರುವುದನ್ನು ತಜ್ಞರ ಮೌಲ್ಯಮಾಪನದಿಂದ ದೃಢಪಡಿಸಲಾಗಿತ್ತು. ಅವನ ಅವಳಿ ಸಹೋದರನೇ ಅವನ ಸಹಪಾಠಿ; ಸಹೋದರನು ಶೈಕ್ಷಣಿಕವಾಗಿ ತುಂಬ ಮುಂದಿದ್ದು, ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿ ಎಲ್ಲರ ಮೆಚ್ಚುಗೆ ಪಡೆಯುತ್ತಿದ್ದ.

ಸನ್ನಿಸಾಮಾನ್ಯ ತರಗತಿಯಲ್ಲಿ ಕುಳಿತಿದ್ದರೂ ಪಾಠದ ವೇಗ, ಭಾಷೆ ಮತ್ತು ವಿಧಾನ ಅವನಿಗೆ ಅರ್ಥವಾಗದ ಕಾರಣ ಅವನು ಪಠ್ಯ ಚಟುವಟಿಕೆಗಳಲ್ಲಿ ಸರಿಯಾಗಿ ಭಾಗವಹಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಅವನಿಗಾಗಿ ವಿಶೇಷ ತರಗತಿಯಲ್ಲಿ ಸುಲಭೀಕೃತ ಕಾರ್ಯ ಪತ್ರಿಕೆಗಳು ಮತ್ತು ನಿರಂತರ ಮಾರ್ಗದರ್ಶನದ ಮೂಲಕ ಅಭ್ಯಾಸ ಮಾಡಿಸಲಾಗುತ್ತಿತ್ತು.

ಒಮ್ಮೆ ವಿಶೇಷ ತರಗತಿಯಲ್ಲಿ ನೀಡಲಾದ ಉಕ್ತ ಲೇಖನ ಚಟುವಟಿಕೆಯಲ್ಲಿ ಸನ್ನಿ10/10 ಅಂಕಗಳನ್ನು ಗಳಿಸಿದಾಗ ಅವನು ಅವನ ಮುಖದಲ್ಲಿ ಮುಗಿಲುಮುಟ್ಟಿದ ಸಂತೋಷದೊಂದಿಗೆ, ಇದನ್ನು ನಾನು ನನ್ನ ಸಹೋದರನಿಗೆ ತೋರಿಸಬೇಕು, ಯಾವಾಗಲೂ ಅವನೇ ಹೆಚ್ಚು ಅಂಕ ಪಡೆದು ಎಲ್ಲರ ಮೆಚ್ಚುಗೆ ಪಡೆಯುತ್ತಾನೆ; ಇಂದು ನನ್ನ ಅಂಕಗಳನ್ನು ನೋಡಿ ಅವನಿಗೂ, ಎಲ್ಲರಿಗೂ ಗೊತ್ತಾಗಬೇಕು ಎಂದು ಕುಣಿದು ಕುಪ್ಪಳಿಸಿದನು. ಈ ಒಂದು ಘಟನೆ, ಸರಿಯಾದ ಬೆಂಬಲ ಮತ್ತು ಪಠ್ಯರೂಪಾಂತರ ದೊರಕಿದಾಗ ವಿಶೇಷ ಅಗತ್ಯಗಳಿರುವ ಮಕ್ಕಳು ಎಷ್ಟು ಗೌರವ ಮತ್ತು ಆತ್ಮ ವಿಶ್ವಾಸವನ್ನು ಅನುಭವಿಸುತ್ತಾರೆ ಎಂಬುದಕ್ಕೆ ಜ್ವಲಂತ ಉದಾಹರಣೆ.

ಮತ್ತೊಂದು ಪಾಠ: ಲಕ್ಷ್ಮಿಯ ಕಥೆ: ಇನ್ನೊಂದು ವಿಶೇಷ ಶಾಲೆಯಲ್ಲಿ ಕಲಿಯುತ್ತಿರುವ 18 ವರ್ಷದ ಲಕ್ಷ್ಮಿಯ ಘಟನೆಯೂ ನಮ್ಮನ್ನು ಆಲೋಚನೆಗೆ ಒಳಪಡಿಸುತ್ತದೆ. ಒಮ್ಮೆ ಶಾಲೆಯಲ್ಲಿ ಹಿರಿಯ ಅಧ್ಯಾಪಿಕೆಯ ಸೂಚನೆಗಳನ್ನುಆಕೆ ಗಮನಿಸದೆ, ಅವರ ಮಾತಿನ ವಿರುದ್ಧವಾಗಿ ನಡೆದುಕೊಂಡಳು; ಇದರಿಂದ ಅಧ್ಯಾಪಿಕೆಗೆ ಎಲ್ಲರ ಮುಂದೆ ಸ್ವಲ್ಪ ಅವಮಾನವಾಯಿತು. ಲಕ್ಷ್ಮಿಯನ್ನು ಕರೆದು ಗದರಿಸಿದರು.

ಲಕ್ಷ್ಮಿಗೆ ಆಗುತ್ತಿರುವುದೇನು ಎನ್ನುವುದು ಅಷ್ಟು ಸ್ಪಷ್ಟವಾಗಿರಲಿಲ್ಲ; ಆಕೆ ಮೌನವಾಗಿ ನಿಂತುಕೊಂಡಳು. ಸಂಜೆ ಮನೆಗೆ ಕರೆದುಕೊಂಡು ಹೋಗಲು ಆಕೆಯ ತಾಯಿ ಬಂದಿದ್ದರು. ಆಗ ಅವರಿಗೆ ಅಧ್ಯಾಪಕಿ ಈ ಘಟನೆ ಬಗೆಗೆ ತಿಳಿಸಿದಾಗ, ತಾಯಿ ಶಾಂತವಾಗಿ ಲಕ್ಷ್ಮಿಗೆ ಇತ್ತೀಚೆಗೆ ಅಪಸ್ಮಾರ (ಎಪಿಲೆಪ್ಸಿ) ತೊಂದರೆ ಹೆಚ್ಚಾಗಿದೆ; ಅವಳ ಪ್ರತಿಕ್ರಿಯಾ ಸಮಯದಲ್ಲಿ ವ್ಯತ್ಯಾಸ ಕಾಣಿಸುತ್ತಿದೆ. ಅವಳ ಹೆಸರನ್ನು ದೂರದಿಂದ ಕರೆಯುವುದರಿಂದ ಅವಳಿಗೆ ತತ್ ಕ್ಷಣ ಅದರ ಗ್ರಹಿಕೆಯಾಗುವುದಿಲ್ಲ; ಅವಳ ಕಣ್ಣುಗಳಲ್ಲಿ ಕಣ್ಣಿಟ್ಟು ನಿಧಾನವಾಗಿ ಮಾತನಾಡಿದರೆ ಮಾತ್ರ ಅವಳಿಗೆ ಅರ್ಥವಾಗುತ್ತದೆ ಎಂದು ವಿವರಿಸಿದರು.

ಇದನ್ನು ಕೇಳಿದ ಎಲ್ಲರೂ ನಿಬ್ಬೆರಗಾದರು. ಮಕ್ಕಳ ವರ್ತನೆಯ ಹಿಂದೆ ಇರುವ ವೈದ್ಯಕೀಯ ಅಥವಾ ಮಾನಸಿಕ ಕಾರಣಗಳನ್ನು ತಿಳಿಯದೆ ತೀರ್ಪು ನೀಡುವ ನಮ್ಮ ಪ್ರವೃತ್ತಿಯನ್ನು ನಾವು ನಮ್ಮೊಳಗೆ ವಿಮರ್ಶಿಸಿಕೊಳ್ಳಬೇಕಾಗಿದೆ ಅಲ್ಲವೆ?

ಮನೋಭಾವ ಬದಲಾವಣೆ ಇಂದಿನ ಅಗತ್ಯ: ಸಮಾವೇಶಿತ ಶಿಕ್ಷಣ ಯಶಸ್ವಿಯಾಗಬೇಕಾದರೆ ಕೇವಲ ನೀತಿ ಮತ್ತು ಯೋಜನೆ ಸಾಕಾಗುವುದಿಲ್ಲ; ಸಮಾಜದ ಪ್ರತಿಯೊಬ್ಬ ಸದಸ್ಯನ ಮನೋಭಾವ ಬದಲಾಗಬೇಕು. ವಿಶೇಷ ಚೇತನ ಮಕ್ಕಳು ಛಿಶಿಸ್ತುಛಿ ಪಾಲನೆಯಲ್ಲಿ ತಪ್ಪಿದರೆ ಅದನ್ನು ಕೇವಲ ಅವಿಧೇಯತೆ ಎಂದು ನೋಡದೇ, ಅದರ ವೈದ್ಯಕೀಯ ಮಾನಸಿಕ ಹಿನ್ನೆಲೆಯನ್ನು ಅರಿಯುವ ಪ್ರಯತ್ನ ಮಾಡಬೇಕು.

ಶಿಕ್ಷಕರು, ಪೋಷಕರು ಮತ್ತುಸಹಪಾಠಿಗಳು ಸಂವೇದನಾಶೀಲ ಸಂವಾದ, ಸಹಾನುಭೂತಿ ಮತ್ತುಗೌರವಯುತ ಸಂವಹನವನ್ನುಅಭ್ಯಾಸ ಮಾಡಬೇಕು. ಶಾಲಾ ವ್ಯವಸ್ಥೆ ಪಠ್ಯಕ್ರಮ, ಮೌಲ್ಯಮಾಪನ ಮತ್ತು ವಾತಾವರಣವನ್ನು ಎಲ್ಲರಿಗೂ ಲಭ್ಯವಾಗುವಂತೆ ಹೊಂದಿಸಿಕೊಳ್ಳಬೇಕು. ಹೀಗೆ ಸಮಾವೇಶಿತ ಶಿಕ್ಷಣದ ತತ್ವಗಳನ್ನು ಬದುಕಿನಲ್ಲೇ ಅನುಭವಿಸಿದಾಗ, ವಿಶೇಷ ಚೇತನ ಮಕ್ಕಳೂ ತಮ್ಮ ಸಾಮರ್ಥ್ಯವನ್ನು ತೋರಿಸಲು ಅವಕಾಶ ಪಡೆಯುತ್ತಾರೆ ಮತ್ತು ನಾನೂ ಈ ಸಮಾಜದ ಅವಿಭಾಜ್ಯ ಅಂಗ ಎಂಬ ಭಾವನೆ ಅವರೊಳಗೆ ಗಟ್ಟಿಯಾಗಿ ನೆಲೆಸುತ್ತದೆ.

ಕೊನೆಯಲ್ಲಿ ದಿವ್ಯಾಂಗ ಸಾಧಕರೊಬ್ಬರು ಹೇಳಿದ ಮಾತುಗಳತ್ತ ಗಮನ ಹರಿಸೋಣ. ನಿಮ್ಮೆಲ್ಲರಂತೆ ನಮಗೂ ಹವಾಮಾನ, ರಾಜಕೀಯ, ಕ್ರಿಕೆಟ್ ಇತ್ಯಾದಿಗಳ ಬಗ್ಗೆ ಆಸಕ್ತಿ ಇದೆ. ನಮ್ಮ ಜೊತೆಯಲ್ಲಿ ನೀವು ಸಹಜವಾಗಿ ಇದೇ ವಿಷಯಗಳ ಬಗ್ಗೆ ಮಾತನಾಡಿದರೆ ನಾವೂ ಖುಷಿಪಡುತ್ತೇವೆ. ನಮ್ಮ ಸಾಧನೆಯನ್ನು ಕೊಂಡಾಡುವ ಉತ್ಸಾಹದಲ್ಲಿ, ನಿಮ್ಮ ಸಾಧನೆ, ನಿಮ್ಮ ಧೈರ್ಯ ಲೋಕಕ್ಕೆ ಮಾದರಿ' ಎಂದು ನಮ್ಮನ್ನು ಪ್ರತ್ಯೇಕಿಸಿ ಬೇರೆ ಮಾಡಿದಂತೆ ಹೊಗಳಿ ನಮ್ಮನ್ನುನೋಯಿಸಬೇಡಿ. ಈ ಮಾತು ಎಷ್ಟುಮಾರ್ಮಿಕವಾದ ಸತ್ಯವನ್ನುಒಳಗೊಂಡಿದೆ! ಎಂದು ಎಲ್ಲರೂ ಯೋಚಿಸಬೇಕಲ್ಲವೆ?

ಶ್ರೀಮತಿ ಶುಭಾ ಭಟ್
ಆಪ್ತ ಸಲಹಾ ಕೇಂದ್ರ,
ಉಚಿತ ಸಹಾಯವಾಣಿ: 63620 55380

ಕಿರುಸುದ್ದಿ

ಕಾರು-ಸ್ಕೂಟರ್ ಡಿಕ್ಕಿ: ವ್ಯಕ್ತಿ ದಾರುಣ ಸಾವು

ಕಾಸರಗೋಡು: ಬೇಡಡ್ಕ ಪೊಲೀಸ್ ಠಾಣಾ ವ್ಯಾಪ್ತಿಯ ಪಡ್ಪು ಅಣ್ಣಾನಗರದಲ್ಲಿ ಬುಧವಾರ ಸಂಜೆ ಕಾರು ಮತ್ತು ಸ್ಕೂಟರ್ ಡಿಕ್ಕಿಯಾಗಿ ಸಿಪಿಎಂ ಲೋಕಲ್ ಸಮಿತಿ ಸದಸ್ಯ ಮೃತಪಟ್ಟಿದ್ದಾರೆ. ಪಡ್ಪು ಕುನ್ನೇಲ್ ಹೌಸ್‌ನ ದಿ.ಕುಮಾರನ್ ಮತ್ತು ಪಂಕಜಾಕ್ಷಿ ದಂಪತಿಯ ಪುತ್ರ ಪಿ.ಕೆ.ಪುರುಷೋತ್ತಮನ್ (58) ಮೃತಪಟ್ಟವರು. ಮೃತರು ಪತ್ನಿ ಸಿಂಧು, ಮಕ್ಕಳಾದ ಕೆ.ಪಿ.ನಿಖಿಲ್, ಕೆ.ಪಿ.ನಿಖಿಲಾ ಅವರನ್ನು ಅಗಲಿದ್ದಾರೆ.

ಯುವತಿಗೆ ಲೈಂಗಿಕ ದೌರ್ಜನ್ಯ: ಓರ್ವನ ಸೆರೆ

ಕಾಸರಗೋಡು: ಯುವತಿಗೆ ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿ ಉಸ್ತಾದ್‌ನೋರ್ವನನ್ನು ಪೊಲೀಸರು ಬಂಧಿಸಿದ್ದಾರೆ. ಪಡನ್ನ ಮಡಕ್ಕರ ತುರುತ್ತಿ ಗ್ರಾಮದ ಕೋಟಪ್ಪಳ್ಳಿ ಮಖಾಂನ ಉಸ್ತಾದ್ ವಯನಾಡ್ ಕಂಬಳಕ್ಕಾಡ್ ನಿವಾಸಿ ಚೋಲೇರಿಹೌಸ್‌ನ ಮುಹಮ್ಮದ್ ಕುಟ್ಟಿ (57) ಎಂಬಾತನನ್ನು ಚಂದೇರ ಪೊಲೀಸರು ಬಂಧಿಸಿದ್ದಾರೆ. ಕಳೆದ ಫೆ.15ರಂದು ಈ ಪ್ರಕರಣಕ್ಕೆ ಸಂಬಂಧಿಸಿದ ಘಟನೆ ನಡೆದಿತ್ತು. ದೂರುದಾತೆಯಾದ ಯುವತಿ ಕೋಟಪಳ್ಳಿ ಮಖಾಂಗೆ ತಲುಪಿದ ವೇಳೆ ಉಸ್ತಾದ್ ಲೈಂಗಿಕ ಉದ್ದೇಶದಿಂದ ಯುವತಿಯ ದೇಹ ಸ್ಪರ್ಶಿಸಿ ಕಿರುಕುಳ ನೀಡಲು ಯತ್ನಿಸಿರುವುದಾಗಿ ದೂರಲಾಗಿದೆ. ಈ ಬಗ್ಗೆ ಕೇಸು ದಾಖಲಿಸಿದ ಪೊಲೀಸರು ಆರೋಪಿಯನ್ನು ವಯನಾಡ್ ಕಂಬಳಕ್ಕಾಡ್‌ನಿಂದ ಸೆರೆ ಹಿಡಿದಿದ್ದಾರೆ. ಚಂದೇರ ಎಸ್‌ಐ ಮನೋಜ್, ಎಸ್‌ಸಿಪಿಗಳಾದ ಸಜಿತ್, ಶಾಜು ಎಂಬವರನ್ನೊಳಗೊಂಡ ತಂಡ ಆರೋಪಿಯನ್ನು ಸೆರೆ ಹಿಡಿದಿದೆ. ಬಂಧಿತ ಆರೋಪಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದ್ದು, ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ.

ಕೊಡಗು: ಗುತ್ತಿಗೆದಾರ ಆತ್ಮಹತ್ಯೆಗೆ ಶರಣು

ಮಡಿಕೇರಿ: ರಸ್ತೆಯಲ್ಲಿ ಗುಂಡು ಹೊಡೆದುಕೊಂಡು ಗುತ್ತಿಗೆದಾರರೊಬ್ಬರು ಆತ್ಮಹತ್ಯೆಗೆ ಶರಣಾಗಿರುವ ಘಟನೆ ನಗರದಲ್ಲಿ ನಡೆದಿದೆ. ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಹಿಂಭಾಗದ ರಸ್ತೆಯಲ್ಲಿ ಈ ಘಟನೆ ನಡೆದಿದ್ದು, ಮೃತರನ್ನು ಗುತ್ತಿಗೆದಾರ ಆಮೆಮನೆ ದೇವಿಪ್ರಸಾದ್ (43) ಎಂದು ಗುರುತಿಸಲಾಗಿದೆ. ಒಂಟಿ ನಳಿಕೆ ಕೋವಿಯೊಂದಿಗೆ ಮನೆಯಿಂದ ಹೊರ ಬಂದ ದೇವಿಪ್ರಸಾದ್ ಎದೆಗೆ ಗುಂಡು ಹೊಡೆದುಕೊಂಡು ಆತ್ಮಹತ್ಯೆಗೆ ಶರಣಾಗಿರುವುದಾಗಿ ಹೇಳಲಾಗಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಮೃತರ ಪತ್ನಿ, ಉಪನ್ಯಾಸಕಿ ಕವಿತಾ, ನಗರ ಠಾಣೆ ಅಧಿಕಾರಿ ಅನ್ನಪೂರ್ಣ, ಡಿವೈಎಸ್ ಪಿ ಸೂರಜ್, ಸರ್ಕಲ್ ಇನ್ಸ್‌ಪೆಕ್ಟರ್ ರಾಜು ಭೇಟಿ ಪರಿಶೀಲನೆ ನಡೆಸಿದ್ದಾರೆ.

ಕೊಲೆ ಪ್ರಕರಣ: ಅಪರಾಧಿಗೆ ಜೀವಾವಧಿ ಶಿಕ್ಷೆ

ಮಂಗಳೂರು: ಕೊಲೆ ಪ್ರಕರಣವೊಂದಕ್ಕೆ ಸಂಬಂಧಿಸಿ ತೀರ್ಪು ನೀಡಿರುವ ಮಂಗಳೂರಿನ 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ಆರೋಪಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಮುರುಗನ್ ಶಿಕ್ಷೆಗೊಳಗಾದಾತ. ಬಪ್ಪನಾಡು ಗ್ರಾಮದ ಮೂಲ್ಕಿ ಪೇಟೆ ಬಳಿ 2022ಲ್ಲಿ ನಡೆದ ಕೊಲೆ ನಡೆದಿದ್ದು,ಉಲ್ಲಂಜೆ ನಿವಾಸಿ ಹರೀಶ್ ಸಾಲ್ಯಾನ್ (47) ಕೊಲೆಯಾಗಿದ್ದರು. ಹಣಕಾಸಿನ ವಿಷಯಕ್ಕೆ ಸಂಬಂಧಿಸಿ ಈ ಕೊಲೆ ನಡೆದಿತ್ತು.ಈ ಬಗ್ಗೆ ಮೂಲ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ವಿಚಾರಣೆ ನಡೆಸಿದ 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯವು ಅಪರಾಧಿಗೆ ಜೀವಾವಧಿ ಶಿಕ್ಷೆ ಮತ್ತು 10 ಸಾವಿರ ರು. ದಂಡ ವಿಧಿಸಿ ತೀರ್ಪು ನೀಡಿದೆ. ಪ್ರಕರಣದ ತನಿಖೆ ನಡೆಸಿದ ಇನ್‌ಸ್ಪೆಕ್ಟರ್ ಕುಸುಮಾಧರ್ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ತನಿಖಾ ಸಹಾಯಕರಾಗಿ ಎಎಸ್‌ಐ ಸಂಜೀವ್ ಸಹಕರಿಸಿದ್ದರು. ಸರ್ಕಾರದ ಪರವಾಗಿ ಜ್ಯೋತಿ ಪ್ರಮೋದ್ ನಾಯಕ್ ವಾದ ಮಂಡಿಸಿದ್ದಾರೆ.

ಮರಳು ಅಕ್ರಮ ಸಾಗಾಟ: ಇಬ್ಬರ ವಿರುದ್ಧ ಪ್ರಕರಣ

ಬೆಳ್ತಂಗಡಿ : ಕಡಿರುದ್ಯಾವರ ಗ್ರಾಮದ ಆಲೆಂಜಿಕಟ್ಟೆ ಎಂಬಲ್ಲಿ ನೇತ್ರಾವತಿ ನದಿ ಕಿನಾರೆಯಿಂದ ಮರಳು ಕಳ್ಳತನ ಮಾಡಿ ಸಾಗಾಟ ಮಾಡಲು ಲಾರಿಗೆ ತುಂಬಿಸುತ್ತಿದ್ದ ವೇಳೆ ಬೆಳ್ತಂಗಡಿ ಠಾಣೆಯ ಪೊಲೀಸರು ದಾಳಿ ಮಾಡಿ ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಇಂದಬೆಟ್ಟು ಗ್ರಾಮದ ಬೆದ್ರಬೆಟ್ಟು ಚರ್ಚ್ ಗುಡ್ಡೆ ನಿವಾಸಿ ನಿಜಾಮುದ್ದೀನ್(47) ಮತ್ತು ಬೆಳ್ತಂಗಡಿ ತಾಲೂಕಿನ ಮಿತ್ತಬಾಗಿಲು ಗ್ರಾಮದ ಕಿಲ್ಲೂರು ನಿವಾಸಿ ಹನೀಫ್(44) ಟಿಪ್ಪರ್ ಲಾರಿಯಲ್ಲಿ ಯಾವುದೇ ಸರಕಾರದ ಅನುಮತಿ ಇಲ್ಲದೆ ಅಕ್ರಮವಾಗಿ ಮರಳು ಸಂಗ್ರಹಿಸಿ ಸಾಗಾಟ ಮಾಡಲು ಯತ್ನಿಸುತ್ತಿದ್ದರು. ಸ್ಥಳದಿಂದ 3 ಲಕ್ಷದ 50 ರೂ. ಮೌಲ್ಯದ ಒಂದು ಲಾರಿ, 6,500 ರೂ. ಮೌಲ್ಯದ ಮರಳು,ಮರಳನ್ನು ಲಾರಿಗೆ ತುಂಬಿಸಲು ಉಪಯೋಗಿಸಿದ 150 ರೂ. ಮೌಲ್ಯದ ಫ್ರೈಬರ್ ಬುಟ್ಟಿಗಳು 3, 100 ರೂಪಾಯಿ ಮೌಲ್ಯದ ಹಾರೆ 1, 50 ರೂ. ಮೌಲ್ಯದ ಕಬ್ಬಿಣದ ಬಕೆಟ್ 1,2,500 ರೂ. ಮೌಲ್ಯದ ಕಬ್ಬಿಣದ ಮೆಟ್ಟಿಲುಗಳನ್ನು ವಶಪಡಿಸಿಕೊಂಡಿದ್ದಾರೆ.

ಮೀನುಗಾರಿಕೆ | ಕೃಷಿ | ಉದ್ಯಮ | ಐಟಿ ಪಾರ್ಕ್ | ಭಾಷೆ | ಪ್ರವಾಸೋದ್ಯಮ | ರಸ್ತೆ | ಫ್ಲೈ ಓವರ್

ಬಜೆಟ್ ಸ್ಪೆಷಲಿಸ್ಟ್ ಮೇಲೆ ಭರ್ಜರಿ ನಿರೀಕ್ಷೆ

ಮಂಗಳೂರು: ಇಂದು ರಾಜ್ಯ ಬಜೆಟ್ ಮಂಡನೆಯಾಗಲಿದೆ. ಪ್ರತಿ ಬಾರಿಯಂತೆ ಕರಾವಳಿಗರು ಹಲವು ನಿರೀಕ್ಷೆಯಲ್ಲಿದ್ದಾರೆ. ಇಲ್ಲಿನ ಐಟಿ ಪಾರ್ಕ್‌ಗೆ ಹೆಚ್ಚಿನ ಅನುದಾನ ಸಿಗಬಹುದೇ? ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರವಾಸೋದ್ಯಮ ಅಭಿವೃದ್ಧಿಗೆ ಏನೆಲ್ಲಾ ಕೊಡುಗೆ ನೀಡಲಿದ್ದಾರೆ? ಮೀನುಗಾರರ ಬೇಡಿಕೆಗಳು ಈಡೇರಿಯಾವೆ? ಅಡಿಕೆ ಹಳದಿ ರೋಗದಿಂದ ಕೃಷಿಕರು ಕಂಗಾಲಾಗಿದ್ದು, ವಿಶೇಷ ಪ್ಯಾಕೇಜ್ ನೀಡುವ ಮೂಲಕ ಬಜೆಟ್ ಸ್ಪೆಷಲಿಸ್ಟ್ ಸಿಎಂ ರೈತರಲ್ಲಿ ಹರ್ಷ ಮೂಡಿಸಿಯಾರೆ? ಎಂಬಿತ್ಯಾದಿ ನಿರೀಕ್ಷೆಯಲ್ಲಿ ಕರಾವಳಿಗರಿದ್ದಾರೆ.

ಪ್ರಾಧಿಕಾರದ ನಿರೀಕ್ಷೆಯಲ್ಲಿ....

ಕರಾವಳಿ ಪ್ರವಾಸೋದ್ಯಮ ಪ್ರಾಧಿಕಾರ ರಚನೆಯಾಗಬೇಕೆಂಬುದು ಈ ಭಾಗದ ಬಹುಮುಖ್ಯ ಬೇಡಿಕೆಯಾಗಿದೆ. ಇದರಿಂದಾಗಿ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡ ಕರಾವಳಿ ಕರ್ನಾಟಕದ 320 ಕಿ.ಮೀ ಉದ್ದದ ಕಡಲ ತೀರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಸಾಧ್ಯವಾಗಲಿದೆ.





ಈ ಬಾರಿಯ ರಾಜ್ಯ ಬಜೆಟ್ ನಲ್ಲಿ ಕರಾವಳಿ ಮತ್ತು ಈ ಭಾಗದ ಸುತ್ತಮುತ್ತಲಿನ ಜಿಲ್ಲೆಯನ್ನು ಗುರಿಯಾಗಿಸಿಕೊಂಡು ಹೈಕೋರ್ಟ್ ಪೀಠ ಸ್ಥಾಪನೆಯ ಬಗ್ಗೆ ಘೋಷಣೆ ಮಾಡಿ ಅನುದಾನ ಮೀಸಲಿರಿಸಬೇಕು. ಆ ಮೂಲಕ ಕರಾವಳಿ ಹಾಗೂ ಸುತ್ತಲಿನ ಜಿಲ್ಲೆಗಳ ಜನತೆಗೆ ನ್ಯಾಯಾಂಗ ವ್ಯವಸ್ಥೆಯು ಇನ್ನಷ್ಟು ಹತ್ತಿರವಾಗಲು ಬಜೆಟ್ ಪೂರಕವಾಗಬೇಕು. ಕರಾವಳಿಯು ಅತ್ಯದ್ಭುತ ವಿಸ್ಮಯಗಳ ಸ್ಥಾನವಾಗಿದ್ದು ಇಲ್ಲಿನ ಪ್ರವಾಸಿ ಸ್ಥಾನಗಳ ಅಭಿವೃದ್ಧಿ ಹಾಗೂ ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿ ಕುರಿತಾಗಿ ಬಜೆಟ್ ನಲ್ಲಿ ಘೋಷಣೆ ಮಾಡಬೇಕು. ಪ್ರವಾಸೋದ್ಯಮ ಅಭಿವೃದ್ಧಿ ಗೆ ಪೂರಕ ಯೋಜನೆ ರೂಪುಗೊಳಿಸಬೇಕು. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬಜೆಟ್ ಮಂಡಿಸಿದರೆ ಕರಾವಳಿಯ ಜನರಿಗೆ ಈ ಬಾರಿಯ ಬಜೆಟ್ ವರವಾಗಿ ಪರಿಣಮಿಸಲಿದೆ.

■ ಪೃಥ್ವೀಶ್ ಧರ್ಮಸ್ಥಳ, ವಕೀಲರು

ಕೊಡಗಿಗೂ ಒಂದಷ್ಟು ಕೊಡುಗೆ ಸಿಗಲಿ: ಬಿಜೆಪಿ ಒತ್ತಾಯ

ಮಡಿಕೇರಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಲಿರುವ 2026-27ನೇ ಸಾಲಿನ ಬಜೆಟ್ ಕೊಡಗಿನ ಸಮಗ್ರ ಅಭಿವೃದ್ಧಿಗೆ ಪೂರಕವಾಗಿರಬೇಕು ಮತ್ತು ವಿಶೇಷ ಅನುದಾನ ಬಿಡುಗಡೆ ಮಾಡಬೇಕೆಂದು ಕೊಡಗು ಜಿಲ್ಲಾ ಬಿಜೆಪಿ ಒತ್ತಾಯಿಸಿದೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ ಅವರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಎರಡು ಕ್ಷೇತ್ರಗಳಿಂದ ಕಾಂಗ್ರೆಸ್ ಶಾಸಕರು ಆಯ್ಕೆಯಾಗಿದ್ದರೂ ಮುಖ್ಯಮಂತ್ರಿಗಳು ಹಿಂದಿನ ಬಜೆಟ್‌ಗಳಲ್ಲಿ ಕೊಡಗಿಗೆ ಹೇಳಿಕೊಳ್ಳುವಂತಹ ಯಾವುದೇ ಯೋಜನೆ ಅಥವಾ ವಿಶೇಷ ಅನುದಾನವನ್ನು ನೀಡಿರಲಿಲ್ಲ. ಈ ಬಾರಿಯಾದರೂ ಇಬ್ಬರು ಶಾಸಕರು ಮುಖ್ಯಮಂತ್ರಿಗಳ ಮೇಲೆ ಒತ್ತಡ ಹೇರಿ ಕೊಡಗಿಗೆ ಅಗತ್ಯವಿರುವ ಯೋಜನೆಗಳನ್ನು ಮಂಡಿಸುವಂತೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಾದರೂ ಮುಖ್ಯಮಂತ್ರಿಗಳು ಕೊಡಗಿನ ಸಂಪೂರ್ಣ ಚಿತ್ರಣವನ್ನು ಅವಲೋಕಿಸಿ ಅಭಿವೃದ್ಧಿಪರ ಬಜೆಟ್ ಮಂಡಿಸಲಿ ಮತ್ತು ಇಬ್ಬರು ಶಾಸಕರು ಸರಕಾರದ ಮೇಲೆ ಒತ್ತಡ ಹೇರಲಿ ಎಂದು ಮಹೇಶ್ ಜೈನಿ ಒತ್ತಾಯಿಸಿದ್ದಾರೆ.

ಮೀನುಗಾರಿಕೆಗೆ ವಾಣಿಜ್ಯ ಸ್ವರೂಪ:

ಕರಾವಳಿಯ ಮೀನುಗಾರಿಕೆಯಲ್ಲಿ ಸಮಗ್ರ ಬದಲಾವಣೆ ಬರಬೇಕಾಗಿದೆ. ಇಲ್ಲಿನ ಮೀನುಗಾರರು ಹಿಡಿದು ತರುವ ಮೀನು, ಹೊರ ಪ್ರದೇಶಗಳಲ್ಲಿ ಮೌಲ್ಯವರ್ಧನೆಯಾಗಿ ಮಾರಾಟವಾಗುತ್ತದೆ. ಇದರ ಲಾಭ ಸ್ಥಳೀಯರಿಗೆ ದೊರೆಯಲು ಮೀನುಗಾರಿಕೆಗೆ ವಾಣಿಜ್ಯ ಸ್ವರೂಪ ನೀಡಬೇಕಾಗಿದೆ ಎಂಬ ಅಭಿಪ್ರಾಯಗಳು ಕೇಳಿಬರುತ್ತಿವೆ.

ನಿರೀಕ್ಷೆಗಳು ಹಲವು:

ಮೀನುಗಾರಿಕಾ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುವ ಅಂಗವಾಗಿ ನಾಲ್ಕನೇ ಹಂತದ ವಿಶಾಲ ಧಕ್ಕೆ ನಿರ್ಮಾಣ ಆಗಬೇಕಿದೆ. ಕರಾವಳಿಯ ಉಳ್ಳಾಲ ಕಡಲತೀರ, ಸುರತ್ಕಲ್ ಮುಂತಾದ ಕಡಲ್ಕೊರೆತ ಉಂಟಾಗುವ ಜಾಗಗಳಿಗೆ ಶಾಶ್ವತ ಪರಿಹಾರದ ನಿಟ್ಟಿನಲ್ಲಿ ಪ್ಯಾಕೇಜ್ ವೊಂದನ್ನು ಘೋಷಿಸಬೇಕಾಗಿದೆ. ಅಲ್ಲದೆ ಜಲ ಪ್ರವಾಸೋದ್ಯಮಕ್ಕೆ ಒತ್ತು ನೀಡಬೇಕಾಗಿದೆ.

ಮುಖ್ಯವಾಗಿ ಐಟಿ-ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಸ್ಥಳೀಯವಾಗಿ ಕೆಲವು ಐಟಿ ಉದ್ಯಮಿಗಳು ಸೇರಿಕೊಂಡು ಸಿಲಿಕಾನ್ ಬೀಚ್ ಅಭಿಯಾನವನ್ನು ಆರಂಭಿಸಿದ್ದಾರೆ. ಇದಕ್ಕೆ ಬೆಂಬಲವಾಗಿ ಸರ್ಕಾರವೂ ಕಿಯೋನಿಕ್ಸ್ ಮೂಲಕ ಐಟಿ ಟೆಕ್ನಾಲಜಿ ಪಾರ್ಕ್ ಘೋಷಣೆ ಮಾಡಿದೆ. ಮಂಗಳೂರಿಗೆ ಡಾಟಾ ಸೆಂಟರ್ ಹಾಗೂ ಕೇಬಲ್ ಲ್ಯಾಂಡಿಂಗ್ ಸ್ಟೇಷನ್ ಕೂಡಾ ಬರುವ ಬಗ್ಗೆ ಪ್ರಯತ್ನ ಮಾಡಲಾಗುತ್ತಿದ್ದು, ಇದಕ್ಕಾಗಿ ಮೂಲಸೌಕರ್ಯ ಉತ್ತೇಜಿಸುವ ಅಗತ್ಯ ಇದೆ.

ಮಂಗಳೂರು ಕೇಂದ್ರಿತವಾಗಿ ತೀವ್ರ ಒತ್ತಡ ಇರುವಂತಹ ಜಂಕ್ಷನ್ ಸುಧಾರಣೆ, ಅಗತ್ಯ ಇರುವಲ್ಲಿಗೆ ಫ್ಲೈ ಓವರ್ ನಿರ್ಮಾಣ, ಕೆಲವು ಮುಖ್ಯ ರಸ್ತೆಗಳ ಅಗಲೀಕರಣದ ಅಗತ್ಯವಿದ್ದು, ಇದಕ್ಕೆಲ್ಲ ಪೂರಕವಾಗಿ ಮಂಗಳೂರು ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ಘೋಷಣೆಯ ಬೇಡಿಕೆ ಇದೆ.

ಉಡುಪಿಯಲ್ಲೂ ಇದೆ ಬೆಟ್ಟದಷ್ಟು ನಿರೀಕ್ಷೆ

ಉಡುಪಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಚ್ 6ರಂದು ಮಂಡಿಸಲಿರುವ 2026-27ನೇ ಸಾಲಿನ ರಾಜ್ಯ ಬಜೆಟ್ ಮೇಲೆ ಜಿಲ್ಲೆಯ ಜನರು ಬೆಟ್ಟದಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ.

ಕರಾವಳಿಯ ಆರ್ಥಿಕತೆಯ ಬೆನ್ನೆಲುಬಾಗಿರುವ ಮೀನುಗಾರಿಕೆ, ಪ್ರವಾಸೋದ್ಯಮ ಮತ್ತು ಮೂಲಸೌಕರ್ಯ ಕ್ಷೇತ್ರಗಳಿಗೆ ಈ ಬಾರಿ ಬಜೆಟ್‌ನಲ್ಲಿ ಎಂತಹ ಕೊಡುಗೆ ಸಿಗಲಿದೆ ಎಂಬ ಕುತೂಹಲ ಮನೆಮಾಡಿದೆ.

ಜಿಲ್ಲೆಯ ಸಾವಿರಾರು ಯಾಂತ್ರೀಕೃತ ದೋಣಿಗಳಿಗೆ ಡೀಸೆಲ್ ಅತಿ ಅವಶ್ಯಕವಾಗಿದ್ದು, ಪ್ರಸ್ತುತ ನೀಡಲಾಗುತ್ತಿರುವ ತೆರಿಗೆ ರಹಿತ ಡೀಸೆಲ್ ಮಿತಿಯನ್ನು ಕನಿಷ್ಠ 2 ಲಕ್ಷ ಲೀಟರ್ ಗೆ ಹೆಚ್ಚಿಸಬೇಕು ಎಂಬುದು ಮೀನುಗಾರರ ಪ್ರಧಾನ ಬೇಡಿಕೆಯಾಗಿದೆ. ಸಬ್ಸಿಡಿ ಹಣ ನೇರವಾಗಿ ಮೀನುಗಾರರ ಖಾತೆಗೆ ವಿಳಂಬವಿಲ್ಲದೆ ಜಮೆಯಾಗಬೇಕು. ಮಲ್ಪೆ ಹಾಗೂ ಗಂಗೊಳ್ಳಿ ಬಂದರುಗಳಲ್ಲಿ ಪ್ರತಿವರ್ಷ ಎದುರಾಗುವ ಹೂಳಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಆಧುನಿಕ ಡ್ರೆಜ್ಜಿಂಗ್ ಯಂತ್ರೋಪಕರಣಗಳ ಖರೀದಿಗೆ ವಿಶೇಷ ಅನುದಾನದ ಅವಶ್ಯಕತೆಯಿದೆ. ಬಂದರುಗಳ ವಿಸ್ತರಣೆ ಹಾಗೂ ಮೀನುಗಾರ ಮಹಿಳೆಯರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಗಳು ಅವಶ್ಯಕವಾಗಿದೆ.

ಐಟಿ-ಬಿಟಿ ಮತ್ತು ಉದ್ಯೋಗ ಸೃಷ್ಟಿ:

ಜಿಲ್ಲೆಯ ಸಾವಿರಾರು ಪ್ರತಿಭಾವಂತ ಪದವೀಧರರು ಉದ್ಯೋಗಕ್ಕಾಗಿ ಬೆಂಗಳೂರು ಅಥವಾ ವಿದೇಶಗಳಿಗೆ ವಲಸೆ ಹೋಗುವುದನ್ನು ತಪ್ಪಿಸಲು ಸ್ಥಳೀಯವಾಗಿ 'ಐಟಿ ಮತ್ತು ಬಿಟಿ ಹಬ್' ಸ್ಥಾಪನೆಯಾಗಬೇಕಿದೆ. ಸ್ಟಾರ್ಟಪ್ ಗಳಿಗೆ ಉತ್ತೇಜನ ನೀಡಲು ಸುಸಜ್ಜಿತ ಟೆಕ್ ಪಾರ್ಕ್ ನಿರ್ಮಾಣ ಹಾಗೂ ಕಾರ್ಕಳ, ಕುಂದಾಪುರ ಭಾಗದಲ್ಲಿ ಪರಿಸರಸ್ನೇಹಿ ಕೈಗಾರಿಕಾ ಕ್ಲಸ್ಟರ್‌ಗಳ ಸ್ಥಾಪನೆಗೆ ಬಜೆಟ್‌ನಲ್ಲಿ ಆದ್ಯತೆ ನೀಡಬೇಕಿದೆ.



ಪ್ರವಾಸೋದ್ಯಮ, ಕೃಷಿ ಮತ್ತು ಆರೋಗ್ಯ

ಬೈಂದೂರಿನ ಏರ್‌ಸ್ಟ್ರಿಪ್ ಯೋಜನೆಗೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಗೆ ವೇಗ ನೀಡುವುದು ಹಾಗೂ ಜಿಲ್ಲೆಯ ಕಡಲತೀರಗಳನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಏರಿಸಲು ವಿಶೇಷ ಪ್ರವಾಸೋದ್ಯಮ ಪ್ಯಾಕೇಜ್ ಘೋಷಿಸಬೇಕಿದೆ. ಆರೋಗ್ಯ ಕ್ಷೇತ್ರದಲ್ಲಿ ದಶಕಗಳ ಬೇಡಿಕೆಯಾದ ಪೂರ್ಣ ಪ್ರಮಾಣದ ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ಸೂಪರ್ ಸ್ಪೆಷಾಲಿಟಿ ಸೌಲಭ್ಯಗಳ ಹೆಚ್ಚಳಕ್ಕೆ ಜನರು ಆಗ್ರಹಿಸಿದ್ದಾರೆ. ಇದರೊಂದಿಗೆ ವಾರಾಹಿ ನೀರಾವರಿ ಯೋಜನೆಯ ಅಚ್ಚುಕಟ್ಟು ಪ್ರದೇಶದ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಕೃಷಿಕರ ಜಮೀನುಗಳಿಗೆ ಕೊನೆಯ ಹಂತದವರೆಗೆ ನೀರು ಒದಗಿಸಲು ಈ ಬಜೆಟ್‌ನಲ್ಲಿ ವಿಶೇಷ ಹಣಕಾಸು ನೆರವು ಸಿಗಲಿ ಎಂಬುದು ಉಡುಪಿಯ ಜನರ ಒಕ್ಕೊರಲ ಆಶಯವಾಗಿದೆ.



ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಅತ್ಯಧಿಕ ಜನರು ಮಾತನಾಡುವ ತುಳು ಭಾಷೆಯನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯನ್ನಾಗಿ ಘೋಷಣೆ ಮಾಡಿ ಈ ಬಾರಿಯ ರಾಜ್ಯ ಬಜೆಟ್‌ನಲ್ಲಿ ತುಳು ಭಾಷೆಯ ಅಭಿವೃದ್ಧಿಗೆ ಅನುದಾನ ನೀಡಬೇಕು. ದ.ಕ ಜಿಲ್ಲೆಯಲ್ಲಿ ಅಡಿಕೆಗೆ ಎಲೆ ಹಳದಿ ರೋಗ, ಭಾರಿ ಮಳೆಯಿಂದ ಕೊಳೆ ರೋಗ ಉಂಟಾಗಿ ಸಂಕಷ್ಟದಲ್ಲಿರುವ ಅಡಿಕೆ ಕೃಷಿಕರ ನೆರವಿಗೆ ಪ್ಯಾಕೇಜ್ ಘೋಷಿಸಬೇಕು. ಕರಾವಳಿ ಪ್ರವಾಸೋದ್ಯಮ ಹಬ್ ಅಭಿವೃದ್ಧಿ, ಐ ಟಿ ಪಾರ್ಕ್ ಸ್ಥಾಪನೆ ಬಜೆಟ್‌ನ ಆದ್ಯತೆ ಆಗಬೇಕು.

■ ಹರೀಶ್ ಅಮ್ಮೆ, ಅಧ್ಯಕ್ಷರು, ಕರ್ನಾಟಕ ರಾಜ್ಯ ನಗರ ಮತ್ತು ಗ್ರಾಮಾಭ್ಯುದಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ ದ.ಕ

ಅರಣ್ಯಾಧಿಕಾರಿ ಮನೆಗೆ ಕನ್ನ: ನಗದು, ಚಿನ್ನಾಭರಣ ಲೂಟಿ


ಉಳ್ಳಾಲ: ಅರಣ್ಯಾಧಿಕಾರಿಯೋರ್ವರು ನೆಲೆಸಿದ್ದ ಬಾಡಿಗೆ ಮನೆಗೆ ಕನ್ನ ಹಾಕಿದ ಕಳ್ಳರು ಅಂಗಳದಲ್ಲಿ ನಿಲ್ಲಿಸಿದ್ದ ಬೈಕ್ ಸೇರಿದಂತೆ ಹತ್ತೂವರೆ ಲಕ್ಷ ರೂ. ನಗದು ಮತ್ತು ಸುಮಾರು ಹದಿನೆಂಟು ಲಕ್ಷ ರೂ.ಬೆಲೆಬಾಳುವ 128.5 ಗ್ರಾಂ ಚಿನ್ನವನ್ನು ದೋಚಿದ ಘಟನೆ ಉಳ್ಳಾಲ ಠಾಣಾ ವ್ಯಾಪ್ತಿಯ ಅಂಬಿಕಾರೋಡ್ ಕಾಪಿಕಾಡು ಎಂಬಲ್ಲಿ ನಡೆದಿದೆ.

ಕೋಟೆಕಾರು ಉಪವಲಯ ಅರಣ್ಯಾಧಿಕಾರಿ ಮೆಹಬೂಬ್ ಸಾಬ್ ಗುಡಿಹೊಲ (35) ಅವರು ವಾಸವಿದ್ದ ಅಂಬಿಕಾರೋಡ್ ಕಾಪಿಕಾಡುವಿನ ಬಾಡಿಗೆ ಮನೆಯಲ್ಲಿ ಕಳ್ಳತನ ನಡೆದಿರುವ ಘಟನೆ ಗುರುವಾರ ಬೆಳಗ್ಗೆ ಬೆಳಕಿಗೆ ಬಂದಿದೆ.

ಅರಣ್ಯಾಧಿಕಾರಿ ಮೆಹಬೂಬ್ ಸಾಬ್ ಅವರುತನ್ನಪತ್ನಿಫರ್ಝಾನಮೆಹಬೂಬ್ ಮತ್ತು ಪುಟ್ಟ ಮಗುವಿನೊಂದಿಗೆ ಕಾಪಿಕಾಡುವಿನ ಬಾಡಿಗೆ ಮನೆಯಲ್ಲಿ ಕಳೆದ ಆರು ತಿಂಗಳುಗಳಿಂದ ವಾಸವಿದ್ದರು. ಕಳೆದ ಶುಕ್ರವಾರ ಮಧ್ಯಾಹ್ನದಂದು ಮೆಹಬೂಬ್ ಅವರು ಕುಟುಂಬದೊಂದಿಗೆ ತನ್ನ ಊರು ಕೊಪ್ಪಳಕ್ಕೆ ತೆರಳಿದ್ದರು. ಗುರುವಾರ ಬೆಳಿಗ್ಗೆ ಒಂಭತ್ತು ಗಂಟೆ ವೇಳೆಗೆ ಮೆಹಬೂಬ್ ಅವರು ತನ್ನ ಕುಟುಂಬ ಸಮೇತ ಕಾಪಿಕಾಡುವಿನ ಮನೆಗೆ ಮರಳಿದಾಗ ಕಳ್ಳತನ ಪ್ರಕರಣ ಬೆಳಕಿಗೆ ಬಂದಿದೆ.

ಮನೆಯ ಮುಖ್ಯ ಬಾಗಿಲಿನ ಚಿಲಕ ಮುರಿದು ಒಳ ನುಗ್ಗಿದ ಕಳ್ಳರು ಹಾಲ್ ಮತ್ತು ಎರಡು ಕೋಣೆಯೊಳಗಿನ ಕಬಾಟುಗಳನ್ನ ಜಾಲಾಡಿದ್ದು, ಲಾಕರ್ ಗಳಲ್ಲಿದ್ದ ಪತ್ನಿ ಮತ್ತು ಮಗುವಿನ ಚಿನ್ನದ ಆಭರಣಗಳು ಹಾಗೂ ಮೆಹಬೂಬ್ ಅವರು ಬ್ಯಾಂಕಿಂದ ಸಾಲ ಪಡೆದಿದ್ದ ಹತ್ತೂವರೆ ಲಕ್ಷ ರೂ. ನಗದನ್ನ ದೋಚಿದ್ದಾರೆ.ಕಬಾಟಿನ ಒಂದು ಲಾಕರಲ್ಲಿ ಬೆಲೆಬಾಳುವ ಬೆಳ್ಳಿ ಆಭರಣಗಳಿದ್ದರೂ ಸಹ ಕಳ್ಳರು ಅದನ್ನು ಬಿಟ್ಟು ಹೋಗಿದ್ದಾರೆ.

ಘಟನಾ ಸ್ಥಳಕ್ಕೆ ಉಳ್ಳಾಲ ಪೊಲೀಸರು, ಶ್ವಾನದಳ, ಬೆರಳಚ್ಚು ತಜರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ತನಿಖೆ ಕೈಗೆತ್ತಿಕೊಂಡಿದ್ದಾರೆ.





ಶ್ರೀಮಂತರಿರುವ ಪ್ರದೇಶ, ಸಿಸಿ ಕ್ಯಾಮರಗಳೇ ಇಲ್ಲ

ಕಾಪಿಕಾಡು ಪ್ರದೇಶದಲ್ಲಿ ಸಾಕಷ್ಟು ಮನೆಗಳಿದ್ದರೂ ಸಹ ಒಬ್ಬರು ಮತ್ತೊಬ್ಬರ ಉಸಾಬರಿಗೆ ಹೋಗದ ಕಾರಣ ಕಳ್ಳತನ ಯಾವಾಗ, ಹೇಗಾಯಿತೆಂಬುದು ಯಾರ ಗಮನಕ್ಕೂ ಬಂದಿಲ್ಲ.ಪ್ರದೇಶದ ಆಗು ಹೋಗುಗಳ ಬಗ್ಗೆ ನಿಖರವಾಗಿ ತಿಳಿದಿರುವವರೇ ಒಂಟಿ ಮನೆಯನ್ನ ಗುರುತಿಸಿ ಕಳ್ಳತನ ನಡೆಸಿರುವ ಬಗ್ಗೆ ಶಂಕಿಸಲಾಗಿದೆ.ಬಹುತೇಕ ಶ್ರೀಮಂತರೇ ನೆಲೆಸಿರುವ ಈ ಪ್ರದೇಶದಲ್ಲಿ ಕಳ್ಳತನ ನಡೆದ ಮನೆ ಹಾಗೂ ನೆರೆಮನೆಗಳಲ್ಲಿ ಸಿಸಿಟಿವಿಗಳೇ ಇಲ್ಲದ ಪರಿಣಾಮ ಪೊಲೀಸರಿಗೂ ಈ ಪ್ರಕರಣದ ತನಿಖೆ ಸವಾಲಾಗಿ ಪರಿಣಮಿಸಿದೆ. ಕೆಲ ವರುಷಗಳ ಹಿಂದೆ ಅರಣ್ಯಾಧಿಕಾರಿ ನೆಲೆಸಿರುವ ಪಕ್ಕದ ಮನೆಯಲ್ಲೂ ಮನೆಕಳ್ಳತನ ನಡೆದಿತ್ತು.ಅಂದು ಕೂಡ ರಾತ್ರಿ ಮನೆಮಂದಿ ಇಲ್ಲದ ವೇಳೆ ಮನೆಯೊಳಗೆ ನುಗ್ಗಿದ ಕಳ್ಳರು ಕಳ್ಳತನ ನಡೆಸಿದ್ದಲ್ಲದೆ, ಅಡುಗೆ ಕೋಣೆಯಲ್ಲಿದ್ದ ಮೀನಿನ ಪದಾರ್ಥದಲ್ಲಿ ಊಟವನ್ನೂ ಉಂಡು ಹೋಗಿದ್ದರು.

ಮಳಲಗಾವ್ ಕ್ರಾಸ್ ಬಳಿ ಅಪಘಾತ: ಮಂಗಳೂರಿನ ಐಟಿ ಉದ್ಯಮಿ ಸಾವು

ಮಂಗಳೂರು: ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲೂಕು ಬೇಡ್ತಿ ಸಮೀಪ ಮಳಲಗಾವ್ ಕ್ರಾಸ್ ಬಳಿ ಗುರುವಾರ ಸಂಭವಿಸಿದ ಕೆಎಸ್ಸಾರ್ಟಿಸಿ ಬಸ್ ಹಾಗೂ ಕಾರಿನ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಮಂಗಳೂರಿನ ಐಟಿ ಉದ್ಯಮಿಯೋರ್ವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಮೂಲತಃ ಕುಂದಾಪುರ ಮೂಲದ ನಿವಾಸಿ, ಮಂಗಳೂರಿನಲ್ಲಿ ಮ್ಯಾಕ್ಸ್ ಇನ್ಫೋಟೆಕ್ ಹಾಗೂ ಇನ್ನಿತರ ಸಂಸ್ಥೆಯನ್ನು ನಡೆಸುತ್ತಿದ್ದ ಮುಕೇಶ್ ಶೆಟ್ಟಿ ಸಾವನ್ನಪ್ಪಿದವರು.

ಗುರುವಾರ ಶಿರಸಿ ಕಡೆ ಅವರು ಕೆಲಸದ ನಿಮಿತ್ತ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಸಿದ್ದಾಪುರದಿಂದ ಬೆಳಗಾವಿಯತ್ತ ಮದುವೆ ಸಮಾರಂಭಕ್ಕೆ ಪ್ರಯಾಣಿಕರನ್ನು ಕರೆದುಕೊಂಡು ಹೋಗುತ್ತಿದ್ದ ಒಪ್ಪಂದದ ಮೇರೆಯ ಕೆಎಸ್ಸಾರ್ಟಿಸಿ ಬಸ್ ನಡುವೆ ಕಾರು ಮುಖಾಮುಖಿ ಡಿಕ್ಕಿಯಾಗಿ ಘಟನೆ ಸಂಭವಿಸಿದೆ.

ಅಪಘಾತದ ತೀವ್ರತೆಗೆ ಕಾರಿನ ಮುಂಭಾಗ ನಜ್ಜು ಗುಜ್ಜಾಗಿದ್ದು, ಕಾರು ಚಲಾಯಿಸುತ್ತಿದ್ದ ಮುಕೇಶ್ ಶೆಟ್ಟಿ ಅದರಲ್ಲಿ ಸಿಲುಕಿ ಕೊಂಡಿದ್ದರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಯತ್ನ ನಡೆಸಲಾಯಿತಾದರೂ ಆದರೆ ಆ ವೇಳೆಗಾಗಲೇ ಅವರು ಸಾವನ್ನಪ್ಪಿದ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ.

ತಾಲೂಕು ಆಸ್ಪತ್ರೆಗೆ ರವಾನೆ

ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೃತದೇಹವನ್ನು ತಾಲೂಕು ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಿ ಕುಂದಾಪುರದಿಂದ ಆಗಮಿಸಿದ್ದ ಅವರ ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ.



ಪ್ರಯಾಣಿಕರಿಗೆ ಬದಲಿ ವ್ಯವಸ್ಥೆ

ಘಟನೆಯಲ್ಲಿ ಬಸ್‌ನಲ್ಲಿದ್ದ ಕೆಲವು ಪ್ರಯಾಣಿಕರಿಗೆ ಗಾಯಗಳಾಗಿದ್ದು, ಅವರಿಗೆ ಪ್ರಥಮ ಚಿಕಿತ್ಸೆ ನೀಡಲಾಯಿತು. ಅಪಘಾತದ ಸುದ್ದಿ ತಿಳಿಯುತ್ತಿದ್ದಂತೆಯೇ ಕೆಎಸ್ಸಾರ್ಟಿಸಿಯ ಶಿರಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಮದುವೆಗೆ ಹೊರಟಿದ್ದ ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ಬದಲಿ ಬಸ್ ವ್ಯವಸ್ಥೆ ಕಲ್ಪಿಸಿದ್ದರು.

ಹೊಸ ದಿಗಂತ ಬಳಗ ಸಂತಾಪ

ಕಳೆದ ಹಲವು ವರ್ಷಗಳಿಂದ 'ಹೊಸ ದಿಗಂತ' ಪತ್ರಿಕೆ ಜೊತೆ ಉತ್ತಮ ಒಡನಾಟ ಹೊಂದಿದ್ದ ಉದ್ಯಮಿ ಮುಕೇಶ್ ಶೆಟ್ಟಿ ಅವರ ಅಕಾಲಿಕ ನಿಧನಕ್ಕೆ ಪತ್ರಿಕೆಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ವಾಹನ ಸಂಚಾರ ವ್ಯತ್ಯಯ

ಅಪಘಾತದ ಹಿನ್ನೆಲೆಯಲ್ಲಿ ಕೆಲಕಾಲ ವಾಹನ ಸಂಚಾರಕ್ಕೆ ಅಡ್ಡಿಯುಂಟಾಯಿತು. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಸ್ಥಳೀಯರ ನೆರವಿನಿಂದ ಸಂಚಾರ ಸುಗಮಗೊಳಿಸಿದರು.

ಮಂಜೂರಾದ 1,503 ಹುದ್ದೆಗಳ ಪೈಕಿ ಬರೋಬ್ಬರಿ 885 ಹುದ್ದೆಗಳು ಖಾಲಿ | ಇಡೀ ಜಿಲ್ಲೆಯ ಆರೋಗ್ಯ ಭಾರ ಹೊರುತ್ತಿದ್ದಾರೆ ಈಗಿರುವ 919 ಮಂದಿ

ಸಿಬ್ಬಂದಿಗಳ ಕೊರತೆಯಿಂದ ಸೊರಗುತ್ತಿದೆ ಉಡುಪಿಯ ಆರೋಗ್ಯ ವ್ಯವಸ್ಥೆ

▸ ಸುದೀಪ್ ರಾಜ್ ಸುಳ್ಯ

ಉಡುಪಿ: ಜಿಲ್ಲೆಯ ಸರ್ಕಾರಿ ಆರೋಗ್ಯ ವ್ಯವಸ್ಥೆ ಸಿಬ್ಬಂದಿಗಳ ತೀವ್ರ ಕೊರತೆಯಿಂದ ಸೊರಗುತ್ತಿದ್ದು, ರೋಗಿಗಳ ಆರೈಕೆಗಿಂತ ಸವಾಲುಗಳೇ ಹೆಚ್ಚಾಗಿವೆ!

ಜಿಲ್ಲಾ ಆರೋಗ್ಯ ಇಲಾಖೆಯ ಇತ್ತೀಚಿನ ಅಧಿಕೃತ ಅಂಕಿ-ಅಂಶಗಳ ಪ್ರಕಾರ, ಜಿಲ್ಲೆಯಲ್ಲಿ ಮಂಜೂರಾದ ಒಟ್ಟು 1,503 ಹುದ್ದೆಗಳ ಪೈಕಿ ಬರೋಬ್ಬರಿ 885 (ಶೇ. 58) ಹುದ್ದೆಗಳು ಖಾಲಿ ಇರುವುದು ಇಲ್ಲಿನ ದಯನೀಯ ಸ್ಥಿತಿಗೆ ಸಾಕ್ಷಿ. ಕೇವಲ 919 ಮಂದಿ ಸಿಬ್ಬಂದಿಗಳು ಇಡೀ ಜಿಲ್ಲೆಯ ಆರೋಗ್ಯ ಭಾರವನ್ನು ಹೊರಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಗ್ರಾಮೀಣ ಭಾಗಕ್ಕೆ ಸಂಕಷ್ಟ

ಜಿಲ್ಲೆಯಲ್ಲಿ ತಜ್ಞ ವೈದ್ಯರು ಹಾಗೂ ತಾಲೂಕು ಆರೋಗ್ಯಾಧಿಕಾರಿಗಳನ್ನೊಳಗೊಂಡ 'ಎ' ಗ್ರೇಡ್ ವಿಭಾಗದಲ್ಲಿ ಮಂಜೂರಾದ 133 ಹುದ್ದೆಗಳಲ್ಲಿ 26 ಸ್ಥಾನಗಳು ಭರ್ತಿಯಾಗಿಲ್ಲ. ಇದರಿಂದಾಗಿ ಗ್ರಾಮೀಣ ಭಾಗದ ಜನರಿಗೆ ತಜ್ಞ ಚಿಕಿತ್ಸೆ ಮರೀಚಿಕೆಯಾಗಿದೆ. 'ಸಿ' ಗ್ರೇಡ್‌ನ ಶುಶ್ರೂಷಕರು, ಲ್ಯಾಬ್ ತಂತ್ರಜ್ಞರು ಹಾಗೂ ಸಹಾಯಕ ಸಿಬ್ಬಂದಿಗಳ ಸ್ಥಿತಿ ಇನ್ನೂ ಗಂಭೀರವಾಗಿದೆ. ಈ ವಿಭಾಗದ 1,088 ಹುದ್ದೆಗಳ ಪೈಕಿ ಕೇವಲ 456 ಮಂದಿ ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದು, 632 ಹುದ್ದೆಗಳು ದಶಕಗಳಿಂದ ಖಾಲಿ ಉಳಿದಿವೆ. ಇದು ರೋಗಿಗಳ ನಿರಂತರ ಆರೈಕೆ ಮತ್ತು ತುರ್ತು ಪ್ರಯೋಗಾಲಯ ವರದಿಗಳ ಮೇಲೆ ನೇರ ಪರಿಣಾಮ ಬೀರುತ್ತಿದೆ.

ಇಷ್ಟಿವೆ ನಿರ್ವಹಣಾ ಸವಾಲುಗಳು

ಸೇವಾ ವಿಳಂಬದ ಜೊತೆಗೆ ಆಸ್ಪತ್ರೆಗಳ ನೈರ್ಮಲ್ಯವೂ ಹದಗೆಡುತ್ತಿದೆ. 'ಡಿ' ಗ್ರೇಡ್ ವಿಭಾಗದ ಚತುರ್ಥ ದರ್ಜೆ ಸಿಬ್ಬಂದಿಗಳ 272 ಹುದ್ದೆಗಳ ಪೈಕಿ ಕೇವಲ 51 ಮಂದಿ ಮಾತ್ರ ಕೆಲಸ ಮಾಡುತ್ತಿದ್ದು, 221 ಹುದ್ದೆಗಳು ಖಾಲಿಯಾಗಿವೆ. ಸ್ವಚ್ಛತೆ ಮಾಡುವವರು ಮತ್ತು ರೋಗಿಗಳನ್ನು ಸ್ಥಳಾಂತರಿಸುವವರಿಲ್ಲದೆ ಆಸ್ಪತ್ರೆಗಳು ಅವ್ಯವಸ್ಥೆಯ ಆಗರವಾಗಿವೆ. ಕಚೇರಿ ಕೆಲಸದ 'ಬಿ' ಗ್ರೇಡ್‌ನಲ್ಲೂ 10 ಹುದ್ದೆಗಳ ಪೈಕಿ 4 ಖಾಲಿ ಇರುವುದು ಆಡಳಿತಾತ್ಮಕ ಹಿನ್ನಡೆಗೆ ಕಾರಣವಾಗಿದೆ. ಒಟ್ಟಾರೆಯಾಗಿ, ಲಭ್ಯವಿರುವ ಸಿಬ್ಬಂದಿಗಳ ಮೇಲೆ ಕೆಲಸದ ಒತ್ತಡ ವಿಪರೀತವಾಗಿದ್ದು, ತಕ್ಷಣವೇ ಸರ್ಕಾರ ಈ ಹುದ್ದೆಗಳನ್ನು ಭರ್ತಿ ಮಾಡದಿದ್ದರೆ ಜಿಲ್ಲೆಯ ಆರೋಗ್ಯ ವ್ಯವಸ್ಥೆ ಸಂಪೂರ್ಣವಾಗಿ ಕುಸಿಯುವ ಭೀತಿ ನಾಗರಿಕರಿಗೆ ಎದುರಾಗಿದೆ.



ಗರ್ಭಿಣಿಗೆ ಅತಂತ್ರ ಸ್ಥಿತಿ

ಜಿಲ್ಲೆಯ ಗ್ರಾಮೀಣ ಭಾಗದ ಜನರಿಗೆ ಸಂಜೀವಿನಿಯಾಗಬೇಕಿದ್ದ ಪ್ರಾಥಮಿಕ ಮತ್ತು ತಾಲೂಕು ಆರೋಗ್ಯ ಕೇಂದ್ರಗಳಲ್ಲಿ ವೃಂದ 'ಎ' ವಿಭಾಗದ 26 ತಜ್ಞ ವೈದ್ಯರ ಹುದ್ದೆಗಳು ಖಾಲಿ ಇವೆ. ವಿಶೇಷವಾಗಿ ಸ್ತ್ರೀರೋಗ ಮತ್ತು ಮಕ್ಕಳ ತಜ್ಞರ ಕೊರತೆಯಿಂದಾಗಿ ಹಳ್ಳಿಗಳ ಗರ್ಭಿಣಿಯರು ಹೆರಿಗೆಯಂತಹ ತುರ್ತು ಸಂದರ್ಭಗಳಲ್ಲಿ ಮೈಲುಗಟ್ಟಲೆ ಸಂಚರಿಸಿ ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸಬೇಕಿದೆ. ಇನ್ನು ಅರಿವಳಿಕೆ ತಜ್ಞರ ಅಭಾವದಿಂದಾಗಿ ಅನೇಕ ಕಡೆ ಶಸ್ತ್ರಚಿಕಿತ್ಸಾ ಘಟಕಗಳು ಧೂಳು ಹಿಡಿಯುತ್ತಿವೆ. ಕೇವಲ 107 ಮಂದಿ ವೈದ್ಯರು ಜಿಲ್ಲೆಯಾದ್ಯಂತದ ರೋಗಿಗಳನ್ನು ನಿಭಾಯಿಸಬೇಕಾಗಿರುವುದರಿಂದ, ಚಿಕಿತ್ಸೆಯ ಗುಣಮಟ್ಟದ ಮೇಲೆ ಒತ್ತಡ ಬೀರುತ್ತಿದ್ದು, ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

'ಡಿ' ದರ್ಜೆ ಸಿಬ್ಬಂದಿ ಕೊರತೆ

ಆಸ್ಪತ್ರೆಯ ಸ್ವಚ್ಛತೆ ಮತ್ತು ರೋಗಿಗಳ ಸುರಕ್ಷಿತ ಸ್ಥಳಾಂತರಕ್ಕೆ ಅತಿ ಮುಖ್ಯವಾಗಿರುವ ಚತುರ್ಥ ದರ್ಜೆ (ಗ್ರೂಪ್ ಡಿ) ಸಿಬ್ಬಂದಿಗಳ ಕೊರತೆ ಉಡುಪಿ ಜಿಲ್ಲೆಯಲ್ಲಿ ಶೋಚನೀಯವಾಗಿದೆ. ಜಿಲ್ಲೆಯಲ್ಲಿ ಮಂಜೂರಾದ 272 ಹುದ್ದೆಗಳ ಪೈಕಿ ಕೇವಲ 51 ಮಂದಿ ಮಾತ್ರ ಕೆಲಸ ಮಾಡುತ್ತಿದ್ದು, ಬರೋಬ್ಬರಿ 221 ಹುದ್ದೆಗಳು ಖಾಲಿ ಇವೆ. ಇದರಿಂದಾಗಿ ಆಸ್ಪತ್ರೆಯ ವಾರ್ಡ್‌ಗಳ ನೈರ್ಮಲ್ಯ ಕಾಪಾಡುವುದು ಸವಾಲಾಗಿದೆ. ಅಷ್ಟೆ ಅಲ್ಲದೆ, ರೋಗಿಗಳನ್ನು ವಾರ್ಡ್‌ಗಳಿಂದ ಸ್ಕ್ಯಾನಿಂಗ್ ಅಥವಾ ಆಪರೇಷನ್ ಥಿಯೇಟರ್‌ಗಳಿಗೆ ಕರೆದೊಯ್ಯಲು ಸಿಬ್ಬಂದಿ ಇಲ್ಲದೆ, ರೋಗಿಗಳ ಸಂಬಂಧಿಕರೇ ಸ್ಟ್ರೆಚರ್ ಎಳೆಯುವ ದೃಶ್ಯಗಳು ಸಾಮಾನ್ಯವಾಗುತ್ತಿವೆ. ಇದು ಸರ್ಕಾರಿ ಆಸ್ಪತ್ರೆಗೆ ಬರುವ ಬಡ ಜನರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ



ದಕ್ಷಿಣ ಕನ್ನಡ 34° 24°
ಉಡುಪಿ 31° 25°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 06, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಕಾಸರಗೋಡು ರಾ.ಹೆ. : ನೀರು ಸಂಗ್ರಹಕ್ಕೆ ಪರಿಹಾರ ಭರವಸೆ



ಪುಟ 6

ನೀರಿನ ಪೂರೈಕೆ ಗುತ್ತಿಗೆ ಪಡೆದವರಿಗೆ ನೋಟೀಸ್ ಜಾರಿ ಮಾಡಿ

ಮಂಗಳೂರು ಸ್ಟೇಟ್‌ಬ್ಯಾಂಕ್‌ನ ಮೀನು ಮಾರುಕಟ್ಟೆಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಭೇಟಿ







ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅವರು ಗುರುವಾರ ಮಂಗಳೂರು ನಗರದ ಸ್ಟೇಟ್‌ಬ್ಯಾಂಕ್ ಬಳಿ ಇರುವ ಮೀನು ಮಾರುಕಟ್ಟೆಗೆ ಭೇಟಿ ನೀಡಿ ಮೀನುಗಾರ ಮಹಿಳೆಯರ ಸಮಸ್ಯೆಗಳನ್ನು ಆಲಿಸಿದರು. ಈ ವೇಳೆ ಮೀನುಗಾರ ಮಹಿಳೆಯರು ಅಧ್ಯಕ್ಷರಲ್ಲಿ ತಮ್ಮ ಹಲವು ಸಮಸ್ಯೆಗಳನ್ನು ಮುಂದಿಟ್ಟು ಪರಿಹರಿಸುವಂತೆ ಒತ್ತಾಯಿಸಿದರು.

ಸುತ್ತ ಮುತ್ತ

ರಸ್ತೆ ಡಾಮರೀಕರಣ: ಮಾ.7- ಮೇ 31ರವರೆಗೆ ಸಾರಿಗೆ ಸಂಚಾರ ನಿಷೇಧ

ಕಾಸರಗೋಡು: ಜಿಲ್ಲಾ ಲೋಕೋಪಯೋಗಿ ಇಲಾಖೆಯ ಮಂಜೇಶ್ವರ ವಿಭಾಗದ ಮಾಸುಕುಮೇರಿ – ಕುರುಡಪದವು ರಸ್ತೆಯಲ್ಲಿ ಡಾಮರೀಕರಣ ಕಾಮಗಾರಿ ನಡೆಯುವುದರಿಂದ ಮಾ.7ರಿಂದ ಮೇ 31ರ ವರೆಗೆ ಈ ರಸ್ತೆಯಲ್ಲಿ ಸಾರಿಗೆ ಸಂಚಾರ ನಿಷೇಧಿಸಲಾಗಿದೆ. ಲಾಲ್‌ಬಾಗ್‌ನಿಂದ ಕುರುಡ ಪದವಿಗೆ ಹೋಗುವ ವಾಹನಗಳು ಉಪ್ಪಳ – ಕನ್ಯಾನ ರಸ್ತೆಯನ್ನು ಮತ್ತು ಕುರುಡಪದವಿನಿಂದ ಲಾಲ್‌ಬಾಗ್‌ಗೆ ತೆರಳುವ ವಾಹನಗಳು ಬಾಯಾರುಪದವು – ಚಿಪ್ಪಾರು ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಂ.ರಸ್ತೆ ಬಳಸಿಕೊಳ್ಳಬೇಕು ಎಂದು ಲೋಕೋಪ ಯೋಗಿ ಇಲಾಖೆ ರಸ್ತೆ ವಿಭಾಗದ ಸಹಾಯಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೌರ ಕಾರ್ಮಿಕೆಗೆ ಲೈಂಗಿಕ ಕಿರುಕುಳ: ಪ್ರಕರಣ ದಾಖಲು

ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆ ಪೌರಕಾರ್ಮಿಕೆಗೆ ನೈರ್ಮಲ್ಯ ನಿರೀಕ್ಷಕ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ಆರೋಪಿ ಸಲಾಗಿದ್ದು, ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಾನು ಕಂಕನಾಡಿ ವಾರ್ಡ್‌ನಲ್ಲಿ ಖಾಯಂ ಪೌರ ಕಾರ್ಮಿಕೆಯಾಗಿದ್ದು, 10 ದಿನ ರಜೆ ಬೇಕು ಎಂದು ಮನಪಾ ನೈರ್ಮಲ್ಯ ನಿರೀಕ್ಷಕ ಭಾಸ್ಕರ ಎಂಬಾತನ ಬಳಿ ಕೇಳಿದಾಗ 2025ರ ಜೂ.22ರಂದು ಬೆಳಿಗ್ಗೆ 10ಕ್ಕೆ ಕಚೇರಿಗೆ ಬರಲು ತಿಳಿಸಿದ್ದು, ಅದರಂತೆ ದಿನ ತಾನು ಕಚೇರಿಗೆ ಹೋದಾಗ ನನ್ನ ಕೈಗೆ 1 ಸಾವಿರ ರೂ. ತುರುಕಿ ಲೈಂಗಿಕ ಕಿರುಕುಳ ನೀಡಿದ್ದಾರೆ. ಆ ಬಳಿಕ ತನ್ನನ್ನು ಬೇರೆ ಬೇರೆ ಕಡೆ ಕರೆದಿದ್ದು ಕೆಲಸ ಮಾಡುವಲ್ಲಿಗೂ ಬಂದು ಕಿರುಕುಳ ನೀಡಿದ್ದಾನೆ. ನಂತರ ಇತರ ಕಾರ್ಮಿಕರ ಸಮ್ಮುಖ ನನಗೆ ಅವಾಚ್ಯ ಶಬ್ದದಿಂದ ಬೈದು, ರಜೆ ಮಾಡಿದರೆ ಕೆಲಸ ದಿಂದ ತೆಗೆದು ಹಾಕುವುದಾಗಿ ಬೆದರಿಸಿದ್ದಾನೆ ಎಂದು 38ರ ಹರೆಯದ ಪೌರ ಕಾರ್ಮಿಕೆ ಮಹಿಳಾ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಅಡಿಕೆ ಧಾರಣೆ ಇಳಿಕೆ: ಮಾರುಕಟ್ಟೆಯಲ್ಲಿ ಕ್ಷೀಣಿಸಿದ ಉತ್ಸಾಹ

ಮಂಗಳೂರು: ಕಳೆದ ಒಂದು ತಿಂಗಳುಗಳಿಂದ ಏರುಗತಿಯಲ್ಲಿ ಸಾಗುತ್ತಿದ್ದ ಅಡಿಕೆ ಧಾರಣೆ ಈಗ ಒಂದು ವಾರದಿಂದ ಧಾರಣೆ ಇಳಿಕೆಯತ್ತ ಸಾಗಿದೆ. ಖಾಸಗಿ ಮಾರುಕಟ್ಟೆಯಲ್ಲಿ ಈಗ ಅಡಿಕೆ ಖರೀದಿಯ ಉತ್ಸಾಹ ಕಡಿಮೆಯಾಗಿದ್ದು, ಹಣಕಾಸಿನ ಹರಿವಿನ ಕೊರತೆ ಕಾರಣ ಈ ಬೆಳವಣಿಗೆ ಉಂಟಾಗಿದೆ ಎಂದು ಮಾರುಕಟ್ಟೆ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.
ಪ್ರಸ್ತುತ ಹಳೆ ಅಡಿಕೆ 530 ರೂ.ವಿನಲ್ಲಿ ಸ್ಥಿರವಾಗಿದ್ದು 15 ದಿನಗಳ ಹಿಂದೆ ಗರಿಷ್ಠ 555 ರೂ.ವರೆಗೂ ಖರೀದಿಯಾಗುತ್ತಿತ್ತು. ಹೊಸ ಅಡಿಕೆ 490 ರೂ. ವಿನಿಂದ ಈಗ 470 ರೂ.ಗೆ ಇಳಿಕೆ ಕಂಡಿದೆ.

6618 ಕೇಂದ್ರಗಳಲ್ಲಿ 3152 ಕೇಂದ್ರ ಮೌನ

ಮಳೆ ಮಾಪಕ ಸ್ತಬ್ಧ!

ನಿರ್ವಹಣೆ ಕೊರತೆಯಿಂದ ಮೂಲೆಗುಂಪು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಮಳೆ ಮಾಪಕಗಳು ನಿರ್ವಹಣೆಯಿಲ್ಲದೆ ಸೊರಗಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ.

ಸಮಸ್ಯೆ ಬಗ್ಗೆ ದೂರಿದ್ದರು

ಇತ್ತೀಚೆಗೆ ದಕ್ಷಿಣ ಕನ್ನಡ . ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ರೈತ ಮುಖಂಡರ ಸಭೆಯಲ್ಲೂ ರೈತರಿಂದ ಈ ಮಳೆಮಾಪನ ಸಮಸ್ಯೆ ಬಗ್ಗೆ ಅಸಮಾಧಾನ ವ್ಯಕ್ತವಾಗಿತ್ತು. ಮಾಪನಗಳು ಸಮರ್ಪಕಾಗಿದ್ದರೂ ಕೆಲವೆಡೆ ಅಳವಡಿಕೆ ಸಮಸ್ಯೆ, ನಿರ್ವಹಣೆ ಕೊರತೆ ಕಾರಣದಿಂದ ಸಮಸ್ಯೆ ಉಂಟಾಗಿರುವ ಬಗ್ಗೆ ರೈತರು ದೂರಿದ್ದರು.

ಲೆಕ್ಕಾಚಾರಕ್ಕೆ ಬೇಕು ಮಾಪಕ

ರೈತರಿಗೆ ಹವಾಮಾನ ಆಧಾರಿತ ಬೆಳೆ ವಿಮೆ ಲೆಕ್ಕಾಚಾರಕ್ಕೆ ಟೆಲಿಮೆಟ್ರಿಕ್ ಮಳೆಮಾಪಕ ವನ್ನು ಪರಿಗಣಿಸಲಾಗುತ್ತದೆ. ಈ ಬಾರಿ ಸತತ ಮಳೆಯ ಕಾರಣ ರಾಜ್ಯಾದ್ಯಂತ ಬೆಳೆಹಾನಿಗಳ ಸಮಸ್ಯೆ ತೀವ್ರವಾಗಿತ್ತು. ಆದರೆ ರಾಜ್ಯದಲ್ಲಿ ಅಳವಡಿಸಲಾಗಿರುವ ಮಳೆ ಮಾಪನ (ಟೆಲಿಮೆಟ್ರಿಕ್ ರೇನ್ ಗೇಜ್)ಗಳಲ್ಲಿ ಅರ್ಧದಷ್ಟು ಯಂತ್ರ ಗಳು ನಿರ್ವಹಣೆ ಕೊರತೆಯಿಂದಲೇ ಮೂಲೆ ಗುಂಪಾಗಿದ್ದವು. ಮಾಹಿತಿ ಪ್ರಕಾರ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಎಂಡಿಸಿ)ಯು ಏಜೆನ್ಸಿಗಳ ಮೂಲಕ 6618 ಮಳೆ ಮಾಪನ ಕೇಂದ್ರಗಳಲ್ಲಿ 3152 ಕೇಂದ್ರಗಳು ಸ್ತಬ್ಧಗೊಂಡಿವೆ.





ದ.ಕ.ದಲ್ಲಿ 196 ಮಾಪನ ಕೇಂದ್ರಗಳು ಸ್ತಬ್ಧ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 274 ಮಳೆ ಮಾಪನ ಕೇಂದ್ರಗಳ ಸ್ಥಾಪಿಸಲಾಗಿತ್ತು. ಅವುಗಳಲ್ಲಿ 78 ಮಳೆ ಮಾಪನ ಕೇಂದ್ರಗಳು ಮಾತ್ರವೇ ಸದ್ಯ ಕಾರ್ಯಾಚರಿಸುತ್ತಿದ್ದು, 196 ಮಾಪಕ ಕೇಂದ್ರಗಳು ಸ್ತಬ್ಧಗೊಂಡಿವೆ. ಈ ಬಾರಿ ಕೃಷಿಕರಿಗೆ ಬೆಳೆ ವಿಮೆ ಕಡಿಮೆ ಬಂದಿರುವುದಕ್ಕೆ ಮಳೆ ಮಾಪಕ ಸರಿಯಾಗಿ ಕೆಲಸ ಮಾಡದಿರುವುದೇ ಕಾರಣ ಎಂಬ ದೂರುಗಳೂ ಕೇಳಿ ಬಂದಿತ್ತು.

ಮಾಪಕಗಳು ಕಳವು

ರಾಜ್ಯದ ಕೆಲ ಜಿಲ್ಲೆಗಳಲ್ಲಿ ಸ್ಥಾಪಿಸಲ್ಪಟ್ಟ ಮಳೆ ಮಾಪಕಗಳು ಕಳವಾಗಿವೆ. ಮತ್ತೆ ಕೆಲವೆಡೆ ಮಾಪಕಗಳು ಅಳವಡಿಕೆಯೇ ಆಗದಿರುವುದು ಅಥವಾ ನಿಗದಿತ ಜಾಗದಲ್ಲಿ ಪತ್ತೆಯಾಗದಿರುವ ಪ್ರಕರಣಗಳೂ ರಾಜ್ಯಾದ್ಯಂತ ನಡೆಯುತ್ತಿರುವ ಮಳೆಮಾಪಕಗಳ ಸುಸ್ಥಿತಿಯ ಪರಿಶೀಲನೆ ಸಂದರ್ಭ ಕಂಡುಬಂದಿವೆ. ದ.ಕ. ಜಿಲ್ಲೆಯಲ್ಲಿ ಮಳೆ ಮಾಪಕಗಳ ಸುಸ್ಥಿತಿ ಪರಿಶೀಲನೆ ಸಂದರ್ಭ 274ರಲ್ಲಿ 5 ಮಳೆ ಮಾಪಕಗಳು ಹಾಳಾಗಿದ್ದರೆ, 5 ಮಾಪಕಗಳು ಸ್ಥಾಪನೆಗೊಂಡ ಪ್ರದೇಶದಲ್ಲಿ ಕಂಡು ಬಂದಿಲ್ಲ, 4 ಮಾಪಕಗಳು ಕಳವಾಗಿದ್ದರೆ, 12 ಮಾಪಕಗಳನ್ನು ನಿಗದಿತ ಸ್ಥಳದಿಂದ ಸ್ಥಳಾಂತರಿಸಬೇಕಾಗಿದೆ.

ಹಸಿರು ಬಸ್ಸಿಗೆ ಹಸಿರು ನಿಶಾನೆ!

ಮೂಡುಜಪ್ಪು ವಾಸಿಗಳ ಬೇಡಿಕೆಗೆ ಸಿಕ್ಕಿತು ಸ್ಪಂದನೆ

ಶಾಸಕ ಡಾ. ಭರತ್ ಶೆಟ್ಟಿಯಿಂದ ಚಾಲನೆ

ಮಂಗಳೂರು: ಮೂಡುಜಪ್ಪು ವಾಸಿಗಳ ಬಹುಕಾಲದ ಬೇಡಿಕೆಯೊಂದು ಈಡೇರಿದೆ. ಸತತ ಪ್ರಯತ್ನದ ಫಲವಾಗಿ ಈ ಭಾಗದಲ್ಲಿ ಮೊದಲ ಹಸಿರು ಬಸ್ಸು ಸಂಚಾರ ಆರಂಭವಾಗಿದ್ದು, ಗುರುವಾರ ಹಸಿರು ನಿಶಾನೆ ಸಿಕ್ಕಿದೆ.

ಎಲ್ಲಿಂದ ಪ್ರಯಾಣ?

ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಮಂಗಳೂರು ಬಸ್ಸು ನಿಲ್ದಾಣದಿಂದ–ಪಿವಿಎಸ್–ಮಲ್ಲಿಕಟ್ಟೆ–ಕುಡುಪು–ವಾಮಂಜೂರು–ಉಳಾಯಿಬೆಟ್ಟು ಮಾರ್ಗವಾಗಿ ಮೂಡುಜಪ್ಪುಗೆ ನೂತನ ಬಸ್ ಪ್ರಯಾಣಿಸಲಿದೆ.
ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಶಾಸಕ ಡಾ.ವೈ.ಭರತ್ ಶೆಟ್ಟಿ ಚಾಲನೆ ನೀಡಿದರು. ಸುರತ್ಕಲ್–ಫರಂಗಿಪೇಟೆ ಮತ್ತು ಆಕಾಶ ಭವನ–ಪಡೀಲ್‌ಗೆ ಶೀಘ್ರ ಬಸ್ ಸಂಚಾರ ಆರಂಭಿಸುವಂತೆ ಶಾಸಕರು ತಿಳಿಸಿದರು.

ಯಾರೆಲ್ಲಾ ಇದ್ದರು?

ಮಂಗಳೂರು ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಸುರೇಂದ್ರ ಕಂಬಳಿ, ಸಮಿತಿಯ ಸದಸ್ಯರು, ಮಂಗಳೂರು ವಿಭಾಗದ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಶ್ ಶೆಟ್ಟಿ, ವಿಭಾಗೀಯ ಸಂಚಾರ ಅಧಿಕಾರಿ ಕಮಲ್ ಕುಮಾರ್, ವಿಭಾಗೀಯ ಯಾಂತ್ರಿಕ ಅಭಿಯಂತರ ವಿನಯ್ ಹಾಗೂ ವಿಭಾಗದ ಅಧಿಕಾರಿಗಳು ಸಿಬ್ಬಂದಿಗಳು ಉಪಸ್ಥಿತರಿದ್ದರು.



ಟೈಮಿಂಗ್ಸ್ ಹೀಗಿದೆ...

ಮಂಗಳೂರು ಬಸ್ ನಿಲ್ದಾಣದಿಂದ -ಬೆಳಿಗ್ಗೆ 7:05, 9, 11:15, ಮಧ್ಯಾಹ್ನ 1:30, 3:10, ಸಂಜೆ 5 ಗಂಟೆ. ಮೂಡುಜಪ್ಪುವಿನಿಂದ ಮಂಗಳೂರಿಗೆ -ಬೆಳಿಗ್ಗೆ 8, 10, ಮಧ್ಯಾಹ್ನ 12:15, 2:20, ಸಂಜೆ 4, 6 ಹೊರಡಲಿದೆ.

ಕಾಸರಗೋಡು ಜಿಲ್ಲೆಯಲ್ಲಿ ನೇಂದ್ರ ಬಾಳೆಹಣ್ಣಿನ ಬೆಲೆ ಭಾರೀ ಕುಸಿತ

ಗ್ರಾಹಕರಿಗೆ ವರದಾನವಾದರೂ ಕೃಷಿಕರಿಗೆ ಸಂಕಷ್ಟ

ಕಾಸರಗೋಡು: ಜಿಲ್ಲೆಯಲ್ಲಿ ನೇಂದ್ರ ಬಾಳೆಹಣ್ಣಿನ ದರದಲ್ಲಿ ಭಾರೀ ಕುಸಿತ ಕಂಡುಬಂದಿದೆ. ಕಳೆದ ಕೆಲವು ತಿಂಗಳುಗಳಿಂದ ಇಳಿಮುಖವಾಗುತ್ತ ಬಂದ ಬೆಲೆ ಕಳೆದ ವಾರ 50 ರೂ.ನಲ್ಲಿ ನಿಗದಿಯಾಗಿತ್ತು. ಇದೀಗ ಈ ವಾರ ಏಕಾಏಕಿಯಾಗಿ ದರದಲ್ಲಿ ಮತ್ತೆ ಕುಸಿತ ಉಂಟಾಗಿದ್ದು, ಕಿಲೋವೊಂದಕ್ಕೆ 40 ರೂ. ಗಿಂತಲೂ ಕೆಳಗಿಳಿದಿದೆ.
ಕಾಸರಗೋಡು ಜಿಲ್ಲೆಯಲ್ಲಿ ಪ್ರಸ್ತುತ ನೇಂದ್ರ ಬಾಳೆಹಣ್ಣಿನ ಸಗಟು ಬೆಲೆ ಕೆಜಿಗೆ 30ರಿಂದ 33ರೂ. ವರೆಗೆ ಇದೆ. ಚಿಲ್ಲರೆ ಮಾರಾಟ ದರ ಕೆ.ಜಿ.ಗೆ 35ರಿಂದ 40ರೂ. ತನಕವಿದೆ. ಕೆಲವು ಅಂಗಡಿಗಳಲ್ಲಿ ಹಾಗೂ ಬೀದಿಬದಿಗಳಲ್ಲಿ ನೇಂದ್ರ ಬಾಳೆಹಣ್ಣನ್ನು ಒಂದೂವರೆ ಕಿಲೋಗೆ 50ರೂ. ದರದಲ್ಲಿ ಮಾರಾಟ ಮಾಡಲಾಗುತ್ತಿದೆ.
ರಮ್ಜಾನ್ ಹಬ್ಬದ ಅವಧಿ ಇದಾಗಿದ್ದು, ಜಿಲ್ಲೆಯಲ್ಲಿ ಎಲ್ಲಾ ಹಣ್ಣುಗಳಿಗೆ ಬೆಲೆ ಹೆಚ್ಚಳವಾಗಿದೆ. ಕೆಲವು ಹಣ್ಣುಗಳಿಗೆ ಕೈಗೆಟಕದ ದರವಿದೆ. ಆದರೆ ನೇಂದ್ರ ಬಾಳೆಹಣ್ಣಿಗೆ ಮಾತ್ರ ಬೆಲೆ ಕುಸಿತ ಉಂಟಾಗಿ ರುವುದು ಗ್ರಾಹಕರಿಗೆ ವರದಾನವಾಗಿದೆ. ಇದೇ ವೇಳೆ ಜಿಲ್ಲೆಯಲ್ಲೂ ಬಹುತೇಕ ಪ್ರದೇಶಗಳಿಗೆ ನೇಂದ್ರ ಬಾಳೆ ಕೃಷಿ ವಿಸ್ತರಿ ಸಿದ್ದು, ಆದರೆ ಬೆಲೆ ಇಳಿಕೆಯಿಂದ ಆದಾಯದಲ್ಲಿ ಗಣನೀಯ ಇಳಿಮುಖ ತಲೆದೋರಿದೆ. 10 ರಿಂದ 20 ರಷ್ಟು ತೂಕವಿರುವ ಬಾಳೆಕಾಯಿ ಗೊನೆಗಳು ತಮಿಳುನಾಡಿ ನಿಂದ ಯಥೇಚ್ಛ ಬರುತ್ತಿದ್ದು, ಅವುಗಳ ಹಣ್ಣುಮಾಡಿ ವ್ಯಾಪಾರಿಗಳು ಮಾರಾಟಕ್ಕಿಡುತ್ತಾರೆ.

ಇತರ ಬಾಳೆಹಣ್ಣಿಗೆ ದರ ಇಳಿಕೆಯಿಲ್ಲ

ಜಿಲ್ಲೆಯ ಮಾರುಕಟ್ಟೆಗಳಲ್ಲಿ ನೇಂದ್ರ ಹಣ್ಣಿನ ಬೆಲೆಯಲ್ಲಿ ಗಣನೀಯ ಇಳಿಮುಖವಾದರೂ ಕದಳಿ, ಮೈಸೂರು, ಬೂದಿ, ಗಾಳಿ, ಸೂರ್ಯ, ಕ್ಯಾಮಂಡೀಸ್, ರೋಬಸ್ಟ್ ಮೊದಲಾದ ಬಾಳೆಹಣ್ಣಿನ ದರದಲ್ಲಿ ಬದಲಾವಣೆ ಉಂಟಾಗಿಲ್ಲ, ಕದಳಿ ಹಣ್ಣಿಗೆ ಕೆಜಿಗೆ 70ರೂ. ತನಕ ದರವಿದೆ. ಮೈಸೂರು ಬಾಳೆಹಣ್ಣಿಗೆ 50ರೂ. ವರೆಗೆ ಬೆಲೆ ವಿಧಿಸಲಾಗುತ್ತಿದೆ. ರೋಬಸ್ಟ್ ಹಣ್ಣು 50ರೂ. ತನಕ ಮಾರಾಟವಾಗುತ್ತಿದೆ.



ಬಾಳೆಕಾಯಿ ಕೊಯ್ಲು ಆರಂಭದಿಂದ ಬೆಲೆ ಕುಸಿತ

ತಮಿಳುನಾಡಿನ ಮೇಟ್ಟುಪ್ಪಾಳ ಭಾಗದಿಂದ ಕಾಸರಗೋಡು ಜಿಲ್ಲೆಗೆ ಬಾಳೆಹಣ್ಣು ಪೂರೈಕೆಯಾಗುತ್ತಿದೆ. ಆ ಜಿಲ್ಲೆಯಲ್ಲಿ ವ್ಯಾಪಿಸಿರುವ ಪ್ರದೇಶದಲ್ಲಿ ಬಾಳೆಕಾಯಿಕೊಯ್ಲು ಆರಂಭವಾಗಿವುದರಿಂದ ಬೆಲೆ ಕುಸಿಯಲು ಕಾರಣ ಹೇಳಲಾಗುತ್ತಿದೆ.

ಕೊಡಗಿನಲ್ಲಿ ಮಹಿಳಾ ಕಲಾ ಶಿಬಿರಕ್ಕೆ ಚಾಲನೆ



ಕರ್ನಾಟಕ ಲಲಿತಾ ಕಲಾ ಆಕಾಡೆಮಿ ವತಿಯಿಂದ ಆಯೋಜಿಸಲಾಗಿರುವ ರಾಷ್ಟ್ರೀಯ ಮಹಿಳಾ ಕಲಾ ಶಿಬಿರಕ್ಕೆ ಮಡಿಕೇರಿ ನಗರದ ಹೊರವಲಯದಲ್ಲಿರುವ ದಿ ಕ್ಯಾಪಿಟಲ್ ವಿಲೇಜ್ ರೆಸಾರ್ಟ್‌ನಲ್ಲಿ ಆಕಾಡೆಮಿ ಅಧ್ಯಕ್ಷ ಪರಶುರಾಮ್ ಸಂಪತ್ ಕುಮಾರ್ ಹಾಗೂ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ಅವರು ಚಿತ್ರ ಬಿಡಿಸುವ ಮೂಲಕ ಗುರುವಾರ ಚಾಲನೆಯನ್ನು ನೀಡಿದರು.

ಹಲಗೆ ಜೋಡಿಸಿದರೂ ಇನ್ನೂ ನೀರು ಶೇಖರಣೆಯೇ ಆಗಿಲ್ಲ | ಸಂಕಷ್ಟದಲ್ಲಿದ್ದಾರೆ ಜನತೆ

ಬರಿದಾಗಿದೆ ಶಾಂತಿಮೊಗರು ಕಿಂಡಿ ಅಣೆಕಟ್ಟು ನೀರು!

ಸವಣೂರು: ಕುಮಾರಧಾರಾ ನದಿಗೆ ಶಾಂತಿಮೊಗರು ಎಂಬಲ್ಲಿ ನಿರ್ಮಾಣವಾದ ಬೃಹತ್ ಕಿಂಡಿ ಅಣೆಕಟ್ಟೆಯಲ್ಲಿ ಶೇಖರಣೆಯಾಗಿದ್ದ ನೀರು ಈ ವರ್ಷವೂ ಬರಿದಾಗಿದೆ. ಕಳೆದ 4 ವರ್ಷಗಳಿಂದ ಹಲಗೆ ಅಳವಡಿಸಿದ್ದರೂ ರೈತರಿಗೆ ಸಮರ್ಪಕವಾಗಿ ನೀರು ಬಳಕೆಗೆ ಅವಕಾಶ ಸಿಕ್ಕಿರಲಿಲ್ಲ. ಆರಂಭದಲ್ಲಿ ಒಟ್ಟು 255 ಕಿಂಡಿಗಳಿಗೆ ತಲಾ 4 ಹಲಗೆಗಳನ್ನು ಜೋಡಿಸ ಲಾಗಿತ್ತು. ಆಗ ಒಂದಷ್ಟು ನೀರು ಶೇಖರಣೆಯಾಗಿತ್ತು. ಬಳಿಕ ನಡೆದ ಬೆಳವಣಿಗೆಯಲ್ಲಿ ಯಾರೋ ಕಿಡಿಗೇಡಿಗಳು ಕಿಂಡಿ ಅಣೆಕಟ್ಟಿಗೆ ಅಳವಡಿಸಲಾಗಿದ್ದ ಹಲಗೆಯನ್ನು ಕಿತ್ತು ಎಸೆದು ನೀರು ಪೋಲಾಗುವಂತೆ ಮಾಡಿದ್ದರು. ಇದರ ಬೆನ್ನಿಗೆ ರೈತರು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ್ದರು. ಅಷ್ಟೊತ್ತಿಗಾಲೇ ನೀರು ಬರಿದಾಗಿರುವುದರಿಂದ ಮತ್ತೆ ಹಲಗೆ ಸರಿಯಾಗಿ ಅಳವಡಿಸಲು ಸಾಧ್ಯವಾಗಿಲ್ಲ.



ಕಳೆದ ವರ್ಷ ಆಲಂಕಾರಿನ ಜನಾರ್ದನ ಗೌಡ ಕಯ್ಯಪೆ ಅವರ ನೇತೃತ್ವ 24 ದಿನಗಳ ಕಾಲ ರೈತರು ಶ್ರಮದಾನದ ಮೂಲಕ ಹಲಗೆ ಜೋಡಿಸಲು ಇಲಾಖೆಯೊಂದಿಗೆ ಕೈ ಜೋಡಿಸಿದ್ದರು. 4 ಹಲಗೆ ಬದಲಿಗೆ ತಲಾ 3 ಹಲಗೆ ಗಳ ಜೋಡಿಸಿ ನೀರು ಶೇಖರಣೆ ಆಗುವ ಹಾಗೆ ಮಾಡಲಾಗಿತ್ತು. »ಪುಟ 6

ಸಮೃದ್ಧ ನೀರು ನಿಲ್ಲುವುದೇ ಇಲ್ಲ

ಸಂಬಂಧಪಟ್ಟ ಇಲಾಖೆಯವರು ಹಲಗೆಗಳನ್ನು ಸಮರ್ಪಕವಾಗಿ ಜೋಡಿಸುವ, ಹಲಗೆಗಳ ದುರಸ್ತಿ ಕಾರ್ಯ ಇದ್ಯಾವುದನ್ನೂ ಸಮರ್ಪಕ ಮಾಡುತ್ತಿಲ್ಲ ಎಂದು ರೈತರು ಆರೋಪಿಸುತ್ತಿದ್ದಾರೆ. ಅಂದಿನ ಶಾಸಕ ಎಸ್. ಅಂಗಾರ ಅವರು ರೈತರಿಗೆ ನೆರವಾಗುವ ಸುದುದ್ದೇಶದಿಂದ ನಿರ್ಮಾಣ ಮಾಡಿಕೊಟ್ಟ ಈ ಬೃಹತ್ ಕಿಂಡಿ ಅಣೆಕಟ್ಟೆ ರೈತರ ಪಾಲಿಗೆ ಗಗನಕುಸುಮವಾಗಿಯೇ ಉಳಿದಿದೆ.

ಪ್ರಯೋಜನವಿಲ್ಲದ ಕಿಂಡಿ ಅಣೆಕಟ್ಟೆ

ಕೃಷಿ ಹಾಗೂ ಕುಡಿಯುವ ನೀರಿನ ಬಳಕೆಂದು ನಿರ್ಮಾಣವಾದ ಕಿಂಡಿ ಅಣೆಕಟ್ಟೆ ಯಾರಿಗೂ ಪ್ರಯೋಜ ಇಲ್ಲದಂತಾಗದೆ. ಅಣೆಕಟ್ಟೆಯ ಹಲಗೆಗಳನ್ನು ಸಮರ್ಪಕವಾಗಿ ಜೋಡಿಸಲು ಈವರೆಗೆ ಸಾಧ್ಯವಾಗಿಲ್ಲ. ಕೆಲವು ಹಲಗೆಗಳ ಬುಷ್ ಹೋಗಿದೆ. ಅದನ್ನೂ ದುರಸ್ತಿ ಮಾಡಿಲ್ಲ. ಈ ಅಣೆಕಟ್ಟೆಗೆ ಸದೃಢವಾದ ಹಲಗೆ ಜೋಡಣೆಗೆ ಅಧಿಕಾರಿಗಳು ಕ್ರಮ ಕೈಗೊಂಡು ರೈತರ ಬಳಕೆಗೆ ದಕ್ಕುವಂತೆ ಮಾಡಬೇಕು.

● ಜನಾರ್ದನ ಗೌಡ ಕಯ್ಯಪೆ, ರೈತಪರ ಹೋರಾಟಗಾರ

ಕೆರೆಕಾಡಿನಲ್ಲಿ ಮನೆಗೆ ಆಕಸ್ಮಿಕ ಬೆಂಕಿ: ಲಕ್ಷಾಂತರ ರೂ. ನಷ್ಟ

ಕಿಲ್ಪಾಡಿ ಪಂ.ಅಧಿಕಾರಿಗಳ ಭೇಟಿ, ಪರಿಶೀಲನೆ

ಮುಲ್ಕಿ: ಕಿಲ್ಪಾಡಿ ಗ್ರಾ.ಪಂ. ವ್ಯಾಪ್ತಿಯ ಕೆರೆಕಾಡು ಚೇತನ್ ಎಂಬವರ ಮನೆಗೆ ಗುರುವಾರ ಮಧ್ಯಾಹ್ನ ಆಕಸ್ಮಿಕ ಬೆಂಕಿ ತಗಲಿದ್ದು, ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ.
ಕೆರೆಕಾಡು ನಿವಾಸಿ ಚೇತನ್ ಎಂಬವರು ಮನೆ ಯಲ್ಲಿ ಒಬ್ಬರೇ ವಾಸಿಸುತ್ತಿದ್ದು, ಶಿಮಂತೂರಿನ ಜಾತ್ರೆಗೆ ಎಂದು ಮನೆಗೆ ಬೀಗ ಹಾಕಿ ಹೋಗಿದ್ದರು. ಈ ಸಂದರ್ಭದಲ್ಲಿ ಮನೆಯ ದೇವರ ಕೋಣೆಯಲ್ಲಿ ಆಕಸ್ಮಿಕವಾಗಿ ಬೆಂಕಿ ಉಂಟಾಗಿ ಕೊನೆ ಒಳಗಿದ್ದ ರೆಫ್ರಿಜರೇಟರ್, ಪ್ರಿಂಟರ್ , ಕೋಣೆ ಮೇಲ್ಛಾದಿಯ ಮಾಡಿನ ಪಕ್ಕಾಸಿಗೆ ಆಕಸ್ಮಿಕ ಬೆಂಕಿ ತಗಲಿ ಹೊತ್ತಿ ಉರಿದಿದೆ. »ಪುಟ 6



2 ಲಕ್ಷಕ್ಕೂ ಅಧಿಕ ನಷ್ಟ

ಮನೆ ಬೆಂಕಿ ಅನಾಹುತದಿಂದ ಚೇತನ್ ಅವರಿಗೆ ಸುಮಾರು 2 ಲಕ್ಷಕ್ಕೂ ಹೆಚ್ಚು ನಷ್ಟ ಉಂಟಾಗಿದೆ. ಸ್ಥಳಕ್ಕೆ ಕಿಲಾಡಿ ಪಂ. ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ

ವಿದ್ಯಾರ್ಥಿಗಳು ಪುಸ್ತಕದೊಳಗಿನ ಜ್ಞಾನಕ್ಕೆ ಸೀಮಿತವಾಗದಿರಲಿ: ಶಾಸಕ ಕೋಟ್ಯಾನ್ 2

ಮಾ.6ರಿಂದ 8ರವರೆಗೆ ದಕ್ಷಿಣ ಮಧ್ಯ ಭಾರತ ರಾಜ್ಯಗಳ 'ಜಾನಪದ ಉತ್ಸವ' 3

ಸ್ವಧರ್ಮ ನಿಷ್ಠೆ, ಪರಧರ್ಮ ಸಹಿಷ್ಣುತೆ ನಮ್ಮ ಧ್ಯೇಯವಾಗಲಿ: ಭಟ್ಟಾರಕ ಶ್ರೀ 4

ಮಾ.8ರಂದು ವಿರಾಟ್ ಹಿಂದು ಸಂಗಮ: ಮಹಾಮಂಡಲೇಶ್ವರ ಸ್ವಾಮೀಜಿ ಭಾಗಿ 5

ಸುತ್ತ ಮುತ್ತ

ಬಿ.ಸಿ.ರೋಡ್: ಇಂದು ನವೀಕೃತ ಆತ್ಮಶಕ್ತಿ ಶಾಖೆ ಉದ್ಘಾಟನೆ

ಮಂಗಳೂರು: ನವೀಕೃತ, ವಿಸ್ತೃತ ಹಾಗೂ ಸುಸಜ್ಜಿತವಾದ ಹವಾನಿಯಂತ್ರಿತ ಶಾಖೆಯಾಗಿ ಪರಿವರ್ತನೆಗೊಂಡ ಬಿ.ಸಿ ರೋಡ್‌ನ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಶಾಖೆಯನ್ನು ಇಂದು (ಮಾ.6) ಸಂಜೆ 4.35ಕ್ಕೆ ಮಾಜಿ ಸಚಿವ ಬಿ. ರಮಾನಾಥ ರೈ ಉದ್ಘಾಟಿಸಲಿದ್ದಾರೆ. ಉದ್ಘಾಟನಾ ಸಮಾರಂಭದ ಪ್ರಯುಕ್ತ 100 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 8.50, 500 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ.10.00 ಹಾಗೂ 1000 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10.50 ವನ್ನು ನೀಡಲಾಗುತ್ತಿದ್ದು, ಚಿನ್ನಾಭರಣ ಸಾಲಗಳಿಗೆ ಪ್ರತಿ ಗ್ರಾಂ.ಗೆ ಗರಿಷ್ಠ ಮೌಲ್ಯ ರೂ. 12,000 ರವರೆಗೆ ಯಾವುದೇ ಸೇವಾ ಶುಲ್ಕವಿಲ್ಲದೆ ಸಾಲವನ್ನು ಸದಸ್ಯರಿಗೆ ನೀಡಲಾಗುವುದು ಎಂದು ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಮಂತೂರಿನಲ್ಲಿ ಮಾ.11ರಂದು ನೇಮ

ಮುಲ್ಕಿ: ಶಿಮಂತೂರು ಮಜಲಗುತ್ತು ಕುಟುಂಬಿಕರ ಆರಾಧ್ಯ ದೈವ ಶ್ರೀ ಕಾಂತೇರಿ ಧೂಮಾವತಿ ಮತ್ತು ಬಂಟ ದೈವಗಳ ಹಾಗೂ ವರ್ತೆ ಪಂಜುರ್ಲಿ ದೈವಗಳ ಸಿರಿ ಸಿಂಗಾರದ ನೇಮ ಮಾ.11 ರಂದು ಶಿಮಂತೂರು ಮಜಲ ಗುತ್ತುವಿನಲ್ಲಿ ನಡೆಯಲಿದೆ ಎಂದು ಶಿಮಂತೂರು ಮಜಲಗುತ್ತು ಕುಟುಂಬಿಕರ ಬಾಬಾ ರಂಜನ್ ಶೆಟ್ಟಿ ಹೇಳಿದ್ದಾರೆ.

ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಸಂಜೆ 5.30ಕ್ಕೆ ಭಂಡಾರ ಇಳಿಯುವುದು, ರಾತ್ರಿ 8ರಿಂದ ಅನ್ನ ಸಂತರ್ಪಣೆ, ರಾತ್ರಿ 9 ಗಂಟೆಯಿಂದ ಶ್ರೀ ಕಾಂತೇರಿ ಧೂಮಾವತಿ ಹಾಗೂ ಬಂಟ ದೈವಗಳಿಗೆ ಗಗ್ಗರ ಸೇವೆ ಮತ್ತು ನೇಮ ರಾತ್ರಿ 1ರಿಂದ ವರ್ತೆ ಪಂಜುರ್ಲಿ ದೈವಗಳಿಗೆ ನೇಮ ನಡೆಯಲಿದೆ ಎಂದು ಬಾಬಾ ರಂಜನ್ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಡಂಗಲ್ಲು ಉಚ್ಚಂಗಿ ಮಾರಿಯಮ್ಮ ಬ್ರಹ್ಮಕಲಶೋತ್ಸವ

ಮೂಡುಬಿದಿರೆ: ಕೊಡಂಗಲ್ಲು ಉಚ್ಚಂಗಿ ಮಾರಿಯಮ್ಮ ದೇವಸ್ಥಾನದಲ್ಲಿ ಮಾ.6ರಿಂದ 8ರವರೆಗೆ ಅಷ್ಟೋತ್ತರ ಶತ ಬ್ರಹ್ಮಕಲಶೋತ್ಸವ ನಡೆಯಲಿದೆ. ಮಾ. 6ರಂದು ಸಂಜೆ 4ರಿಂದ ಸ್ವರಾಜ್ಯ ಮೈದಾನದಿಂದ ಉಚ್ಚಂಗಿ ಮಾರಿಯಮ್ಮ ದೇವಸ್ಥಾನದವರೆಗೆ ವೈಭವದ ಹಸಿರು ಹೊರೆ ಕಾಣಿಕೆ ಮೆರವಣಿಗೆ ನಡೆಯಲಿದೆ. ಮಾರ್ಚ್ 7ರಂದು ಬೆಳಿಗ್ಗೆಯಿಂದ ಸಂಜೆಯವರೆಗೆ ವಿವಿಧ ಭಜನಾ ತಂಡಗಳಿಂದ ಭಜನಾ ಸಂಕೀರ್ತನೆ, ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ನಡೆಯಲಿದ್ದು, ಎಕ್ಸಲೆಂಟ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಯುವರಾಜ ಜೈನ್ ಉದ್ಘಾಟಿಸಲಿದ್ದಾರೆ. ಉಚ್ಚಂಗಿ ಮಾರಿಯಮ್ಮ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ದೇಜು ಅಧ್ಯಕ್ಷತೆ ವಹಿಸಲಿದ್ದು ವಿವಿಧ ದೇವಾಲಯಗಳ ಧರ್ಮದರ್ಶಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ರಾತ್ರಿ 7ರಿಂದ ಎಕ್ಸಲೆಂಟ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ವೈಭವ ನಡೆಯಲಿದೆ. ಮಾ.8ಕ್ಕೆ ಬೆಳಿಗ್ಗೆ 11.36ಕ್ಕೆ ಬ್ರಹ್ಮಕಲಶಾಭಿಷೇಕ ಬಳಿಕ ದೇವಿ ದರುಶನ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಲಿದೆ. ಸಂಜೆ 6ಕ್ಕೆ ಧಾರ್ಮಿಕ ಸಭೆ ನಡೆಯಲಿದೆ. ಮಧ್ಯಾಹ್ನ 2.30ರಿಂದ ಬೆಳುವಾಯಿ ಯಕ್ಷದೇವ ಮಿತ್ರಕಲಾ ಮಂಡಳಿಯಿಂದ ಯಕ್ಷ- ಗಾನ-ಹಾಸ್ಯ ವೈಭವ, ರಾತ್ರಿ 10.00ರಿಂದ ಶಿಂಗಾರ ಕಲಾವಿದರು ಬೆದ್ರ ತಂಡದಿಂದ 'ಓಂಕಾರ' ನಾಟಕ ನಡೆಯಲಿದೆ.

ಏಮಾಜೆ ಶಾಲೆಯಲ್ಲಿ ವಿಜ್ಞಾನ ದಿನಾಚರಣೆ

ಬಂಟ್ವಾಳ: ವಿಜ್ಞಾನದ ರಹಸ್ಯಗಳನ್ನು ಕೌತುಕದಿಂದ ಪ್ರಶ್ನಿಸುವ ಸಾಮರ್ಥ್ಯ ಬೆಳೆಸಿಕೊಂಡಲ್ಲಿ ವಿದ್ಯಾರ್ಥಿಗಳು ಸೃಜನಶೀಲವಾಗಿ ಬೆಳೆಯಲು ಸಾಧ್ಯವಾಗುತ್ತದೆ ಎಂದು ಏಮಾಜೆ ದ.ಕ. ಜಿ.ಪಂ. ಕಿ.ಪ್ರಾ. ಶಾಲೆಯ ಎಸ್.ಡಿ.ಎಂ.ಸಿ ಉಪಾಧ್ಯಕ್ಷ ಹರೀಶ್ ಕುಲಾಲ್ ಹೇಳಿದರು.

ಶಾಲೆಯಲ್ಲಿ ನಡೆದ ವಿಜ್ಞಾನ ದಿನಾಚರಣೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಕಂಬಳಬೆಟ್ಟು ಕ್ಲಸ್ಟರ್‌ನ ಸಮೂಹ ಸಂಪನ್ಮೂಲ ವ್ಯಕ್ತಿ ಜ್ಯೋತಿ ಕಾರ್ಯಕ್ರಮ ಉದ್ಘಾಟಿಸಿದರು. ಈ ಸಂದರ್ಭ ವಿದ್ಯಾರ್ಥಿಗಳು ವಿವಿಧ ಪ್ರಯೋಗ ಪ್ರದರ್ಶಿಸಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಬಾಳ್ತಿಲ ಕಂಟಿಕ ಸರಕಾರಿ ಶಾಲೆಯ ಮುಖ್ಯ ಶಿಕ್ಷಕಿ ಚೇತನಾ, ರಂಗಭೂಮಿ ಕಲಾವಿದ ಚಂದ್ರಹಾಸ ಶೆಟ್ಟಿ ಮಾಣಿ ಇದ್ದರು. ಶಾಲಾ ಮುಖ್ಯ ಶಿಕ್ಷಕಿ ತ್ರಿವೇಣಿ ಸ್ವಾಗತಿಸಿ, ಸಹಶಿಕ್ಷಕ ಉದಯಚಂದ್ರ ಕೆ. ಎಸ್ ವಂದಿಸಿದರು. ಗೌರವಶಿಕ್ಷಕಿ ಶಿಕ್ಷಕಿ ದೀಕ್ಷಾ, ಐಸಮ್ಮ ಸಹಕರಿಸಿದರು. ಶಿಕ್ಷಕಿ ಅಕ್ಷತಾ ನಿರೂಪಿಸಿದರು.

ಆಳ್ವಾಸ್‌ನಲ್ಲಿ ರಾಜ್ಯಮಟ್ಟದ ಅಂತರ್ ಕಾಲೇಜು ಫೆಸ್ಟ್ ಉದ್ಘಾಟಿಸಿ ಶಾಸಕ ಕೋಟ್ಯಾನ್ ಅಭಿಪ್ರಾಯ

ವಿದ್ಯಾರ್ಥಿಗಳು ಪುಸ್ತಕದೊಳಗಿನ ಜ್ಞಾನಕ್ಕೆ ಸೀಮಿತವಾಗದಿರಲಿ

ಮೂಡುಬಿದಿರೆ: ಆಳ್ವಾಸ್ ಸ್ವಾಯತ್ತ ಕಾಲೇಜಿನ ಮ್ಯಾನೇಜ್ಮೆಂಟ್ ವಿಭಾಗದ ವತಿಯಿಂದ ರಾಜ್ಯಮಟ್ಟದ ಅಂತರ್ ಕಾಲೇಜು ಫೆಸ್ಟ್ 'ಎಂಥುಸಿಯಾ' ಗುರುವಾರ ಸಂಸ್ಥೆಯ ಕೃಷಿಸಿರಿ ಆವರಣದ ಮೋಹಿನಿ ಅಪ್ಪಾಜಿ ನಾಯಕ್ ವೇದಿಕೆಯಲ್ಲಿ ನಡೆಯಿತು.

ಅಂಕ ಮಾತ್ರ ಜೀವನದ ಸಾಧನೆಯಲ್ಲ

ಮುಲ್ಕಿ-ಮೂಡಬಿದಿರೆ ಕ್ಷೇತ್ರದ ಶಾಸಕ ಉಮಾನಾಥ ಕೋಟ್ಯಾನ್ ಕಾರ್ಯಕ್ರಮ ಉದ್ಘಾಟಿಸಿ, ಜೀವನದಲ್ಲಿ ವ್ಯಕ್ತಿ ಸ್ಪಷ್ಟ ಗುರಿ ಹೊಂದಿರುವುದು ಅತ್ಯಂತ ಮುಖ್ಯ. ಗುರಿ ಸಾಧಿಸುವ ಮಾರ್ಗದಲ್ಲಿ ಸ್ಪರ್ಧೆಗಳು ಪ್ರಮುಖ ಹಂತಗಳಾಗಿ ಕಾರ್ಯ ನಿರ್ವಹಿಸುತ್ತವೆ. ವಿದ್ಯಾರ್ಥಿಗಳು ಕೇವಲ ಪುಸ್ತಕದ ಒಳಗಿನ ಜ್ಞಾನಕ್ಕೆ ಸೀಮಿತರಾಗದೆ ಬದುಕಿನ ಅನುಭವಗಳ ಮೂಲಕವೂ ಕಲಿಯಬೇಕು. ಪುಸ್ತಕಗಳಲ್ಲಿ ದೊರೆಯುವ ಜ್ಞಾನ ಸೀಮಿತವಾಗಿದ್ದು ಅದರಾಚೆಯೂ ಬದುಕಿನ ಅನೇಕ ಪಾಠಗಳು ಅಡಗಿವೆ. ಪರೀಕ್ಷೆಯಲ್ಲಿ ಪಡೆಯುವ ಅಂಕಗಳು ಮಾತ್ರವೇ ಜೀವನದ ಸಾಧನೆ ಅಲ್ಲ, ಬಯಲು ಶಾಲೆಯ ಶಿಕ್ಷಣ ಬದುಕಿನ ನಿಜವಾದ ಕಲಿಕೆ ಎಂದರು.

ಹಲವು ಬಾರಿ ನೂರಕ್ಕೆ ನೂರು ಅಂಕ ಪಡೆದ ಮಕ್ಕಳ ಪೋಷಕರೇ ವೃದ್ಧಾಶ್ರಮದಲ್ಲಿ ಜೀವನ ಸಾಗಿಸುತ್ತಿರುವ ಉದಾಹರಣೆಗಳು ನಮ್ಮ ಕಣ್ಣ ಮುಂದಿದೆ. ಆದ್ದರಿಂದ ಬದುಕಿನ ವಿದ್ಯೆ ಪುಸ್ತಕಗಳಾಚೆಯೂ ಇದೆ ಎಂಬುದನ್ನು ವಿದ್ಯಾರ್ಥಿಗಳು ಮನಗಾಣಬೇಕು ಎಂದು ತಿಳಿಸಿದರು.



ಸ್ಥಳೀಯ ಪ್ರತಿಭೆಗಳಿಂದ ಸಾಧನೆ ಮೆರೆದಿದೆ

ಲೆಕ್ಸಾ ಲೈಟಿಂಗ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ನಿರ್ದೇಶಕ ರೋನಾಲ್ಡ್ ಸಿಲ್ವಾ ಡಿಸೋಜಾ ಮಾತನಾಡಿ, ಲೆಕ್ಸಾ ಸಂಸ್ಥೆ ಲೈಟಿಂಗ್ ಕ್ಷೇತ್ರದಲ್ಲಿ ಇಂದು ದೇಶದಲ್ಲೇ ಮುಂಚೂಣಿಯ ಸ್ಥಾನವನ್ನು ಗಳಿಸಿದೆ. ಬಹುರಾಷ್ಟ್ರೀಯ ಕಂಪನಿಗಳು ಈ ಕ್ಷೇತ್ರದಲ್ಲಿ ಅನೇಕ ಉತ್ಪನ್ನಗಳನ್ನು ತಯಾರಿಸುತ್ತಿದ್ದರೂ ಕೂಡ ಗುಣಮಟ್ಟದ ದೃಷ್ಟಿಯಿಂದ ನಮ್ಮ ಮಟ್ಟಕ್ಕೆ ತಲುಪಲು ಸಾಧ್ಯವಾಗಿಲ್ಲ ಈ ಸಾಧನೆ ಸಾಧ್ಯವಾಗಲು ಮೂಡಬಿದಿರೆ ಪ್ರದೇಶದ ಸ್ಥಳೀಯ ಪ್ರತಿಭೆಗಳ ಸಹಕಾರವೇ ಪ್ರಮುಖ ಕಾರಣವಾಗಿದೆ. ಸ್ಥಳೀಯ ಯುವಕರ ಸಾಮರ್ಥ್ಯ, ಪರಿಶ್ರಮ ಮತ್ತು ನಿಷ್ಠೆಯೇ ಸಂಸ್ಥೆಯನ್ನು ಈ ಮಟ್ಟದ ಯಶಸ್ಸಿನತ್ತ ಕೊಂಡೊಯ್ದಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ ವಿದ್ಯಾರ್ಥಿಗಳು ಹೆಚ್ಚು ಅವಕಾಶ ಬಳಸಿಕೊಂಡು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಇಂದಿನ ತಂತ್ರಜ್ಞಾನ ಯುಗದಲ್ಲಿ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಂಡು ಸಮಾಜಕ್ಕೆ ಮತ್ತು ದೇಶಕ್ಕೆ ಕೊಡುಗೆ ನೀಡುವ ದಿಕ್ಕಿನಲ್ಲಿ ಮುಂದುವರಿಯಬೇಕು ಎಂದರು.

ರೂ. 257ರಿಂದ 100 ಕೋ.ರೂ. ವ್ಯವಹಾರ

ತನ್ನ ಜೀವನದ ವೃತ್ತಾಂತ ಹಂಚಿಕೊಂಡ ಅವರು, ಸಂಸ್ಥೆಯನ್ನು ಆರಂಭಿಸಿದಾಗ ತನ್ನ ಬಳಿ ಕೇವಲ 257 ರೂ. ಮಾತ್ರ ಇದ್ದವು ಎಂದು ಲೆಕ್ಸಾಲೈಟಿಂಗ್ ಟೆಕ್ನಾಲಜೀಸ್‌ನ ರೋನಾಲ್ಡ್ ಸಿಲ್ವಾ ಡಿಸೋಜಾ ಹೇಳಿದರು. ದೃಢ ಸಂಕಲ್ಪ, ಶ್ರಮ ಹಾಗೂ ಹೋರಾಟದಿಂದ ಇಂದು ಸಂಸ್ಥೆ 8 ವರ್ಷ ಪೂರೈಸಿ 100 ಕೋ.ರೂ. ವ್ಯವಹಾರ ಮಾಡುವ ಮಟ್ಟಕ್ಕೆ ಬೆಳೆದಿದೆ. ಯಶಸ್ಸು ಸಾಧಿಸಲು ನಾವು ಯಾವಾಗಲೂ ಇತರರನ್ನು ಉದಾಹರಣೆ ಯಾಗಿ ನೋಡಬಾರದು. ನಾವು ನಮ್ಮದೇ ಸಾಧನೆ ಮೂಲಕ ಇತರರಿಗೆ ಉದಾಹರಣೆಯಾಗಬೇಕು ಎಂದರು.

ದ.ಕ. ಬ್ಯಾಡ್ಮಿಂಟನ್ ಅಸೋಸಿಯೇಷನ್‌ನ ಉಪಾಧ್ಯಕ್ಷ ಅವಿನಾಶ್ ಸುವರ್ಣ ಮಾತನಾಡಿ, ಹಲವು ದೇಶಗಳಲ್ಲಿ ಜೆನ್ ಝಿ ಪೀಳಿಗೆಯವರು ದೇಶದ ವ್ಯವಸ್ಥೆಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿ ದಂಗೆಯಲ್ಲಿ ತೊಡಗಿದ್ದರೆ, ನಮ್ಮ ದೇಶದಲ್ಲಿ ಜೆನ್ ಝಿ ಯುವಕರು ತಮ್ಮ ಪ್ರತಿಭೆ, ಪರಿಶ್ರಮ ಹಾಗೂ ನವೀನ ಆಲೋಚನೆಗಳ ಮೂಲಕ ದೇಶದ ಅಭಿವೃದ್ಧಿಗೆ ಕೈಜೋಡಿಸುತ್ತಾ ರಾಷ್ಟ್ರ ನಿರ್ಮಾಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದು ಸಂತಸದ ವಿಷಯ ಎಂದರು. ಆಳ್ವಾಸ್ ಕಾಲೇಜಿನ ಆಡಳಿತಾಧಿಕಾರಿ ಬಾಲಕೃಷ್ಣಶೆಟ್ಟಿ ವಿಭಾಗದ ಮುಖ್ಯಸ್ಥೆ ಸುರೇಖಾ ರಾವ್, ಕಾರ್ಯಕ್ರಮ ಸಂಯೋಜಕ ಪ್ರವೀಣ್ ಕುಮಾರ್ ಬಿಜೆ, ಪ್ರಜ್ಞಾ ಎಸ್‌ಬಿ, ನಮಿತಾ, ವಿದ್ಯಾರ್ಥಿ ಸಂಯೋಜಕ ಜಾಹ್ನವಿ ಶೆಟ್ಟಿ, ಆಶೀಶ್ ಪೂಜಾರಿ, ಖುಷಿ ಇದ್ದರು. ಸಪ್ತಶ್ರೀ ನಿರೂಪಿಸಿ, ಶ್ರೀಶ್ ಸ್ವಾಗತಿಸಿ, ಭೂಮಿಕಾ ವಂದಿಸಿದರು.

ಉಂಡೆಮನೆ ಪ್ರಶಸ್ತಿ ಪ್ರದಾನಿಸಿ ರಾಘವೇಶ್ವರಭಾರತೀ ಶ್ರೀ ಆಶೀರ್ವಚನ

ಗುರು ಕತ್ತಲನ್ನು ದೂರವಾಗಿಸುವ ಬೆಳಕಿನಂತೆ

ಬೆಳ್ತಂಗಡಿ: ತಪ್ಪುಗಳನ್ನು ಮಾಡುವುದು ಶಿಷ್ಯನಿಗೆ ಸಹಜವಾಗಿರುತ್ತದೆ. ಆದರೆ ತಪ್ಪುಗಳನ್ನು ತಿದ್ದಬೇಕಾದ ಗುರುವು ದೋಷರಹಿತನಾಗಿರಬೇಕು ಎಂದು ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿ ನುಡಿದರು.

ಅವರು ಗುರುವಾರ ಗುರುವಾಯನಕೆರೆ ಸನಿಹದ ಹವ್ಯಕ ಭವನದಲ್ಲಿ ಶ್ರೀ ಗುರು ಭಿಕ್ಷಾಸೇವೆಯ ಸಂದರ್ಭದಲ್ಲಿ ಉಂಡೆಮನೆ ಶಂಭು ಭಟ್ಟರ ಸವಿನೆನಪಿನ ಶಿಕ್ಷಣ ಪ್ರೋತ್ಸಾಹ ಯೋಜನೆಯ ಅಂಗವಾಗಿರುವ ಮೂವತ್ತನೆಯ ವರ್ಷದ (2025ನೇ ಸಾಲಿನ) ಉಂಡೆಮನೆ ಪ್ರಶಸ್ತಿಯನ್ನು ಪುತ್ತೂರು ವಿವೇಕಾನಂದ ಮಹಾವಿದ್ಯಾಲಯದ ವಿಶ್ರಾಂತ ಪ್ರಾಚಾರ್ಯ ವಿಷ್ಣು ಗಣಪತಿ ಭಟ್ - ಇವರಿಗೆ ಪ್ರದಾನ ಮಾಡಿ ಆಶೀರ್ವದಿಸಿದರು.

ಬೆಳಕು ಕತ್ತಲನ್ನು ಓಡಿಸುವಂತೆ ದೋಷ ರಹಿತನಾದ ಬೆಳಕಿನಂತಿರುವ ಗುರುವು ಶಿಷ್ಯನನ್ನು ಕ್ಷಮಿಸಿ ತಪ್ಪುಗಳನ್ನು ತಿದ್ದಿ ತೀಡಬೇಕು. ಕೆಲವೊಮ್ಮೆ ಸಮಷ್ಟಿಯಾಗಿ ಕೆಲಸ ಮಾಡುತ್ತಿರುವಾಗ ಒಬ್ಬ ಮಾಡಿದ ತಪ್ಪು ಉಳಿದ ಎಲ್ಲರನ್ನು ಬಾಧಿಸುವುದಿದೆ. ಹಾಗಾಗದಂತೆ ಸಮಷ್ಟಿ ಹಿತದಿಂದ ಒಗ್ಗೂಡಿ ಕೆಲಸ ಮಾಡಬೇಕು- ಎಂದು ಗುರು- ಶಿಷ್ಯ ಸಂಬಂಧದ ಕುರಿತು ತನ್ನ ಶಿಷ್ಯಸಮೂಹಕ್ಕೆ ವಿವರಿಸಿದರು.



ಗುರು ಶಿಷ್ಯನ ತಪ್ಪುಗಳನ್ನು ತಿದ್ದಿ ಸಮಾಜಕ್ಕೆ ಉತ್ತಮ ವ್ಯಕ್ತಿಯನ್ನು ರೂಪಿಸುವ ಶ್ರೇಷ್ಠರು. ಗುರು-ಶಿಷ್ಯ ಸಂಬಂಧ ಅನ್ಯೋನ್ಯವಾದುದು. ಈ ಪ್ರೀತಿ, ಗೌರವವೇ ಇದರ ಮೂಲ ಮೆಟ್ಟಿಲು.

● ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿ

ಸನ್ಮಾನ ನಿಧಿ ಪೀಠಕ್ಕೆ ಸಮರ್ಪಣೆ

ಯೋಜನೆಯ ಸಂಯೋಜಕ ಉಂಡೆಮನೆ ವಿಶ್ವೇಶ್ವರ ಭಟ್ ಸನ್ಮಾನಿತರನ್ನು ಪರಿಚಯಿಸಿದರು. ಸನ್ಮಾನಿತರಾದ ವಿಷ್ಣು ಗಣಪತಿ ಭಟ್ ಅವರು ತನಗೆ ಸನ್ಮಾನ ನಿಧಿಯಾಗಿ ದೊರೆತ ಹಣವನ್ನು ಗೋಕರ್ಣದ ವಿಷ್ಣುಗುಪ್ತ ವಿಶ್ವವಿದ್ಯಾಪೀಠಕ್ಕೆ ದೇಣಿಗೆಯಾಗಿ ನೀಡಿ ನಿವೃತ್ತ ಜೀವನವನ್ನು ಸಮಾಜಸೇವೆಗೆ ಮುಡಿಪಾಗಿಡುವ ತನ್ನ ಸೇವಾ ಬದ್ಧತೆಯನ್ನು ವ್ಯಕ್ತಪಡಿಸಿದರು.

ಶಿಕ್ಷಣ ಪ್ರೋತ್ಸಾಹ ಯೋಜನೆಯ ಕರ್ತ ಶಂಭು ಶರ್ಮಾ ಮತ್ತು ಮನೆಯವರು ಪ್ರಶಸ್ತಿ ಪ್ರದಾನದಲ್ಲಿ ಸಹಕರಿಸಿದರು. ಹವ್ಯಕಭವನ ಕ್ರಿಯಾಸಮಿತಿಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಬೆಳ್ತಂಗಡಿ ಸೀಮೆಯ ಸೀಮಾ ಗುರಿಕ್ಕಾರರು ಹಾಗೂ ಉಜಿರೆ, ವೇಣೂರು ಮತ್ತು ಉರುವಾಲು ಹವ್ಯಕವಲಯಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಉಪ್ಪಿನಂಗಡಿ ಮಂಡಲದ ಅಧ್ಯಕ್ಷ ಹಾಗೂ ಪದಾಧಿಕಾರಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಉದಯಶಂಕರ ಕೋಡ್ಯಡ್ಕ ದೇವಿಕಾ ಶಾಸ್ತ್ರಿಯವರು ಕಾರ್ಯಕ್ರಮ ನಿರ್ವಹಿಸಿದರು.

ನಿಟ್ಟೆ ಕ್ಷೇಮ ತಂಡದಿಂದ ಲ್ಯಾಪರೋಸ್ಕೋಪಿಕ್ ಶಸ್ತ್ರಚಿಕಿತ್ಸಾ ತಂತ್ರಜ್ಞಾನ ಬಳಕೆ

ಮೂತ್ರಪಿಂಡ ಸ್ವೀಕರಿಸಲು ನೆಫ್ರೆಕ್ಟೊಮಿ ಪ್ರಕ್ರಿಯೆ

ಉಳ್ಳಾಲ: ಮಂಗಳೂರಿನ ದೇರಳಕಟ್ಟೆಯ ಜಸ್ಟಿಸ್ ಕೆ.ಎಸ್.ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯ ಯೂರೋಲಾಜಿ ವಿಭಾಗ ಮತ್ತು ನೆಫ್ರೋಲಜಿ ವಿಭಾಗಗಳ ತಜ್ಞರ ತಂಡವು ಜಂಟಿಯಾಗಿ ಲ್ಯಾಪರೋ ಸ್ಕೋಪಿಕ್ ಶಸ್ತ್ರಚಿಕಿತ್ಸಾ ತಂತ್ರಜ್ಞಾನ ಬಳಸಿ ಸ್ವಯಂಪ್ರೇರಿತ ದಾನಿಯ ಜೀವಂತ ಮೂತ್ರ ಪಿಂಡ ಸ್ವೀಕರಿಸಲು ನೆಫ್ರೆಕ್ಟೊಮಿ ಪ್ರಕ್ರಿಯೆ ಯಶಸ್ವಿಯಾಗಿ ನಿರ್ವಹಿಸಿದೆ.

ಇದು ಕೆ.ಎಸ್.ಹೆಗ್ಡೆ ಮೆಡಿಕಲ್ ಅಕಾಡೆಮಿ ಸಂಸ್ಥೆಯಲ್ಲಿ(ಕ್ಷೇಮ)ನಡೆಸುವ ಅಂಗದಾನ ಪ್ರಕ್ರಿಯೆಯಲ್ಲಿ ಮಹತ್ವಪೂರ್ಣ ಪ್ರಗತಿಯ ದಾಖಲೆಯಾಗಿದೆ. ಕರಾವಳಿ ಕರ್ನಾಟಕದ ಇತಿಹಾಸದಲ್ಲೇ ಮೈಲುಗಲ್ಲಾಗಿದೆ. ಹಿಂದಿನ ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗಳಾದರೆ ದೇಹದಲ್ಲಿ ದೊಡ್ಡ ಗಾತ್ರದ ಕತ್ತರಿಸುವಿಕೆ ಹಾಗೂ ಎಲುಬು ಕತ್ತರಿಸುವ ಅಗತ್ಯತೆ ಇತ್ತು. ಕೆ.ಎಸ್.ಹೆಗ್ಡೆ ವೈದ್ಯರ ತಂಡವು ಈ ಶಸ್ತ್ರಚಿಕಿತ್ಸೆಯನ್ನು ಬಲು ಸೂಕ್ಷ್ಮ ರೀತಿಯಲ್ಲಿ ತಂತ್ರಜ್ಞಾನದ ಮುಖಾಂತರ ನಡೆಸಿದೆ. ಈ ಚಿಕಿತ್ಸೆಯ ಬಳಿಕ ಕಡಿಮೆ ನೋವು ಮತ್ತು ವೇಗವಾಗಿ ಚೇತರಿಕೆ ಕಂಡುಬಂದಿದ್ದು,ಇದರಿಂದ ಮೂತ್ರಪಿಂಡ ದಾನಿಗಳಿಗೆ ಹೆಚ್ಚಿನ ಪ್ರಯೋಜನವಾಗಿದೆ. ಗಾಯ ಸಣ್ಣದಾಗಿ ರುವುದರಿಂದ ದಾನಿಗಳು ಶೀಘ್ರವಾಗಿ ತಮ್ಮ ದೈನಂದಿನ ದೈಹಿಕ ಚಟುವಟಿಕೆಗಳಿಗೆ ಮರಳ ಬಹುದಾಗಿದ್ದು, ಹೊಟ್ಟೆಯ ಭಾಗದಲ್ಲಿ ಯಾವುದೇ ಶಸ್ತ್ರಿಯೆಯ ಗುರುತು ಇಲ್ಲದಂತೆ ಉತ್ತಮ ಫಲಿತಾಂಶ ಲಭಿಸಿದೆ.



ಮೂತ್ರ ಪಿಂಡ ಕಸಿ ಶಸ್ತ್ರಚಿಕಿತ್ಸೆಯನ್ನು ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆ ಆರೋಗ್ಯ ವಿಮೆಯಡಿ ಉಚಿತವಾಗಿ ನಡೆಸಲಾಗಿದ್ದು, ಇದರಿಂದ ಸಾಮಾನ್ಯ ಜನರಿಗೆ ಯೋಜನೆಯ ಲಾಭ ತಲುಪಿಸಿದಂತಾಗಿದೆ.

● ಡಾ. ರಾಜೀವ್ ಟಿ.ಪಿ, ಯೂರೋಲಾಜಿ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು

ಈ ತಂತ್ರಜ್ಞಾನ ಬಳಕೆಯ ಮೂಲಕ ಸುಳ್ಯ ತಾಲೂಕಿನ ವ್ಯಕ್ತಿಯೋರ್ವರಿಂದ ಅವರ ಸಹೋದರನಿಗೆ ಮತ್ತು ಹೊರ ಜಿಲ್ಲೆಯ ಮಹಿಳೆಯೋರ್ವರಿಂದ ಆಕೆಯ ಪತಿಗೆ ಮೂತ್ರ ಪಿಂಡ ದಾನ ಪ್ರಕ್ರಿಯೆಯನ್ನು ನಡೆಸಲಾಗಿದೆ. ಮೂತ್ರಪಿಂಡ ದಾನಿಗಳು ಮತ್ತು ಮೂತ್ರಪಿಂಡ ಸ್ವೀಕರಿಸಿದವರನ್ನು ಆಸ್ಪತ್ರೆಯಿಂದ ವಾರದೊಳಗೆ ಡಿಸ್ಚಾರ್ಜ್ ಮಾಡಲಾಗಿದೆ.

ಕ್ಷೇಮ ಮೆಡಿಕಲ್ ಅಕಾಡೆಮಿಯ ಡೀನ್ ಡಾ. ಬಿ. ಸಂದೀಪ್ ರೈ ಮತ್ತು ಕೆ.ಎಸ್. ಹೆಗ್ಡೆ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾಗಿರುವ ಡಾ. ಸುಮಲತಾ ಆರ್.ಶೆಟ್ಟಿ ಅವರು ಶಸ್ತ್ರಿಯೆ ನಡೆಸಿದ ವೈದ್ಯಕೀಯ ತಂಡವನ್ನು ಅಭಿನಂದಿಸಿದ್ದಾರೆ. ವೈದ್ಯರ ತಂಡದಲ್ಲಿ ಯೂರೋಲಾಜಿ ವಿಭಾಗದ ಡಾ. ರಾಜೀವ್ ಟಿ.ಪಿ., ಡಾ. ಸೂರಜ್ ಹೆಗ್ಡೆ ಪಿ, ಡಾ. ನರೇಂದ್ರ ಪೈ, ಡಾ. ಶ್ರೇಯಸ್ ರೈ, ನೆಫ್ರೋಲಜಿ ವಿಭಾಗದ ಡಾ. ಜನಾರ್ದನ ಕಾಮತ್, ಡಾ. ಪ್ರದೀಪ್ ಶೆಣೈ, ಡಾ.ಪ್ರಜ್ವಲ್ ಕಿಶೋರ್, ಅನಸ್ತೇಶಿಯೋಲಜಿ ತಂಡದ ಪ್ರಾಧ್ಯಾಪಕ ಮತ್ತು ವಿಭಾಗದ ಮುಖ್ಯಸ್ಥ ಡಾ.ಅವನೀಶ್ ಭಂಡಾರಿ, ಪ್ರಾಧ್ಯಾಪಕ ಡಾ. ಶ್ರೀಪಾದ ಮೆಹಂದಳೆ, ಡಾ.ಸಿರಿ ಶೆಟ್ಟಿ ಡಾ.ಮುರಳಿ ಶಂಕರ್ ಭಟ್, ಡಾ.ಶಾರದಾ ಅಡಿಗ, ಡಾ.ನಿಶಾ ಶೆಟ್ಟಿ ಇದ್ದರು.

ಕುಲ್ಕುಂದ ಶ್ರೀ ಮಹಾವಿಷ್ಣುಮೂರ್ತಿ ದೈವದ ಒತ್ತೆಕೋಲ: ಹರಕೆ ತೀರಿಸಿದ ಭಕ್ತರು



ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯದ ಐತಿಹಾಸಿಕ ತಾಣ ಕುಲ್ಕುಂದದ ಶ್ರೀ ಮಹಾವಿಷ್ಣುಮೂರ್ತಿ ದೈವಸ್ಥಾನದಲ್ಲಿ ಶ್ರೀ ಮಹಾವಿಷ್ಣುಮೂರ್ತಿ ದೈವದ 57ನೇ ವರ್ಷದ ಮಹಾವಿಷ್ಣುಮೂರ್ತಿ ದೈವದ ಒತ್ತೆಕೋಲವು ಶ್ರದ್ಧಾ ಭಕ್ತಿಯಿಂದ ಬುಧವಾರ ಸಂಪನ್ನಗೊಂಡಿತು.

ಸಹಸ್ರಾರು ಭಕ್ತಾದಿಗಳು ಶ್ರೀ ದೈವದ ದರುಶನ ಪಡೆದು ಪ್ರಸಾದ ಸ್ವೀಕರಿಸಿ ಕೃತಾರ್ಥರಾದರು. ಮಂಗಳವಾರ ಸಂಜೆ ಅರ್ಚಕ ರಘುರಾಮ ಅಮ್ಮಣ್ಣಾಯರು ಶುದ್ಧೀಕರಣ ಕಾರ್ಯವನ್ನು ವೈದಿಕ ವಿಧಿ ವಿಧಾನಗಳ ಮೂಲಕ ನೆರವೇರಿಸಿದರು.

ನಂತರ ಭಂಡಾರ ತೆಗೆದು ಭಂಡಾರದ ಮೆರವಣಿಗೆಯು ದೈವಸ್ಥಾನದಿಂದ ಕುಲ್ಕುಂದದ ತನಕ ನಡೆಯಿತು. ಬಳಿಕ ಮೇಲೇರಿಗೆ ಅಗ್ನಿಸ್ಪರ್ಶ ಮಾಡಲಾಯಿತು. ಅಸಂಖ್ಯಾತ ಭಕ್ತರು ಈ ಸಂದರ್ಭದಲ್ಲಿ ಮೇಲೇರಿಗೆ ಎಣ್ಣೆ ಸಮರ್ಪಣಾ ಹರಕೆ ತೀರಿಸಿದರು. ನಂತರ ಅನ್ನ ಸಂತರ್ಪಣೆ ನೆರವೇರಿತು. ರಾತ್ರಿ ಶ್ರೀ ದೈವದ ಕುಲ್ಚಾಟು ನಡಾವಳಿ, ನಂತರ ಬಪ್ಪನಾಡು ಮೇಳದವರಿಂದ ಯಕ್ಷಗಾನ 'ಬನತ ಬೆಮ್ಮೆರ್' ಪ್ರದರ್ಶಿತವಾಯಿತು.

ಅಗ್ನಿಪ್ರವೇಶ

ಬುಧವಾರ ಪ್ರಾತಃಕಾಲ ಕಳಸಾಟು ನಡೆಯಿತು. ಬಳಿಕ ಶ್ರೀ ಮಹಾ ವಿಷ್ಣುಮೂರ್ತಿ ದೈವದ ಅಗ್ನಿಪ್ರವೇಶ ನೆರವೇರಿತು. ಭಕ್ತಾದಿಗಳು ಶ್ರದ್ಧಾಭಕ್ತಿಯಿಂದ ಶ್ರೀ ದೈವದ ಅಗ್ನಿಪ್ರವೇಶವನ್ನು ವೀಕ್ಷಿಸಿದರು. ನಂತರ ಮಾರಿಕಳ ಹಾಗೂ ದೈವದಲ್ಲಿ ಭಕ್ತಾದಿಗಳು ತಮ್ಮ ಅರಿಕೆ ನಿವೇದಿಸಿ, ಕಾಣಿಕೆ ಅರ್ಪಿಸಿ ಪ್ರಸಾದ ಸ್ವೀಕರಿಸಿದರು. ನಂತರ ಗುಳಿಗ ದೈವದ ನಡಾವಳಿ ಜರುಗಿತು. ದೈವಸ್ಥಾನದ ಪ್ರಧಾನ ಪೂಜಾರಿ ರಾಮಚಂದ್ರ ಮಣಿಯಾಣಿ ಭಕ್ತಾದಿಗಳಿಗೆ ಪ್ರಸಾದ ನೀಡಿದರು.

ಜಗದಗಲಕ್ಕೆ ಪಸರಿಸಿದೆ ಅಪ್ಪ- ಮಗಳ ಕರಾಡ ಬ್ರಾಹ್ಮಣ ಅಡುಗೆಯ 'ಘಮ'!

ಮಂಗಳೂರು: ಸೋನಿ ಎಂಟರ್ಟೇನ್ಮೆಂಟ್ ವಾಹಿನಿ ಹಾಗೂ ಸೋನಿ ಎಲ್‌ಐವಿ ಒಟಿಟಿಯಲ್ಲಿ ಪ್ರಸಾರವಾದ 45 ಸಂಚಿಕೆಗಳ 'ಇಂಡಿಯಾ ಮಾಸ್ಟರ್ ಶೆಫ್ ಜೋಡಿ ಕಾರ್ಯಕ್ರಮ'ದಲ್ಲಿ ಕರ್ನಾಟಕ-ಕೇರಳ ಪ್ರತಿನಿಧಿಸಿದ ಉಪ್ಪಂಗಳ ವೇಣು ಶರ್ಮ ಹಾಗೂ ಅವರ ಪುತ್ರಿ ಅವನಿ ಶರ್ಮ ಕುದ್ಕುಳಿ ಅವರು ಕರಾಡ ಬ್ರಾಹ್ಮಣ ಅಡುಗೆ ಐಟಂಗಳಿಂದ ಜಗದಗಲ ಸುದ್ದಿ ಮಾಡಿದ್ದಾರೆ.

40 ಸಂಚಿಕೆಗಳಲ್ಲಿ ಭಾಗಿ

ಕೇರಳದ ಕಾಸರಗೋಡಿನ ಒಂದು ಪುಟ್ಟ ಹಳ್ಳಿ ಉಪ್ಪಂಗಳದಿಂದ ಬಂದ 26ರ ಹರೆಯದ ಯುವತಿ ಅವನಿ ಶರ್ಮಾಗೆ ಈ ಶೋಗೆ ಸಾಥ್ ನೀಡಿದದ್ದು ಅವಳ ತಂದೆ ವೇಣು ಶರ್ಮಾ. ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ ಆಗಿ ಯಶಸ್ವಿಯಾಗಿದ್ದ ಅಪ್ಪ ಮಗಳ ಅಡುಗೆಯ ಆಸಕ್ತಿಗೆ ಕೈಜೋಡಿಸಿ ಈ ರಿಯಾಲಿಟಿ ಶೋದಲ್ಲಿ ಭಾಗವಹಿಸಿ 40 ಸಂಚಿಕೆಗಳಲ್ಲಿ ಪಾಲ್ಗೊಂಡು ಗಮನ ಸೆಳೆದಿದ್ದಾರೆ. ಈ ಶೋ ಅಂತಿಮ ಸಂಚಿಕೆ ಮಾ.6 ಶುಕ್ರವಾರ ಪ್ರಸಾರವಾಗಲಿದೆ.

ಸೀಸನ್‌ನ ಮೊದಲ 'ಇಮ್ಯುನಿಟಿ ಪಿನ್' ಗೆದ್ದ ಬಳಿಕ, ಪ್ರಬಲ ಸ್ಪರ್ಧಿಗಳ ನಡುವೆ, ಅಪ್ಪ-ಮಗಳು ತಯಾರಿಸಿದ 'ದೀಪ ಆರಾಧನೆ' ಎಂಬ ಸಿಹಿ ತಿಂಡಿ ತೀರ್ಪುಗಾರರಾದ ರಣವೀರ್ ಬ್ರಾರ್ ಮತ್ತು ವಿಕಾಸ್ ಖನ್ನಾ ಅವರ ಮನ ಗೆದ್ದಿತು.



ಬಳಿಕ ವಿವಿಧ ಐಟಂಗಳ ಮೂಲಕ ಟಿ.ವಿ. ಹಾಗೂ ಸಾಮಾಜಿಕ ಜಾಲತಾಣದಲ್ಲೂ ಈ ಜೋಡಿ ಸುದ್ದಿ ಮಾಡಿತು.

ತೀರ್ಪುಗಾರರ ಮನ ಗೆದ್ದಿದ್ದರು

ಫೆ.27ರ ಸೆಮಿ-ಫೈನಲ್ ಸುತ್ತಿನಲ್ಲಿ 40ನೇ ಕಂತಿನಲ್ಲಿ ಪ್ಲೇಟಿಂಗ್ ಮುಗಿಸಲು ಕೇವಲ ಎರಡು ನಿಮಿಷಗಳ ಕಾಲಾವಕಾಶ ಕಡಿಮೆಯಾಗಿ ಇವರು ಶೋದಿಂದ ಹೊರ ಬೀಳಬೇಕಾಯಿತು. ಈ ಹೊತ್ತಿಗೆ ಈ ಸ್ಪರ್ಧಿಗಳು ವಿಪ್ರನ್ ಕಳಚಿ ಹೊರಬರುವಾಗ ತೀರ್ಪುಗಾರರು ಕೂಡ ಕಣ್ಣೀರಿಟ್ಟರು.

ಗ್ರಾಮೀಣ ಸೊಗಡಿನ ಅಡುಗೆಗೆ ಒತ್ತು ನೀಡಿದ ಈ ಅಪ್ಪ ಮಗಳು, ಶಾಖಾಹಾರಿ ಅಡುಗೆ ಮಾಡಿದ ಹಾಗೂ ಕರ್ನಾಟಕ ಮತ್ತು ಕೇರಳವನ್ನು ಪ್ರತಿನಿಧಿಸಿದ ಏಕೈಕ ಜೋಡಿ ಎಂಬ ಹೆಗ್ಗಳಿಕೆ ಗಳಿಸಿದ್ದಾರೆ.

ಉಜಿರೆ ಬ್ರಹ್ಮಕಲಶೋತ್ಸವಕ್ಕೆ ವಿಶ್ವಪ್ರಸನ್ನತೀರ್ಥ ಶ್ರೀಗಳ ಭೇಟಿ



ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವ, ವಿಜಯಗೋಪುರ ಲೋಕಾರ್ಪಣೆ, ಬ್ರಹ್ಮರಥ ಹಾಗೂ ಪುಷ್ಪರಥ ಸಮರ್ಪಣಾ ಸಮಾರಂಭದ ಶುಭ ಸಂದರ್ಭದಲ್ಲಿ ಮಾ. 3ರಂದು ರಾತ್ರಿ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಗಳವರು ಶ್ರೀ ಜನಾರ್ದನಸ್ವಾಮಿ, ಪರಿವಾರ ದೇವರು ಹಾಗೂ ಶ್ರೀ ಮಧ್ವಾಚಾರ್ಯ ಸನ್ನಿಧಿಗೆ ಭೇಟಿ ನೀಡಿ ಪ್ರಸಾದ ಸ್ವೀಕರಿಸಿದರು.

ಶ್ರೀಗಳವರನ್ನು ಕ್ಷೇತ್ರದ ಸಕಲ ಗೌರವಗಳೊಂದಿಗೆ ಅನುವಂಶಿಕ ಆಡಳಿತ ಮೊಕ್ತೇಸರ ಶರತ್‌ಕೃಷ್ಣ ಪಡುವೆಟ್ನಾಯರು ಸ್ವಾಗತಿಸಿ, ಕ್ಷೇತ್ರದ ವತಿಯಿಂದ ಗೌರವಿಸಿದರು.

ಶ್ರೀಗಳವರು ನೂತನ ವಿಜಯ ಗೋಪುರ, ಶಾರದಾ ಮಂಟಪದಲ್ಲಿ 'ಸಮೃದ್ಧಿ' ಹಸಿರು ಹೊರೆ ಕಾಣಿಕೆಯ ದಾಸ್ತಾನು ಮಳಿಗೆ, 'ಸುಪ್ರಸಾದ' ಭೋಜನ ಶಾಲೆಯ ಸುಂದರ ಪರಿಕಲ್ಪನೆಯನ್ನು ವೀಕ್ಷಿಸಿ ಮಾದರಿ ಭೋಜನ ಶಾಲೆಯೆಂದು ಶ್ಲಾಘಿಸಿ, ಕ್ಷೇತ್ರದ ಪರಿಪೂರ್ಣ ನವೀಕರಣ ಕಾರ್ಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕ್ಷೇತ್ರಕ್ಕೆ ಶ್ರೀಗಳವರ ಅನಿರೀಕ್ಷಿತ ಆಗಮನ ದಿಂದ ಉಜಿರೆಯ ಭಕ್ತವೃಂದ ಸಂತಸ, ಸಂಭ್ರಮಪಟ್ಟಿತು.

ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ ಸಂಭ್ರಮ: ಧರ್ಮ ಜಾಗೃತಿ ಸಭೆ

ಮುಲ್ಕಿ: ಹಳೆಯಂಗಡಿ ಸಮೀಪದ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ಪೂರ್ವಭಾವಿಯಾಗಿ ಧರ್ಮ ಜಾಗೃತಿ ಸಭೆ ನಡೆಯಿತು.

ಕೊಂಡೆವೂರು ನಿತ್ಯಾನಂದ ಯೋಗಾಶ್ರಮದ ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ ದೀಪ ಪ್ರಜ್ವಲನೆ ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ವಾಮನ ಇಡ್ಯಾ, ವಹಿಸಿದ್ದರು. ಒಡಿಯೂರು ದಕ್ಷಿಣ ಗಾಣಗಾಪುರ, ಶ್ರೀ ಗುರುದೇವದತ್ತ ಸಂಸ್ಥಾನಮ್‌ನ ಶ್ರೀ ಗುರುದೇವಾನಂದ ಸ್ವಾಮೀಜಿ ರವರು ಆಶೀರ್ವಚನ ನೀಡಿ, ನಮ್ಮ ಅಂತರಂಗದ ಕಣ್ಣು ಅರಳಿದಾಗ ಬ್ರಹ್ಮಕಲಶೋತ್ಸವದಂತಹ ಉತ್ತಮ ಕಾರ್ಯ ಸಾಧ್ಯ. ದೇವರ ಕಲಶಾಭಿಷೇಕದ ಜೊತೆಗೆ ನಮ್ಮ ಹೃದಯವೂ ಪರಿಶುದ್ಧವಾಗಬೇಕು, ಪರೋಪಕಾರದ ಬದುಕು ನಮ್ಮದಾಗಲಿ ಎಂದರು.

ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಕಸಾಪ ಮಾಜಿ ರಾಜ್ಯಾಧ್ಯಕ್ಷ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಪ್ರಸಾದ್ ಶೆಟ್ಟಿ 'ಆರ್ಯನ್' ಲಚ್ಚಿಲ್ ಸಸಿಹಿತ್ಲು, ಹಳೆಯಂಗಡಿ ಗ್ರಾಪಂ ಮಾಜಿ ಅಧ್ಯಕ್ಷೆ ಪೂರ್ಣಿಮ, ಅಭಿವೃದ್ಧಿ ಅಧಿಕಾರಿ ಅರುಣ್ ಪ್ರದೀಪ್ ಡಿಸೋಜ, ಬಪ್ಪನಾಡು ದೇವಸ್ಥಾನದ ಸಿಇಒ ಶ್ವೇತಾ ಪಳ್ಳಿ, ಪಡುಪಣಂಬೂರು ಗ್ರಾಪಂ ಮಾಜಿ ಅಧ್ಯಕ್ಷೆ ಕುಸುಮಾ ಚಂದ್ರಶೇಖರ್, ಸಸಿಹಿತ್ಲು ಕದಿಕೆ ಮೊಗವೀರ ಮಹಾಸಭಾದ ಕಿಶೋರ್ ಗುರಿಕಾರ, ಮುಲ್ಕಿ ಸಸಿಹಿತ್ಲು ಬಿಲ್ಲವರ ಹಿತವರ್ಧಕ ಸಂಘದ ಅಧ್ಯಕ್ಷ ಜಗನ್ನಾಥ ಕೋಟ್ಯಾನ್, ಪಾವಂಜೆ ದೇವಾಡಿಗ ಸಮಾಜ ಸೇವಾ ಸಂಘದ ಅಧ್ಯಕ್ಷ ಅಣ್ಣಪ್ಪ ದೇವಾಡಿಗ, ಮಂಗಳೂರು ಶ್ರೀ ಭಗವತೀ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್,ನ ಅಧ್ಯಕ್ಷ ಮಾಧವ,ಉಳ್ಳಾಲ ಶ್ರೀ ಚೀರುಂಭ ಭಗವತೀ ಕ್ಷೇತ್ರದ ಆಡಳಿತ ಸಮಿತಿ ಅಧ್ಯಕ್ಷ ಚಿದಾನಂದ ಗುರಿಕಾರ, ಉಳ್ಳಾಲ ಶ್ರೀ ಚೀರುಂಭ ಭಗವತೀ ಕ್ಷೇತ್ರದ ಆಡಳಿತ ಮೊಕ್ತೇಸರ ಶ್ರೀ ಸುರೇಶ್ ಭಟ್ನಗರ ಉಪಸ್ಥಿತರಿದ್ದರು. ಈ ಸಂದರ್ಭ ಉಳ್ಳಾಲ ಶ್ರೀ ಭಗವತೀ ಕ್ಷೇತ್ರದ ಕಾರ್ನವರು, ರವಿ ಯಾನೆ ಕಂಡಪ್ಪ, ಬಾಲಕೃಷ್ಣ ಯಾನೆ ಮಂಜಪ್ಪ ಕಾರ್ನವರು, ಮಂಗಲ್ಪಾಡಿ ಅಡ್ಕಶ್ರೀ ಭಗವತೀ ಕ್ಷೇತ್ರದ ಕೃಷ್ಣ ಕಾರ್ನವರು, ವಾಡಿಹಿತ್ಲು ಸುಬ್ರಹ್ಮಣ್ಯ ಭಟ್, ಮೀನಾ ಹಾಗೂ ರಾಘು ಪೂಜಾರಿ ಸಸಿಹಿತ್ಲು ಅವರಿಗೆ ಗೌರವಾರ್ಪಣೆ ನಡೆಯಿತು. ನವೀನ್ ಶೆಟ್ಟಿ ಎಡ್ಮೆಮಾರ್ ಸ್ವಾಗತಿಸಿ, ಪ್ರವೀಣ್ ಎಸ್.ಕುಂಪಲ ವಂದಿಸಿದರು. ಬಳಿಕ ಕೇಳ ಸುಧಾಕರ ಮತ್ತು ಬಳಗ ಮಂಗಳಾದೇವಿ ಅವರಿಂದ ಸ್ಯಾಕ್ಸೋಫೋನ್ ವಾದನ', ಶ್ರೀ ಶಿರಡಿ ಸಾಯಿಬಾಬ ಮಂದಿರ ಆಶ್ರಿತ ಸಾಯಿ ಶಕ್ತಿ ಕಲಾಬಳಗ ಅರ್ಪಿಸುವ ತುಳು ಪೌರಾಣಿಕ ನಾಟಕ 'ಬೊಳ್ಳಿ ಮಲೆತ ಶಿವಶಕ್ತಿಲು' ನಡೆಯಿತು.



ಸಸಿಹಿತ್ಲು ಶ್ರೀ ಭಗವತಿ ಕ್ಷೇತ್ರದಲ್ಲಿ ಇಂದಿನ ಕಾರ್ಯಕ್ರಮ ವಿವರ

ಮುಲ್ಕಿ: ಬ್ರಹ್ಮಕಲಶೋತ್ಸವದ ಸಂಭ್ರಮದಲ್ಲಿರುವ ಸಸಿಹಿತ್ಲು ಶ್ರೀ ಭಗವತಿ ಕ್ಷೇತ್ರದಲ್ಲಿ ಮಾ.6ಕ್ಕೆ ಬೆಳಗ್ಗೆ 7 ರಿಂದ ಅಯುತ ಕದಳೀಯಾಗ, ಗಣಯಾಗ, ಸುವಾಸಿನಿ ಆರಾಧನೆ, ಕನ್ನಿಕಾ ಆರಾಧನೆ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ,ಸಂಜೆ 4ರಿಂದ ಮಹಿಳಾ ವೃಂದದವರಿಂದ ಸಾಮೂಹಿಕ ಕುಂಕುಮಾರ್ಚನೆ ಸೇವೆ, 4.30ರಿಂದ ಶಕ್ತಿದಂಡಕ ಪೂಜೆ, ಶಾಂತಿ ಹೋಮ, ಆಶ್ಲೇಷಾ ಬಲಿ, ಸಂಜೆ 4.30ರಿಂದ 6 ರವರೆಗೆ ತೋನ್ಸೆ ಪುಷ್ಕಲ್ ಕುಮಾರ್‌ರಿಂದ ಸಮುದ್ರ ಮಥನ ಹರಿಕಥಾ ಕಾಲಕ್ಷೇಪ,ರಾತ್ರಿ 8 ರಿಂದ ಶ್ರೀ ದುರ್ಗಾ ಕಲಾವಿದರು ಹೊಯಿಗೆಗುಡ್ಡೆ, ಸಸಿಹಿತ್ಲು ಅಭಿನಯದ ತುಳು ಪೌರಾಣಿಕ ನಾಟಕ ಬಿತ್ತ್‌ಲ್ದ ಉಳ್ಳಾಲ್ದಿ ಅಪ್ಪೆ ಭಗವತೀ ತುಳು ಪೌರಾಣಿಕ ನಾಟಕ ಪ್ರದರ್ಶನ ನಡೆಯಲಿದೆ.

ಸಂಜೆ ನಡೆಯಲಿರುವ ಧಾರ್ಮಿಕ ಸಭಾ ಅಧ್ಯಕ್ಷತೆಯನ್ನು ಶಾಸಕ ಉಮಾನಾಥ ಕೋಟ್ಯಾನ್ ವಹಿಸಲಿದ್ದಾರೆ. ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಅನುವಂಶಿಕ ಅರ್ಚಕ ವೇದಮೂರ್ತಿ ಅನಂತಪದ್ಮನಾಭ ಆಸ್ರಣ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಾಣಿಲದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಕರ್ನಾಟಕ ಬ್ಯಾಂಕ್ ಮಂಗಳೂರಿನ ಡಿಜಿಎಂ ಬಿ. ಗೋಪಾಲಕೃಷ್ಣ ಸಾಮಗ, ಕಾಸರಗೋಡು ಬಿಜೆಪಿ ಜಿಲ್ಲಾಧ್ಯಕ್ಷೆ ಅಶ್ವಿನಿ ಎಂ.ಎಲ್. ಪ್ರಿಯದರ್ಶಿನಿ ಕೋ. ಆಪರೇಟಿವ್ ಸೊಸೈಟಿ, ಅಧ್ಯಕ್ಷ ವಸಂತ್ ಬೆರ್ನಾಡ್ ಜಯಕೃಷ್ಣ ಕೋಟ್ಯಾನ್ ಮೊದಲಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಸುತ್ತಮುತ್ತ

ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇಗುಲದಲ್ಲಿ ಶ್ರೀದೇವರ ಆರಾಟ ಇಂದು

ಉಪ್ಪಿನಂಗಡಿ: ಪುರಾಣ ಪ್ರಸಿದ್ಧ ಇಲ್ಲಿನ ಶ್ರೀ ಸಹಸ್ರಲಿಂಗೇಶ್ವರ- ಮಹಾಕಾಳಿ ದೇವಾಲಯದಲ್ಲಿ ಕಾಲಾವಧಿ ಜಾತ್ರೆ, ಮಖೆ ಜಾತ್ರೆ ಮತ್ತು ಉತ್ಸವಾದಿಗಳು ನಡೆಯುತ್ತಿದ್ದು ಮಾ.6ರಂದು (ಇಂದು) ಬೆಳಗ್ಗೆ ಕಕ್ಕೆ ಕೂಟುಕೋದ್ದಾಟನೆ, ಸಂಜೆ 7ರಿಂದ ಆರಾಟ ಉತ್ಸವ ಕಟ್ಟೆ ಪೂಜೆ ಹಾಗೂ ಅವಭೃತ ಸ್ನಾನ ನಡೆಯಲಿದೆ. ದೇವರು ಬಲಿ ಹೊರಟು ರಥಬೀದಿಯಿಂದ ಹಳೆ ಬಸ್ ನಿಲ್ದಾಣದವರೆಗೆ ಹೋಗಿ ಕಟ್ಟೆಪೂಜೆಯಾಗಿ ಸರಕಾರಿ ಪ್ರಾಥಮಿಕ ಶಾಲಾ ಮಾರ್ಗವಾಗಿ ಬಂದು ಸಂಗಮದಲ್ಲಿ ಅವಭೃತ ಸ್ನಾನವಾಗಿ ಧ್ವಜಾವರೋಹಣ ನಡೆಯಲಿದೆ.
ಶ್ರೀ ದೇವರ ಆರಾಟ ಮಹೋತ್ಸವದ ಪ್ರಯುಕ್ತ ವಿಶ್ವಹಿಂದೂ ಪರಿಷತ್ ಬಜರಂಗ ದಳದ ಆಶ್ರಯದಲ್ಲಿ ಹೊಸ ಬಸ್ ನಿಲ್ದಾಣದ ಬಳಿಯ ಕಟ್ಟೆಯಲ್ಲಿ ಭಜನಾ ಸೇವೆ, ವಯಲಿನ್ ಚೆಂಡೆವಾದನ ನಡೆಯಲಿದ್ದು ಹಳೇ ಬಸ್ ನಿಲ್ದಾಣದ ಕಟ್ಟೆಯ ಬಳಿ ಗೆಳೆಯರು- 94 ಉಪ್ಪಿನಂಗಡಿ ಅವರ ವತಿಯಿಂದ ಸಂಜೆ 6ರಿಂದ ಅನುಗ್ರಹ ಮೆಲೊಡೀಸ್ ಮಂಗಳೂರು ಇವರಿಂದ ಗೀತ್- ಸಂಗೀತ್ ಕಾರ್ಯಕ್ರಮ ನಡೆಯಲಿದೆ.

ಶ್ರೀ ರಾಮೋತ್ಸವ, -ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಆಹ್ವಾನ.

ಮಡಿಕೇರಿ: ನಗರದ ಶ್ರೀ ಕೋದಂಡ ರಾಮದೇವಾಲಯ ಸಮಿತಿ ವತಿಯಿಂದ ಮಾ.28ರಂದು ಆಯೋಜಿತ ಶ್ರೀ ರಾಮನವಮಿ ಮಹೋತ್ಸವದ ಅಂಗವಾಗಿನ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆಸಕ್ತ ಕಲಾತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ನಗರದ ಗಾಂಧಿ ಮೈದಾನದಲ್ಲಿ ಮಾ.28ರಂದು ಶನಿವಾರ ಸಂಜೆ 6ರಿಂದ ರಾತ್ರಿ 10 ಗಂಟೆಯವರೆಗೆ ಆಯೋಜಿತ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಜಿಲ್ಲೆಯ ಕಲಾವಿದರು, ಕಲಾತಂಡಗಳು ಪ್ರದರ್ಶನಕ್ಕೆ ಅರ್ಜಿ ಸಲ್ಲಿಸಬಹುದು. ಭಕ್ತಿ ಮತ್ತು ದೇಶ ಪ್ರೇಮ ಸಂಬಂಧಿತ ಸಾಂಸ್ಕೃಸತಿಕ ಕಾರ್ಯಕ್ರಮಗಳಿಗೆ ಆದ್ಯತೆ. 1 ತಂಡಕ್ಕೆ ಕನಿಷ್ಟ 10 ನಿಮಿಷಗಳು ಮಾತ್ರ ಪ್ರದರ್ಶನಕ್ಕೆ ಅವಕಾಶ ಇರುತ್ತದೆ. ಸಾಂಸ್ಕೃತಿಕ ಸಮಿತಿಯ ಆಯ್ಕೆಯೇ ಅಂತಿಮವಾಗಿದ್ದು, ಅಜಿ೯ ಸಲ್ಲಿಸಲು ಮಾಚ್೯ 12 ಕೊನೇ ದಿನವಾಗಿದೆ. ಅರ್ಜಿಗಳನ್ನು ಶ್ರೀ ರಾಮೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ ಸಮಿತಿ , ಕೇರಾಫ್ ಅಮೂಲ್ಯ ಎಂಟರ್ ಪ್ರೈಸರ್, ಶ್ರೀ ಓಂಕಾರೇಶ್ವರ ದೇವಾಲಯ ರಸ್ತೆ ಮಡಿಕೇರಿ – 571201 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಅನಿಲ್ ಎಚ್.ಟಿ. ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಹರಿಣಿ ವಿಜಯ್, ಸಂಚಾಲಕಿ, ಶ್ರೀ ರಾಮೋತ್ಸವ ಸಾಂಸ್ಕೃತಿಕ ಸಮಿತಿ ಮಡಿಕೇರಿ (ದೂ. ಸಂ.9740970840) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಉಚಿತ ಶ್ರವಣ ಚಿಕಿತ್ಸೆ ನೋಂದಣಿಗೆ ಸೂಚನೆ

ಸುಳ್ಯ: ಸುಳ್ಯ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೇತೃತ್ವದಲ್ಲಿ ಟೀಮ್ ಈಶ್ವರ್ ಮಲ್ಪೆ ಸಹಯೋಗದೊಂದಿಗೆ ಉಚಿತ ಕಿವಿಯ ಶ್ರವಣ ತಪಾಸಣೆ ಮತ್ತು ಶ್ರವಣ ಯಂತ್ರಕ್ಕೆ ಸಹಾಯಧನ ಕಾರ್ಯಕ್ರಮ ಹಾಗೂ ವಿತರಣೆ ಕಾರ್ಯಕ್ರಮ ಮಾ.8ರಂದು ಸುಳ್ಯ ಪ್ರೆಸ್ ಕ್ಲಬ್ ಆವರಣದಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಲೋಕೇಶ್ ಪೆರ್ಲಂಪಾಡಿ ತಿಳಿಸಿದ್ದಾರೆ. ಟೀಮ್ ಈಶ್ವರ್ ಮಲ್ಪೆಯವರು ಅನೇಕ ಸಾಮಾಜಿಕ ಕಾರ್ಯವನ್ನು ಮುಂದುವರಿಸಿಕೊಂಡು ಬರುತ್ತಿದ್ದು ಇದೀಗ ಶ್ರವಣ ಸಮಸ್ಯೆಯಿಂದ(ಕೇಳಿಸಿಕೊಳ್ಳುವ ಸಮಸ್ಯೆ) ಬಳಲುತ್ತಿರುವ ರೋಗಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಉಚಿತ ಶಿಬಿರವನ್ನು ಏರ್ಪಡಿಸಿದ್ದಾರೆ. ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳಿಗೆ ಟೀಮ್ ಈಶ್ವರ್ ಮಲ್ಪೆಯವರು ಶ್ರವಣದ ಯಂತ್ರಕ್ಕೆ ಹಿಯರಿಂಗ್ ಯಂತ್ರಕ್ಕೆ ತಗಲುವ ವೆಚ್ಚದ ಶೇ.40ರಷ್ಟು ಮೊತ್ತವನ್ನು ಭರಿಸಲಿದ್ದಾರೆ. ಈ ಶಿಬಿರದ ಸದುಪಯೋಗ ಪಡಿಸಿಕೊಳ್ಳಬೇಕಾಗಿ ಅವರು ವಿನಂತಿಸಿದ್ದಾರೆ. ನೋಂದಣಿ ಕಡ್ಡಾಯ, ಹಿರಿಯರಿಗೆ ಮೊದಲ ಆದ್ಯತೆ, ಶ್ರವಣ ಪರೀಕ್ಷೆಯ ಯಾವುದಾದರೂ ಹಳೆಯ ವರದಿ ಇದ್ದರೆ ಜೊತೆಯಲ್ಲಿ ತರಬೇಕು, ಮೊದಲು ನೋಂದಾಯಿಸುವ 30 ಜನರು ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು. ಅಂತಾರಾಷ್ಟ್ರೀಯ ಸಂಸ್ಥೆಯಲ್ಲಿ ಅನುಭವ ಪಡೆದಿರುವ ವೈದ್ಯರು ಈ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದು ಈಶ್ವರ್ ಮಲ್ಪೆ ಟೀಮ್‌ನವರು ದೇಣಿಗೆ ಮೊತ್ತದಿಂದ ಶೇ.40ರಷ್ಟು ಶ್ರವಣ ಸಾಧನದ ಮೊತ್ತವನ್ನು ಪಾವತಿಸುತ್ತಾರೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 8951804399ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶಾತಿ-ಅರ್ಜಿ ಆಹ್ವಾನ

ಉಡುಪಿ: ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2026–27 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರತಿಷ್ಠಿತ ಶಾಲೆ ಯೋಜನೆಯಡಿ ಜಿಲ್ಲಾ ವ್ಯಾಪ್ತಿಯಲ್ಲಿನ ಪ್ರತಿಷ್ಠಿತ ಶಾಲೆಗಳಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಅರ್ಹ ಪರೀಕ್ಷೆಯ ಮೂಲಕ ಪ್ರವೇಶಾವಕಾಶ ಕಲ್ಪಿಸಲು ಅರ್ಹ ವಿದ್ಯಾರ್ಥಿಗಳಿಂದ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.
ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು 2026 ರ ಏಪ್ರಿಲ್ 15 ರಿಂದ ಮೇ 4 ರ ವರೆಗೆ ಕಾಲಾವಕಾಶ ಕಲ್ಪಿಸಿದ್ದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ಒಂದು ವಾರದ ಒಳಗಾಗಿ ಅರ್ಜಿಯನ್ನು ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ರಜತಾದ್ರಿ, ಮಣಿಪಾಲ ಇಲ್ಲಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0820–2574892 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಗೊಮ್ಮಟಬೆಟ್ಟದಲ್ಲಿ 'ಫಾಲ್ಗುಣಿ ಹುಣ್ಣಿಮೆ ಚೆಲುವಿನಲ್ಲಿ ಕವಿಗೋಷ್ಠಿ' | ಜ್ಯೋತಿ ಗುರುಪ್ರಸಾದ್ ಆಶಯ

ಕಾವ್ಯಾಭಿಷೇಕದಿಂದ ಬಾಹುಬಲಿ ಸಾರಿದ ಮೌಲ್ಯಗಳ ಆರಾಧನೆ



ಕಾರ್ಕಳ: ಕಾವ್ಯಾಭಿಷೇಕ ಪರಿಕಲ್ಪನೆ ಧಾರ್ಮಿಕ ಪೂಜ್ಯಭಾವನೆಯದು. ಅದು ಮುಂದುವರಿದು ಸಾಮಾಜಿಕತೆಯಾಗಿ ಮತ್ತೆ ಸಾಹಿತ್ಯಿಕ ರೂಪ ಭಾವ ಆವಿರ್ಭವಿಸಿ ಕವಿಗೋಷ್ಠಿಯಲ್ಲಿ ಅರ್ಥಪೂರ್ಣ ವಾಯಿತು ಎಂದು ಹಿರಿಯ ಸಾಹಿತಿ ಜ್ಯೋತಿ ಗುರುಪ್ರಸಾದ್ ಹೇಳಿದರು.
ಅವರು ಕನ್ನಡ ಸಾಹಿತ್ಯ ಪರಿಷತ್ತು ಕಾರ್ಕಳ ತಾಲೂಕು ಘಟಕ ಹಾಗೂ ಜೈನಧರ್ಮ ಜೀರ್ಣೋದ್ಧಾರ ಸಂಘ ಕಾರ್ಕಳ ಇವರ ಸಹಯೋಗದಲ್ಲಿ ಕಾರ್ಕಳದ ಗೊಮ್ಮಟಬೆಟ್ಟದಲ್ಲಿ ಫಾಲ್ಗುಣಿ ಹುಣ್ಣಿಮೆ ಚೆಲುವಿನಲ್ಲಿ ಆಯೋಜಿಸಿದ ತ್ಯಾಗ ಮೂರ್ತಿ ಗೊಮ್ಮಟೇಶನಿಗೆ ಕಾವ್ಯಾಭಿಷೇಕಕವಿಗೋಷ್ಠಿಯಸಮನ್ವಯಕಾರರಾಗಿ ಭಾಗವಹಿಸಿ ಮಾತಾನಾಡಿದರು.
ತ್ಯಾಗ ಮೂರ್ತಿ ಬಾಹುಬಲಿಗೆ ಕಾವ್ಯಾಭಿಷೇಕ ಈ ಕವಿಗೋಷ್ಠಿಯನ್ನು ಆಯೋಜಿಸಿದ ಕಾರ್ಕಳ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಪರಿಕಲ್ಪನೆ ವಿನೂತನವಾದುದು. ಕಾವ್ಯಾಭಿಷೇಕದಲ್ಲಿ ಬಾಹುಬಲಿಯ ಸಾರಿದ ಅಹಿಂಸೆ ಸತ್ಯ ಶಾಂತಿ ಸಾಮರಸ್ಯದ ತತ್ವ ನಮಗೆ ಅನುಭೂತಿಯಾಯಿತು.
ಬಾಹುಬಲಿಯ ಪ್ರತಿಮೆಯು ಸದಾ ಚೈತನ್ಯ ದಾಯಕ. ಮಾತು ಮನದ ದೈವವಾದರೆ ಮೌನ ಮಾತಿನ ಪ್ರತಿಮೆ ವರಕವಿ ಬೇಂದ್ರೆಯವರ ನುಡಿ ತೋರಣದ ಚೆಲುವಿನಂತೆ ಕಾವ್ಯಾಭಿಷೇಕದಲ್ಲಿ ಕಂಡಂತಾಯಿತು. ಬಾಹುಬಲಿಯ ಭಾವ ಅದು ವಿನೀತ ಭಾವ. ಕವಿತೆಯಲ್ಲಿ ಆವಿರ್ಭವಿಸಿ ಸಹೃದಯರಿಗೆ ವಿಶೇಷ ರಸಾನುಭೂತಿಯಾಯಿತು. ಬಾಹುಬಲಿಯ ಪರಿಶುದ್ಧ ವ್ಯಕ್ತಿತ್ವದ ಆರಾಧನೆಯೇ ಕಾವ್ಯಾಭಿಷೇಕದಲ್ಲಿ ಕವಿಗಳ ಸಂಕಲ್ಪವಾಗಿದೆ. ಕಾವ್ಯಾಭಿಷೇಕದಲ್ಲಿ ಬಾಹುಬಲಿಯ ಆದರ್ಶಗಳು ಗುಣಗಾನ ಮತ್ತು ತಾತ್ವಿಕತೆಯನ್ನು ತಿಳಿಸಿದೆ. ಸರ್ವ ಜನಾಂಗದ ಶಾಂತಿಯ ತೋಟದ ನಾಡಿನಲ್ಲಿ ಕಾರ್ಕಳ ಜೈನರುದ್ಯಾನದ ಚೆಲುವಿದೆ ಎಂದರು.
ಸಭೆಯ ಅಧ್ಯಕ್ಷತೆಯನ್ನು ಘಟಕದ ಅಧ್ಯಕ್ಷ ಪ್ರಭಾಕರ ಶೆಟ್ಟಿ ಕೊಂಡಳ್ಳಿ ವಹಿಸಿ, ಮುಂದಿನ ವರ್ಷ ಕಾರ್ಕಳ ಮಸ್ತಕಾಭಿಷೇಕದ ಸಂಭ್ರಮ ಇಡೀ ಕನ್ನಡ ನಾಡಿಗೆ ಪಸರಿಸಲಿದೆ. ಈ ಸಂಭ್ರಮಕ್ಕೆ ಪೂರಕವಾಗಿ ಕಾವ್ಯಾಭಿಷೇಕದ ಪರಿಕಲ್ಪನೆಯಲ್ಲಿ ಈ ಕವಿಗೋಷ್ಠಿ ಪರಿಕಲ್ಪನೆ ಎಂದರು.
ಗೋಷ್ಠಿಯ ಉದ್ಘಾಟಿಸಿದ ಕರ್ನಾಟಕ ಕ್ವಾರಿ ಮತ್ತು ಸ್ಟೋನ್ ಅಸೋಸಿಯೇಶನ್ ರಾಜ್ಯಾಧ್ಯಕ್ಷ ಡಾ.ರವೀಂದ್ರ ಶೆಟ್ಟಿ ಮಾತನಾಡಿ, ಇಂತಹ ಅರ್ಥಪೂರ್ಣ ಕಾರ್ಯಕ್ರಮಗಳು ಸಮಾಜದಲ್ಲಿ ಸಾಮರಸ್ಯ ಮೂಡಿಸುವಲ್ಲಿಹಾಗೂ ಬಾಹುಬಲಿಯು ತ್ಯಾಗವನ್ನು ಸಾರಿದ ಭೋಗವನ್ನು ತ್ಯಜಿಸಿದ ಸಮನ್ವಯದ ಸಾಮರಸ್ಯ ಬೆಳಗಿಸಿದ ಜೀವನವೇ ನಮಗೆ ಸಂದೇಶವಾಗಿದೆ ಎಂದರು.
ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗರು ಆಶಯ ನುಡಿಗಳನ್ನಾಡಿ, ತಾವು ರಚಿಸಿದ ಕವನ ವಾಚಿಸಿದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಕಾರ್ಕಳ ಜೈನ ಧರ್ಮ ಜೀರ್ಣೋದ್ಧಾರ ಸಂಘದ ಗೌರವ ಕಾರ್ಯದರ್ಶಿ ಮೋಹನ್ ಪಡಿವಾಳ್ ರಂಗ ಸಂಸ್ಕೃತಿ ಕಾರ್ಕಳ ಅಧ್ಯಕ್ಷ ನಿತ್ಯಾನಂದ ಪೈ ತಾಲೂಕು ಸಮ್ಮೇಳನ ಸರ್ವಾಧ್ಯಕ್ಷ ಸಿದ್ಧಾಪುರ ವಾಸುದೇವ ಭಟ್ಟ ಬೆಟ್ಟದ ಅರ್ಚಕ ನಾಗರಾಜ ಇಂದ್ರ ಶುಭ ಹಾರೈಸಿದರು. ಘಟಕದ ಕೋಶಾಧಿಕಾರಿ ಅರುಣ್ ರಾವ್ ಗೌರವ ಕಾರ್ಯದರ್ಶಿ ಸುಧಾಕರ ಪೊಸ್ರಾಲ್ ಕಾರ್ಯದರ್ಶಿ ದೇವದಾಸ ಕೆರೆಮನೆ ಇದ್ದರು. ಭೋಜರಾಜ ಕಡಂಬ ಹಾಗೂ ನಾಗರಾಜ ಇಂದ್ರ ಜಿನಸ್ತುತಿಗೈದರು. ಪ್ರಾಂಜಲಿ ಜಿನಸ್ತುತಿ ಗಾಯನ ಮಾಡಿದರು. ಶಶಿಕಲಾ ಹೆಗ್ಡೆ ಪ್ರಾರ್ಥಿಸಿ, ಪ್ರಭಾಕರ ಶೆಟ್ಟಿ ಕೊಂಡಳ್ಳಿ ಸ್ವಾಗತಿಸಿ, ಗಣೇಶ್ ಜಾಲ್ಸೂರು ನಿರೂಪಿಸಿದರು. ಸುಧಾಕರ ಪೊಸ್ರಾಲು ಧನ್ಯವಾದವಿತ್ತರು. ಶಿವಸುಬ್ರಹ್ಮಣ್ಯ ಭಟ್, ಜಿಲ್ಲಾ ಪ್ರತಿನಿಧಿ ನರಸಿಂಹ ಮೂರ್ತಿ, ತಿಪ್ಪೇಸ್ವಾಮಿ, ಸಮರ್ಥ್ ಸಹಕರಿಸಿದರು.

ಕವಿಗೋಷ್ಠಿ

ಕವಿಗೋಷ್ಠಿಯಲ್ಲಿ ಸಿದ್ಧಾಪುರ ವಾಸುದೇವ ಭಟ್ಟ, ಗಂಗಾಧರ ಪಣಿಯೂರು, ರಮೇಶ್ ಪ್ರಭು, ಬಿ.ವಿ. ರಾವ್ ಮಾಲತಿ ವಸಂತರಾಜ್, ಅನುಪಮ ಚಿಂಪ್ಲೂಕರ್, ಸುಲೋಚನಾ ಬಿ.ವಿ., ಶೈಲಜಾ ಹೆಗ್ಡೆ, ಡಾ. ಸುಮತಿ ಪ್ರಜ್ವಲಾ ಶೆಣೈ, ಹರಿಪ್ರಸಾದ್ ನಂದಳಿಕೆ, ಅವನೀ ಉಪಾಧ್ಯ, ದೇವದಾಸ ಕೆರೆಮನೆ ಮತ್ತು ಗಣೇಶ್ ಜಾಲ್ಸೂರು ಕವನದ ಮೂಲಕ ಕಾವ್ಯಾಭೀಷಕ ಮಾಡಿದರು.

ಗೌರವಧನ ಒದಗಿಸಿ ಕೊಡಲು ಪಶುಸಖಿಯರಿಂದ ಸಚಿವರಿಗೆ ಮನವಿ



ಕಡಬ: ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆಯ ಪಶುಸಖಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾ.ಪಂ. ಸಂಜೀವಿನಿ ಒಕ್ಕೂಟದ ಪಶು ಸಖಿಯರಿಗೆ ಇಲಾಖಾ ವತಿಯಿಂದ ಗೌರವಧನ ಒದಗಿಸಿಕೊಬೇಕೆಂದು ಜಿಲ್ಲೆಯ ವಿವಿಧ ತಾಲೂಕಿನ ಪಶುಸಖಿಯರು ಪಶು ಸಂಗೋಪನಾ ಮತ್ತು ರೇಷ್ಮೆ ಇಲಾಖಾ ಸಚಿವ ವೆಂಕಟೇಶ್‌ಗೆ ಮನವಿ ಮಾಡಿದರು.
ಸಚಿವರು ಕ್ಯೊಲ ಪಶು ವೈದ್ಯಕೀಯ ಕಾಲೇಜಿಗೆ ಭೇಟಿ ನೀಡಿದ ವೇಳೆ ಮನವಿ ಸಲ್ಲಿಸಿದ ಪಶು ಸಖಿಯರು ನಾವು ಸಂಜೀವಿನಿ ಗ್ರಾ.ಪಂ. ಮಟ್ಟದ ಒಕ್ಕೂಟದ ಸಿಬ್ಬಂದಿ 2022–23ನೇ ಸಾಲಿನಿಂದ ಎನ್ ಆರ್‌ಎಲ್‌ಎಂ ಹಾಗೂ ಒಗ್ಗೂಡಿಸುವಿಕೆ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದೇವೆ. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಕಾರ್ಯ ಚಟುವಟಿಕೆಗಳಾದ ಲಸಿಕಾ ಕಾರ್ಯಕ್ರಮ, ಪಶು ಧನ್ ಆ್ಯಪ್ ನಲ್ಲಿ ಜಾನುವಾರುಗಳ ಟ್ಯಾಗ್ ಎಂಟ್ರಿ, ಕರುಗಳ ನೋಂದಣಿ, ರೇಬೀಸ್ ಲಸಿಕೆ, ಜಾನುವಾರು ಗಣತಿ, ರೈತರಿಗೆ ಇಲಾಖೆಯ ಮಾಹಿತಿಗಳು ಹಾಗೂ ಇತರ ಇಲಾಖಾ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಸಂಬಂಧಪಟ್ಟ ಇಲಾಖಾ ವ್ಯಾಪ್ತಿಯ ರೈತರ ಮತ್ತು ಇಲಾಖೆಯ ನಡುವೆ ಕೊಂಡಿಯಾಗಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದೇವೆ. ಆದರೆ, ಎನ್.ಎಲ್. ಆರ್.ಎಂ. ಯೋಜನೆಯಡಿ ಸಂಜೀವಿನಿ ಒಕ್ಕೂಟಗಳ ಮುಖಾಂತರ ಮಾಸಿಕ ಗೌರವಧನ ಮಾತ್ರ ಪಡೆಯುತ್ತಿದ್ದೇವೆ. ಇಲಾಖೆಯಿಂದ ಗೌರವ ಧನ, ಪ್ರಯಾಣ ಭತ್ಯೆ ಹಾಗೂ ಮೊಬೈಲ್ ಇಂಟರ್ನೆಟ್ ಭತ್ಯೆ ಸೌಲಭ್ಯವನ್ನು ಒದಗಿಸಿಕೊಡುವಲ್ಲಿ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಸೂಚಿಸಬೇಕು. ಸರಕಾರದ ಮಟ್ಟದಲ್ಲಿನಮ್ಮ ಸಮಸ್ಯೆಯ ಬಗ್ಗೆ ಪ್ರಸ್ತಾಪ ಮಾಡಿ ನ್ಯಾಯ ಒದಗಿಸಿಕೊಡಬೇಕೆಂದು ವಿನಂತಿಸಿದರು.
ಈ ಕುರಿತು ಪರಿಶೀಲಿಸುವುದಾಗಿ ಸಚಿವರು ಭರವಸೆ ನೀಡಿದರು. ಈ ಸಂದರ್ಭ ಶಾಸಕಿ ಭಾಗೀರಥಿ ಮುರುಳ್ಯ ಹಾಗೂ ಇಲಾಖಾಧಿಕಾರಿಗಳು ಉಪಸ್ಥಿತರಿದ್ದರು.

ಸಿ.ವಿ. ರಾಮನ್ ಕೊಡುಗೆ ಯುವ ಜನತೆಗೆ ಸ್ಫೂರ್ತಿ: ಪ್ರೊ.ಎ.ಪಿ.ರಾಧಾಕೃಷ್ಣ



ಪುತ್ತೂರು: ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿಜ್ಞಾನ ದಿನವು ಅತ್ಯಂತ ಮಹತ್ವದ ದಿನವಾಗಬೇಕು. ವಿಜ್ಞಾನ ಕ್ಷೇತ್ರಕ್ಕೆ ಹಲವಾರು ವಿಜ್ಞಾನಿಗಳು ಕೊಡುಗೆ ನೀಡಿದ್ದಾರೆ. ಅದರಲ್ಲೂ ಶ್ರೇಷ್ಠ ವಿಜ್ಞಾನಿ ಸಿ.ವಿ. ರಾಮನ್ ಅವರ ಕೊಡುಗೆ ಅಪಾರ ಎಂದು ಪುತ್ತೂರಿನ ಸಂತ ಫಿಲೋಮಿನಾ ಕಾಲೇಜಿನ ನಿವೃತ್ತ ಭೌತಶಾಸ್ತ್ರ ಉಪನ್ಯಾಸಕ ಪ್ರೊ.ಎ.ಪಿ. ರಾಧಾಕೃಷ್ಣ ಹೇಳಿದರು.
ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ(ಸ್ವಾಯತ್ತ) ಮಹಾವಿದ್ಯಾಲಯದಲ್ಲಿ ಪುತ್ತೂರು ಇದರ ವಿಜ್ಞಾನ ಸಂಘ , ಭೌತಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ ಜಂಟಿ ಆಶ್ರಯದಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕದಿಂದ ಜ್ಞಾನ ಪಡೆಯಲು ಸಾಧ್ಯವಾಗುವುದಿಲ್ಲ. ಅದರೊಂದಿಗೆ ಪ್ರಾಯೋಗಿಕ ಚಟುವಟಿಕೆಗಳಲ್ಲೂ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆಯು ಕೃತಕ ಬುದ್ಧಿಮತ್ತೆ, ಚಾಟ್ ಜಿಪಿಟಿಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಯುವ ಮನಸ್ಸುಗಳಿಗೆ ವಿಜ್ಞಾನ ಕ್ಷೇತ್ರದಲ್ಲಿ ಭರಪೂರ ಅವಕಾಶಗಳಿವೆ. ಅದನ್ನು ಸದುಪಯೋಗಪಡಿಸಿಕೊಂಡರೆ ಉತ್ತಮ ಎಂದು ಅವರು ತಿಳಿಸಿದರು.
ವಿಜ್ಞಾನ ಕ್ಷೇತ್ರಕ್ಕೆ ಸಿ.ವಿ. ರಾಮನ್ ನೀಡಿರುವ ಕೊಡುಗೆಯನ್ನು ಇಂದಿನ ವಿದ್ಯಾರ್ಥಿಗಳು ಮರೆಯಬಾರದು. ಅವರ ಸಾಧನೆ ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಬೇಕು ಎಂದು ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್ ಹೇಳಿದರು.
ವೇದಿಕೆಯಲ್ಲಿ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಶಿವಪ್ರಸಾದ್ ಕೆ.ಎಸ್.,

ಕೆ.ಎಸ್.ಹೆಗ್ಡೆ ಆಸ್ಪತ್ರೆಯಲ್ಲಿ ವಿಶ್ವ ಶ್ರವಣ ದಿನಾಚರಣೆ, 'ನಿಶ್ಯಬ್ದ' ಹೆಸರಲ್ಲಿ ಜಾಗೃತಿ



ಉಳ್ಳಾಲ: ವೈದ್ಯಕೀಯ ಕ್ಷೇತ್ರದಲ್ಲಿ ಆಚರಿಸಲ್ಪಡುವ ಹಲವು ದಿನಾಚರಣೆಗಳ ಪೈಕಿ ಶ್ರವಣ ದಿನವೂ ಮಹತ್ವದ್ದಾಗಿದೆ.ನಮ್ಮ ಜೀವನ ಶೈಲಿಯಿಂದಲೇ ಶ್ರವಣ ದೋಷದ ಸಮಸ್ಯೆಗಳನ್ನ ನಾವು ಅನುಭವಿಸುವಂತಾಗಿದೆ. ಕರ್ಕಶ ಮತ್ತು ಅತಿಯಾದ ಶಬ್ದವು ನಮ್ಮ ಕಿವಿ ಮತ್ತು ಮೆದುಳಿನ ಮೇಲೆ ಗಂಭೀರ ಪರಿಣಾಮ ಬೀರುವ ಮೂಕ ಕೊಲೆಗಾರ ಆಗಿದ್ದು ಶಬ್ದ ಮಾಲಿನ್ಯ ಹಾಗೂ ಶ್ರವಣ ದೋಷಗಳ ಬಗ್ಗೆ 'ನಿಶ್ಯಬ್ದ' ಎಂಬ ಹೆಸರಿನಲ್ಲಿ ಜಾಗೃತಿಯನ್ನು ಮೂಡಿಸುತ್ತಿರುವ ನಿಟ್ಟೆ ವಿವಿ ಅಧೀನದ ಕ್ಷೇಮ ಸಂಸ್ಥೆಯೊಂದಿಗೆ ನಮ್ಮ ಸಂಸ್ಥೆಯು ಕೈಜೋಡಿಸಿದೆ ಎಂದು ಎಂಆರ್‌ಪಿಎಲ್ ಕಾರ್ಯನಿರ್ವಾಹಕ ನಿರ್ದೇಶಕ ಆನಂದ್ ಕುಮಾರ್ ಹೇಳಿದರು.
ನಿಟ್ಟೆ ಪರಿಗಣಿತ ವಿವಿ ಅಧೀನದ ದೇರಳಕಟ್ಟೆ ಕೆ.ಎಸ್.ಹೆಗ್ಡೆ ವೈದ್ಯಕೀಯ ಅಕಾಡೆಮಿಯ ನಾಸಾಕರ್ಣ ಕಂಠಶಾಸ್ತ್ರ (ಓಟೋರಿನೋಲರಿಂಗಾಲಜಿ) ವಿಭಾಗದ ವತಿಯಿಂದ ದೇರಳಕಟ್ಟೆ ಜಸ್ಟೀಸ್ ಕೆ.ಎಸ್.ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯ ಚಿಂತನ ಸಭಾಂಗಣದಲ್ಲಿ ಗುರುವಾರ ನಡೆದ 'ವಿಶ್ವ ಶ್ರವಣ ದಿನ'ದ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.
ನಿಶ್ಯಬ್ಧ ಜಾಗೃತಿ ಅಭಿಯಾನದಲ್ಲಿ ಜಿಲ್ಲೆಯ ನೂರಕ್ಕೂ ಹೆಚ್ಚು ಶಾಲೆಗಳ ಹನ್ನೊಂದು ಸಾವಿರದಷ್ಟು ವಿದ್ಯಾರ್ಥಿ ಗಳು ಭಾಗವಹಿಸಿ ಪ್ರಯೋಜನ ಪಡಕೊಂಡಿದ್ದಾರೆ ಎಂದರು.
ನಿಟ್ಟೆ ವಿವಿ ಐಎಸ್‌ಆರ್ ಮತ್ತು ಸಿಆರ್ ಎಲ್ ಉಪಾಧ್ಯಕ್ಷ ಪ್ರೊ. ಡಾ.ಸತೀಶ್ ಕುಮಾರ್ ಭಂಡಾರಿ ಮಾತನಾಡಿದರು.
ಉಪಕುಲಪತಿ ಪ್ರೊ.ಎಂ.ಎಸ್ ಮೂಡಿತ್ತಾಯ ಅಧ್ಯಕ್ಷತೆ ವಹಿಸಿದ್ದರು. ಸುರತ್ಕಲ್ ಎನ್‌ಐಟಿಕೆ ನಿವೃತ್ತ ಡೀನ್ ಪ್ರೊ. ಡಾ.ಜಿ. ಶ್ರೀನಿಕೇತನ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಡಾ.ಮಹೇಶ್ವರಿ ಸಿಂಗ್, ಕ್ಷೇಮಾ ಡೀನ್ ಪ್ರೊ.ಬಿ. ಸಂದೀಪ್ ರೈ ಇದ್ದರು. ಇಎನ್ ಟಿ ವಿಭಾಗದಮುಖ್ಯಸ್ಥಪ್ರೊ.ಡಾ.ವಾದೀಶ ಭಟ್ ಸ್ವಾಗತಿಸಿದರು.ಡಾ.ನೀಮಾ ನಿರೂಪಿಸಿದರು. ಡಾ.ಶ್ರವಣ್ ಆಳ್ವ ವಂದಿಸಿದರು.

ಕಸದ ಬುಟ್ಟಿಯಂತೆ ಕಿವಿಯ ಕಡೆಗಣನೆ

ಕಣ್ಣಿನ ಬಗ್ಗೆ ಬಹಳಷ್ಟು ಕಾಳಜಿ ವಹಿಸುವ ನಾವು ನಮ್ಮ ಕಿವಿಗಳನ್ನ ಮಾತ್ರ ಕಸದ ಬುಟ್ಟಿಯ ತರ ಕಡೆಗಣಿಸುತ್ತಿದ್ದೇವೆ. ರಾಜಕೀಯ,ಕಾಲೇಜು ಚುನಾವಣೆಗಳಲ್ಲಿ ಅಭ್ಯರ್ಥಿಗಳು ಗೆದ್ದರೆ ವಿನಾ ಕಾರಣ ಉತ್ಪ್ರೇಕ್ಷೆ ಸೃಷ್ಟಿಸಿ ಪಟಾಕಿ ಸಿಡಿಸುವುದು. ದೇವಸ್ಥಾನ,ಜಾತ್ರೆ,ಕೋಲ,ಯ ಕ್ಷಗಾನಗಳಲ್ಲೂ ಅನಗತ್ಯವಾಗಿ ಪಟಾಕಿ ಸಿಡಿಸಿ ನಮ್ಮ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳನ್ನ ಶಬ್ದ ಉತ್ಪಾದನಾ ಕೇಂದ್ರಗಳನ್ನಾಗಿ ಪರಿವರ್ತಿಸುತ್ತಿದ್ದೇವೆ.ಧಾರ್ಮಿಕ ಕ್ಷೇತ್ರಗಳಲ್ಲಿ ಪ್ರಶಾಂತತೆ ಇದ್ದರೆ ಅಲ್ಲಿ ಸಿಗುವ ನೆಮ್ಮದಿ ಬೇರೆಲ್ಲೂ ಸಿಗಲು ಸಾಧ್ಯವಿಲ್ಲ

• ಪ್ರೊ.ಡಾ.ಸತೀಶ್ ಕುಮಾರ್ ಭಂಡಾರಿ

ಕ್ಷಯರೋಗಿಗಳಿಗೆ ಪೌಷ್ಟಿಕಾಹಾರ ವಿತರಣೆ, ವೈದ್ಯಕೀಯ ನೆರವು: ಸಂಸದ ಚೌಟ ಶ್ಲಾಘನೆ



ಬಂಟ್ವಾಳ: ಕ್ಷಯರೋಗಿಗಳನ್ನು ಗುರುತಿಸಿ ಅವರಿಗೆ ಪೌಷ್ಟಿಕಾಹಾರ ನೀಡುವುದರ ಜೊತೆಗೆ ವೈದ್ಯಕೀಯ ನೆರವು ನೀಡುತ್ತಿರುವ ಸೇವಾಂಜಲಿ ಪ್ರತಿಷ್ಠಾನದ ಕಾರ್ಯ ದೇವರು ಮೆಚ್ಚುವ ಕೆಲಸ ಹಾಗೂ ಪ್ರಧಾನ ಮಂತ್ರಿಯವರ ಸಂಕಲ್ಪಕ್ಕೆ ಶಕ್ತಿ ತುಂಬುವ ಕಾರ್ಯ ಎಂದು ಸಂಸದ ಕ್ಯಾ ಬ್ರಿಜೇಶ್ ಚೌಟ ಹೇಳಿದರು.
ಕೇಂದ್ರ ಸರಕಾರದ ನಿಕ್ಷಯ್ ಮಿತ್ರ ಯೋಜನೆಯಡಿ ಫರಂಗಿಪೇಟೆಯ ಸೇವಾಂಜಲಿ ಪ್ರತಿಷ್ಠಾನದ ವತಿಯಿಂದ ಸೇವಾಂಜಲಿ ಸಭಾಗ್ರಹದಲ್ಲಿ ಗುರುವಾರ ನಡೆದ ಕ್ಷಯ ರೋಗಿಗಳಿಗೆ ಆಹಾರ ದವಸಧಾನ್ಯ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.
ಕೆ.ಎಸ್. ಹೆಗ್ಡೆ ಆಸ್ಪತ್ರೆಯ ವೈದ್ಯ ಡಾ. ಆದರ್ಶ್ ಶೆಟ್ಟಿ ಕ್ಷಯರೋಗದ ಬಗ್ಗೆ ಆರೋಗ್ಯ ಮಾಹಿತಿ ನೀಡಿದರು.
ರೋಟರಿ ಕ್ಲಬ್ ಬಂಟ್ವಾಳ ಅಧ್ಯಕ್ಷ ಬಸ್ತಿ ಮಾಧವ ಶೆಣೈ ಮಾತನಾಡಿ, ಈ ಕಾರ್ಯ ಕ್ರಮದ ಸದುಪಯೋಗ ಪಡೆಯುವಂತೆ ತಿಳಿಸಿದರು. ರೋಟರಿ ಕ್ಲಬ್‌ನ ವಲಯ ಸೇನಾನಿ ಪ್ರಕಾಶ್ ಬಾಳಿಗ, ಮಾಜಿ ಜಿಲ್ಲಾ ಕಾರ್ಯದರ್ಶಿ ನಾರಾಯಣ ಹೆಗ್ಡೆ ನಿವೃತ್ತ ಅಬಕಾರಿ ಅಧಿಕಾರಿ ಎಂ.ಆರ್. ನಾಯರ್, ಸೇವಾಂಜಲಿ ಆರೋಗ್ಯ ಕೇಂದ್ರದ ವೈದ್ಯ ಡಾ. ಚೇತನ್, ಕೆ.ಎಸ್. ಹೆಗ್ಡೆ ಆಸ್ಪತ್ರೆಯ ವೈದ್ಯ ಡಾ. ಅಖಿಲೇಶ್ ಇದ್ದರು. ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೃಷ್ಣಕುಮಾರ್ ಪೂಂಜ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಟ್ರಸ್ಟಿ ಕೊಡ್ಮಾನ್ ದೇವದಾಸ್ ಶೆಟ್ಟಿ, ನಾರಾಯಣ ಬೆಳ್ಚಾಡ, ಗಣೇಶ್ ಸುವರ್ಣ, ಭಾಸ್ಕರ ಚೌಟ, ಪದ್ಮನಾಭ ಶೆಟ್ಟಿ ಸುಕೇಶ್ ಶೆಟ್ಟಿ ಪ್ರಶಾಂತ್ ತುಂಬೆ, ವಿಕ್ರಂ ಬರ್ಕೆ, ಶಿವರಾಜ್ ಸುಜೀರ್ ಮತ್ತಿತರರು ಭಾಗವಹಿಸಿದ್ದರು.

ಮಾ.6ರಿಂದ 8ರವರೆಗೆ ದಕ್ಷಿಣ ಮಧ್ಯ ಭಾರತ ರಾಜ್ಯಗಳ 'ಜಾನಪದ ಉತ್ಸವ'

ಉಡುಪಿ: ರಂಗಭೂಮಿ ಉಡುಪಿ ಹಾಗೂ ಕರ್ನಾಟಕ ಜಾನಪದ ಪರಿಷತ್ ಉಡುಪಿ ಜಿಲ್ಲಾ ಘಟಕಗಳು ದಕ್ಷಿಣ ಮಧ್ಯ ಭಾರತ ರಾಜ್ಯಗಳ ಜಾನಪದ ಉತ್ಸವವನ್ನು ಇದೇ ಮಾ.6 ರಿಂದ 8ರವರೆಗೆ ಉಡುಪಿ ಎಂಜಿಎಂ ಕಾಲೇಜಿನ ಮುದ್ದಣ ಮಂಟಪದಲ್ಲಿ ಆಯೋಜಿಸಿದೆ ಎಂದು ರಂಗಭೂಮಿ ಅಧ್ಯಕ್ಷ ಹಾಗೂ ತಲ್ಲೂರ್ಸ್ ಫ್ಯಾಮಿಲಿ ಟ್ರಸ್ಟ್ ತಲ್ಲೂರು ಶಿವರಾಮ ಶೆಟ್ಟಿ ತಿಳಿಸಿದ್ದಾರೆ.
ಈ ಜಾನಪದ ಉತ್ಸವದಲ್ಲಿ ದಕ್ಷಿಣ ಮಧ್ಯ ವಲಯ ಸಾಂಸ್ಕೃತಿಕ ಕೇಂದ್ರ ನಾಗಪುರದ ವತಿಯಿಂದ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಮಧ್ಯಪ್ರದೇಶ ಹಾಗೂ ಛತ್ತೀಸಗಢ ರಾಜ್ಯಗಳ ಜಾನಪದ ಕಲಾ ವೈಭವದ ವೈವಿಧ್ಯತೆ ಮೂರು ದಿನಗಳ ಕಾಲ ಪ್ರದರ್ಶನಗೊಳ್ಳಲಿದೆ ಎಂದರು.
ಜಾನಪದ ಉತ್ಸವವನ್ನು ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಮಾ.6ರ ಸಂಜೆ 5:30ಕ್ಕೆ ಉದ್ಘಾಟಿಸಲಿದ್ದಾರೆ. ತಲ್ಲೂರು ಶಿವರಾಮ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಮಾರಂಭದಲ್ಲಿ ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರದ ನಿರ್ದೇಶಕಿ ಆಸ್ಥಾ ಎಂ. ಕಾರ್ಲೇಕರ್, ಉಡುಪಿ ಶಾಸಕ ಯಶಪಾಲ್ ಸುವರ್ಣ, ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ, ಎಂಜಿಎಂ ಸಂಧ್ಯಾ ಕಾಲೇಜಿನ ಪ್ರಾಂಶುಪಾಲೆ ಡಾ.ದೇವಿದಾಸ್ ನಾಯ್ಕ ಉಪಸ್ಥಿತರಿರುವರು. ಉದ್ಘಾಟನಾ ಕಾರ್ಯಕ್ರಮದ ಬಳಿಕ ವಿವಿಧ ರಾಜ್ಯಗಳ ಜಾನಪದ ಕಲಾ ವೈವಿಧ್ಯತೆ ಪ್ರದರ್ಶನಗೊಳ್ಳಲಿದೆ. ಮಾ.7ರಂದು ಸಹ ಜಾನಪದ ಕಲಾ ವೈವಿಧ್ಯ–2 ಪ್ರದರ್ಶನಗೊಳ್ಳುತ್ತದೆ ಎಂದು ತಿಳಿಸಿದರು.
ಮಾ.8ರಂದು ಜಾನಪದ ಉತ್ಸವದ ಸಮಾರೋಪ ಹಾಗೂ ಜಾನಪದ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಇದರಲ್ಲಿ ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷರೂ ಆಗಿರುವ ಕಲಾ ಪೋಷಕ ಡಾ.ಕೆ. ಶ್ಯಾಮ್ ಭಟ್ ಅವರನ್ನು ಜಾನಪದ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು. ಅಂಬಲಪಾಡಿ ದೇವಳದ ಧರ್ಮದರ್ಶಿ ಡಾ.ನಿ.ಬೀ.ವಿಜಯ ಬಲ್ಲಾಳ್ ಉದ್ಘಾಟಿಸುವರು. ಗುಜ್ಜಾಡಿ ವರುಣ್ ನಾಯಕ್, ಆಸ್ಥಾ ಕಾರ್ಲೇಕರ್ ಮುಖ್ಯ ಅತಿಥಿಗಳಾಗಿರುವರು ಎಂದರು.
ಜಾನಪದ ಉತ್ಸವದಲ್ಲಿ ಆಂಧ್ರದ ಗುರುಮುಲು ನೃತ್ಯ ತೆಲಂಗಾಣದ ಗುಸ್ಸಾದಿ ನೃತ್ಯ ಮಹಾರಾಷ್ಟ್ರದ ಲಾವಣಿ, ಕೋಳಿ ನೃತ್ಯ ತರ್ಪಾ ಕುಣಿತ, ಛತ್ತೀಸ್ ಗಢದ ಪಂಥಿ ಕುಣಿತ, ಮಧ್ಯಪ್ರದೇಶದ ಬಧಾಯಿ ಮತ್ತು ನೋರ್ತಾ ನೃತ್ಯ ಕರ್ನಾಟಕದ ಗೋಂದೋಲು, ಕಂಗೀಲು ಹಾಗೂ ಕೊರಗರ ಸಾಂಸ್ಕೃತಿಕ ನೃತ್ಯ ಪ್ರದರ್ಶನಗೊಳ್ಳಲಿದೆ ಎಂದರು.



ನರಹರಿ ಪರ್ವತದಲ್ಲಿ ಶ್ರೀರಾಮ ಭಜನಾ ಮಂಡಳಿ ರಾಮನಗರ ಬಂಟ್ವಾಳ ಇವರಿಂದ ಸಂಧ್ಯಾ ಭಜನಾ ಸಂಕೀರ್ತತನೆ ನೆರವೇರಿತು. ದೇವಳದ ಆಡಳಿತ ಮೊಕ್ತೇಸರ ಡಾ. ಪ್ರಶಾಂತ್ ಮಾರ್ಲ, ಜೀರ್ಣೋದ್ಧರ ಸಮಿತಿ ಅಧ್ಯಕ್ಷ ಡಾ.ಆತ್ಮರಂಜನ್ ರೈ, ಅರ್ಚಕ ನರೇಶ್ ಮಯ್ಯ, ಪ್ರತಿಭಾ ಎ. ರೈ, ಮೆನೇಜರ್ ಆನಂದ, ಅಜೆಕಲ ಭಾಸ್ಕರ, ಗಿರೀಶ್ ಸಾಲ್ಯಾನ್, ಎಂ.ಎಸ್ ಕುಮಾರ್ ಹಾಗೂ ಭಜನಾ ಸಂಯೋಜಕ ಶಂಕರ ಆಚಾರ್ಯ ಮತ್ತಿತರರು ಉಪಸ್ಥಿತರಿದ್ದರು.

ಪದ್ಮುಂಜ ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆಯಲ್ಲಿ ಹಾರಿಕಾ ಆಶಯ

ಪೂರ್ವಿಕರ ಸಂಘಟಿತ ಶಕ್ತಿಯ ಕೈಕಂರ್ಯದಿಂದ ಹಿಂದು ಧರ್ಮ ಜೀವಂತವಿದೆ



ಬೆಳ್ತಂಗಡಿ: ಸಾವಿರಕ್ಕೂ ಅಧಿಕ ವರ್ಷಗಳ ಮೇಲೆ ನಿರಂತರ ದಾಳಿ ನಡೆದರೂ ಇಂದಿಗೂ ಜಗತ್ತಿನಲ್ಲಿ ಸನಾತನ ಧರ್ಮ ಜೀವಂತವಾಗಿರಲು ನಮ್ಮ ಪೂರ್ವಿಕರು ಸಂಘಟಿತ ಶಕ್ತಿಯ ಮುಖೇನ ನಿರಂತರವಾಗಿ ಧರ್ಮದ ಕೈಂಕರ್ಯ ಕಾರಣ ಎಂದು ಬಾಲವಾಗ್ಮಿ ಹಾರಿಕಾ ಮಂಜುನಾಥ್ ಹೇಳಿದರು.
ಅವರು ಪದ್ಮುಂಜ ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವ ಪ್ರಯುಕ್ತ ಮಾ.4ರಂದು ನಡೆದ ಧಾರ್ಮಿಕ ಸಭೆಯಲ್ಲಿ ಉಪನ್ಯಾಸ ನೀಡಿದರು.
ಮಾಜಿ ಸಂಸದ ನಳಿನ್‌ಕುಮಾರ್ ಕಟೀಲ್ ಮಾತನಾಡಿ, ದೇಶದಲ್ಲೇ ಧಾರ್ಮಿಕ ನಂಬಿಕೆ, ಚಿಂತನೆಗಳು, ಕಾರ್ಯಗಳು, ದೈವಗಳು ನಂಬಿಕೆ ಯೊಂದಿಗೆ ಧರ್ಮ ಜಾಗೃತವಾಗಿರುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಎಂದರು.
ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ, ಮಾತನಾಡಿ, ಬ್ರಹ್ಮಕಲಶೋತ್ಸವದಿಂದ ಊರು ಸುಭೀಕ್ಷೆಗೊಂಡು ಸಮೃದ್ಧಿಯಾಗುತ್ತದೆ ಎಂದರು.
ಆಡಳಿತ ಮಂಡಳಿ ಕೋಶಾಧಿಕಾರಿ ರಕ್ಷಿತ್ ಪಣೆಕ್ಕರ ಮಾತನಾಡಿ, ಕ್ಷೇತ್ರವು 300 ವರ್ಷಗಳ ಬಳಿಕ ನಾಲ್ಕನೇ ಬ್ರಹ್ಮಕಲಶೋತ್ಸವದ ಸೋಜಿಗದಲ್ಲಿದೆ ಎಂದರು.
ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಿಠ್ಠಲ್ ಶೆಟ್ಟಿ ಕೊಲ್ಲೊಟ್ಟು ಅಧ್ಯಕ್ಷತೆ ವಹಿಸಿದ್ದರು. ಧಾರ್ಮಿಕ ಮುಖಂಡ ಕಿರಣ್ ಚಂದ್ರ ಪುಷ್ಪಗಿರಿ, ಬೆಳ್ತಂಗಡಿ ಬಂಗೇರ ಬ್ರಿಗೇಡ್ ಅಧ್ಯಕ್ಷೆ ಬಿನುತಾ ಬಂಗೇರ, ಗುರುವಾಯನಕೆರೆ ಎಕ್ಸೆಲ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಮಂತ್ ಕುಮಾರ್ ಜೈನ್, ಶ್ರೀಕ್ಷೇತ್ರ ಧ.ಗ್ರಾ. ಯೋ. ನಿವೃತ್ತ ಪ್ರಾದೇಶಿಕ ನಿರ್ದೇಶಕ ದುಗ್ಗೇಗೌಡ, ದ.ಕ. ಮತ್ತು ಉಡುಪಿ ಜಿಲ್ಲಾ ಕಲ್ಲು ಗಣಿಗಾರಿಕಾ ಸಂಘ ಅಧ್ಯಕ್ಷ ಮನೋಜ್ ಶೆಟ್ಟಿ ಬೆಳ್ತಂಗಡಿ ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ದೇವದಾಸ್ ಶೆಟ್ಟಿ ಕಣಿಯೂರು ಗ್ರಾ.ಪಂ.ಮಾಜಿ ಅಧ್ಯಕ್ಷ ಸೀತಾರಾಮ ಮಡಿವಾಳ, ಪುತ್ತೂರು ಎಪಿಎಂಸಿ ಮಾಜಿ ಅಧ್ಯಕ್ಷ ರಾಧಕೃಷ್ಣ ರೈ ಬೂಡಿಯಾರ್, ಇಚ್ಲೂರು ಬಾಲಸುಬ್ರಹ್ಮಣ್ಯ ದೇವಸ್ಥಾನದ ಪ್ರಧಾನ ಅರ್ಚಕ ಸುರೇಶ್ ಪುತ್ತುರಾಯ, ಮುಂಡೂರು ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಆನಂದ ಗೌಡ, ಆಡಳಿತ ಮಂಡಳಿ ಅಧ್ಯಕ್ಷ ಸದಾನಂದ ಮೇಲಾಂಟ ಮೊಗರೋಡಿ ಹಾಗೂ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಶಿವಶಂಕರ್ ನಾಯಕ್ ಮಾರುತಿಪುರ ಉಪಸ್ಥಿತರಿದ್ದರು. ವಿಲಾಸ್ ಪ್ರಾರ್ಥಿಸಿ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ನಾರಾಯಣ ಗೌಡ ಮುಚ್ಚೂರು ವಂದಿಸಿ, ಕೆ.ಪಿ.ನವೀನ್ ಕುಮಾರ್ ಹಾಗೂ ಶೋಭಾ ಪಿ.ಎಸ್. ಕಾರ್ಯಕ್ರಮ ನಿರೂಪಿಸಿದರು.

ವೈದಿಕ, ಸಾಂಸ್ಕೃತಿಕ ಕಾರ್ಯಕ್ರಮ

ವೈದಿಕ ಕಾರ್ಯಕ್ರಮಗಳು, ಭಜನೆ ನಡೆಯಿತು. ಮೈಸೂರು ರಾಮಚಂದ್ರ ಆಚಾರ್ ಅವರಿಂದ ದಾಸವಾಣಿ ಮತ್ತು ಭಕ್ತಿಗೀತೆ, ಮಂಗಳೂರು ಶ್ರೀ ಶಾರದಾ ಅಂಧರ ಗೀತ ಗಾಯನ ಕಲಾ ಸಂಘದಿಂದ ಭಕ್ತಿ ರಸಮಂಜರಿ, ಕಣಿಯೂರು ಪಿಲಿಗೂಡು ಅಂಗನವಾಡಿ ಕೇಂದ್ರ, ಪುಟಾಣಿಗಳಿಂದ ಚಿಣ್ಣರ ಚಿಲಿಪಿಲಿ, ವಿದ್ಯಾರ್ಥಿಗಳಿಂದ ಮನರಂಜನೆ, ಕಣಿಯೂರು ಕಸಬಾ, ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಂದ ನೃತ್ಯ, ವೈಭವ ಗಮನ ಸೆಳೆಯಿತು.

ಸುತ್ತ ಮುತ್ತ

ಎನ್‌ಸಿಸಿ, ಸ್ಕೌಟ್-ಗೈಡ್ ವಿದ್ಯಾರ್ಥಿಗಳ ಬೀಳ್ಕೊಡುಗೆ

ವಿಟ್ಲ: ವಿಟ್ಲ ಎಜುಕೇಶನ್ ಸೊಸೈಟಿಯ ಹೈಸ್ಕೂಲ್ ವಿಭಾಗದ 2025–26ನೇ ಸಾಲಿನ ಎನ್‌ಸಿಸಿ, ಸ್ಕೌಟ್ ಮತ್ತು ಗೈಡ್ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮ ವಿಟ್ಲ ಎಜುಕೇಶನ್ ಸೊಸೈಟಿ ಅಧ್ಯಕ್ಷ ಮುರುಳಿ ತಿರುಮಲೇಶ್ವರ ಭಟ್ ಅಧ್ಯಕ್ಷತೆಯಲ್ಲಿ ನಡೆಯಿತು.

ಸಂಚಾಲಕ ರಾಧಾಕೃಷ್ಣ ನಾಯಕ್, ಕೋಶಾಧಿಕಾರಿ ಬಾಬು ಕೊಪ್ಪಳ, ಸದಸ್ಯ ನಿತ್ಯಾನಂದ ನಾಯಕ್ ಮತ್ತು ಪದ್ಮಯ್ಯ ಗೌಡ, ನಿವೃತ್ತ ಯೋಧ ಕ್ಯಾಪ್ಟನ್ ದಾಸಪ್ಪ ಪೂಜಾರಿ, ಎನ್‌ಸಿಸಿ ಮ್ಯಾಸ್ಟರ್ ಶ್ರೀನಿವಾಸ್, ಪ್ರಾಂಶುಪಾಲ ಆದರ್ಶ ಚೊಕ್ಕಾಡಿ, ಉಪಪ್ರಾಂಶುಪಾಲ ಕಿರಣ್ ಕುಮಾರ್, ಶಿಕ್ಷಕಿ ವೀಣಾ, ಎನ್‌ಸಿಸಿ, ಸ್ಕೌಟ್ ಮತ್ತು ಗೈಡ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಹೆದ್ದಾರಿ ಮೇಲ್ದರ್ಜೆಗೆ ಏರಿಸಲು ಪ್ರಭಾಕರ ಪ್ರಭು ಮನವಿ

ಬಂಟ್ವಾಳ: ಕಟಪಾಡಿ–ಉಳ್ಳಾಲ ಅಬ್ಬಕ್ಕ ಸರ್ಕಲ್ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೆ ಏರಿಸಲು ಬಂಟ್ವಾಳ ತಾ.ಪಂ. ಮಾಜಿ ಸದಸ್ಯ ಪ್ರಭಾಕರ ಪ್ರಭು ಅವರು ಸಂಸದರಾದ



ಕ್ಯಾ. ಬ್ರಿಜೇಶ್ ಚೌಟ ಹಾಗೂ ಕೋಟ ಶ್ರೀನಿವಾಸ ಪೂಜಾರಿಗೆ ಅವರಿಗೆ ಮನವಿ ಮಾಡಿದರು. ಕಟಪಾಡಿ –ಉಳ್ಳಾಲ ಅಬ್ಬಕ್ಕ ಸರ್ಕಲ್ ರಸ್ತೆಯು (ಎಸ್ .ಎಚ್ 300) ರಾಜ್ಯ ಹೆದ್ದಾರಿಯಾಗಿದ್ದು ಕಟಪಾಡಿಯಿಂದ ಪ್ರಾರಂಭ ಗೊಂಡು ಕಾರ್ಕಳ ಮಾರ್ಗವಾಗಿ ಮೂಡಬಿದ್ರಿ, ಸಿದ್ದಕಟ್ಟೆ ಬಂಟ್ವಾಳ ಮಾರ್ಗವಾಗಿ ಮೆಲ್ಕಾರ್ , ಮುಡಿಪು ಮೂಲಕ ಉಳ್ಳಾಲ ಅಬ್ಬಕ್ಕ ಸರ್ಕಲ್ ವರೆಗಿನ ರಾಜ್ಯ ಹೆದ್ದಾರಿಯಲ್ಲಿ ದಿನಂಪ್ರತಿ ಲಕ್ಷಾಂತರ ವಾಹನಗಳು ಸಂಚರಿಸುತ್ತಿದೆ. ರಸ್ತೆಯು ಅಲ್ಲಲ್ಲಿ ತಿರುವುಗಳಿಂದ ಕೂಡಿದ್ದು ವಾಹನಗಳ ಸಂಚಾರಕ್ಕೆ ಬೇಕಾದಷ್ಟು ಅಗಲೀಕರಣ ಇರುವುದಿಲ್ಲ.ಈ ರಸ್ತೆಯು ಈ ಹಿಂದೆ ಎರಡು ಬಾರಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೆ ಏರಿಸುವ ಕುರಿತು ಕೇಂದ್ರ ಸಚಿವ ನಿತಿನ್ ಗಡ್ಕರಿಯಿಂದಲೂ ಘೋಷಣೆಗೊಂಡು ಶಂಕು ಸ್ಥಾಪನೆ ಸಹ ಆಗಿದೆ ಎಂದರು. ಬಳಿಕ ರಾಷ್ಟ್ರೀಯ ಹೆದ್ದಾರಿ ಇಲಾಖಾಧಿಕಾರಿಗಳು ಆಸಕ್ತಿ ವಹಿಸದೇ ಇರುವುದರಿಂದ ರಾಷ್ಟ್ರೀಯ ಹೆದ್ದಾರಿ ಘೋಷಣೆ ಅನುಷ್ಠಾನಕ್ಕೆ ಬಾರದೇ ರಾಜ್ಯ ಹೆದ್ದಾರಿಯಾಗಿಯೇ ಮುಂದುವರಿದಿದೆ ಎಂದು ಮನವಿಯಲ್ಲಿ ಪ್ರಭು ಉಲ್ಲೇಖಿಸಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಸಂಬಂಧಪಟ್ಟ ಕೇಂದ್ರ ಸಚಿವರಿಗೆ ಮನವರಿಕೆ ಮಾಡಿಸಿ ಆದೇಶ ಹೊರಡಿಸಬೇಕೆಂದು ಅವರು ಮನವಿಯಲ್ಲಿ ಆಗ್ರಹಿಸಿದ್ದಾರೆ.

ಕೃಷಿ ಕಾರ್ಮಿಕರ ಕಲ್ಯಾಣ ನಿಧಿ ಮಂಡಲಿಯ ಹೊಸ ಕಚೇರಿ

ಕಾಸರಗೋಡು: ಕಾಸರಗೋಡು ಜಿಲ್ಲಾ ಕೃಷಿ ಕಾರ್ಮಿಕರ ಕಲ್ಯಾಣ ನಿಧಿ ಮಂಡಳಿಯ ಹೊಸ ಕಚೇರಿಯನ್ನು ಕಾಞಂಗಾಡು ನಗರಸಭೆಯ ಅಧ್ಯಕ್ಷ ವಿ.ವಿ.ರಮೇಶನ್ ಉದ್ಘಾಟಿಸಿದರು. ಈ ಕಚೇರಿಯನ್ನು ಕಾಞಂಗಾಡು ಅಲಾಮಿಪಳ್ಳಿಯಲ್ಲಿರುವ ಹೊಸ ಬಸ್ ನಿಲ್ದಾಣ ಸಂಕೀರ್ಣಕ್ಕೆ ಸ್ಥಳಾಂತರಿಸಲಾಗಿದೆ. ಉನ್ನತ ಶಿಕ್ಷಣ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ಕೃಷಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ ವಿತರಣೆಯ ರಾಜ್ಯಮಟ್ಟದ ಉದ್ಘಾಟನೆಯನ್ನು ಕಲ್ಯಾಣ ನಿಧಿ ಮಂಡಳಿಯ ಅಧ್ಯಕ್ಷ ಎನ್.ಚಂದ್ರನ್ ಇದೇ ವೇಳೆ ನೆರವೇರಿಸಿದರು. ಪದವಿ, ವೃತ್ತಿಪರ ಪದವಿ, ಸ್ನಾತಕೋತ್ತರ ಪದವಿ, ವೃತ್ತಿಪರ ಪಿಜಿ, ಎಂಬಿಬಿಎಸ್, ಪಾಲಿಟೆಕ್ನಿಕ್, ಟಿಟಿಸಿ, ಐಟಿಐ, ಬಿ.ಎಡ್, ಪ್ಯಾರಾಮೆಡಿಕಲ್ ಮುಂತಾದ ಕೋರ್ಸ್‌ಗಳಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ಮಕ್ಕಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು. ಕಲ್ಯಾಣ ನಿಧಿ ಮಂಡಳಿ ಸದಸ್ಯ ಬಂಗಳಂ ಕುಂಞಿಕೃಷ್ಣನ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಕೆ.ವಿ.ಕುಂಞಿರಾಮನ್, ಕೃಷಿ ಕಾರ್ಮಿಕರ ಸಂಘದ ಮುಖಂಡ ಗಂಗಾಧರನ್ ಪಳ್ಳಿಕಾಪಿಲ್, ವಾಸುದೇವನ್ ನಾಯರ್, ಸುನೀಲ್‌ಕುಮಾರ್, ಮುಹಮ್ಮದ್ ಕುಂಞಿ ಕೊಲಿಯಂಗಲ್, ಇ.ವಿ.ಗಣೇಶನ್, ಟಿ.ಕೃಷ್ಣನ್ ಮತ್ತು ಲೆಕ್ಕಪತ್ರ ಅಧಿಕಾರಿ ಟಿ.ಎಂ.ಜಿಜಿ ಮಾತನಾಡಿದರು. ಹಿರಿಯ ಅಧಿಕಾರಿ ಸಿ.ಸಂಧ್ಯಾ ಅವರು ಮಾಲಿನ್ಯ ಮುಕ್ತ ಪ್ರತಿಜ್ಞೆ ಬೋಧಿಸಿದರು. ಸಿಇಒ ಮುಹಮ್ಮದ್ ಸಿಯಾದ್ ಸ್ವಾಗತಿಸಿ, ಜಿಲ್ಲಾ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್.ವಿಪಿನ್ ವಂದಿಸಿದರು.

ಉಜಿರೆ ಶ್ರೀ ಜನಾರ್ದನ ದೇವರ ಬ್ರಹ್ಮಕಲಶೋತ್ಸವದಲ್ಲಿ ಡಾ. ಭಟ್ಟಾರಕ ಚಾರುಕೀರ್ತಿ ಶ್ರೀ ಸಂದೇಶ

ಸ್ವಧರ್ಮ ನಿಷ್ಠೆ, ಪರಧರ್ಮ ಸಹಿಷ್ಣುತೆ ನಮ್ಮ ಧ್ಯೇಯವಾಗಲಿ

ಬೆಳ್ತಂಗಡಿ: ಜೀವಾತ್ಮ ಸರಿಯಾದರೆ ಮಾತ್ರ ಪರಮಾತ್ಮನನ್ನು ಕಾಣಲು ಸಾಧ್ಯ ಎಂದು ಮೂಡಬಿದ್ರೆ ಜೈನ ಮಠದ ಡಾ. ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ನುಡಿದರು.

ಅವರು ಮಾ.4ರಂದು ಉಜಿರೆ ಶ್ರೀ ಜನಾರ್ದನ ದೇವರ ಬ್ರಹ್ಮಕಲಶೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದಲ್ಲಿ ಆಶೀರ್ವಚನ ನೀಡಿದರು.

ಯುದ್ಧ ಭೀತಿ ದೂರವಾಗಲು ಆಸುರೀ ಸಂಪತ್ತು ದೂರವಾಗಬೇಕು. ಜನ್ಮ ತಾಪತ್ರಯ ಮತ್ತು ಪಾಪವನ್ನು ದೂರಮಾಡುವವನೇ ಜನಾರ್ದನ. ಬ್ರಹ್ಮಾಂಡದಲ್ಲಿ ಎಲ್ಲಾ ಶಕ್ತಿಗಳನ್ನು ಕ್ರೋಢೀಕರಿಸಿ ಜಗತ್ತಿನ ಎಲ್ಲಾ ದೋಷಗಳು ದೂರವಾಗಿ ಎಲ್ಲೆಡೆ ಸುಖ,ಶಾಂತಿ,ನೆಮ್ಮದಿ ನೆಲೆಯಾಗಲಿ. ಸ್ವಧರ್ಮ ನಿಷ್ಠೆ ಪರಧರ್ಮ ಸಹಿಷ್ಣುತೆ ನಮ್ಮ ಧ್ಯೇಯವಾಗಬೇಕು ಎಂದರು.

ಮೂಡಬಿದ್ರಿ ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಮೋಹನ ಆಳ್ವ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ, ಹಿಂದೂ ಜೀವನ ಪದ್ಧತಿ, ದೇಶದ



ಇತಿಹಾಸ ಮತ್ತು ಸಾಂಸ್ಕೃತಿಕತೆಯನ್ನು ಹಿರಿಯರು ಕಟ್ಟಿಕೊಟ್ಟಿದ್ದಾರೆ. ಧರ್ಮವನ್ನು ಬಿಟ್ಟು ನಮ್ಮ ಬದುಕಿಲ್ಲ. ಉಪನಿಷತ್ತು, ಶಾಸ್ತ್ರೀಯ,ಜಾನಪದ ಕಲೆಯ ಮೂಲಕ ಸಾಂಸ್ಕೃತಿಕ ಸಂಪತ್ತು ನಮ್ಮ ದೇಶದಲ್ಲಿರುವಷ್ಟು ಎಲ್ಲೂ ಕಾಣಸಿಗದು. ಮನರಂಜನೆಯ ಹೆಸರಿನಲ್ಲಿ ಸಾಂಸ್ಕೃತಿಕ ತಪ್ಪು ಮಾಡಬಾರದು. ವೈಭವೀಕರಣದಿಂದ ಸಾಂಸ್ಕೃತಿಕ ನಷ್ಟವಾಗುತ್ತಿದೆ. ಧರ್ಮ ಜಾಗೃತಿಯೇ ನಿಜವಾದ ಬ್ರಹ್ಮಕಲಶ ಎಂದರು.

ಮುಸಿಯಾಲು ಉದಯಕುಮಾರ್ ಶೆಟ್ಟಿ ಶುಭ ಹಾರೈಸಿದರು. ಸಮಿತಿ ಅಧ್ಯಕ್ಷ ಶಶಿಧರ ಶೆಟ್ಟಿ ಅಧ್ಯಕ್ಷತೆ ವಹಿಸಿ ಸ್ವಾಗತಿಸಿದರು. ಶ್ರೀ ಜನಾರ್ದನ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಪ್ರತಾಪಸಿಂಹ ನಾಯಕ್, ಗಿರೀಶ್ ಶೆಟ್ಟಿ ತೆಕ್ಕಾರು ಇದ್ದರು. ಸುಬ್ರಹ್ಮಣ್ಯ ಭಟ್, ಹೇಮ ಆಚಾರ್ಯ, ಕೇಶವ ಅವರು ಹಾಡಿರುವ ಜನಾರ್ದನ ಸ್ವಾಮಿ ಭಕ್ತಿಗೀತೆಗಳನ್ನು ಬಿಡುಗಡೆಗೊಳಿಸಲಾಯಿತು.

ಉಪನ್ಯಾಸಕ ಡಾ.ಮಹೇಶ್‌ಕುಮಾರ್ ಶೆಟ್ಟಿ ನಿರೂಪಿಸಿದ ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ರವೀಂದ್ರ ಶೆಟ್ಟಿ ಸುರಭಿ ವಂದಿಸಿದರು. ಪುತ್ತೂರು ನರಸಿಂಹ ನಾಯಕ್ ಅವರಿಂದ ದಾಸಾಮೃತ ಭಕ್ತಿಗಾಯನ, ಶ್ರೇಯಾ ಕೊಳತ್ತಾಯ ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಹಾಗೂ ವಿದುಷಿ ಮಾನಸಿ ಸುಧೀರ್, ಕೊಡವೂರು ಮತ್ತು ವೃಂದದವರಿಂದ 'ನಾರಸಿಂಹ' ನೃತ್ಯ ರೂಪಕ ಪ್ರದರ್ಶಿಸಲ್ಪಟ್ಟಿತು.

ಇಂದಿನ ಕಾರ್ಯಕ್ರಮಗಳ ವಿವರ

ಬೆಳ್ತಂಗಡಿ: ಮಾ 6ರಂದು ಬೆಳಗ್ಗೆ ಶ್ರೀ ಮಹಾಗಣಪತಿ ಹೋಮ, 9.30ರಿಂದ ಚಂಡಿಕಾಯಾಗ ಹಾಗೂ ಇನ್ನಿತರ ವೈದಿಕ ಕಾರ್ಯಕ್ರಮಗಳು ಜರಗಲಿವೆ. ಮಧ್ಯಾಹ್ನ 12ಕ್ಕೆ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ ಯವರು ಕ್ಷೇತ್ರಕ್ಕೆ ಆಗಮಿಸಿ ದೇವರ ದರ್ಶನ ಪಡೆದು ಶುಭ ಹಾರೈಸಲಿದ್ದಾರೆ. ಸಂಜೆ 4.30ಕ್ಕೆ ಸುದರ್ಶನ ಸಭಾಭವನದ ಧಾರ್ಮಿಕ ಸಭೆಯಲ್ಲಿ ಒಡಿಯೂರು ದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡುವರು. ಕಾರ್ಯಾಧ್ಯಕ್ಷ ಶಶಿಧರ ಶೆಟ್ಟಿ ಬರೋಡಾ ಅಧ್ಯಕ್ಷತೆ ವಹಿಸಲಿದ್ದು ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಪ್ರತಾಪ ಸಿಂಹ ನಾಯಕ್,ಅಳದಂಗಡಿ ಅರಮನೆಯ ತಿಮ್ಮಣ್ಣರಸ ಡಾ. ಪದ್ಮಪ್ರಸಾದ ಅಜಿಲ, ಪುತ್ತೂರು ಶಾಸಕ ಅಶೋಕ್ ರೈ, ಎಂಎಲ್‌ಸಿ ಮಂಜುನಾಥ ಭಂಡಾರಿ, ಕೈಗಾರಿಕೋದ್ಯಮಿ ರಾಮದಾಸ ಮಡಮಣ್ಣಾಯ, ಮುಳಿಯ ಜ್ಯುವೆಲ್ಲರ್ಸ್ ಚೇರ್ಮನ್ ಕೇಶವ ಪ್ರಸಾದ್ ಮುಳಿಯ, ತೆಂಕಕಾರಂದೂರು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮೊಕ್ತೇಸರ ಕೆ.ಕೃಷ್ಣ ಸಂಪಿಗೆತ್ತಾಯ, ತಾಲೂಕು ಬಂಟರ ಸಂಘದ ಅಧ್ಯಕ್ಷ ಜಯಂತ ಶೆಟ್ಟಿ ರಕ್ಷಿತ್ ಶಿವರಾಂ, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕುಶಲಾಕ್ಷ ಬಿ., ಮೊದಲಾದವರು ಭಾಗವಹಿಸಲಿದ್ದಾರೆ.

ದೇಶಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸಿದಾಗ ಜೀವನ ಸಾರ್ಥಕ: ನಂದನ್ ಮಲ್ಯ



ಕಡಬ: ನಾವು ಸಣ್ಣ ವಯಸ್ಸಿನಲ್ಲಿ ದೊಡ್ಡ ಕನಸನ್ನು ಕಾಣಬೇಕು. ನಮ್ಮ ಜೀವನದ ಸಾಮರ್ಥ್ಯವನ್ನು ಅರಿತುಕೊಂಡು ಜೀವಿಸಬೇಕು. ನಾವು ಯಾವಾಗ ಸಮಾಜಕ್ಕೆ ದೇಶಕ್ಕೆ ನಿಸ್ವಾರ್ಥ ಸೇವೆಯನ್ನು ನೀಡುತ್ತೇವೆಯೋ ಆಗ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದು ಬಿಜೆಪಿ ಯುವ ಮೋರ್ಚಾ ದ.ಕ. ಜಿಲ್ಲಾಧ್ಯಕ್ಷ ನಂದನ್ ಮಲ್ಯ ಹೇಳಿದರು.

ಕಡಬ ಸರಸ್ವತೀ ವಿದ್ಯಾಲಯ ಪ್ರೌಢ ಶಾಲೆಯ ಪ್ರಸಕ್ತ ಶೈಕ್ಷಣಿಕ ವರ್ಷದ ಹತ್ತನೇ ತರಗತಿ ವಿದ್ಯಾರ್ಥಿಗಳ ದೀಪ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ಸಂಸ್ಥೆಯ ಹಿರಿಯ ವಿದ್ಯಾರ್ಥಿನಿ, ಪ್ರಸ್ತುತ ಮಂಗಳೂರಿನ ಕೆನರಾ ಇಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕಿ ರಶ್ಮಿ ಜಿ.ಎಸ್. ಅವರು ದೀಪ ಪ್ರಜ್ವಲಿಸಿ ಮಾತನಾಡಿ, ವಿದ್ಯಾ ಸಂಸ್ಥೆಯಲ್ಲಿ ತಾನು ಕಲಿತಿದ್ದಾಗ ಆದ ಅನುಭವಗಳನ್ನು ಮೆಲುಕು ಹಾಕಿ, ಇಲ್ಲಿ ಕಲಿಯುವ ಸಂಸ್ಕಾರಗಳನ್ನು ನೀವು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದು ಹೇಳಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಸಹ ಕಾರ್ಯ ನಿರ್ವಹಣಾಧಿಕಾರಿ ವೆಂಕಟರಮಣರಾವ್ ಮಂಕುಡೆ ಶುಭ ಹಾರೈಸಿದರು. ಸಂಸ್ಥೆಯ ಸಂಚಾಲಕಿ ಸವಿತಾ ಶಿವಸುಬ್ರಮಣ್ಯ ಭಟ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

10ನೇ ತರಗತಿ ವಿದ್ಯಾರ್ಥಿಗಳು ಹಣತೆ ಉರಿಸಿ ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ಹಿರಿಯರ ಆಶೀರ್ವಾದ ಪಡೆದುಕೊಂಡರು. ಹಿರಿಯ ವಿದ್ಯಾರ್ಥಿಗಳು ದೀಪ ಪ್ರದಾನ ಮಾಡುವ ಮೂಲಕ ತಮ್ಮ ಜವಾಬ್ದಾರಿಯನ್ನು ಕಿರಿಯರಿಗೆ ವಹಿಸಿ ಕೊಡುವುದರ ಮೂಲಕ ಕಾರ್ಯಕ್ರಮ ವಿಶಿಷ್ಟಪೂರ್ಣವಾಗಿ ಮೂಡಿ ಬಂತು. ವಿದ್ಯಾರ್ಥಿಗಳು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಮುಖ್ಯ ಶಿಕ್ಷಕಿ ಶೈಲಶ್ರೀ ರೈ ಎಸ್., ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕ ಮಾಧವ ಕೋಲ್ಪೆ ಸರಸ್ವತೀ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ವಸಂತ ಕೆ. ಮತ್ತಿತರರು ಇದ್ದರು. ಶಿಕ್ಷಕಿ ಸೌಮ್ಯ ಕೆ.ವಿ. ಅತಿಥಿಗಳನ್ನು ಪರಿಚಯಿಸಿದರು. ವಿದ್ಯಾರ್ಥಿನಿ ಸಾನ್ವಿ ಎಚ್. ಸ್ವಾಗತಿಸಿ, ದಿಗಂತ್ ವಂದಿಸಿದರು. ಪಿ.ಆರ್. ಚೇತನ್ ಗೌಡ ಕಾರ್ಯಕ್ರಮ ನಿರ್ವಹಿಸಿದರು.

ಶಾರದಾ ನಿಕೇತನ-ಸೇನೆರೆಬೈಲು ಕಾಂಕ್ರೀಟೀಕರಣಗೊಂಡ ರಸ್ತೆ ಉದ್ಘಾಟನೆ



ಉಳ್ಳಾಲ: ಉಳ್ಳಾಲದ ಶಾರದಾ ನಿಕೇತನ-ಸೇನೆರೆಬೈಲು ಕಾಂಕ್ರೀಟೀಕರಣಗೊಂಡ ರಸ್ತೆಯ ಉದ್ಘಾಟನೆಯ ಮೂಲಕ ಪ್ರದೇಶದ ಅಭಿವೃದ್ಧಿಗೆ ಪ್ರಥಮ ಹೆಜ್ಜೆಯನ್ನು ಇಡಲಾಗಿದೆ. ಮುಂದೆ ಹಂತ ಹಂತವಾಗಿ ವಸತಿ ಬಡಾವಣೆಗಳು ಸೇರಿದಂತೆ, ಅಭಿವೃದ್ಧಿ ಕಾಮಗಾರಿಗಳು ಮುಂದುವರಿಯಲಿ ಎಂದು ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಉಳ್ಳಾಲ ನಗರಸಭೆ ವ್ಯಾಪ್ತಿಯ ಶಾರದಾ ನಿಕೇತನದ ಹಿಂಬದಿಯ ಸೇನೆರೆಬೈಲ್ ಕಾಂಕ್ರೀಟೀಕರಣಗೊಂಡ ರಸ್ತೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪ್ರದೇಶದ ಜನತೆಯ ಬಹುಕಾಲದ ಬೇಡಿಕೆಯ ಹಿನ್ನೆಲೆಯಲ್ಲಿ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿತ್ತು. ಸ್ಥಳೀಯ ಪರಿಸ್ಥಿತಿಯೂ ರಸ್ತೆ ಅಭಿವೃದ್ಧಿಗೆ ತುರ್ತು ಅಗತ್ಯವಿರುವಂತೆಯೇ ಇತ್ತು. ನೂತನ ರಸ್ತೆಯ ಸುರಕ್ಷತೆಯನ್ನು ಕಾಪಾಡುವುದು ಕೇವಲ ಆಡಳಿತದ ಜವಾಬ್ದಾರಿ ಮಾತ್ರವಲ್ಲ,ಸ್ಥಳೀಯರ ಸಹಕಾರವೂ ಅತ್ಯಂತ ಮುಖ್ಯ ಎಂದರು.

ಉಳ್ಳಾಲ ಶ್ರೀ ಲಕ್ಷ್ಮೀ ನರಸಿಂಹ ದೇವಸ್ಥಾನದ ಅರ್ಚಕ ದೇವದಾಸ್ ಭಟ್ ರಸ್ತೆಯನ್ನು ಉದ್ಘಾಟಿಸಿದರು. ಮುಡಾ ಅಧ್ಯಕ್ಷ ಸದಾಶಿವ ಉಳ್ಳಾಲ್,ಜಿಲ್ಲಾ ಕಾಂಗ್ರೆಸ್ ಸದಸ್ಯೆ ದೇವಕಿ ಆರ್.ಉಳ್ಳಾಲ್, ಉಳ್ಳಾಲ ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಮಿತಾ ಅಶ್ವಿನ್,ನಗರ ಕಾಂಗ್ರೆಸ್ ಅಧ್ಯಕ್ಷ ಮುಸ್ತಾಫ,ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಶೆಟ್ಟಿ ಬೋಳಿಯಾರ್, ಉಪಾಧ್ಯಕ್ಷ ದಿನೇಶ್ ರೈ, ಉಳ್ಳಾಲ ನಗರಸಭೆ ಮಾಜಿ ಅಧ್ಯಕ್ಷೆ ಶಶಿಕಲಾ, ಉಪಾಧ್ಯಕ್ಷೆ ಸಪ್ನ ಹರೀಶ್, ಯುವ ಕಾಂಗ್ರೆಸ್ ಉಳ್ಳಾಲ ವಲಯ ಅಧ್ಯಕ್ಷ ಅಬ್ದುಲ್ ರಶೀದ್, ಸ್ಥಳೀಯರಾದ ವಸಂತ್ ನಾಯಕ್, ನಿತ್ಯಾನಂದ, ವಿಜೇತಾ ಸಾಗರ್ ಮೊದಲಾದವರು ಉಪಸ್ಥಿತರಿದ್ದರು.

ಪಂಚ ಪರಿವರ್ತನೆಗಳಿಂದ ಸಮಾಜ ಸದೃಢವಾಗಲಿದೆ: ಭರತ್ ಮಂಜನಾಡಿ



ಉಳ್ಳಾಲ: ಪಂಚ ಪರಿವರ್ತನೆಗಳಾದ ಕುಟುಂಬ ಪ್ರಭೋಧನ, ಪರ್ಯಾವರಣ, ಸಾಮಾಜಿಕ ಸಾಮರಸ್ಯ, ಸ್ವದೇಶಿ, ನಾಗರಿಕ ಶಿಷ್ಟಾಚಾರಗಳ ಸಂಕಲ್ಪಗಳು ವೇದಿಕೆಗೆ ಮತ್ತು ಭಾಷಣಕ್ಕೆ ಸೀಮಿತವಾಗದೆ ನಮ್ಮಿಂದ ಮತ್ತು ನಮ್ಮ ಮನೆಯ ಮೂಲಕ ನಿತ್ಯ ಅನುಷ್ಠಾನಗೊಂಡರೆ ಮಾತ್ರ ಪರಿವರ್ತನೆಯ ಜತೆ ಸಮಾಜ ಸದೃಢವಾಗುತ್ತದೆಯೆಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮಂಗಳೂರು ಗ್ರಾಮಾಂತರ ಜಿಲ್ಲೆಯ ಸಾಮರಸ್ಯ ಗತಿವಿಧಿಯ ಜಿಲ್ಲಾ ಸಹ ಸಂಯೋಜಕ ಭರತ್ ಕುಮಾರ್ ಮಂಜನಾಡಿ ಹೇಳಿದರು.

ಸಂಘ ಶತಾಬ್ಧಿಯ ಹಿನ್ನಲೆಯಲ್ಲಿ ಕಿನ್ಯ ಕೇಶವ ಶಿಶುಮಂದಿರದ ವತಿಯಿಂದ ಸಾಮರಸ್ಯದ ಸಂಕೀರ್ತನೆಯ ಹೆಸರಿನಲ್ಲಿ ಹಮ್ಮಿಕೊಳ್ಳಲಾದ ಮನೆ-ಮನೆ ಭಜನೆಯ ಪ್ರಯುಕ್ತ ಕಿನ್ಯ ತಟ್ಟಾಜೆಯ ಮೋಹಿನಿ ವೆಂಕಪ್ಪ ಪೂಜಾರಿಯ ಮನೆಯಲ್ಲಿ ನಡೆದ 50 ನೇ ಮನೆ ಭಜನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಈ ಸಂದರ್ಭ ಸಮಾಜ ಸೇವಕಿ, ನಿವೃತ್ತ ಅಂಗನವಾಡಿ ಶಿಕ್ಷಕಿ ಸುಜಾತ ಕಲ್ಕಟ್ಟ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ವೆಂಕಪ್ಪ ಪೂಜಾರಿ ತಟ್ಟಾಜೆ, ನಾರಾಯಣ ಕಜೆ, ಮಾಧವ ತಟ್ಟಾಜೆ,ರವಿ ಕನಕಮೊಗೆರು, ಹರೀಶ್ ಆಚಾರ್ಯ, ವಿಶ್ವನಾಥ ಮಾಧವಪುರ, ವಿಜಯ ಕಜೆ, ದಾಮೋದರ ವಿದ್ಯಾನಗರ, ಪುರುಷೋತ್ತಮ ಮಿತ್ತಡ, ಶೋಭಾ ಕಜೆ, ರಾಜೇಶ್ವರಿ ಪಿಲಿಕೂರು, ಜಯಂತಿ ಪಿಲಿಕೂರು, ಜಯಮಾಲಾ, ನಯನ ಪಾರ್ಥಸಾರಥಿ, ಸೌಮ್ಯ ಹರೀಶ್, ಸುನೀತಾ ಮೊದಲಾದವರು ಉಪಸ್ಥಿತರಿದ್ದರು.



ಮಂಗಳೂರು ಮಹಾನಗರ ಪಾಲಿಕೆ ಕಟ್ಟಡದ ಶಾಸಕರ ಕಚೇರಿಯಲ್ಲಿ ಮಂಗಳೂರು ನಗರ ಉತ್ತರ ವಿಧಾನ ಸಭಾ ಕ್ಷೇತ್ರದ ಶಾಸಕ. ಡಾ ಭರತ್ ಶೆಟ್ಟಿ ವೈ. ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಸಭೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು, ಹೂಳೆತ್ತುವಿಕೆ, ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಪದವು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವ



ಬಂಟ್ವಾಳ: ತಾಲೂಕಿನ ಅಜ್ಜಿಬೆಟ್ಟು ಗ್ರಾಮದ ಪದವು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಮಾ.9ರವರೆಗೆ ನಡೆಯಲಿರುವ ವರ್ಷಾವಧಿ ಜಾತ್ರಾ ಮಹೋತ್ಸವಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಕ್ಷೇತ್ರದ ತಂತ್ರಿಗಳಾದ ವೇ.ಮೂ. ಬ್ರಹ್ಮಶ್ರೀ ಶ್ರೀಪಾದ ಪಾಂಗಣ್ಣಾಯ ಅವರ ನೇತೃತ್ವದಲ್ಲಿ ಪ್ರ.ಅರ್ಚಕ ಅನಂತ ಮಹಿಮ ಮುಚ್ಚಿಂತಾಯ ಅವರ ಪೌರೋಹಿತ್ಯದಲ್ಲಿ ವಿವಿಧ ವೈದಿಕ, ಧಾರ್ಮಿಕ ಕಾರ್ಯಗಳು ನೆರವೇರಿತು. ಬೆಳಗ್ಗೆ ದೇವತಾ ಪ್ರಾರ್ಥನೆ, ಧ್ವಜಾರೋಹಣ, ಭಜನೆ, ಸಂಜೆ ಯಕ್ಷಗಾನ ನಡೆಯಿತು. ವ್ಯವಸ್ಥಾಪನ ಸಮಿತಿ ಅಧ್ಯಕ್ಷ ವಿವೇಕಾನಂದ ಪೂಜಾರಿ ಕೌಡೋಡಿ, ಸದಸ್ಯರಾದ ಕಿಶೋರ್ ಕುಮಾರ್ ನಾಯರ್ ಕುಮೇರ್, ಜಯಚಂದ್ರ ಬೊಳ್ಳಾರ್, ಯತೀಶ್ ಶೆಟ್ಟಿ ವಿಜಯ ನಗರ, ಜಯರಾಮ ಶೆಟ್ಟಿ ಕಾಪು, ಮಂಜುಳಾ ಅಶೋಕ ಶೆಟ್ಟಿ ಕೆಮ್ಮಾರು, ಪುಷ್ಪಲತಾ ಮೋಹನ್ ಹೆಗ್ಡೆಬೆಟ್ಟು, ಮೋನಪ್ಪ ಬಸ್ತಿಕೋಡಿ, ನಿಕಟಪೂರ್ವ ಅಧ್ಯಕ್ಷ ಪ್ರಕಾಶ್ ಪೂಜಾರಿ ಕಲ್ಲಕೊಡಂಗೆ, ಪ್ರಮುಖರಾದ ನವೀನಚಂದ್ರ ಶೆಟ್ಟಿ, ಉದಯ ಕುಮಾರ್ ಶೆಟ್ಟಿ ಕುಂಡೋಳಿಗುತ್ತು, ಶ್ಯಾಮ ಪ್ರಸಾದ್ ಪೂಂಜ, ದಯಾನಂದ ನಾಯ್ಕ ಏರ್ಮನಾಡು, ಮತ್ತಿತರರು ಉಪಸ್ಥಿತರಿದ್ದರು.

ಕೊಂಚಾಡಿ ಯಕ್ಷಸ್ನೇಹ ಕಲಾಪ್ರತಿಷ್ಠಾನದಿಂದ ಅಷ್ಟಾಹ ಸಂಭ್ರಮ



ಮಂಗಳೂರು: ಉತ್ತಮ ಕಲಾವಿದರಾಗಬೇಕಾದರೆ ಮೊದಲು ಉತ್ತಮ ಪ್ರೇಕ್ಷಕರಾಗಬೇಕು ಎಂದು ಯಕ್ಷಗಾನ ಕಲಾವಿದ ಕದ್ರಿ ನವನೀತ ಶೆಟ್ಟಿ ಹೇಳಿದರು.

ಮಂಗಳೂರಿನ ಕೊಂಚಾಡಿಯ ಯಕ್ಷಸ್ನೇಹ ಕಲಾಪ್ರತಿಷ್ಠಾನದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳಾ ಯಕ್ಷಗಾನ ತಾಳಮದ್ದಲೆ ಅಷ್ಟಾಹ ಸಂಭ್ರಮ 'ಯಕ್ಷಮಂಜರಿ' ಇದರ ತೃತೀಯ ದಿನದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿರುವ ಕಾರ್ಯಕ್ರಮ ಅರ್ಥಪೂರ್ಣವಾದುದು. ಯಕ್ಷಗಾನ ಕ್ಷೇತ್ರಕ್ಕೆ ಬರುವ ಹೊಸ ಕಲಾವಿದರು ಮೊದಲು ಮಹಿಳಾ ತಾಳಮದ್ದಲೆ ಅಷ್ಟಾಹ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲಿ ಎಂದು ಅವರು ಹೇಳಿದರು.

ಶ್ರೀ ದುರ್ಗಾಪರಮೇಶ್ವರೀ ವೆಂಕಟರಮಣ ದೇವಸ್ಥಾನದ ಪ್ರಧಾನ ಅರ್ಚಕರಾದ ವಿದ್ವಾನ್ ರಂಗನಾಥ ಭಟ್ ಇವರು ದೀಪ ಪ್ರಜ್ವಲನೆ ಮಾಡಿದರು.

ವೇದಿಕೆಯಲ್ಲಿ ಧಾರ್ಮಿಕ ಚಿಂತಕ ಸುಧಾಕರ ರಾವ್ ಪೇಜಾವರ, ಯುವ ಮುಂದಾಳು ರಾಘವೇಂದ್ರ ಉಡುಪ, ಯಕ್ಷಗಾನ ಕಲಾವಿದ ಶಿವಪ್ರಸಾದ್ ಪ್ರಭು, ದುರ್ಗಾಪರಮೇಶ್ವರೀ ವೆಂಕಟರಮಣ ದೇವಸ್ಥಾನದ ಮಹಿಳಾ ವೇದಿಕೆ ಅಧ್ಯಕ್ಷೆ ಜ್ಯೋತಿ ಪ್ರವೀಣ್, ಯಕ್ಷ ಕಲಾ ಮಹಿಳಾ ತಂಡ ಸುರತ್ಕಲ್ ಇದರ ಸಂಚಾಲಕಿ ಕೆ. ಕಲಾವತಿ, ಯಕ್ಷ ಸ್ನೇಹ ಕಲಾಪ್ರತಿಷ್ಠಾನದ ಗೌರವಾಧ್ಯಕ್ಷರಾದ ಮಧುಸೂದನ ಅಲೆವೂರಾಯ, ಅಧ್ಯಕ್ಷೆ ಗೀತಾಲಕ್ಷ್ಮೀಶ ಮತ್ತಿತರರು ಉಪಸ್ಥಿತರಿದ್ದರು.



ನವೋದಯ ಗ್ರಾಮ ವಿಕಾಸ ಚಾರಿಟೇಬಲ್ ಟ್ರಸ್ಟ್ ಮಂಗಳೂರು ಹಾಗೂ ಕಡೇಶಿವಾಲಯ ವ್ಯವಸಾಯ ಸೇವಾ ಸಹಕಾರಿ ಸಂಘ, ಪ್ರವರ್ತಿತ ಕಟೀಲೇಶ್ವರಿ ನವೋದಯ ಸ್ವಸಹಾಯ ಗುಂಪು, ಬಡಾರಿ ಇದರ ಸದಸ್ಯರಿಗೆ ಲಾಭಾಂಶ ಚೆಕ್ ಅನ್ನು ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸುಬ್ರಮಣ್ಯ ಪ್ರಸಾದ್ ವಿತರಿಸಿದರು. ಈ ಸಂದರ್ಭದಲ್ಲಿ ನವೋದಯ ಸ್ವಸಹಾಯ ಗುಂಪುಗಳ ಕಡೇ ಶಿವಾಲಯ ವಲಯ ಪ್ರೇರಕ ಡಿ. ಸಂಜೀವ ಪೂಜಾರಿ ದಾಸಕೋಡಿ ಉಪಸ್ಥಿತರಿದ್ದರು.

ಕೊಡಗಿನ ಪತ್ರಿಕೋದ್ಯಮದ 'ಭೀಷ್ಮ'ನಿಗೆ ಸ್ಥಳೀಯಾಡಳಿತದಿಂದ ದೊರೆಯಿತು ಗೌರವ

ಮಡಿಕೇರಿ ನಗರ ರಸ್ತೆಗೆ 'ಶಕ್ತಿ ಗೋಪಾಲಕೃಷ್ಣ' ನಾಮಫಲಕ

ಮಡಿಕೇರಿ: ನಗರದ ಪತ್ರಿಕಾ ಭವನದಿಂದ ಜಿಲ್ಲಾ ಕೈಗಾರಿಕಾ ಕಚೇರಿವರೆಗಿನ ರಸ್ತೆಗೆ ಶಕ್ತಿ ದಿನಪತ್ರಿಕೆಯ ಸ್ಥಾಪಕ ಸಂಪಾದಕ ಬಿ.ಎಸ್. ಗೋಪಾಲಕೃಷ್ಣ ಅವರ ಹೆಸರನ್ನು ಇಡಲಾಗಿದ್ದು ಈ ಸಂಬಂಧ ಗೋಪಾಲಕೃಷ್ಣ ಅವರ ಹೆಸರಿನ ನಾಮಫಲಕವನ್ನು ಶಾಸಕ ಡಾ.ಮಂಥರ್ ಗೌಡ ಅವರು ಉದ್ಘಾಟಿಸಿದರು.

ಈ ಸಂದರ್ಭ ಮಾತನಾಡಿದ ಶಾಸಕರು, ಶಕ್ತಿ ದಿನಪತ್ರಿಕೆಯ ಸ್ಥಾಪಕ ಸಂಪಾದಕ ಗೋಪಾಲಕೃಷ್ಣ ಅವರು ಕೊಡಗಿನ ಪತ್ರಿಕೋದ್ಯಮದ ಭೀಷ್ಮರಾಗಿದ್ದಾರೆ. ಶಕ್ತಿ ದಿನಪತ್ರಿಕೆಯನ್ನು ಆರಂಭಿಸುವ ಮೂಲಕ ಇಂದಿಗೂ ಸಹ ಕೊಡಗು ಜಿಲ್ಲೆಯಲ್ಲಿ ಶಕ್ತಿ ದಿನಪತ್ರಿಕೆ ಶಕ್ತಿಯಾಗಿ ಉಳಿದಿರುವುದು ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಹಿಂದೆ ಪತ್ರಿಕೆಯನ್ನು ಹೊರತರುವುದು ಕಷ್ಟಸಾಧ್ಯವಾಗಿತ್ತು. ಅಚ್ಚು ಮೊಳೆಯ ಮೂಲಕ ಪತ್ರಿಕೆಯನ್ನು ಮುದ್ರಣ ಮಾಡುತ್ತಿದ್ದರು. ಅಂದಿನ ಕಷ್ಟದ ಸಂದರ್ಭದಲ್ಲಿಯೂ ಪತ್ರಿಕೆಯನ್ನು ನಡೆಸಿ ಇಂದಿಗೂ ಸಹ ಕೊಡಗು ಜಿಲ್ಲೆಯಲ್ಲಿ ತಮ್ಮದೇ ಆದ ಸ್ಥಾನ ಉಳಿಸಿಕೊಂಡು ಜನಮನ್ನಣೆ ಗಳಿಸುವುದು ಮೆಚ್ಚುವಂತದ್ದು ಎಂದರು.

ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜೇಶ್ ಯಲ್ಲಪ್ಪ ಮಾತನಾಡಿದರು. ನಗರಸಭೆ ಉಪಾಧ್ಯಕ್ಷ ಮಹೇಶ್ ಜೈನಿ ಮಾತನಾಡಿದರು. ಶಕ್ತಿ ದಿನಪತ್ರಿಕೆಯ ಸ್ಥಾಪಕ ಸಂಪಾದಕ ಗೋಪಾಲಕೃಷ್ಣ ಅವರ ಹೆಸರು ಇಡಬೇಕು ಎಂದು ಮನವಿ ಮಾಡಿದಂತೆ ನಗರಸಭೆಯಲ್ಲಿ ತೀರ್ಮಾನಿಸಿ ಹೆಸರು ಇಡಲಾಗಿದೆ. ಇದೊಂದು ಉತ್ತಮ ಕೆಲಸ ಎಂದು ಅವರು ಹೇಳಿದರು.

ಶಕ್ತಿ ದಿನಪತ್ರಿಕೆಯ ಪ್ರಧಾನ ಸಂಪಾದಕ ಜಿ.ರಾಜೇಂದ್ರ ಹಾಗೂ ಸಲಹಾ ಸಂಪಾದಕ ಬಿ.ಜಿ. ಅನಂತಶಯನ ಅವರು ಮಾತನಾಡಿದರು ಗೋಪಾಲಕೃಷ್ಣ ಅವರ ಪತ್ನಿ ರಾಜಲಕ್ಷ್ಮಿ ಅವರನ್ನು ಇದೇ ಸಂದರ್ಭ ಸನ್ಮಾನಿಸಲಾಯಿತು. ಪೌರಾಯುಕ್ತ ಎಚ್.ಆರ್. ರಮೇಶ್, ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಎಚ್.ಟಿ., ಪ್ರಧಾನ ಕಾರ್ಯದರ್ಶಿ ಸುರೇಶ್ ಬಿಳಿಗೇರಿ, ಶಕ್ತಿ ಸಂಪಾದಕ ಜಿ.ಚಿದ್ವಿಲಾಸ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ, ನಗರಸಭೆ ಸದಸ್ಯರು, ಶಕ್ತಿ ಅಭಿಮಾನಿಗಳು ಇತರರು ಪಾಲ್ಗೊಂಡಿದ್ದರು.

ಪಚ್ಚನಾಡಿ ಎಸ್‌ಟಿಪಿ ಕಾಮಗಾರಿಗೆ ಚಾಲನೆ । ಸಿಗದ ಆಹ್ವಾನ

ಅವಗಣನೆಗೆ ಶಾಸಕ ಭರತ್ ಶೆಟ್ಟಿ ಆಕ್ರೋಶ

ಮಂಗಳೂರು: ನಗರದ ಪಚ್ಚನಾಡಿ ಎಸ್‌ಟಿಪಿ ಬಳಿ ಒಳಚರಂಡಿ ಕಾಮಗಾರಿ, ಉನ್ನತೀಕರಣ ಯೋಜನೆಗೆ ಹಾಗೂ ಮಂಗಳೂರು ಉತ್ತರ ಮತ್ತು ದಕ್ಷಿಣ ವಿಧಾನಸಭಾ ಕ್ಷೇತ್ರದ ಎಸ್‌ಟಿಪಿ ಮೇಲ್ದರ್ಜೆ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಬುಧವಾರ ಚಾಲನೆ ನೀಡಿದ್ದು ಸ್ಥಳೀಯ ಶಾಸಕರಿಗೆ ಆಹ್ವಾನ ನೀಡದೆ ಇರುವುದಕ್ಕೆ ಶಾಸಕ ಡಾ. ಭರತ್ ಶೆಟ್ಟಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಕೇಂದ್ರದ ಸ್ವಚ್ಛ ಭಾರತ್ ಹಾಗೂ ಎನ್‌ಜಿಟಿ ಅನುದಾನ 40 ಕೋಟಿ ರೂ. ಅನುದಾನ ಬಂದಿದೆ. ರಾಜ್ಯ ಸರಕಾರದ ಪಾತ್ರ ಕೇವಲ ಅನುಷ್ಠಾನ ಮಾತ್ರ. ಒಳಚರಂಡಿ ಯೋಜನೆಗೆ ನನ್ನ ಪ್ರಥಮ ಅವಧಿಯಲ್ಲಿ ಕಾಮಗಾರಿಗೆ ಸಂಬಂಧಿಸಿದಂತೆ ಪತ್ರ ಬರೆದು ಅನುದಾನ ತರಲು ಕ್ರಮ ವಹಿಸಲಾಗಿತ್ತು ಎಂದು ಅವರು ಹೇಳಿದ್ದಾರೆ.

ಸಚಿವ ಗುಂಡೂರಾವ್ ಉಸ್ತುವಾರಿ ಸಚಿವರಾಗಿ ಜಿಲ್ಲೆಗೆ ಬರುವುದೇ ಅಪರೂಪ. ಇದರ ನಡುವೆ ಸರ್ಕಾರದ ಸಭೆ, ಕಾರ್ಯಕ್ರಮದಲ್ಲಿ ಪಕ್ಷದ ಕಾರ್ಯಕ್ರಮ ಎಂಬಂತೆ ಬಿಂಬಿಸಿ ಹೋಗುತ್ತಾರೆ. ಪಚ್ಚನಾಡಿಯಲ್ಲಿ ಸ್ಥಳೀಯ ಶಾಸಕನಾದ ನನ್ನ ಉಪಸ್ಥಿಯಲ್ಲಿ ಕಾರ್ಯಕ್ರಮ ನಡೆಯಬೇಕಿತ್ತು. ಸ್ಥಳೀಯ ಕಾಂಗ್ರೆಸ್ ನಾಯಕರ ಕುಮ್ಮಕ್ಕಿನಿಂದ ಅಧಿಕಾರಿಗಳು ಕೂಡ ಮಾಹಿತಿ ನೀಡಿಲ್ಲ, ಜಿಲ್ಲೆಯಲ್ಲಿ ಬಿಜೆಪಿ ಶಾಸಕರ ಪ್ರಾಬಲ್ಯ ಹಾಗೂ ಉತ್ತಮ ಕೆಲಸ ಕಾರ್ಯವನ್ನು ಕಾಂಗ್ರೆಸ್‌ಗೆ ಸಹಿಸಿಕೊಳ್ಳಲಾಗುತ್ತಿಲ್ಲ, ಇದೀಗ ತಮ್ಮದೇ ಸಾಧನೆ ಎಂಬಂತೆ ಕ್ರೆಡಿಟ್ ಪಡೆಯಲು ಹವಣಿಸುತ್ತಿದೆ ಎಂದು ವ್ಯಂಗ್ಯವಾಡಿದ್ದಾರೆ.

ಈ ಬಗ್ಗೆ ಸಂಬಂಧ ಪಟ್ಟವರ ಮೇಲೆ ಹಕ್ಕು ಚ್ಯುತಿ ಮಂಡನೆ ಮಾಡುವೆ ಎಂದು ಡಾ. ಭರತ್ ಶೆಟ್ಟಿ ಹೇಳಿದ್ದಾರೆ.

ಸುತ್ತಮುತ್ತ

ತಾಮಾರು ಶ್ರೀ ಮಾರಿ ಅಮ್ಮನವರ ಸನ್ನಿಧಿ: ಇಂದು ಮಾರಿಪೂಜೆ

ಮಂಜೇಶ್ವರ: ತಾಮಾರು ಶ್ರೀ ಮಾರಿ ಅಮ್ಮನವರ ಸನ್ನಿಧಿಯಲ್ಲಿ ವರ್ಷಾವಧಿ ಮಾರಿಪೂಜೆ ಮಾ.6ರಂದು ಮತ್ತು ಮಾ.14ರಂದು ಶ್ರೀ ದುರ್ಗಾಲಯ ದೈವದ ನೇಮ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಮಾ.6ರಂದು ಬೆಳಗ್ಗೆ 9ರಿಂದ ಗಣಪತಿಹೋಮ, ರಾತ್ರಿ 7ರಿಂದ ಭರತನಾಟ್ಯ, 8ರಿಂದ ಸಂದೇಶ್ ನೀರುಮಾರ್ಗ ಹಾಗೂ ಬಳಗದವರಿಂದ ಭಕ್ತಿಗಾನ ಸುಧೆ, 9ರಿಂದ ಮಾರಿ ಪೂಜೆ, ಮಾ.14ರಂದು ರಾತ್ರಿ 7 ಗಂಟೆಗೆ ಭಂಡಾರ ಏರುವುದು, 8ರಿಂದ ಭಜನೆ, 10.30ರಿಂದ ಶ್ರೀ ದುರ್ಗಾಲಯ ದೈವದ ನೇಮ ಜರಗಲಿದೆ.

ಇಂದು ಐಲದಲ್ಲಿ ವೈದ್ಯಕೀಯ ಶಿಬಿರ

ಉಪ್ಪಳ: ಮಂಗಲ್ಪಾಡಿ ಸರಕಾರಿ ಆಯುರ್ವೇದ ಆಸ್ಪತ್ರೆ ಇದರ ಆಶ್ರಯದಲ್ಲಿ ಉಚಿತ ಆಯುರ್ವೇದ ವೈದ್ಯಕೀಯ ಶಿಬಿರವು ಮಾ.6ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 1 ಗಂಟೆಯ ತನಕ ಐಲ ಶ್ರೀ ದುರ್ಗಾಪರಮೇಶ್ವರೀ ಕಲಾಭವನದಲ್ಲಿ ಸಂಪನ್ನಗೊಳ್ಳಲಿದೆ. ಈ ಶಿಬಿರದಲ್ಲಿ ಮಂಗಲ್ಪಾಡಿ ಸರಕಾರಿ ಆಯುರ್ವೇದ ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿ ಡಾ.ರಶ್ಮಿ ಮತ್ತು ಪೈವಳಿಕೆ ಆಯುಷ್ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯ ಡಾ.ಗಣೇಶ್ ಅವರು ತಪಾಸಣೆಗೈದು ಚಿಕಿತ್ಸೆ ಮತ್ತು ಔಷಧಿಯನ್ನು ನೀಡುವರು, ಜೊತೆಯಲ್ಲಿ ಆರೋಗ್ಯ ಸಮಸ್ಯೆಗೆ ಸಂಬಂಧಪಟ್ಟಂತೆ ಉಚಿತ ಯೋಗ ತರಗತಿಯೂ ನಡೆಯಲಿರುವುದು. ಸಾರ್ವಜನಿಕರು ಸದುಪಯೋಗ ಪಡೆದು ಕೊಳ್ಳಬೇಕಾಗಿ ವಿನಂತಿಸಲಾಗಿದೆ.

ವಿರಾಟ್ ಹಿಂದು ಸಂಗಮಕ್ಕೆ ಸಿದ್ಧತೆ

ಕುಂಬಳೆ: ಪುತ್ತಿಗೆ ಪಂಚಾಯತ್‌ನಲ್ಲಿ ಮಾ.8ರಂದು ಸೂರಂಬೈಲಿನ ಶ್ರೀ ಸಾಯಿ ರಾಮ್ ಭಟ್ ನಗರದಲ್ಲಿ ನಡೆಯಲಿರುವ ಬೃಹತ್ ವಿರಾಟ್ ಹಿಂದು ಸಂಗಮಕ್ಕೆ ಭರದ ಸಿದ್ಧತೆಗಳು ನಡೆಯುತ್ತಿವೆ.
ಅಂದು ಅಪರಾಹ್ನ 2 ಗಂಟೆಗೆ ಅನಂತಪುರದ ಭಜನಾಸ್ ಇವರಿಂದ ಆನಂದ ಲಹರಿ ಬಳಿಕ ಪುತ್ತಿಗೆ ಪಂಚಾಯತ್‌ನ ವಿವಿಧ ಕುಣಿತ ಭಜನಾ ಸಂಘಗಳಿಂದ ಕುಣಿತ ಭಜನೆ, ಮಾತೆಯರಿಂದ ಮೆಗಾ ತಿರುವಾದಿರ ಕಾರ್ಯಕ್ರಮ ಜರಗಲಿದೆ.
3 ಗಂಟೆಗೆ ಸಭಾ ಕಾರ್ಯಕ್ರಮ ಆರಂಭಗೊಳ್ಳಲಿದೆ. ಕೇರಳ ಕುಂಭಮೇಳವನ್ನು ಪುನರ್ ಆರಂಭಿಸಿದ ಮಹಾಮಂಡಲೇಶ್ವರ ಶ್ರೀ ಆನಂದವನ ಭಾರತೀ ಸ್ವಾಮೀಜಿಯವರು ಆಶೀರ್ವಚನ ನೀಡುವರು. ಆರ್ಷ ಭಾರತಿ ಸಂಸ್ಕಾರಂ ಇದರ ನಿರ್ದೇಶಕ ಹರಿಕೃಷ್ಣನ್ ನಂಬೂದಿರಿಯವರು ದಿಕ್ಸೂಚಿ ಭಾಷಣ ಮಾಡುವರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಕಾರ್ಯಕರ್ತ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು.

ನಾಳೆ ಮೆಗಾ ವರ್ಚುವಲ್ ಉದ್ಯೋಗ ಮೇಳ

ಕಾಸರಗೋಡು: ವಿಜ್ಞಾನ ಕೇರಳ ಜಿಲ್ಲಾ ಮಿಷನ್‌ನ ಭಾಗವಾಗಿ ಮಾ.7ರಂದು ಬೆಳಗ್ಗೆ 9.30 ರಿಂದ ಕಾಸರಗೋಡಿನ ಎಲ್‌ಬಿಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್ ಪೊವ್ವಲ್, ಕಾಲೇಜ್ ಆಫ್ ಇಂಜಿನಿಯರಿಂಗ್ ತೃಕ್ಕರೀಪ್ಪುರ ಮತ್ತು ಚೀಮೇನಿ ಯಲ್ಲಿ ಮೆಗಾ ವರ್ಚುವಲ್ ಉದ್ಯೋಗ ಮೇಳ ನಡೆಯಲಿದೆ.
ಎಸ್‌ಎಸ್‌ಎಲ್‌ಸಿ, ಪ್ಲಸ್ ಟು, ಪದವಿ, ಡಿಪ್ಲೊಮಾ, ಪಿಜಿ ಮತ್ತು ಐಟಿಐ ಅರ್ಹತೆ ಹೊಂದಿರುವವರಿಗೆ ದೇಶ ಮತ್ತು ವಿದೇಶಗಳಲ್ಲಿ 1,93,874 ಉದ್ಯೋಗಾವಕಾಶಗಳಿವೆ. ಜಿಯೋ, ಅಜ್ಮಾನ್ ಇಂಟರ್‌ನ್ಯಾಷನಲ್ ರಿಟೇಲ್, ಟಾಟಾ ಎಲೆಕ್ಟ್ರಾನಿಕ್ಸ್, ಎಲ್ ಆ್ಯಂಡ್ ಟಿ, ಟಾಟಾ ಮೋಟಾರ್ಸ್, ಬಾಷ್, ಸೀಗಲ್ ಇಂಟರ್‌ನ್ಯಾಷನಲ್, 2 ಕಾಮ್ಸ್ ಮತ್ತು ಇತರ ಹಲವು ಕಂಪೆನಿಗಳ ಪ್ರತಿನಿಧಿ ಗಳು ವರ್ಚುವಲ್ ಉದ್ಯೋಗ ಮೇಳದಲ್ಲಿ ಭಾಗವಹಿಸಲಿದ್ದಾರೆ. ನರ್ಸಿಂಗ್, ಮಾರ್ಕೆಟಿಂಗ್ ಮೆನೇಜರ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್, ಫಿಸಿಯೋಥೆರಪಿಸ್ಟ್, ಫಿಟ್ಟರ್, ಮೆಷಿನ್ ಆಪರೇಟರ್, ಟೆಕ್ನಿಕಲ್ ಕೋ ಓರ್ಡಿನೇಟರ್, ಅಕಾಡೆಮಿಕ್ ಕೌನ್ಸಿಲರ್ ಮುಂತಾದ ಉದ್ಯೋಗಾವಕಾಶಗಳಿವೆ. ಅಭ್ಯರ್ಥಿಗಳು ಡಿಡಬ್ಲ್ಯೂಎಂಎಸ್ ಆಪ್ಲಿಕೇಶನ್‌ನಲ್ಲಿ ನೋಂದಾಯಿಸಿಕೊಂಡು ಉದ್ಯೋಗ ಮೇಳಕ್ಕೆ ಅರ್ಜಿ ಸಲ್ಲಿಸಬೇಕು. ನೋಂದಣಿ ಬೆಳಗ್ಗೆ 8.30ಕ್ಕೆ ಪ್ರಾರಂಭವಾಗುತ್ತದೆ.

ಲೋಕೋಪಯೋಗಿ ರಸ್ತೆ ನವೀಕರಣ

ಕಾಸರಗೋಡು: ಕಾಸರಗೋಡು ವಿಧಾನಸಭಾ ಕ್ಷೇತ್ರದ ಮಧೂರು – ಪಟ್ಲ – ಕೊಲ್ಲಂಗಾನ ರಸ್ತೆಯ ಪುನರ್ ನಿರ್ಮಾಣಕ್ಕೆ 6 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಈ ರಸ್ತೆಯ 4/400 ರಿಂದ 8/200 ಕಿಲೋ ಮೀಟರ್ ವರೆಗಿನ ಅಭಿವೃದ್ಧಿಗೆ 2026–27ರ ಬಜೆಟ್‌ನಲ್ಲಿ ಈ ಮೊತ್ತವನ್ನು ಮೀಸಲಿರಿಸಲಾಗಿದೆ ಎಂದು ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು ಮಾಹಿತಿ ನೀಡಿದ್ದಾರೆ.

ವೈದ್ಯರ ನೇಮಕಾತಿ

ಕಾಸರಗೋಡು: ನೀಲೇಶ್ವರ ತಾಲೂಕು ಆಸ್ಪತ್ರೆಯಲ್ಲಿ ವೈದ್ಯರ ಹುದ್ದೆಗೆ ನೇಮಕಾತಿಗಾಗಿ ಸಂದರ್ಶನ ಮಾ.9 ರಂದು ಬೆಳಗ್ಗೆ 11 ಗಂಟೆಗೆ ಆಸ್ಪತ್ರೆ ಕಚೇರಿ ಯಲ್ಲಿ ನಡೆಯಲಿದೆ. ಎಂಬಿಬಿಎಸ್, ಟಿಸಿಎಂಸಿ ಶಾಶ್ವತ ನೋಂದಣಿ ವಿದ್ಯಾರ್ಹತೆಯಾಗಿದೆ. ಮಾಹಿತಿಗೆ ದೂ.ನಂ.0467 2282933 ಕರೆ ಮಾಡಬಹುದು.

ಮಾ.21:ಪಜಿಂಗಾರು ಗುಳಿಗ ಕೊರಗಜ್ಜನ ಕೋಲ

ಉಪ್ಪಳ: ಪಜಿಂಗಾರು ಗುಳಿಗ ಕೊರಗಜ್ಜ ಸೇವಾ ಸಮಿತಿ ಇದರ ಆಶ್ರಯದಲ್ಲಿ ನಡೆಯುತ್ತಿರುವ ಗುಳಿಗ ಕೊರಗಜ್ಜನ ವರ್ಷಾವಧಿ ಕೋಲೋತ್ಸವ ಮಾ.21ರಂದು ಜರಗಲಿದೆ. ಬೆಳಗ್ಗೆ 6 ಗಂಟೆಗೆ ಗಣಪತಿಹೋಮ, ರಾತ್ರಿ 7ರಿಂದ ಗುಳಿಗ ದೈವದ ಕೋಲ, ರಾತ್ರಿ 9ರಿಂದ ಸಾರ್ವಜನಿಕ ಅನ್ನಸಂ ತರ್ಪಣೆ, 10ರಿಂದ ಕೊರಗಜ್ಜ ದೈವದ ಕೋಲ ನಡೆಯಲಿದೆ.

ತಲಪಾಡಿ-ಕಾಸರಗೋಡು-ಚೆಂಗಳ ಪ್ರಥಮ ರೀಚ್ ಸಹಿತ ವಿವಿಧೆಡೆ ಸರ್ವೀಸ್ ರಸ್ತೆಗಳಲ್ಲಿ ಅಧಿಕಾರಿಗಳಿಂದ ಪರಿಶೀಲನೆ

ರಾಷ್ಟ್ರೀಯ ಹೆದ್ದಾರಿಯಲ್ಲಿ ನೀರು ಸಂಗ್ರಹಕ್ಕೆ ಪರಿಹಾರ ಭರವಸೆ

ಕಾಸರಗೋಡು: ಕರ್ನಾಟಕ – ಕೇರಳ ಗಡಿಭಾಗದಿಂದ ಆರಂಭಗೊಳ್ಳುವ ತಲಪಾಡಿ – ಕಾಸರಗೋಡು – ಚೆಂಗಳ ಪ್ರಥಮ ರೀಚ್ ಸೇರಿದಂತೆ ರಾಷ್ಟ್ರೀಯ ಹೆದ್ದಾರಿ – 66 ಷಟ್ಪಥವಾಗಿ ಅಭಿವೃದ್ಧಿಗೊಂಡಿದ್ದು, ಆದರೆ ಮಳೆಗಾಲದಲ್ಲಿ ಕೆಲವೆಡೆ ನೀರು ಸಂಗ್ರಹಗೊಳ್ಳಬಹುದೆಂಬ ಸಂಶಯ ಮೂಡಿದೆ. ಅದರಲ್ಲೂ ಜಿಲ್ಲೆಯಾದ್ಯಂತ ಸರ್ವೀಸ್ ರಸ್ತೆಗಳಲ್ಲಿ ನೀರು ನಿಲ್ಲುವ ಸ್ಥಳಗಳನ್ನು ಗುರುತಿಸಲು ಮತ್ತು ಪರಿಹಾರ ಕ್ರಮ ಕೈಗೊಳ್ಳಲು ತಪಾಸಣೆ ಹಮ್ಮಿಕೊಳ್ಳಲಾಗಿದೆ.
ತಲಪಾಡಿ – ಚೆಂಗಳ ಪ್ರಥಮ ರೀಚ್ ಪೂರ್ತಿಗೊಳಿಸಿದ ಊರುಳುಂಗಾಲ್ ಸೊಸೈಟಿ ಮತ್ತು ಚೆಂಗಳ – ನೀಲೇಶ್ವರ ದ್ವಿತೀಯ ರೀಚ್‌ನ ಕಾಮಗಾರಿ ನಡೆಸುತ್ತಿರುವ ಮೇಘ ಕಂಪೆನಿ ಪ್ರತಿನಿಧಿಗಳು, ಸಂಬಂಧಪಟ್ಟ ಸ್ಥಳೀಯಾಡಳಿತ ಸಂಸ್ಥೆಗಳ ಕಾರ್ಯದರ್ಶಿಗಳು, ಸಹಾಯಕ ಇಂಜಿನಿಯರ್‌ಗಳು, ಅಧ್ಯಕ್ಷರು, ವಾರ್ಡ್ ಸದಸ್ಯರು, ಕೌನ್ಸಿಲರ್‌ಗಳು, ತಾಂತ್ರಿಕ ಮಾನಿಟರಿಂಗ್ ಸಮಿತಿಯ ಅಧಿಕಾರಿಗಳು ತಪಾಸಣೆ ನಡೆಸುವ ತಂಡದಲ್ಲಿದ್ದು, ಪರಿಶೀಲನೆ ಕೈಗೊಂಡಿದ್ದಾರೆ.
ಚೆಮ್ನಾಡು, ಉದುಮ, ಪಳ್ಳಿಕೆರೆ, ಪುಲ್ಲೂರು ಪೆರಿಯ, ಅಜಾನೂರು ಗ್ರಾಮ ಪಂಚಾಯತ್‌ಗಳನ್ನೊಳಗೊಂಡ ವಿವಿಧ ಭಾಗಗಳಲ್ಲಿ ಪ್ರಥಮ ಹಂತದಲ್ಲಿ ತಪಾಸಣೆ ನಡೆಸಲಾಯಿತು. ತೆಕ್ಕಿಲ್, ಚಟ್ಟಂಚಾಲ್, ಪೊಯಿನಾಚಿ, ಮಾವುಂಗಾಲ್, ಮೈಲಾಟಿ, ಬಟ್ಟತ್ತೂರು, ಪೆರಿಯಾಟಡ್ಕ, ಕುಣಿಯ, ಪೆರಿಯ, ಕೊಡವಲಂ, ಮೂಲಕಂಡ ಭಾಗಗಳ ಸರ್ವೀಸ್ ರಸ್ತೆಗಳಲ್ಲಿ ಮತ್ತು ಪರಿಸರಗಳಲ್ಲಿ ನೀರು ಕಟ್ಟಿ ನಿಲ್ಲುವ ಸಮಸ್ಯೆಗಳ ಕುರಿತು ಜನಪ್ರತಿನಿಧಿಗಳು, ಸಾರ್ವಜನಿಕರು ಇದೇ ಸಂದರ್ಭ ಅಧಿಕಾರಿಗಳಿಗೆ ಸಮಗ್ರವಾಗಿ ವಿವರಣೆ ನೀಡಿದರು.
ಉಳಿದ ಪ್ರದೇಶಗಳ ನೀರು ಸಂಗ್ರಹಣೆ ಸಮಸ್ಯೆಯನ್ನು ಆಯಾ ಸ್ಥಳೀಯಾಡಳಿತ ಸಂಸ್ಥೆಗಳೇ ಬಗೆಹರಿಸಬೇಕೆಂಬ ಆಗ್ರಹ ವ್ಯಕ್ತಗೊಂಡಿದೆ.
ಕಳೆದ ಮಳೆಗಾಲದಲ್ಲಿ ಅನೇಕ ಪ್ರದೇಶಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಮತ್ತು ಸರ್ವೀಸ್ ರಸ್ತೆಗಳಲ್ಲಿ ನೀರು ಸಂಗ್ರಹಗೊಂಡು ಅಪಾರ ನಷ್ಟ ಉಂಟಾಗಿದ್ದು, ಅದರಲ್ಲೂ ಜಿಲ್ಲೆಯ ಹಲವೆಡೆಗಳಲ್ಲಿ ಸರ್ವೀಸ್ ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟಿದ್ದವು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿದ ಜಿಲ್ಲಾ ಮಟ್ಟದ ಸಭೆಯಲ್ಲಿ ರಸ್ತೆಯಲ್ಲಿ ನೀರು ಕಟ್ಟಿ ನಿಲ್ಲುವ ಸಮಸ್ಯೆ ಮಳೆಗಾಲಕ್ಕೆ ಮುಂಚಿತವಾಗಿ ಪರಿಹರಿಸುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲಾಗಿದೆ.



ಹೆದ್ದಾರಿ ಹಸ್ತಾಂತರಿಸಿದ ಸ್ಥಳದಲ್ಲಿ ಮಾತ್ರ ಸಮಸ್ಯೆಗೆ ಪರಿಹಾರ

ರಾಷ್ಟ್ರೀಯ ಹೆದ್ದಾರಿಗೆ ಹಸ್ತಾಂತರಿಸಿದ ಸ್ಥಳದಲ್ಲಿ ನೀರು ಕಟ್ಟಿ ನಿಲ್ಲುವ ಸಮಸ್ಯೆಯನ್ನು ಗುತ್ತಿಗೆ ಕಂಪೆನಿಯ ಹೊಣೆಗಾರಿಕೆಯಲ್ಲಿ ಪರಿಹರಿಸಲಾಗುವುದು. ಆದರೆ ಉಳಿದ ಭಾಗಗಳಲ್ಲಿ ಸಂಭವಿಸುವ ಈ ಸಮಸ್ಯೆ ಪರಿಹರಿಸಲು ಸಾಧ್ಯವಿಲ್ಲ ಎಂದು ಗುತ್ತಿಗೆದಾರ ಕಂಪೆನಿಯ ಪ್ರಮುಖರು ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ವಿವಿಧೆಡೆ ಸಮಗ್ರ ತಪಾಸಣೆ

ದ್ವಿತೀಯ ಹಂತದ ತಪಾಸಣೆ ಮಾವುಂಗಾಲ್ ಜಂಕ್ಷನ್‌ನಿಂದ ಆರಂಭಗೊಂಡು ಕಾಞಂಗಾಡು, ನೀಲೇಶ್ವರ ನಗರಸಭೆ ಗಳು, ಚೆರುವತ್ತೂರು, ಪಿಲಿಕ್ಕೋಡು ಗ್ರಾ.ಪಂ.ಗಳ ವ್ಯಾಪ್ತಿಯಲ್ಲಿನ ಸಮಸ್ಯೆಗಳನ್ನು ಸಮಗ್ರವಾಗಿ ಪರಿಶೀಲಿಸಲಾಗಿದೆ. ತೃತೀಯ ಹಂತದ ತಪಾಸಣೆಯಂತೆ ಬುಧವಾರ ಮಂಜೇಶ್ವರ ಜಂಕ್ಷನ್‌ನಿಂದ ಪರಿಶೀಲನೆ ಆರಂಭಗೊಂಡಿದೆ. ಮಂಜೇಶ್ವರ, ಮಂಗಲ್ಪಾಡಿ, ಕುಂಬಳೆ, ಮೊಗ್ರಾಲ್ ಪುತ್ತೂರು ಗ್ರಾಮ ಪಂಚಾಯತ್‌ಗಳು, ಕಾಸರಗೋಡು ನಗರಸಭೆ, ಚೆಂಗಳ ಗ್ರಾಮ ಪಂಚಾಯತ್ ಮೊದಲಾದ ಕಡೆಗಳಲ್ಲಿ ತಜ್ಞ ಅಧಿಕಾರಿಗಳ ತಂಡ ಪರಿಶೀಲನೆ ನಡೆಸುತ್ತಿದೆ.

ಆಯಾ ಸ್ಥಳೀಯಾಡಳಿತ ಸಂಸ್ಥೆಗಳ ನೇತೃತ್ವ

ಆಯಾ ಸ್ಥಳೀಯಾಡಳಿತ ಸಂಸ್ಥೆಗಳು ರಸ್ತೆಗಳಲ್ಲಿ ನೀರು ಸಂಗ್ರಹಗೊಳ್ಳುವ ಸ್ಥಳಗಳನ್ನು ಗುರುತಿಸಿ ಪರಿಹಾರಕ್ಕೆ ನಿರ್ದೇಶಿಸಬೇಕಿದೆ. ಸ್ಥಳೀಯಾಡಳಿತ ಸಂಸ್ಥೆಗಳು ತಯಾರಿಸುವ ಕಾಮಗಾರಿ ರೂಪುರೇಷೆಯನ್ನು ಅಂಗೀಕರಿಸಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಅಗತ್ಯದ ಮುಂದಿನ ಕ್ರಮ ಕೈಗೊಳ್ಳಲಿದೆ. ಸ್ಥಳೀಯಾಡಳಿತ ಸಂಸ್ಥೆಗಳ ನೇತೃತ್ವದಲ್ಲಿ ಜೂನ್ ತಿಂಗಳೊಳಗೆ ಕಾಮಗಾರಿ ಪೂರ್ತಿಗೊಳಿಸಲು ಸೂಚಿಸಲಾಗಿದೆ. ಒಟ್ಟಿನಲ್ಲಿ ಜಿಲ್ಲಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ ಹಾಗೂ ಆಸುಪಾಸಿನಲ್ಲಿರುವ ಸರ್ವೀಸ್ ರಸ್ತೆಗಳಲ್ಲಿ ಮಳೆಗಾಲದಲ್ಲಿ ನೀರು ಸಂಗ್ರಹಗೊಳ್ಳದಂತೆ ಮತ್ತು ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವ ಯೋಜನೆ ಪ್ರಗತಿಯಲ್ಲಿವೆ.

ಕಾರಡ್ಕ ಬ್ಲಾಕ್ ಪಂಚಾಯತ್ ಬಜೆಟ್: ಕಾಡಾನೆಗಳ ತಡೆಗೆ ಏಳು ಕಿ.ಮೀ. ಬೇಲಿ



ಕಾಸರಗೋಡು: ಗಡಿ ಗ್ರಾಮಗಳ ಜನರ ನೆಮ್ಮದಿಗೆ ಭಂಗ ತರುತ್ತಿರುವ ಕಾಡಾನೆಗಳ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ನೀಡುವ ಯೋಜನೆಯೊಂದಿಗೆ ಕಾರಡ್ಕ ಬ್ಲಾಕ್ ಪಂ.ನ ಮುಂಗಡಪತ್ರ ಮಂಡಿಸಲಾಗಿದೆ.
ಅದರಂತೆ ಈ ವರ್ಷದ ಬಜೆಟ್‌ನಲ್ಲಿ ಅತ್ಯಂತ ಗಮನಾರ್ಹ ಘೋಷಣೆಯೆಂದರೆ ಕರ್ನಾಟಕದ ಅರಣ್ಯ ಪ್ರದೇಶದಿಂದ ಕಾಡು ಪ್ರಾಣಿಗಳ ಪ್ರವೇಶವನ್ನು ಸಂಪೂರ್ಣವಾಗಿ ತಡೆಯುವ ಯೋಜನೆಯ ಭಾಗವಾಗಿ ಏಳು ಕಿಲೋ ಮೀಟರ್ ಉದ್ದಕ್ಕೆ ಬೇಲಿ ನಿರ್ಮಿಸಲು ನಿರ್ಧರಿಸಲಾಗಿದೆ. ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಜಾರಿಗೆ ತರಲಾಗುತ್ತಿರುವ ಈ ಯೋಜನೆ ಕಾಡಾನೆಗಳು ಮಾನವ ವಸತಿ ಪ್ರದೇಶಗಳಿಗೆ ಪ್ರವೇಶಿಸುವುದನ್ನು ಸಂಪೂರ್ಣ ತಡೆಯುತ್ತದೆ ಎಂಬ ಆಶಯ ಹೊಂದಿದೆ.
ಬ್ಲಾಕ್ ಪಂಚಾಯತ್ ಉಪಾಧ್ಯಕ್ಷೆ ವಿ.ಉಷಾ ಅವರು 75.74 ಕೋಟಿ ರೂ.ಗಳ ನಿರೀಕ್ಷಿತ ಆದಾಯ, 65.67 ಕೋಟಿ ರೂ.ಗಳ ವೆಚ್ಚ, 10.6 ಕೋಟಿ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದರು.
ವಿವಿಧ ಅಭಿವೃದ್ಧಿ ಕ್ಷೇತ್ರಗಳಿಗೆ ಮುಂಗಡ ಪತ್ರದಲ್ಲಿ ಭಾರೀ ಮೊತ್ತ ನಿಗದಿಪಡಿಸಲಾಗಿದೆ. ವಸತಿ ಕ್ಷೇತ್ರಕ್ಕೆ 2.67 ಕೋಟಿ ರೂ. ಮತ್ತು ಆರೋಗ್ಯ ಕ್ಷೇತ್ರಕ್ಕೆ 2.09 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ. ಕೃಷಿ ಕ್ಷೇತ್ರದ ಅಭಿವೃದ್ಧಿಗೆ 1.20 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಇದರೊಂದಿಗೆ ಬಜೆಟ್‌ನಲ್ಲಿ ಸಣ್ಣ ಕೈಗಾರಿಕೆಗಳಿಗೆ 82.5 ಲಕ್ಷ ರೂ.ಗಳನ್ನು ಮತ್ತು ಡೈರಿ ಅಭಿವೃದ್ಧಿಗೆ 22.1 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿದೆ.
ಬ್ಲಾಕ್ ಪಂ.ಸಭಾಂಗಣದಲ್ಲಿ ನಡೆದ ಬಜೆಟ್ ಸಭೆಯ ಅಧ್ಯಕ್ಷತೆಯನ್ನು ಬ್ಲಾಕ್ ಪಂ. ಅಧ್ಯಕ್ಷ ಸಿ.ಬಾಲನ್ ವಹಿಸಿದ್ದರು. ಸ್ಥಾಯೀ ಸಮಿತಿ ಅಧ್ಯಕ್ಷ ಜಿ.ರಾಜೇಶ್ ಬಾಬು, ಶಮೀರ್ ಕುಂಬಕೋಡ್, ಸುಗಂಧಿನಿ, ವಿವಿಧ ಪಂ. ಅಧ್ಯಕ್ಷರು ಮತ್ತಿತರರು ಮಾತನಾಡಿದರು.

ಮುನಿಪುರ ಶ್ರೀ ದೇವಸ್ಥಾನದ ಬ್ರಹ್ಮಕಲಶ: ಕುಂಭೇಶ ಕರ್ಕರಿ ಪೂಜೆ, ತತ್ವಕಲಶಾಭಿಷೇಕ



ಬದಿಯಡ್ಕ: ಕುಂಬ್ಡಾಜೆ ಗ್ರಾಮದ ಮುನಿಯೂರು ಮುನಿಪುರ ಶ್ರೀ ಗೋಪಾಲಕೃಷ್ಣ ದೇವಾಲಯದ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ ಐದನೇ ದಿನವಾದ ಗುರುವಾರ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಯವರ ನೇತೃತ್ವ ವಿವಿಧ ಕಾರ್ಯಕ್ರಮ ನಡೆಯಿತು.
ಬೆಳಗ್ಗೆ ಗಣಪತಿ ಹೋಮ, ಸಂಹಾರತತ್ವ ಹೋಮ, ತತ್ವಕಲಶ ಪೂಜೆ, ಕುಂಭೇಶ ಕರ್ಕರಿ ಪೂಜೆ, ಶಯ್ಯಾಪೂಜೆ, ತತ್ವಕಲಶಾಭಿಷೇಕ, ಜೀವಕಲಶಪೂಜೆ, ಜೀವೋದ್ವಾಸನೆ, ಜೀವಕಲಶ, ಶಯ್ಯೋನ್ನಯನ, ಅಂಕುರ ಪೂಜೆ ಜರಗಿತು. ರಾತ್ರಿ ಬಿಂಬಶುದ್ಧಿ ಕಲಶಾಭಿಷೇಕ, ಪೀಠಾಧಿವಾಸ, ಧ್ಯಾನಾಧಿವಾಸ, ಅಧಿವಾಸ ಹೋಮ, ಅಧಿವಾಸ ಬಲಿ, ತ್ರಿಕಾಲ ಪೂಜೆ, ಶಿರಸ್ತತ್ವ ಹೋಮ, ಪುಣ್ಯಾಹವಾಚನ, ಪ್ರಾಸಾದ ಶುದ್ಧಿ ರಾಕ್ಷೋಘ್ನ ಹೋಮ, ವಾಸ್ತುಹೋಮ, ವಾಸ್ತುಬಲಿ, ಮಹಾಪೂಜೆ ನಡೆಯಿತು.

ಇಂದು ಶ್ರೀ ದೇವರ ಪ್ರತಿಷ್ಠೆ

ಶ್ರೀ ಕ್ಷೇತ್ರದಲ್ಲಿ ಮಾ.6ರಂದು ಬೆಳಿಗ್ಗೆ 108 ತೆಂಗಿನಕಾಯಿ ಗಣಪತಿ ಹೋಮ, ಪ್ರತಿಷ್ಠಾಪಾಣಿ, 10.44ರ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀ ದೇವರ ಪ್ರತಿಷ್ಠೆ, ಪ್ರತಿಷ್ಠಾ ಬಲಿ, ಅಂಕುರ ಪೂಜೆ, ಮಹಾಪೂಜೆ, ನಡೆಯಲಿದೆ. ಸಂಜೆ 6ರಿಂದ ವಿವಿಧ ಕಾರ್ಯಕ್ರಮ, ರಾತ್ರಿ 7ರಿಂದ ದ್ವಂದ್ವ ವಯಲಿನ್ ವಾದನ, 9ರಿಂದ ಕೈಕೊಟ್ಟಿಕ್ಕಳಿ ಜರಗಲಿದೆ.

ಸಂಜೆ ಅಗಲ್ಪಾಡಿ ಮಾರ್ಪನಡ್ಕ ಜಯನಗರ ಶ್ರೀ ಗೋಪಾಲಕೃಷ್ಣ ಭಜನಾ ಮಂದಿರದಿಂದ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ, ರಾತ್ರಿ ಕಲಾತಪಸ್ವಿ ನಾಟ್ಯಗುರು ವಿದ್ವಾನ್ ಬಾಲಕೃಷ್ಣ ಮಾಸ್ತರ್ ನಾಟ್ಯನಿಲಯಂ ಮಂಜೇಶ್ವರ ಅವರ ಶಿಷ್ಯವೃಂದದವರಿಂದ ಭರತನಾಟ್ಯ ನೆರವೇರಿತು.

ಪೆರ್ಲ ವಿವೇಕಾನಂದ ಶಿಶುಮಂದಿರ, ಸೆಂಟ್ರಲ್ ಸ್ಕೂಲ್ ವಾರ್ಷಿಕೋತ್ಸವ



ಪೆರ್ಲ: ಪೆರ್ಲ ವಿವೇಕಾನಂದ ಶಿಶುಮಂದಿರ ಹಾಗೂ ಸೆಂಟ್ರಲ್ ಸ್ಕೂಲ್ ವಾರ್ಷಿಕೋತ್ಸವ ನಾಲಂದ ಕಾಲೇಜು ಸಭಾಂಗಣದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಿತು. ಪೆರ್ಲ ಶ್ರೀ ಸತ್ಯನಾರಾಯಣ ಹೈಸ್ಕೂಲ್‌ನ ನಿವೃತ್ತ ಮುಖ್ಯ ಶಿಕ್ಷಕ ರಾಜೇಂದ್ರ ಬಜಕೂಡ್ಲು ಸಭಾ ಕಾರ್ಯಕ್ರಮ ಉದ್ಘಾಟಿಸಿದರು. ಗೌರವ ಸಲಹೆಗಾರ ದಯಾನಂದ ಕೆ.ಆರ್. ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿ ಪ್ರಮಾಥಿ ದೇವಧರ್ ಸೆಂಟ್ರಲ್ ಸ್ಕೂಲ್ ಹಾಗೂ ಶಿಕ್ಷಕಿ ರೇಖಾ ಶಿಶುಮಂದಿರದ ವರದಿ ಮಂಡಿಸಿದರು. ಶಿಶುಮಂದಿರದ ಅಧ್ಯಕ್ಷೆ ನಳಿನಿ ಸೈಪಂಗಲ್ಲು ಸ್ವಾಗತಿಸಿ, ಶಿಕ್ಷಕಿ ಸುನಿತಾ ವಂದಿಸಿದರು. ಆಶ್ವಿತಾ ನಿರೂಪಿಸಿದರು. ಮಕ್ಕಳು, ಪೋಷಕರಿಗೆ ಆಯೋಜಿಸಲಾದ ಸ್ಪರ್ಧೆಗಳ ಬಹುಮಾನ ವಿತರಿಸಲಾಯಿತು. ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

ಪೈವಳಿಕೆ ಪಂಚಾಯತ್ ಬಜೆಟ್: ಶುಚಿತ್ವ, ಕುಡಿಯುವ ನೀರಿಗೆ ಆದ್ಯತೆ



ಉಪ್ಪಳ: ಪೈವಳಿಕೆ ಗ್ರಾಮ ಪಂಚಾಯತ್‌ನ 2026–27ನೇ ಸಾಲಿನ ವಾರ್ಷಿಕ ಬಜೆಟ್ ಪಂಚಾಯಿತ್ ಉಪಾಧ್ಯಕ್ಷ ರಾಘವೇಂದ್ರ ಭಟ್ ಮಂಡಿಸಿದರು. ಪಂಚಾಯತ್ ಅಧ್ಯಕ್ಷೆ ಬದರುನ್ನೀಸಾ ಸಲೀಂ ಅಧ್ಯಕ್ಷತೆ ವಹಿಸಿದ್ದರು.
ಶುಚಿತ್ವ ಹಾಗೂ ಕುಡಿಯುವ ನೀರಿನ ಯೋಜನೆಗಳಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. ಮಾಲಿನ್ಯ ಸಂಸ್ಕರಣಾ ಪ್ಲಾಂಟ್‌ನ್ನು ಅಭಿವೃದ್ಧಿಪಡಿಸಿ ಪೂರ್ಣ ಪ್ರಮಾಣದಲ್ಲಿ ಸಂಸ್ಕರಣೆ ನಡೆಸುವ ಮೂಲಕ ಪಂಚಾಯತ್‌ನ ಎಲ್ಲಾ ಪ್ರದೇಶಗಳಿಂದಲೂ ನಿಯಮಿತವಾಗಿ ಮಾಲಿನ್ಯ ಸಂಗ್ರಹಿಸಲು ಯೋಜನೆ ರೂಪಿಸಲಾಗಿದೆ. ಉಳಿದಂತೆ ಕೃಷಿ ಹಾಗೂ ಆರೋಗ್ಯ ವಲಯಕ್ಕೂ ಬಜೆಟ್‌ನಲ್ಲಿ ಅನುದಾನ ನೀಡಲಾಗಿದೆ. ಅಲ್ಲದೆ ಮಹಿಳಾ ಶಿಶು ಅಭಿವೃದ್ಧಿ ವಿಭಾಗದಲ್ಲಿಯೂ ಅಗತ್ಯದ ಪರಿಗಣನೆ ನೀಡಲಾಗಿದೆ.
ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಸುನೀನಾ, ಕ್ಷೇಮ ಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಶ್ರೀನಿವಾಸ, ಶಿಕ್ಷಣ ಮತ್ತು ಆರೋಗ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ಸುಮನಾ ಭಟ್, ಪಂ. ಕಾರ್ಯದರ್ಶಿ ಜಿಜಿ, ಸಹ ಕಾರ್ಯದರ್ಶಿ ವೆಂಕಟೇಶ ಭಟ್, ಯೋಜನಾ ಸಮಿತಿ ಉಪಾಧ್ಯಕ್ಷ ಮುಹಮ್ಮದ್ ಮಾಸ್ತರ್ ಮಾತನಾಡಿದರು. ಗ್ರಾ.ಪಂ. ನ ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡರು.

ಮಾಯಿಪ್ಪಾಡಿ ಡಯಟ್‌ನ ನೂತನ ಆಡಳಿತಾತ್ಮಕ ಬ್ಲಾಕ್ ಕಟ್ಟಡ ಉದ್ಘಾಟನೆ



ಕಾಸರಗೋಡು: ಕಾಸರಗೋಡು ಜಿಲ್ಲೆಯ ಶೈಕ್ಷಣಿಕ ಚಟುವಟಿಕೆಗಳನ್ನು ಮುನ್ನಡೆಸುವ ನಿಟ್ಟಿನಲ್ಲಿ ಮಾಯಿಪ್ಪಾಡಿ ಡಯಟ್‌ಗಾಗಿ ಹೊಸ ಆಡಳಿತಾತ್ಮಕ ಬ್ಲಾಕ್ ಕಟ್ಟಡವನ್ನು ನಿರ್ಮಿಸಲಾಗಿದೆ. ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನ ಭಾಗವಾಗಿ ನಿರ್ಮಿಸಲಾದ ಈ ಹೊಸ ಕಟ್ಟಡವನ್ನು ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು ಉದ್ಘಾಟಿಸಿದರು.
ಸಮಾರಂಭದಲ್ಲಿ ಮಧೂರು ಗ್ರಾ.ಪಂ. ಅಧ್ಯಕ್ಷೆ ಸುಜ್ಞಾನಿ ಎಸ್.ಶ್ಯಾನುಭೋಗ್ ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಜಿ.ಪಂ.ಅಧ್ಯಕ್ಷ ಸಾಬು ಅಬ್ರಹಾಂ ಮುಖ್ಯ ಅತಿಥಿಯಾಗಿದ್ದರು. ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರ್ ರೇಷ್ಮಾ ಯೋಜನಾ ವರದಿ ಮಂಡಿಸಿದರು.
ಹೊಸ ಆಡಳಿತಾತ್ಮಕ ಬ್ಲಾಕ್ ಕಟ್ಟಡವು ಪ್ರಾಂಶುಪಾಲರ ಕ್ಯಾಬಿನ್, ಕಚೇರಿ, ವೈದ್ಯಕೀಯ ಕೊಠಡಿ, ಗ್ರಂಥಾಲಯ, ಪ್ರಯೋಗಾಲಯ, ಪ್ರಾತ್ಯಕ್ಷಿಕೆ ಸಭಾಂಗಣ, ಕ್ಯಾಂಟೀನ್ ಮುಂತಾದ ಸೌಲಭ್ಯಗಳನ್ನು ಹೊಂದಿದೆ. ಯೋಜನೆಯ ಮುಂದಿನ ಹಂತ ಎರಡನೇ ಮಹಡಿಯಲ್ಲಿ ಶೈಕ್ಷಣಿಕ ಬ್ಲಾಕ್ ನಿರ್ಮಿಸುವ ಕೆಲಸ ಶೀಘ್ರದಲ್ಲೇ ಪ್ರಾರಂಭವಾಗಲಿದೆ.
ಕಾಸರಗೋಡು ಬ್ಲಾಕ್ ಪಂ.ಉಪಾಧ್ಯಕ್ಷೆ ಉಷಾ ಅರ್ಜುನ್, ಮಧೂರು ಗ್ರಾ.ಪಂ. ಸ್ಥಾಯೀ ಸಮಿತಿ ಅಧ್ಯಕ್ಷರಾದ ದಾಕ್ಷಾಯಣಿ, ಮಾಧವ ಮಾಸ್ತರ್, ಗ್ರಾ.ಪಂ.ಸದಸ್ಯ ರವಿ ಗಟ್ಟಿ, ಎಸ್‌ಎಸ್‌ಕೆ ಡಿಪಿಸಿ ವಿ.ಎಸ್. ಬಿಜುರಾಜ್, ವಿದ್ಯಾಕಿರಣಂ ಸಂಯೋಜಕ ಟಿ.ಪ್ರಕಾಶನ್ ಮಾತನಾಡಿದರು.
ಡಯಟ್ ನಿವೃತ್ತ ಪ್ರಾಂಶುಪಾಲ ಸಿ.ಎಂ. ಬಾಲಕೃಷ್ಣನ್, ಡಾ.ಪಿ.ವಿ. ಕೃಷ್ಣಕುಮಾರ್, ಪಿಟಿಎ ಅಧ್ಯಕ್ಷ ಸುರೇಶ್‌ಕುಮಾರ್, ಎಸ್‌ಎಂಸಿ ಅಧ್ಯಕ್ಷ ನಾರಾಯಣನ್, ಸಂತೋಷ್ ಕೆ. ಉಪಸ್ಥಿತರಿದ್ದರು. ಡಯಟ್ ಪ್ರಾಂಶುಪಾಲ ಡಾ.ಕೆ.ರಘುರಾಮ ಭಟ್ ಸ್ವಾಗತಿಸಿ, ಸಿಬ್ಬಂದಿ ಕಾರ್ಯದರ್ಶಿ ಡಾ.ವಿನೋದ್ ಕುಮಾರ್ ಪೆರುಂಬಳ ವಂದಿಸಿದರು.

ಮಾ.8ರಂದು ವಿರಾಟ್ ಹಿಂದು ಸಂಗಮ: ಮಹಾಮಂಡಲೇಶ್ವರ ಸ್ವಾಮೀಜಿ ಭಾಗಿ

ಕುಂಬಳೆ: ಭಾರತದ ನಾಗಸಾಧುಗಳ ಪಂಥ (ಅಖಾಡ)ಗಳಲ್ಲಿ ಅತ್ಯಂತ ಪ್ರಾಚೀನ ಹಾಗೂ 13 ಪಂಥಗಳಲ್ಲಿಯೇ ಅತ್ಯಂತ ಪ್ರಬಲ ಹಾಗೂ ಮೊದಲ ಪಂಥವಾದ 'ಜೂನಾ ಪಂಥದ' ಮಹಾಮಂಡಲೇಶ್ವರ ಶ್ರೀ ಆನಂದವನ ಭಾರತೀ ಸ್ವಾಮೀಜಿಯವರು ಮಾ.8ರಂದು ಪಂಚವರ್ಣದ ಪುಂಚದ ಮಣ್ಣ್ ಎಂಬ ಖ್ಯಾತಿಯನ್ನು ಹೊಂದಿದ ತುಳುನಾಡಿನ ಪುತ್ತಿಗೆಗೆ ಆಗಮಿಸಲಿದ್ದಾರೆ.



ಸುಮಾರು 271 ವರ್ಷಗಳ ಹಿಂದೆ ಬ್ರಿಟಿಷರು ನಿಲುಗಡೆಗೊಳಿಸಿದ ಮಲಪ್ಪುರಂನ ಭಾರತ ಹೊಳೆ ತೀರದಲ್ಲಿ ತಿರುನಾವಾಯ ಎಂಬಲ್ಲಿನ ಶ್ರೀ ಮುಕುಂದೇಶ್ವರ ದೇಗುಲದಲ್ಲಿ ಮಹಾಮಾಮಾಂಕಂ ಅಥವಾ ಕೇರಳದ ಕುಂಭಮೇಳನ್ನು ಮರು ಆರಂಭಿಸಿದ ಧೀರ ಸ್ವಾಮೀಜಿ ಎನ್ನುವ ಗೌರವ ಹೊಂದಿರುವ ಸ್ವಾಮೀಜಿಯವರ ಮೊದಲ ಸಾರ್ವಜನಿಕ ಸಮಾರಂಭವಾಗಿದೆ. ಅವರು ಪುತ್ತಿಗೆಯಲ್ಲಿ ಜರಗಲಿರುವ ವಿರಾಟ್ ಹಿಂದು ಸಂಗಮದಲ್ಲಿ ಪಾಲ್ಗೊಂಡು ಆಶೀರ್ವಚನ ನೀಡುವರು.

ಶ್ರೀಗಳ ಪೂರ್ವಾಶ್ರಮ ಹಿನ್ನಲೆ

ಶ್ರೀ ಆದಿಶಂಕರಾಚಾರ್ಯರ ಕಟ್ಟಾ ಅನುಯಾಯಿ ಆಗಿರುವ ಶ್ರೀಗಳು ಪೂರ್ವಾಶ್ರಮದಲ್ಲಿ ಕೇರಳದ ತೃಶೂರಿನ ಚಾಲಕ್ಕುಡಿಯ ಮೇನೋಕಿ ವೀಟ್ಟಿಲ್ ಸೇತುಮಾಧವನ್ ಮತ್ತು ಆನಂದವಲ್ಲಿ ದಂಪತಿಯ ಪುತ್ರರಾಗಿದ್ದಾರೆ. ಪಿ.ಸಲೀಲ್ ಅವರ ಪೂರ್ವನಾಮ. ಇರಿಞಾಲಕುಡ ಕ್ರೈಸ್ಟ್ ಕಾಲೇಜು, ತೃಶೂರು ಕೇರಳ ವರ್ಮ ಕಾಲೇಜಿಗಳಲ್ಲಿ ಶಿಕ್ಷಣ ಪಡೆದ ಅವರು ಎಡಪಂಥೀಯ ವಿದ್ಯಾರ್ಥಿ ಸಂಘಟನೆಯಾದ ಎಸ್‌ಎಫ್‌ಐಯ ಉತ್ತಮ ವಾಗ್ಮಿಯಾಗಿರುವ ಪ್ರಮುಖ ನೇತಾರನಾಗಿದ್ದರು. ಎಸ್‌ಎಫ್‌ಐ ತೃಶೂರು ಜಿಲ್ಲಾ ಉಪಾಧ್ಯಕ್ಷ, ಕಾಲೇಜ್ ಯೂನಿಟ್‌ನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದವರು. ಕಟ್ಟಾ ನಾಸ್ತಿಕರಾಗಿದ್ದ ಅವರು ಓರ್ವ ಪತ್ರಕರ್ತನಾಗಬೇಕೆಂಬ ಹಂಬಲದಿಂದ ಕೊಚ್ಚಿಯ ಮೀಡಿಯಾ ಅಕಾಡೆಮಿಯಲ್ಲಿ ಜರ್ನಲಿಸಂ ಪೂರ್ಣಗೊಳಿಸಿದ್ದರು. ಬಳಿಕ ಹತ್ತು ವರ್ಷಗಳ ಕಾಲ ಪತ್ರಕರ್ತನಾಗಿ ಲೇಖನಿ ಹಿಡಿದಿದ್ದರು.

ಮಾರ್ಕ್ಸ್ ಸಿಂದನಿಂದ ಮಹರ್ಷಿಯತ್ತ

ದೃಶ್ಯ ಮಾಧ್ಯಮದಲ್ಲಿ ದುಡಿಯುತ್ತಿದ್ದ ಅವರು 2019ರಲ್ಲಿ ಅಲಹಾಬಾದ್‌ನಲ್ಲಿ ನಡೆದ ಕುಂಭಮೇಳವನ್ನು ನೇರ ಪ್ರಸಾರ ಮಾಡಲು ಹೋಗಿದ್ದರು. ಅದೇನಾಯ್ತೋ ಗೊತ್ತಿಲ್ಲ, ಅಲ್ಲಿ ಅವರು ಭೇಟಿಯಾದ ನಾಗಸಾಧುರೋರ್ವರ ಪ್ರಭಾವಕ್ಕೆ ಒಳಗಾದ ಸಲೀಲ್ ಜೂನಾ ಪಂಥದ ನಾಗ ಸನ್ಯಾಸಿಯಿಂದ ನಾಗದೀಕ್ಷೆ ಪಡೆದು ಕೊಂಡರು. ಬಳಿಕ ಕಠಿಣ ತಪಸ್ಸಲ್ಲಿ ನಿರತರಾದ ಅವರು ಆನಂದವನ ಭಾರತೀ ಸ್ವಾಮೀಜಿಯಾಗಿ ಪರಿವರ್ತನೆಹೊಂದಿದ್ದರು.



ಕುಂಜತ್ತೂರು ಹೊಸಂಗಡಿ ಪೀಸ್ ಕ್ರಿಯೇಟಿವ್ ಶಾಲೆಯ ವಿದ್ಯಾರ್ಥಿಗಳಿಂದ ರಂಜಾನ್ ಕಿಟ್ ವಿತರಿಸಲಾಯಿತು. ವಿದ್ಯಾರ್ಥಿಗಳು ಶ್ರಮವಹಿಸಿ ಸಂಗ್ರಹಿಸಿದ ಮತ್ತು ಸಿದ್ಧಪಡಿಸಿದ ದಿನಬಳಕೆಯ ಕಿಟ್‌ಗಳನ್ನು ಅಗತ್ಯವಿರುವ ಕುಟುಂಬಗಳಿಗೆ ವಿತರಿಸಲಾಯಿತು.

ಕುಂಬ್ಡಾಜೆ ಗ್ರಾಮ ಪಂಚಾಯತ್ ಮುಂಗಡಪತ್ರ । 10,65,017 ಉಳಿಕೆ ಬಜೆಟ್ ಮಂಡನೆ

ಕೃಷಿ, ನೀರಾವರಿ, ಶುಚಿತ್ವ, ಆರೋಗ್ಯ, ಪಶುಸಂಗೋಪನೆಗೆ ಮೊದಲ ಆದ್ಯತೆ

ಬದಿಯಡ್ಕ: ಪಂಚಾಯತ್‌ನಲ್ಲಿ ಉತ್ಪಾದನಾ ವಲಯ, ಸೇವಾ ವಲಯ, ವಯೋಜನ ಕೇಂದ್ರ, ಮೂಲ ಸೌಕರ್ಯ, ಪಶುಸಂಗೋಪನೆ, ಪರಿಶಿಷ್ಟ ಜಾತಿ–ಪಂಗಡ, ವಸತಿ ಯೋಜನೆಗಳು ಸೇರಿದಂತೆ ಆದ್ಯತೆ ನೀಡಿ ಕುಂಬ್ಡಾಜೆ ಗ್ರಾಮ ಪಂಚಾಯತ್‌ನ 2026–27ನೇ ವರ್ಷದ ಬಜೆಟ್‌ನ್ನು ಪಂಚಾಯತ್ ಅಧ್ಯಕ್ಷೆ ಯಶೋಧಾ ಎನ್. ಅಧ್ಯಕ್ಷತೆಯಲ್ಲಿ ಉಪಾಧ್ಯಕ್ಷ ಹಾಗೂ ಹಣಕಾಸು ಸ್ಥಾಯೀ ಸಮಿತಿ ಅಧ್ಯಕ್ಷ ರವೀಂದ್ರ ರೈ ಗೋಸಾಡ ಅವರು ಗುರುವಾರ ಪಂಚಾಯತ್ ಸಭಾಂಗಣದಲ್ಲಿ ಮಂಡಿಸಿದರು.
ಒಟ್ಟು 21,84,64,320 ಆದಾಯ ನಿರೀಕ್ಷಿಸುವ ಮತ್ತು 21,73,99,303 ವೆಚ್ಚದೊಂದಿಗೆ 10,65,017 ಉಳಿಕೆ ಬಜೆಟ್ ಮಂಡಿಸಲಾಯಿತು.
ಕೃಷಿ ಕ್ಷೇತ್ರದ ಪುನರುಜ್ಜೀವನಕ್ಕಾಗಿ ಭತ್ತ, ಅಡಕೆ, ಕರಿಮೆಣಸು, ತೆಂಗು ಬೆಳೆಗಳ ಪ್ರೋತ್ಸಾಹ, ನೀರಾವರಿ ಪಂಪ್‌ಸೆಟ್ ವಿತರಣೆಗೆ ಅನುದಾನ ಮೀಸಲಿರಿಸಲಾಗಿದೆ. ತ್ಯಾಜ್ಯ ನಿರ್ವಹಣೆ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿಗಾಗಿ ಶಾಲಾ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ನೊಂದಿಗೆ ತ್ಯಾಜ್ಯರಹಿತ ಕುಂಬ್ಡಾಜೆ ಗುರಿಯನ್ನು ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.
ಪಂಚಾಯತ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಯೋಗ ತರಬೇತಿ ಹಾಗೂ ಆಸ್ಪತ್ರೆಗಳಿಗೆ ಔಷಧಿ ಖರೀದಿಸಲು ಹಣ ಮೀಸಲಿರಿಸಲಾಗಿದೆ. ಹಾಲು ಉತ್ಪಾದಕರಿಗೆ ಸಬ್ಸಿಡಿ, ಹಸು, ಮೊಟ್ಟೆ ಕೋಳಿ ವಿತರಣೆಗೆ ಹಣವನ್ನು ಮೀಸಲಿರಿಸಲಾಗಿದೆ. ಗ್ರಾಮ ಪಂಚಾಯತ್‌ನಲ್ಲಿ ದಾರಿದೀಪ ಅಳವಡಿಸುವುದು, ಪರಿಶಿಷ್ಟ ಪಂಗಡ, ಜಾತಿಯವರಿಗೆ ಹೊಲಿಗೆಯಂತ್ರ ವಿತರಣೆ ಮತ್ತು ಲೈಫ್ ಯೋಜನೆಯಡಿ ಮನೆ ನಿರ್ಮಾಣಕ್ಕೆ ಹಣ ಮೀಸಲಿರಿಸಲಾಗಿದೆ.
ಉಳಿದಂತೆ ಪಂ. ರಸ್ತೆ ನಿರ್ವಹಣೆ, ಹೊಸ ರಸ್ತೆಗಳ ನಿರ್ಮಾಣ, ಚೆಕ್‌ಡ್ಯಾಮ್, ಎಸ್‌ಟಿ ಸಮುದಾಯ ಭವನ ಸೇರಿದಂತೆ ವಿವಿಧ ಯೋಜನೆಗಳಿಗೆ ಆದ್ಯತೆ ನೀಡುವ ಬಜೆಟ್ ಮಂಡಿಸಲಾಯಿತು.
ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ನಯನ, ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಪ್ರಿಯಾಂಕ ಎ.ಸಿ., ಕ್ಷೇಮಕಾರ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಅಬೂಬಕರ್ ಎಂ., ಸದಸ್ಯರಾದ ಮಹೇಶ್ ಅಜ್ಜಿಮೂಲೆ, ಬಿ.ಟಿ.ಅಬ್ದುಲ್ಲಕುಂಞ, ಎಸ್.ಮೊಹಮ್ಮದ್, ನೂರುದ್ದೀನ್ ಪಿ., ಗೀತಾ ಡಿ., ಕೊರಗಪ್ಪ ಬೆಳ್ಳಿಗೆ, ಬಬಿತಾ ರೇಷ್ಮಾ, ಸೌಭಾಗ್ಯಲಕ್ಷ್ಮೀ, ಆಯಿಷತ್ ಮಾಸಿದಾ, ಕಾರಡ್ಕ ಬ್ಲಾಕ್ ಪಂ. ಸದಸ್ಯ ಸುಧಾಮ ಗೋಸಾಡ, ಯೋಜನಾ ಸಮಿತಿ ಉಪಾಧ್ಯಕ್ಷ ರಾಜೇಶ್ ಶೆಟ್ಟಿ ಪ್ರಭಾರ ಪಂ.ಕಾರ್ಯದರ್ಶಿ ಶಾಜಿ ಒ., ಕೃಷಿ ಅಧಿಕಾರಿ ಗಿರೀಶ್, ಮೆಡಿಕಲ್ ಆಫೀಸರ್ ಡಾ.ಸಯ್ಯದ್ ಹಮೀದ್ ಶುಹೈಬ್ ಮತ್ತಿತರರಿದ್ದರು.



ಬಜೆಟ್‌ನಲ್ಲಿ ಎಲ್ಲಾ ವಲಯಕ್ಕೂ ಆದ್ಯತೆ

ಪಂಚಾಯತ್‌ನ ಆರ್ಥಿಕ ವ್ಯವಸ್ಥೆಯ ಇತಿಮಿತಿಯೊಳಗೆ ಎಲ್ಲಾ ವಲಯಗಳಿಗೆ ಆದ್ಯತೆ ನೀಡುವ ಬಜೆಟ್ ಇದಾಗಿದೆ. ಸರಕಾರದಿಂದ ನೀಡಲಾಗುವ ಯೋಜನೆಗಳ ಜೊತೆಗೆ ಪಂಚಾಯತ್‌ನ ಸ್ವಂತ ಯೋಜನೆಗಳನ್ನು ಜ್ಯಾರಿಗೊಳಿಸಲು ಪ್ರಯತ್ನಿಸಲಾಗುವುದು.

● ಯಶೋಧ ಎನ್., ಅಧ್ಯಕ್ಷೆ, ಕುಂಬ್ಡಾಜೆ ಗ್ರಾಮ ಪಂಚಾಯತ್

ಸುತ್ತ ಮುತ್ತ

ನಾಳೆ ವಿಶೇಷ ಗ್ರಾಮಸಭೆ

ಕುಂದಾಪುರ: ಗಂಗೊಳ್ಳಿ ಗ್ರಾಮ ಪಂಚಾಯತ್‌ನ 2025–26ನೇ ಸಾಲಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ವಿಶೇಷ ಗ್ರಾಮ ಸಭೆ ಗಂಗೊಳ್ಳಿ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ಮಾ.7ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ ಎಂದು ಪಂಚಾಯತ್ ಪ್ರಕಟಣೆಯಲ್ಲಿ ತಿಳಿಸಿದೆ.

ಇನ್ಸ್ಪೈಯರ್ ಪ್ರಶಸ್ತಿ ಸ್ಪರ್ಧೆಗೆ ಆಯ್ಕೆ

ಕುಂದಾಪುರ: ಗಂಗೊಳ್ಳಿಯ ಎಸ್.ವಿ. ಆಂಗ್ಲ ಮಾಧ್ಯಮ ಶಾಲೆಯ 9ನೇ ತರಗತಿಯ ವಿದ್ಯಾರ್ಥಿ



ಟಿ. ಭುವನೇಶ್ವರ ಪೈ ಅವರು 'ಹಣ ಓದುಗರ ಹಾಗೂ ವಸ್ತು ಗುರುತಿಸುವ ಯಂತ್ರ' ಎಂಬ ವೈಜ್ಞಾನಿಕ ಆವಿಷ್ಕಾರದ ಕಲ್ಪನೆಯನ್ನು ರೂಪಿಸಿದ್ದು, ಈ ಯೋಜನೆ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ನಡೆಸುವ ಇನ್ಸ್ಪೈಯರ್ ಪ್ರಶಸ್ತಿ ಸ್ಪರ್ಧೆಗೆ ಆಯ್ಕೆಯಾಗಿದೆ.

ಇಂದು ಮಹಿಳಾ ಆಯೋಗ ಅಧ್ಯಕ್ಷೆ ಭೇಟಿ

ಉಡುಪಿ: ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅವರು ಮಾ. 6ರಂದು ಉಡುಪಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದು ಅಂದು ಮಧ್ಯಾಹ್ನ 2.30 ಕ್ಕೆ ಮಣಿಪಾಲನ ಡಾ.ಟಿ.ಎಂ.ಎ ಪೈ ಆಡಿಟೋರಿಯಂ ನಲ್ಲಿ ಕಸ್ತೂರ ಬಾ ಮೆಡಿಕಲ್ ಕಾಲೇಜ್ ವತಿಯಿಂದ ಹಮ್ಮಿಕೊಂಡಿರುವ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ನಂತರ ಮಂಗಳೂರಿಗೆ ಪ್ರಯಾಣ ತೆರಳಲಿದ್ದಾರೆ.

ವಾಹನ ಪಾರ್ಕಿಂಗ್ ಶುಲ್ಕ ವಸೂಲಿಗೆ ಆಕ್ಷೇಪ

ಕುಂದಾಪುರ: ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ರಸ್ತೆಗಳ ಇಕ್ಕೆಲಗಳಲ್ಲಿ ಪಾರ್ಕಿಂಗ್ ಶುಲ್ಕ ವಸೂಲಿ ಮಾಡಲು ಹರಾಜು ಮೂಲಕ ಹಕ್ಕು ನೀಡುವ ನಿರ್ಣಯ ತೆಗೆದುಕೊಂಡ ಪತ್ರಿಕಾ ಪ್ರಕಟಣೆ ನೀಡಿರುವುದು ಅತ್ಯಂತ ಖಂಡನೀಯ ಮತ್ತು ಜನವಿರೋಧಿ ಕ್ರಮವಾಗಿದೆ ಎಂದು ಕಾಂಗ್ರೆಸ್ ಸೋಶಿಯಲ್ ಮೀಡಿಯಾ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಶೆಟ್ಟಿ ಪ್ರತಿಕ್ರಿಯಿಸಿದ್ದಾರೆ. ಪುರ ನಗರದ ಜನರ ಹಿತಾಸಕ್ತಿಗೆ ವಿರುದ್ಧವಾಗಿರುವ ಯಾವುದೇ ಕ್ರಮವನ್ನು ಸಾರ್ವಜನಿಕರು ಒಪ್ಪುವುದಿಲ್ಲ ಎಂಬುದನ್ನು ಪುರಸಭೆ ಆಡಳಿತ ಗಮನದಲ್ಲಿಡಬೇಕು ಎಂದು ಪತ್ರಿಕಾ ಹೇಳಿಕೆಯಲ್ಲಿ ಅವರು ತಿಳಿಸಿದ್ದಾರೆ.

ಪುಸ್ತಕ ಆಯ್ಕೆ ಸಮಿತಿ ಆಯ್ಕೆ ಮಾಡಿದ ಪುಸ್ತಕಗಳ ಪ್ರಕಟ

ಉಡುಪಿ: ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ 2022 ನೇ ಸಾಲಿನಲ್ಲಿ ಪ್ರಥಮ ಮುದ್ರಣಗೊಂಡ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಧಿಕೃತ ವೆಬ್‌ಸೈಟ್ dpl.karnataka.gov.inನಲ್ಲಿ ಮಾ. 2ರಂದು ಪ್ರಕಟಿಸಲಾಗಿದೆ. ಸದರಿ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಲೇಖಕ–ಪ್ರಕಾಶಕರು, ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರ ಪುಸ್ತಕಗಳಲ್ಲಿ ಶೀರ್ಷಿಕೆ, ಲೇಖಕರ ಹೆಸರು, ಪ್ರಕಾಶಕರ ಹೆಸರು, ಮುಖಬೆಲೆ ಮತ್ತು ನಿಗದಿತ ಬೆಲೆಯಲ್ಲಿ ಹೆಚ್ಚು ಅಥವಾ ಕಡಿಮೆಯಾಗಿದ್ದಲ್ಲಿ ಪುಸ್ತಕದ ಅಳತೆ, ಪುಟ ಸಂಖ್ಯೆ ಹಾಗೂ ಇತರೆ ಯಾವುದೇ ತಾಂತ್ರಿಕ ವ್ಯತ್ಯಾಸಗಳಿದ್ದಲ್ಲಿ ಅಧಿಕೃತ ಮಾಹಿತಿ ದಾಖಲಾತಿಗಳೊಂದಿಗೆ ಮಾರ್ಚ್ 16 ರ ಸಂಜೆ 5.30 ರ ಒಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4 ನೇ ಮಹಡಿ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು ಇವರಿಗೆ ಲಿಖಿತವಾಗಿ ಮನವಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಯುಕ್ತರ ಕಚೇರಿ ದೂ.ಸಂಖ್ಯೆ: 080–22864990, 22867358 ಅಥವಾ ಮುಖ್ಯ ಗ್ರಂಥಾಲಯಾಧಿಕಾರಿ ಕಚೇರಿ, ಉಡುಪಿ ಜಿಲ್ಲಾ ಕೇಂದ್ರ ಗ್ರಂಥಾಲಯ, ಅಜ್ಜರಕಾಡು, ಉಡುಪಿ ದೂ.ಸಂಖ್ಯೆ: 0820–2523438 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಅಣೆಕಟ್ಟು ಬರಿದು

ಆದರೂ ಸಾಕಷ್ಟು ನೀರು ಶೇಖರಣೆ ಆಗಲೇ ಇಲ್ಲ. ಕಳೆದ ಡಿಸೆಂಬರ್ ತಿಂಗಳಲ್ಲಿ 255 ಕಿಂಡಿಗಳ ಪೈಕಿ 249 ಕಿಂಡಿಗಳಿಗೆ ತಲಾ 4 ಹಲಗೆಗಳನ್ನು ಜೋಡಿಸಿದರೆ 5 ಕಿಂಡಿಗಳಿಗೆ ತಲಾ 3 ಹಲಗೆಗಳ ಜೋಡಿಸಿ ಒಂದು ಕಿಂಡಿಗೆ 2 ಹಲಗೆಗಳ ಜೋಡಿಸಿದ ಪರಿಣಾಮ ಸ್ವಲ್ಪ ಪ್ರಮಾಣದಲ್ಲಿ ನೀರು ಶೇಖರಣೆಯಾಗಿತ್ತು. ಕಳೆದ 10 ದಿನಗಳ ಹಿಂದೆ ಕಿಂಡಿಯೊಂದರ ಹಲಗೆಗಳನ್ನು ತೆರೆದಿರುವ ಪರಿಣಾಮ ಅಣೆಕಟ್ಟೆಯ ನೀರು ಬರಿದಾಗಿದೆ. ಈ ಬಗ್ಗೆ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖಾಧಿಕಾರಿಗಳು ಕಡಬ ಠಾಣೆಗೆ ದೂರು ನೀಡಿದ್ದಾರೆ. ಅಂತು ಇಂತು ಪ್ರತೀ ವರ್ಷವೂ ಒಂದೊಂದು ಕಾರಣಕ್ಕಾಗಿ ಅಣೆಕಟ್ಟೆಯಲ್ಲಿ

ಮನೆಗೆ ಆಕಸ್ಮಿಕ ಬೆಂಕಿ

ಮನೆಯ ಒಳಗಿನ ಭಾಗದಿಂದ ಬೆಂಕಿ ಜೊತೆಗೆ ಹೊಗೆಯಿಂದ ಹೊತ್ತಿ ಉರಿಯುತ್ತಿರುವುದನ್ನು ಕಂಡ ಮನೆ ಹಿಂಭಾಗದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಕೂಡಲೇ ಕಾರ್ಯಪ್ರವೃತ್ತರಾಗಿ ಕೋಣೆಯ ಬೀಗ ಒಡೆದು ಅಡುಗೆ ಅನಿಲದ ಸಿಲಿಂಡರ್ ಸಹಿತ ಅನೇಕ ಬೆಲೆಬಾಳುವ ಸೊತ್ತುಗಳನ್ನು ಹೊರಗೆ ಇಟ್ಟು ಅನಾಹುತ ತಪ್ಪಿಸಿದ್ದಾರೆ.

ಕುಂದಾಪುರ ತಾ.ಪಂ.ನಲ್ಲಿ ನೀರಿನ ಸಮಸ್ಯೆಗೆ ಸಂಬಂಧಿಸಿ ಅಧಿಕಾರಿಗಳ ಸಭೆ | ಶಾಸಕ ಕೊಡ್ಗಿ ಸೂಚನೆ

ನೀರಿನ ಪೂರೈಕೆ ಗುತ್ತಿಗೆ ಪಡೆದವರಿಗೆ ನೋಟೀಸ್ ಜಾರಿ ಮಾಡಿ



ಕುಂದಾಪುರ: ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲ ಎಂದು ಸುಳ್ಳು ಹೇಳಬೇಡಿ. ಸ್ವಲ್ಪ ದಿನದ ಹಿಂದೆ 5–6 ದಿನ ಪುರಸಭೆ ವ್ಯಾಪ್ತಿಯಲ್ಲಿ ಯಾರಿಗೂ ಕುಡಿಯುವ ನೀರಿಲ್ಲ, ಇದರಿಂದ ಬಹಳಷ್ಟು ಸಮಸ್ಯೆಯಾಗಿದೆ. ಎಸಿ, ನ್ಯಾಯಾಧೀಶರ ಮನೆಗಳಿಗೂ ನೀರಿಲ್ಲ. ನೀರಿನ ಸಮಸ್ಯೆ ಬಗೆಹರಿಸಲು 6– 7 ದಿನ ತೆಗೆದುಕೊಳ್ಳಲಾಗಿದೆ. ಕುಡಿಯುವ ನೀರಿನ ಪೂರೈಕೆ ಟೆಂಡರ್ ಪಡೆದ ಗುತ್ತಿಗೆದಾರರಿಗೆ ಈ ಸಂಬಂಧ ನೋಟಿಸ್ ನೀಡಿ ಎಂದು ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ಕುಂದಾಪುರ ತಾ.ಪಂ. ಸಭಾಂಗಣದಲ್ಲಿ ಗುರುವಾರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೇಸಿಗೆ ಕಾಲದಲ್ಲಿ ಉಂಟಾಗುವ ಕುಡಿಯುವ ನೀರಿನ ಸಮಸ್ಯೆ ಕುರಿತು ಅಧಿಕಾರಿಗಳು ಮತ್ತು ಗ್ರಾಪಂ ಪಿಡಿಒ, ಆಡಳಿತಾಧಿಕಾರಿಗಳ ಸಭೆಯಲ್ಲಿ ಅವರು ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಪುರಸಭೆಯಿಂದ ಹಣ ಬಾಕಿ ಇದೆ ಎಂದು ಬ್ಲ್ಯಾಕ್ ಮೇಲ್ ಮಾಡಿ ಜನರಿಗೆ ನೀರು ನೀಡುವಲ್ಲಿ ತೊಂದರೆ ಮಾಡುತ್ತಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ಬಂದಾಗ ಆ ಸ್ಥಳಕ್ಕೆ ಹೋಗಲು 5–6 ದಿನ ತೆಗೆದುಕೊಂಡಿರುವುದು ಎಷ್ಟು ಸರಿ? ಎಂದು ಗುತ್ತಿಗೆದಾರರನ್ನು, ಅಧಿಕಾರಿಗಳ ವಿರುದ್ಧ ಹರಿಹಾಯ್ದರು. ಕೋಟೇಶ್ವರ ಗ್ರಾ.ಪಂ. ವ್ಯಾಪ್ತಿಯಲ್ಲಿ ಪೈಪ್‌ಲೈನ್ ನಿರ್ಮಿಸುವ ಸಂಬಂಧ ಕಳೆದ ಮೂರು ಸಭೆಗಳಿಂದ ಹೇಳುತ್ತಾ ಬಂದಿದ್ದರೂ, ಈ ವರೆಗೆ ಪೈಪ್‌ಲೈನ್ ನಿರ್ಮಿಸಿಕೊಳ್ಳಲು ಸಾಧ್ಯವಾಗಿಲ್ಲವೇ ಎಂದು ಶಾಸಕರು ಪ್ರಶ್ನಿಸಿದರು.

ಮಾಹಿತಿ ವಿನಿಮಯ ಮಾಡಿಕೊಳ್ಳಿ

ಬಸ್ರೂರು ಹಾಗೂ ಕಂದಾವರ ಗ್ರಾ.ಪಂ.ಗಳಿಗೆ ಬೆಳಿಗ್ಗೆ 10 ಗಂಟೆವರೆಗೆ ನೀರು ಸರಬರಾಜು ಮಾಡುವಂತೆ ಸ್ಥಳೀಯ ಪಿಡಿಒಗಳು ಆಗ್ರಹಿಸಿದರು. ಕುಂದಾಪುರ ಪುರಸಭೆಯ ಮೂಲಕ ನೀರು ಸರಬರಾಜು ಮಾಡುತ್ತಿರುವ ಗ್ರಾ.ಪಂ.ಗಳ ವಾಟ್ಸಾಪ್ ಗ್ರೂಪ್ ರಚಿಸಿಕೊಂಡು ಅದರಲ್ಲಿ ಮಾಹಿತಿ ವಿನಿಮಯ ಮಾಡಿಕೊಳ್ಳುವಂತೆ ತಹಶೀಲ್ದಾರ್ ಪ್ರದೀಪ್ ಕುರ್ಡೇಕರ್ ಸಲಹೆ ನೀಡಿದರು.

ಬೀಜಾಡಿ ಗ್ರಾಪಂ. ವ್ಯಾಪ್ತಿಯಯಲ್ಲಿನ ತೆರೆದ ಬಾವಿಯ ಹೂಳನ್ನು ತೆಗೆಯಲಾಗಿದ್ದು ಬಾವಿಯನ್ನು ಇನ್ನಷ್ಟು ಆಳಗೊಳಿಸಿದರೆ ಉತ್ತಮ ನೀರು ದೊರೆಯುವ ಸಾಧ್ಯತೆ ಇದೆ. ಇದಕ್ಕೆ ಅನುದಾನ ಒದಗಿಸುವಂತೆ ಪಿಡಿಒ ಮನವಿ ಮಾಡಿದರು.

ಪೈಪ್‌ಲೈನ್‌ಗೆ ಹಾನಿ

ಗೋಪಾಡಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣದಿಂದ ಕುಡಿಯುವ ನೀರಿನ ಪೈಪ್ ಲೈನ್‌ಗೆ ಹಾನಿಯಾಗಿ ಕೆಲವು ಪ್ರದೇಶಗಳಿಗೆ ನೀರು ನೀಡಲು ಆಗುತ್ತಿಲ್ಲ ಎಂದು ಪಿಡಿಒ ಹೇಳಿದರು. ಕುಂಭಾಶಿ ಗ್ರಾ.ಪಂ. ವ್ಯಾಪ್ತಿಯಲ್ಲಿಯೂ ರಾ.ಹೆ. ಅಗಲೀಕರಣದಿಂದ ಪೈಪ್‌ಲೈನ್‌ಗಳಿಗೆ ಹಾನಿಯಾಗಿದೆ ಎಂದು ಪಿಡಿಒ ಹೇಳಿದರೆ, ರಾಷ್ಟ್ರೀಯ ಹೆದ್ದಾರಿ ಯವರು ಇದನ್ನು ಸರಿಪಡಿಸಿಕೊಡುವ ಭರವಸೆ ನೀಡಿದ್ದಾರೆ ಎಂದು ಶಾಸಕರು ಹೇಳಿದರು.

> **ಸೂಕ್ತಕ್ರಮ ಕೈಗೊಳ್ಳಿ**
>
> **ಈಗಲೇ ಕುಡಿಯಲು ನೀರು ಕೊಡಲು ಆಗುತ್ತಿಲ್ಲ, ಇನ್ನು ಬಾಕಿ ಉಳಿದ ಪೈಪ್‌ಲೈನ್ ಸಂಪರ್ಕ ನೀಡಿದರೆ ನೀರು ಕೊಡಲು ನಿಮ್ಮಿಂದ ಸಾಧ್ಯವೇ? ಆದ್ದರಿಂದ ಬೇಸಿಗೆಯಲ್ಲಿ ಸಾಧ್ಯವಾದಷ್ಟು ಕುಡಿಯುವ ನೀರಿನ ಸರಬರಾಜು ಮಾಡಲು ಅಧಿಕಾರಿಗಳು ಕ್ರಮಕೈಗೊಳ್ಳಬೇಕು.**
>
> ● ಎ.ಕಿರಣ್ ಕುಮಾರ್ ಕೊಡ್ಗಿ, ಶಾಸಕ

ಹಲಗೆ ಕಟ್ಟಿದರೆ ಗದ್ದೆಗಳಿಗೆ ನೀರು

ತೆಕ್ಕಟ್ಟೆ ಕೊಮೆ ಪ್ರದೇಶದಲ್ಲಿ ಬಾವಿ ಆಳ ಮಾಡಬೇಕು, ಕೊರ್ಗಿ ಕುಂಜಾನಕಟ್ಟೆ ಪ್ರದೇಶದಲ್ಲಿ ಬಾವಿ ನೀರು ಸರಿ ಇಲ್ಲದಿರುವುದರಿಂದ ಫಿಲ್ಟರ್ ಅಳವಡಿಸಬೇಕು, ಹೊಂಬಾಡಿ–ಮಂಡಾಡಿಯ ಗುಡ್ಡೆಯಂಗಡಿಯಲ್ಲಿ ತೆರೆದ ಬಾವಿಗೆ ಫಿಲ್ಟರ್ ಅಳವಡಿಸಬೇಕು ಎಂಬ ಆಗ್ರಹ ಕೇಳಿ ಬಂದಿತು. ಜಪ್ತಿ ಎಂಬಲ್ಲಿ ಕಿಂಡಿ ಅಣೆಕಟ್ಟು ಹಲಗೆ ತೆಗೆದರೆ ಬಾವಿಗಳಲ್ಲಿ ನೀರಿನ ಮಟ್ಟ ಕುಸಿಯುತ್ತಿದೆ. ಹಲಗೆ ಹಾಕಿದರೆ ಸಮೀಪದ ಗದ್ದೆಗಳಿಗೆ ನೀರು ನುಗ್ಗುತ್ತಿದೆ ಎಂದು ಸಂಬಂಧಪಟ್ಟ ಪಿಡಿಒ ಮಾಹಿತಿ ನೀಡಿದರು. ಫೆಬ್ರವರಿ ನಂತರ ಕಿಂಡಿ ಅಣೆಕಟ್ಟಿನ ಹಲಗೆ ತೆಗೆಯಲು ಬಿಡಬಾರದು ಎಂದು ಶಾಸಕರು ಸೂಚಿಸಿದರು.

ತೊಂಬಟ್ಟು ಹೊಳೆಗುಡ್ಡೆ ಎಂಬಲ್ಲಿ ನೀರಿನ ಸಮಸ್ಯೆ ಇದೆ. ಅಮಾಸೆಬೈಲಿನ ಜಡ್ಡಿನಗದ್ದೆ ಟ್ಯಾಂಕ್ ಇಲ್ಲ ಎಂದು ಪಿಡಿಒಗಳು ಮಾಹಿತಿ ನೀಡಿದರು. ಸಾಲಿಗ್ರಾಮದ ಕೆಲವು ಪ್ರದೇಶಗಳಲ್ಲಿ ದಿನ ಬಿಟ್ಟು ದಿನ ನೀರು ಸರಬರಾಜು ಮಾಡಲಾಗುತ್ತಿದೆ. ಕಾವಡಿಯಲ್ಲಿ ಚೆಕ್ ಡ್ಯಾಮ್ ಮಾಡಿ ನೀರು ಪೂರೈಕೆ ಮಾಡಬಹುದು, ಜನರು ನೀರು ಬೇಕು ಅಂತ ಕೇಳುತ್ತಿದ್ದು, ನೀರಿನ ಮೂಲ ಇಲ್ಲ ಎಂದು ಸಾಲಿಗ್ರಾಮ ಪಪಂ ಅಧಿಕಾರಿ ಮಾಹಿತಿ ನೀಡಿದರು.

ಹೆಬ್ರಿ ತಹಶೀಲ್ದಾರ್ ಪ್ರಸಾದ್, ಬ್ರಹ್ಮಾವರ ತಹಶೀಲ್ದಾರ್ ಶ್ರೀಕಾಂತ ಹೆಗ್ಡೆ ಸಹಾಯಕ ನಿರ್ದೇಶಕ ದಿನೇಶ್, ನೀರಾವರಿ ಇಲಾಖೆಯ ಉದಯ ಕುಮಾರ್ ಶೆಟ್ಟಿ ಕುಂದಾಪುರ ತಾಪಂ ಇಒ ಮಹೇಶ್, ಬ್ರಹ್ಮಾವರ ತಾಪಂ ಇಒ ಎಚ್.ವಿ. ಇಬ್ರಾಹಿಂಪುರ, ಬೈಂದೂರು ಇಒ ರಾಮಚಂದ್ರ ಮೊದಲಾದವರು ಉಪಸ್ಥಿತರಿದ್ದರು.

ಹಿರಿಯಡ್ಕ ಕೆ.ಪಿ.ಎಸ್.ನಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ



ಹಿರಿಯಡ್ಕ: ಭಾರತದ ಖ್ಯಾತ ವಿಜ್ಞಾನಿ ಸರ್ ಸಿ.ವಿ. ರಾಮನ್ ಅವರ ನೆನಪಿನಲ್ಲಿ ಆಚರಿಸಲಾಗುವ ರಾಷ್ಟ್ರೀಯ ವಿಜ್ಞಾನ ದಿನವನ್ನು ಕೆ.ಪಿ.ಎಸ್. ಹಿರಿಯಡ್ಕ ಅಟಲ್ ಟಿಂಕರಿಂಗ್ ಪ್ರಯೋಗಾಲಯದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ರಸಾಯನಶಾಸ್ತ್ರ ಉಪನ್ಯಾಸಕ ನವನೀತ್ ಅರಸ್ ಮುಂದಿನ ಪೀಳಿಗೆಯ ಮೇಲೆ ತಂತ್ರಜ್ಞಾನದ ಜವಾಬ್ದಾರಿ ಹೆಚ್ಚಿದೆ. ಅದನ್ನು ಸೃಜನಾತ್ಮಕವಾಗಿ ಬಳಸಿಕೊಳ್ಳುವುದು ಇಂದಿನ ಅಗತ್ಯ. ಕೇವಲ ಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ, ಪ್ರಯೋಗಗಳ ಮೂಲಕ ವಿಜ್ಞಾನವನ್ನು ಅರ್ಥೈಸಿಕೊಂಡ ರೀತಿ ಮೆಚ್ಚುವಂತದ್ದಾಗಿತ್ತು.ಈ ವರ್ಷದ ಧ್ಯೇಯ ವಾಕ್ಯ ವಿಜ್ಞಾನದಲ್ಲಿ ಮಹಿಳೆಯರು: ವಿಕಸಿತ ಭಾರತದ ವೇಗವರ್ಧಕಗಳು ಕುರಿತು ವಿವರಿಸಿದರು.

ವಿಜ್ಞಾನ ಶಿಕ್ಷಕರು ಹಾಗೂ ಅಟಲ್ ಡಿಂಕರಿಂಗ್ ಲ್ಯಾಬಿನ ಮೆಂಟರ್ ಗಳ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ತಾವೇ ತಯಾರಿಸಿದ ವಿವಿಧ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಿದರು. ಹಿರಿಯ ಉಪನ್ಯಾಸಕಿ ವೀಣಾ ಡಿ. ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಬಿ.ಎಲ್. ವಿಶ್ವಾಸ್, ಅಟಲ್ ಟಿಂಕರಿಂಗ್ ಪ್ರಯೋಗಾಲಯದ ನೋಡಲ್ ಶಿಕ್ಷಕಿ ಪೂರ್ಣಿಮಾ, ಚಿತ್ರಕಲಾ ಶಿಕ್ಷಕ ಮೋಹನ್ ಕಡಬ ಉಪಸ್ಥಿತರಿದ್ದರು. ಉಪಪ್ರಾಂಶುಪಾಲ ಪ್ರಕಾಶ್ ಪ್ರಭು ಸ್ವಾಗತಿಸಿ, ಹಿಂದಿ ಶಿಕ್ಷಕ ರವೀಂದ್ರ ಪ್ರಭು ವಂದಿಸಿದರು. ಶಿಕ್ಷಕ ರಾಘವ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಅರಸು, ಡಾ.ಅಂಬೇಡ್ಕರ್ ನಿಗಮದಡಿ ಫಲಾನುಭವಿಗಳಿಗೆ ಸೌಲಭ್ಯ ಹಸ್ತಾಂತರ



ಉಪ್ಪುಂದ: ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳು ಸ್ವಂತ ಉದ್ಯೋಗ ಸೌಲಭ್ಯ ಬಳಸಿಕೊಂಡು ಉದ್ಯೋಗದಾತರಾಗಿ ಹಾಗೂ ಇತರರಿಗೂ ಮಾದರಿಯಾಗಿ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.

ಬೈಂದೂರು ತಾ.ಪಂ. ಸಭಾಂಗಣದಲ್ಲಿ ಡಿ. ದೇವರಾಜು ಅರಸು ಅಭಿವೃದ್ಧಿ ನಿಗಮ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಡಿ ವಿವಿಧ ಸ್ವ ಉದ್ಯೋಗ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳನ್ನು ವಿತರಿಸಿ ಮಾತನಾಡಿದರು. ಈ ವೇಳೆ ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಕ್ಷೇತ್ರದ ಸುಮಾರು 21 ಮಂದಿ ಮಹಿಳಾ ಫಲಾನುಭವಿಗಳಿಗೆ ಟೈಲರಿಂಗ್ ಮೆಷಿನ್ ಅನ್ನು ಹಾಗೂ ಡಾ. ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಉದ್ಯಮ ಶೀಲತೆ ಯೋಜನೆಯಡಿಯಲ್ಲಿ ಆಯ್ಕೆಯಾದ 3 ಜನ ಫಲಾನುಭವಿಗಳಿಗೆ ರೂ.5 ಲಕ್ಷ ಮೊತ್ತದ ಸಾಲ ಸಹಾಯಧನ ಹಾಗೂ 7 ಜನ ಫಲಾನುಭವಿಗಳಿಗೆ ರೂ. 1 ಲಕ್ಷ ಮೊತ್ತದ ಸಾಲ ಸಹಾಯಧನ ಮಂಜೂರಾತಿ ಪತ್ರವನ್ನು ಶಾಸಕರು ವಿತರಿಸಿದರು. ಸ್ವಾವಲಂಬಿ ಸಾರಥಿ ಯೋಜನೆಯಡಿಯಲ್ಲಿ ಆಯ್ಕೆಯಾದ 4 ಜನಫಲಾನುಭವಿಗಳಿಗೆ ಸ್ವ ಉದ್ಯೋಗ ಸಲುವಾಗಿ ಒದಗಿಸಿರುವ ಟ್ಯಾಕ್ಸಿ ವಾಹನಗಳ ಕೀಯನ್ನು ಶಾಸಕರು ಹಸ್ತಾಂತರಿಸಿದರು. ದೇವರಾಜು ಅರಸು ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಮಂಜು, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಶಂಕರ್ ಇದ್ದರು.

ಗಂಗೊಳ್ಳಿ: ಕೊಂಕಣಿ ಖಾರ್ವಿ ಸಮುದಾಯದ ಹೋಳಿ ಹಬ್ಬ



ಗಂಗೊಳ್ಳಿ: ಗಂಗೊಳ್ಳಿ ಗ್ರಾಮದಲ್ಲಿ ಕೊಂಕಣಿ ಖಾರ್ವಿ ಸಮುದಾಯದವರು ಪ್ರತಿ ವರ್ಷ ಆಚರಿಸುತ್ತಿರುವ ಹೋಳಿ ಹಬ್ಬವನ್ನು ಗುರುವಾರ ಸಂಜೆ ವಿಜೃಂಭಣೆಯಿಂದ ಆಚರಿಸಿದರು.

ಗಂಗೊಳ್ಳಿ, ಗುಜ್ಜಾಡಿ, ಕಂಚುಗೋಡು, ಹೊಸಪೇಟೆ, ತ್ರಾಸಿ ಮೊದಲಾದ ಕಡೆಗಳಿಂದ ಬೃಹತ್ ಮೆರವಣಿಗೆಯಲ್ಲಿ ಆಗಮಿಸಿದ ಸಹಸ್ರಾರು ಜನರಿಂದ ಬಣ್ಣಗಳ ಎರಚಾಟ, ಕುಣಿತ, ಗಾನಬಜಾನ ಗಂಗೊಳ್ಳಿ ಪೇಟೆಯುದ್ದಕ್ಕೂ ಕಂಡು ಬಂದಿತು. ಯುವಕ ಯುವತಿಯರು ಹಿರಿಯರು ಮಕ್ಕಳು ಎಂಬ ಭೇದ ಭಾವಗಳಿಲ್ಲದೆ ಪರಸ್ಪರ ಬಣ್ಣ ಹಚ್ಚಿಕೊಂಡು ಡಿಜೆ ಮ್ಯೂಸಿಕ್‌ಗೆ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಗುಂಪುಗಳನ್ನು ಮಾಡಿಕೊಂಡ ಯುವಕ ಯುವತಿಯರು ತಮ್ಮದೇ ವಿಶಿಷ್ಟ ಧಿರಿಸಿನ ಮೂಲಕ ಮೆರವಣಿಗೆಯಲ್ಲಿ ಸಾಗಿಬಂದು ನೋಡುಗರ ಗಮನ ಸೆಳೆದರು. ವಿವಿಧೆಡೆಗಳಿಂದ ಆಗಮಿಸಿದ ಹೋಳಿ ಪಂಗಡಗಳು ಗಂಗೊಳ್ಳಿ ಶ್ರೀ ವೀರೇಶ್ವರ ದೇವಸ್ಥಾನದ ಬಳಿ ಸೇರಿ ಬೃಹತ್ ಹೋಳಿ ಉತ್ಸವ ನಡೆಸಿದರು. ಸಂಪ್ರದಾಯದಂತೆ ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದ ಪುಷ್ಕರಣಿಯಲ್ಲಿ ಸ್ನಾನ ಮಾಡುವ ಮೂಲಕ ಹೋಳಿ ಮೆರವಣಿಗೆ ಸಂಪನ್ನಗೊಂಡಿತು. ಎಡಿಷನಲ್ ಎಸ್ಪಿ ಸುಧಾಕರ ಎಸ್. ನಾಯ್ಕ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕುಂದಾಪುರ ಪೊಲೀಸ್ ಉಪವಿಭಾಗದ ಡಿವೈಎಸ್‌ಪಿ ಎಚ್ .ಡಿ.ಕುಲಕರ್ಣಿ ಮಾರ್ಗದರ್ಶನದಂತೆ ಬೈಂದೂರು ಪೊಲೀಸ್ ವೃತ್ತ ನಿರೀಕ್ಷಕ ಶಿವಕುಮಾರ್ ಬಿ. ನೇತೃತ್ವದಲ್ಲಿ ಗಂಗೊಳ್ಳಿ ಪೊಲೀಸ್ ಉಪನಿರೀಕ್ಷಕ ಪವನ್ ನಾಯಕ್ ಮತ್ತು ಕುಂದಾಪುರ ಪೊಲೀಸ್ ಉಪವಿಭಾಗದ ವಿವಿಧ ಪೊಲೀಸ್ ಠಾಣೆಗಳ ಉಪನಿರೀಕ್ಷಕರು ಹಾಗೂ ಸಿಬ್ಬಂದಿ ಗಂಗೊಳ್ಳಿಯ ಎಲ್ಲೆಡೆ ಬಿಗು ಪೊಲೀಸ್ ಬಂದೋಬಸ್ತ್ ಮಾಡಿದ್ದರು.

ರಂಗಭೂಮಿ ಕ್ಷೇತ್ರದಲಿ ಲಾವಣ್ಯ ಸಂಸ್ಥೆ ಪರಿಪೂರ್ಣ ಸಾಧನೆ ಮಾಡಿದೆ



ಉಪ್ಪುಂದ: ರಂಗಭೂಮಿ ಕ್ಷೇತ್ರದಲ್ಲಿ ಲಾವಣ್ಯ ತನ್ನ ಪರಿಪೂರ್ಣ ಸಾಧನೆ ಮೂಲಕ ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡಿದೆ. ದಿ. ಶ್ರೀನಿವಾಸ ಪ್ರಭುಗಳಿಂದ ಸ್ಥಾಪಿಸಲ್ಪಟ್ಟ ಲಾವಣ್ಯ, ಪ್ರಸ್ತುತ ಬೈಂದೂರಿನ ಸಾಂಸ್ಕೃತಿಕ ಹಿರಿಮೆಯನ್ನು ಜಗದಗಲ ಪಸರಿಸಿದ ಸಾಧನೆ ಮಾಡಿದೆ. ಕಳೆದ 49 ವರ್ಷಗಳಿಂದ ಗ್ರಾಮೀಣ ಭಾಗದಲ್ಲಿ ರಂಗಭೂಮಿಯನ್ನು ಬೆಳೆಸಿದ ಕೀರ್ತಿ ಲಾವಣ್ಯಕ್ಕೆ ಸಲ್ಲುತ್ತದೆ ಎಂದು ರಾಯಚೂರಿನ ಉದ್ಯಮಿ ಉಪ್ಪುಂದ ರಾಮಚಂದ್ರ ಪ್ರಭು ಹೇಳಿದರು.

ಬೈಂದೂರು ಶಾರದಾ ವೇದಿಕೆಯಲ್ಲಿ ಲಾವಣ್ಯದ 49ನೇ ವಾರ್ಷಿಕೋತ್ಸವ, ಸ್ಥಾಪಕಾಧ್ಯಕ್ಷ ದಿ. ಯು. ಉಪ್ಪುಂದ ಶ್ರೀನಿವಾಸ ಪ್ರಭು ಸ್ಮರಣಾರ್ಥ ಆಯೋಜನೆಯ ರಂಗಶ್ರೀ– ರಂಗಹಬ್ಬ–2026 ಉದ್ಘಾಟಿಸಿ ಅವರು ಮಾತನಾಡಿದರು. ಕಂಬದಕೋಣೆ ರೈತರ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಎಸ್. ಪ್ರಕಾಶ್ಚಂದ್ರ ಶೆಟ್ಟಿ ಮಾತನಾಡಿ, ಸಾಂಸ್ಕೃತಿಕ ಪ್ರೀತಿ ಮಾನವೀಯ ಮೌಲ್ಯ ವೃದ್ಧಿಸುತ್ತದೆ ಎಂದರು.

ಲಾವಣ್ಯ ಅಧ್ಯಕ್ಷ ನರಸಿಂಹ ಬಿ. ನಾಯಕ್ ಅಧ್ಯಕ್ಷತೆ ವಹಿಸಿದ್ದರು. ನೃತ್ಯಗುರು ನಾಗೇಂದ್ರ ಕುಮಾರ್ ಬಂಕೇಶ್ವರ ಅವರನ್ನು ಲಾವಣ್ಯ ವತಿಯಿಂದ ಸನ್ಮಾನಿಸಲಾಯಿತು. ಭಾರತೀಯ ಜೀವ ವಿಮಾ ನಿಗಮದ ವಿಭಾಗೀಯ ಪ್ರಬಂಧಕ ಯು. ದಿನೇಶ ಪ್ರಭು, ಉದ್ಯಮಿ ಶಿರೂರು ಪ್ರಸಾದ ಪ್ರಭು, ಡಾ. ಪ್ರತಿಭಾ ರೈ ಬೈಂದೂರು, ಪ್ರವೀಣ್ ಎಸ್. ಪ್ರಭುಇದ್ದರು. ಮಾಜಿ ಅಧ್ಯಕ್ಷ ಉದಯ ಆಚಾರ್ಯ ಹರೆಗೋಡು ಸ್ವಾಗತಿಸಿದರು. ಗಣಪತಿ ಎಸ್. ಪ್ರಾಸ್ತಾವಿಕ ಮಾತನಾಡಿದರು. ವಿಶ್ವನಾಥ ಆಚಾರ್ಯ ವರದಿ ವಾಚಿಸಿದರು. ಓಂಗಣೇಶ ಉಪ್ಪುಂದ ನಿರೂಪಿಸಿದರು. ಸುರೇಶ ಹುದಾರ್ ವಂದಿಸಿದರು. ನಂತರ ಲಾವಣ್ಯ ಕಲಾವಿದರಿಂದ ಸಂಜೆ ಹಾಡು ನಾಟಕ ಪ್ರದರ್ಶನಗೊಂಡಿತು.

ಬಾರ್ಕೂರು ನಾಗಮಂಡಲೋತ್ಸವ: ಹಸಿರು ಹೊರೆ ಕಾಣಿಕೆ ಸಮರ್ಪಣೆ



ಬ್ರಹ್ಮಾವರ: ವೇದಮೂರ್ತಿ ಶ್ರೀ ಹೃಷಿಕೇಶ ಬಾಯರಿ ವೇದಶ್ರೀ ಬಾರ್ಕೂರು ಇವರ ಮೂಲನಾಗ ದೇವರ ಸನ್ನಿಧಿಯಲ್ಲಿ ಮಾ. 3ರಂದು ಚತುಃ ಪವಿತ್ರ ನಾಗಮಂಡಲೋತ್ಸವ ನಡೆಯಲಿದೆ.

ಕಾರ್ಯಕ್ರಮವೂ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದ್ದು ಆ ಪ್ರಯುಕ್ತ ಬುಧವಾರ ಸಂಜೆ ಬಾರ್ಕೂರು ಕೋಟೆಕೇರಿ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದಿಂದ ಸಂತೆಗುಡ್ಡೆ ನಾಗಮಂಡಲೋತ್ಸವ ಸನ್ನಿಧಿಗೆ ಹಸಿರು ಹೊರೆ ಕಾಣಿಕೆಯನ್ನು ಮೆರವಣಿಗೆ ಮೂಲಕ ಸಮರ್ಪಣೆ ಮಾಡಲಾಯಿತು

ಈ ಹೊರೆ ಕಾಣಿಕೆ ಸಮರ್ಪಣಾ ಮೆರವಣಿಗೆಯಲ್ಲಿ ವೇದಮೂರ್ತಿ ಶ್ರೀ ಹೃಷಿಕೇಶ ಬಾಯರಿ ಕುಟುಂಬಸ್ಥರು ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷ ಬಿ. ಶಾಂತಾರಾಮ ಶೆಟ್ಟಿ, ಕೂಸ ಎಲ್. ಕುಂದರ್ ಹೊಸ್ಕೆರೆ, ಬಿ. ರಾಮಚಂದ್ರ ಕಾಮತ್, ದೇವದಾಸ್ ಹೊಸ್ಕೆರೆ ಶ್ರೀನಿವಾಸ ಉಡುಪ ಕೂಡ್ಲಿ, ಸತೀಶ್ ಎಸ್. ಅಮೀನ್, ಸುಂದರ್ ಶೆಟ್ಟಿ ಮಧುಸೂದನ್ ಕಚ್ಚೂರು, ಆತ್ಮಜ್ ಶೆಟ್ಟಿ ವಿನಯ್ ಕುಮಾರ್ (ಸಭ್ಯ ಫ್ರೆಂಡ್ಸ್) ರಾಘವೇಂದ್ರರಾವ್ ಮಕ್ಕಿ ಬೈಲು ಬಾರ್ಕೂರು, ಕೃಷ್ಣ ಗಣೇಶ್ ಭಟ್ ನಾಯರ್ ಭಟ್, ಮಂಜುನಾಥ ಪೂಜಾರಿ, ಸದಾಶಿವ ಪೂಜಾರಿ ಮೂಡು ಹಿತ್ಲು, ಶೌರ್ಯ ಬಾರ್ಕೂರು, ಶ್ರೀ ಭುವನೇಶ್ವರಿ ಮಹಿಳಾ ಬಳಗದ ಸದಸ್ಯರು, ರಾಜಧಾನಿ ರಾಜ ಯೂತ್ ಕ್ಲಬ್ ಸದಸ್ಯರು, ಬಾರ್ಕೂರಿನ ವಿವಿಧ ಭಜನಾ ಮಂಡಳಿಯ ಸದಸ್ಯರು, ವಿವಿಧ ಸಂಘ ಸಂಸ್ಥೆಗಳ ಸದಸ್ಯರು, ಭಕ್ತರು ಪಾಲ್ಗೊಂಡಿದ್ದರು.

ಕಾಪು ತಾಲೂಕು ಅಕ್ರಮ – ಸಕ್ರಮ ಸಾಗುವಳಿ ಸಕ್ರಮೀಕರಣ ಸಮಿತಿ ಸಭೆ



ಕಾಪು: ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾಪು ತಾಲೂಕಿನ ಬಗರ್ ಹುಕುಂ (ಅಕ್ರಮ – ಸಕ್ರಮ) ಸಾಗುವಳಿ ಸಕ್ರಮೀಕರಣ ಸಮಿತಿ ಸಭೆ ಕಾಪು ತಹಸೀಲ್ದಾರ ಕಚೇರಿಯಲ್ಲಿ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ, ಮಾ. 5 ರಂದು ನಡೆಯಿತು.

ಸಭೆಯಲ್ಲಿ ನಮೂನೆ 53 ಮತ್ತು 57 ಅಡಿಯಲ್ಲಿ ಸಲ್ಲಿಸಿದ 2 ಕಡತಗಳಿಗೆ ಖಾಯಂ ಮಂಜೂರಾತಿ ನೀಡಲಾಯಿತು. 2 ಕಡತಗಳನ್ನು ಸರ್ವೆ ಪರಿಶೀಲನಾ ವರದಿಗೆ ಹಾಗೂ 2 ಕಡತಗಳಿಗೆ ತಾತ್ಕಾಲಿಕ ಮಂಜೂರಾತಿ ನೀಡಿ 1 ಕಡತವನ್ನು ಕಾಯ್ದಿರಿಸಿ ಒಟ್ಟು 7 ಕಡತಗಳನ್ನು ಸಮಿತಿಯುಲ್ಲಿ ಮಂಡಿಸಲಾಯಿತು.

ಈ ಸಂದರ್ಭದಲ್ಲಿ ಅಕ್ರಮ ಸಕ್ರಮ ಸಮಿತಿ ಕಾರ್ಯದರ್ಶಿಗಳು ಕಾಪು ತಹಶೀಲ್ದಾರರಾದ ಅಂತ ಶಂಕರ್, ಅಕ್ರಮ ಸಕ್ರಮ ಸಮಿತಿ ಸದಸ್ಯರಾದ ದಿನೇಶ್ ಕೋಟ್ಯಾನ್, ಆನಂದ ಕೊರಂಗ್ರಪಾಡಿ, ಮಾರ್ಗರೇಟ್ ಸೀಮಾ ಡಿಸೋಜಾ ಹಾಗೂ ಕಂದಾಯ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಕಳದಲ್ಲಿ ಬಿಜೆಪಿ ಬೆಂಬಲಿತ ಗ್ರಾಮ ಪಂಚಾಯತ್ ಸದಸ್ಯರ ಸಭೆ | ಕಾರ್ಕಳ ಶಾಸಕ ವಿ. ಸುನೀಲ್ ಕುಮಾರ್ ಆಕ್ರೋಶ

ಮರಳು, ಕೆಂಪುಕಲ್ಲು, ಮಣ್ಣು ಸಾಗಾಟ ಸಮಸ್ಯೆಗಳಿಂದ ಬಡವರು ಬೀದಿಗೆ ಬಿದ್ದಿದ್ದಾರೆ



ಕಾರ್ಕಳ: ಮರಳು ಮತ್ತು ಕೆಂಪುಕಲ್ಲು, ಮಣ್ಣು ಸಾಗಾಟದಂತಹ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸದೆ ಈ ಭಾಗದ ಬಡ ಕಾರ್ಮಿಕರ ಮತ್ತು ಉದ್ಯಮಿಗಳ ಬದುಕನ್ನು ಬೀದಿಗೆ ತಳ್ಳಿದೆ ಎಂದು ಕಾರ್ಕಳ ಶಾಸಕ ವಿ. ಸುನೀಲ್ ಕುಮಾರ್ ಹೇಳಿದರು.

ಬಿಜೆಪಿ ಬೆಂಬಲಿತ ಗ್ರಾಮ ಪಂಚಾಯತ್ ಸದಸ್ಯರ ಸಭೆ ಉದ್ದೇಶಿಸಿ ಮಾತನಾಡಿದ ಅವರು ಸರಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಕರಾವಳಿಯ ಜೀವನಾಡಿಯಾಗಿರುವ ಮರಳುಗಾರಿಕೆ ಮತ್ತು ಕೆಂಪುಕಲ್ಲು ಸಾಗಾಟದ ಸಮಸ್ಯೆಯಿಂದಾಗಿ ಇಂದು ಸಾವಿರಾರು ಲಾರಿ ಮಾಲೀಕರು, ಚಾಲಕರು, ಕೂಲಿ ಕಾರ್ಮಿಕರು ಮತ್ತು ಹೋಟೆಲ್ ಉದ್ಯಮಿಗಳು ಸಂಕಷ್ಟದಲ್ಲಿದ್ದಾರೆ. ಮುಖ್ಯಮಂತ್ರಿಗಳ ಮುಂದೆ ಈ ಸಮಸ್ಯೆಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರೂ, ಅವರು ಮೌನ ವಹಿಸಿರುವುದು ಕರಾವಳಿ ಜನರ ಬದುಕಿನ ಬಗ್ಗೆ ಅವರಿಗಿರುವ ತಾತ್ಸಾರವನ್ನು ತೋರಿಸುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರಾವಳಿಯ ಅಭಿವೃದ್ಧಿ ಕುಂಠಿತ

ಕರಾವಳಿಯ ಎರಡು ಜಿಲ್ಲೆಗಳಲ್ಲಿ ಬಿಜೆಪಿ ಶಾಸಕರೇ ಇದ್ದಾರೆ ಎಂದು ಸರ್ಕಾರದ ಮಲತಾಯಿ ಧೋರಣೆಯನ್ನು ಸ್ವತಃ ಉಡುಪಿ ಜಿಲ್ಲೆಯ ಉಸ್ತುವಾರಿ ಸಚಿವೆ ಸಿಎಂ ಭಾಗವಹಿಸಿದ್ದ ವೇದಿಕೆಯಲ್ಲಿ ಸಮರ್ಥಿಸಿಕೊಂಡಿದ್ದಾರೆ. ಬಿಜೆಪಿ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಅನುದಾನ ನೀಡಬಾರದು ಎಂಬ ದ್ವೇಷದ ರಾಜಕಾರಣದಿಂದಾಗಿ ಕಾರ್ಕಳ ಸಹಿತ ಕರಾವಳಿಯ ಅಭಿವೃದ್ಧಿ ಕುಂಠಿತಗೊಂಡಿದೆ ಎಂದು ಅವರು ದೂರಿದರು. ಸಾಂಪ್ರದಾಯಿಕ ಕಲೆಯಾದ ಕಂಬಳ, ಯಕ್ಷಗಾನ ಇತ್ಯಾದಿಗಳಿಗೆ ಸರಕಾರ ಅಡ್ಡಿಪಡಿಸಿದೆ ಎಂದು ಹೇಳಿದರು.

> **ಅಧಿವೇಶನದಲ್ಲಿ ಪ್ರತಿಭಟಿಸಲಿದ್ದೇವೆ**
>
> **ಮರಳು ಸಿಗುತ್ತಿಲ್ಲ, ಕಲ್ಲು ಸಾಗಾಟಕ್ಕೆ ಅವಕಾಶವಿಲ್ಲ, ಅಭಿವೃದ್ಧಿಗೆ ಅನುದಾನವೂ ಸಿಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಅಧಿವೇಶನದಲ್ಲಿ ಸದನದೊಳಗೆ ಕರಾವಳಿಯ ಎಲ್ಲ ಶಾಸಕರು ಅವಿಭಜಿತ ಜಿಲ್ಲೆಗೆ ಆದ ಅನ್ಯಾಯದ ವಿರುದ್ಧ ಪ್ರತಿಭಟಿಸಲಿದ್ದೇವೆ.**
>
> ● ವಿ. ಸುನೀಲ್ ಕುಮಾರ್, ಕಾರ್ಕಳ ಶಾಸಕ

ಜನರು ಆರ್ಥಿಕವಾಗಿ ಹೈರಾಣು

ಜನರು ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳ ಬಗ್ಗೆ ಮಾತನಾಡದೆ, ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲದ ರಾಜ್ಯ ಸರ್ಕಾರ, ಕರಾವಳಿಯ ಸಂಪನ್ಮೂಲ ಹತ್ತಿಕ್ಕುವ ಮೂಲಕ ಜನರನ್ನು ಆರ್ಥಿಕವಾಗಿ ಹೈರಾಣಾಗಿಸುತ್ತಿದೆ ಎಂದು ಶಾಸಕರು ಕಿಡಿಕಾರಿದರು.

ವೇದಿಕೆಯಲ್ಲಿ ಬಿಜೆಪಿ ಕ್ಷೇತ್ರಾಧ್ಯಕ್ಷ ನವೀನ್ ನಾಯಕ್, ಜಿಲ್ಲಾ ಉಪಾಧ್ಯಕ್ಷರಾದ ಮಹಾವೀರ ಹೆಗ್ಡೆ, ರಾಜ್ಯ ಯುವಮೋರ್ಚಾ ಕಾರ್ಯದರ್ಶಿ ವಿಖ್ಯಾತ್ ಶೆಟ್ಟಿ ಕಾರ್ಕಳ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಸತೀಶ್ ಪೂಜಾರಿ, ಸುರೇಶ್ ಶೆಟ್ಟಿ ಪ್ರಮುಖರಾದ ಜಯರಾಮ ಸಾಲ್ಯಾನ್, ರವೀಂದ್ರ ಮಡಿವಾಳ, ಸುಧಾಕರ್ ಹೆಗ್ಡೆ ಹೆಬ್ರಿ ಉಪಸ್ಥಿತರಿದ್ದರು.